॥ ಶ್ರೀ ॥

॥ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ ॥

ಶ್ರೀಮದ್ಧನುಮದ್ಭೀಮ ಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋ ನಮಃ

॥ ೩೦ ನೆಯ ಅಧ್ಯಾಯವು ॥

ಓಂ ॥ ಅಥ ಕೃಷ್ಣಮನುಸ್ಮೃತ್ಯ ಭೀಷ್ಮೇ ಸ್ವಾಂ ವಸುತಾಂ ಗತೇ ।
ಕೃತ್ವಾ ಕಾರ್ಯಾಣಿ ಸರ್ವಾಣಿ ಗಂಗಾಮಾಶ್ವಾಸ್ಯ ದುಃಖಿತಾಮ್ ॥೧॥

ಆಶ್ವಾಸಿತಶ್ಚ ಕೃಷ್ಣಾಭ್ಯಾಂ ಧರ್ಮಜೋ ದುಃಖಿತಃ ಪುನಃ ।
ಪರಾಶರಸುತೇನೋಕ್ತಃ ಕೃಷ್ಣೇನಾನಂತರಾಧಸಾ ॥೨॥

ಅಪಾಪೇ ಪಾಪಶಂಕಿತ್ವಾದಶ್ವಮೇಧೈರ್ಯಜಾಚ್ಯುತಮ್ ।
ಕುರು ರಾಜ್ಯಂ ಚ ಧರ್ಮೇಣ ಪಾಲಯಾಪಾಲಕಾಃ ಪ್ರಜಾಃ ॥೩॥

ಅಥ — ಧರ್ಮರಾಜನಿಗೆ ಉಪದೇಶ ಮಾಡಿದನಂತರ, ಭೀಷ್ಮೇ — ಭೀಷ್ಮಾಚಾರ್ಯರು, ಕೃಷ್ಣಂ — (ತನ್ನೊಳಗೆ ನಿಂತು ಉಪದೇಶಕಾರ್ಯವನ್ನು ನಡಿಸಿದ) ಶ್ರೀಕೃಷ್ಣಪರಮಾತ್ಮನನ್ನು, ಅನುಸ್ಮೃತ್ಯ–ಪುನಃ ಪುನಃ ಸ್ಮರಿಸಿ, ಸ್ವಾಂ ವಸುತಾಂ – ತನ್ನ ಮೂಲ ವಸುರೂಪವನ್ನು, ಗತೇ ಸತಿ – ಹೊಂದುತ್ತಿರಲು, ಸರ್ವಾಣಿ ಕಾರ್ಯಾಣಿ–ಮರಣಾನಂತರ ಮಾಡಬೇಕಾದ ಎಲ್ಲ ಕಾರ್ಯಗಳನ್ನು, ಕೃತ್ವಾ – ಮಾಡಿ, ದುಃಖಿತಾಮ್–ಮಗನಾದ ಶ್ರೀ ಭೀಷ್ಮರ ಮರಣದಿಂದ ದುಃಖಿಯಾದ, ಗಂಗಾಂ–ಗಂಗೆಯನ್ನು, ಆಶ್ವಾಸ್ಯ–ಸಮಾಧಾನ ಮಾಡಿ, ಪುನಃ:–ಮತ್ತೆ, ದುಃಖಿತಃ–ದುಃಖಿವುಳ್ಳವನಾದ, ಧರ್ಮಜಃ-ಯುಧಿಷ್ಠಿರನು.ಕೃಷ್ಣಾಭ್ಯಾಂ-ವಾಸಿಷ್ಠ ಕೃಷ್ಣ(ಶ್ರೀವೇದವ್ಯಾಸದೇವರು) ಯಾದವಕೃಷ್ಣರಿಂದ, ಆಶ್ವಾಸಿತಃಸನ್ ಚ-ತಾನೂ ಸಮಾಧಾನ ಮಾಡಿಸಿಕೊಳ್ಳಲ್ಪಟ್ಟವನಾಗಿ, ಅನಂತರಾಧಸಾ–ಅಪರಿಮಿತ ಪರಾಕ್ರಮ ಸಾಮರ್ಥ್ಯವುಳ್ಳ,ಪರಾಶರಸುತೇನ–ಪರಾಶರಋಷಿಗಳ ಮಗನಾಗಿ ಅವತರಿಸಿದ, ಕೃಷ್ಣೇನ–ಶ್ರೀವೇದವ್ಯಾಸ ದೇವರಿಂದ, ಅಪಾಪೇ–ಪಾಪಕಾರ್ಯವಲ್ಲದ, ಧರ್ಮವೇಆಗಿರುವ ಭಾರತ ಯುದ್ಧದ ಬಗ್ಗೆ, ಪಾಪಶಂಕಿತ್ವಾತ್–ಪಾಪಕಾರ್ಯವಾಯಿತೋ ಪಾಪವೋ ಎಂಬ ಶಂಕೆಯನ್ನು ಮಾಡಿದ್ದರಿಂದ (ತತ್ಪ್ರಯುಕ್ತ ಬಂದಿರುವ ಪಾಪ ಪರಿಹಾರಕ್ಕಾಗಿ), ಅಚ್ಯುತಂ–ಶ್ರೀಹರಿಯನ್ನು, ಅಶ್ವಮೇಧೈಃ:–ಅಶ್ವಮೇಧಯಾಗಗಳನ್ನು ಮಾಡುವದರಿಂದ, ಯಜ-ಪೂಜಿಸು, ಆರಾಧಿಸು, ಚ–

ಹಾಗು, ರಾಜ್ಯಂ–ರಾಜ್ಯವನ್ನು, ಧರ್ಮೇಣ ಕುರು–ಧರ್ಮದಿಂದ, ಆಳು, ಅಪಾಲಕಾ: ಪ್ರಜಾ: — ಪಾಲಕರಹಿತರಾದ ಪ್ರಜೆಗಳನ್ನು, ಪಾಲಯ—ರಕ್ಷಿಸು ಇತಿ–ಎಂದು, ಉಕ್ತ:–ಹೇಳಲ್ಪಟ್ಟನು. ॥೧–೨–೩॥

ಇತ್ಯುಕ್ತಃ ಸ ತಥಾ ಚಕ್ರೇ ತ್ಯಕ್ತ್ವಾ ಭೋಗಾಂಶ್ಚ ಕೃತ್ಸ್ನಶಃ ।
ಗೋವ್ರತಾದಿವ್ರತೈರ್ಯುಕ್ತಃ ಪಾಲಯಾಮಾಸ ಮೇದಿನೀಮ್ ॥೪॥

ಇತಿ ಉಕ್ತ: — ಈ ರೀತಿ ಹೇಳಲ್ಪಟ್ಟ, ಸ:– ಆ ಧರ್ಮರಾಜನು, ತಥಾ– ಅವರು ಹೇಳಿದಂತೆಯೇ, ಚಕ್ರೇ– ಮಾಡಿದನು. ಚ–ಹಾಗು ಭೋಗಾನ್– ವಿಷಯಭೋಗಗಳನ್ನು, ಕೃತ್ಸ್ನಶಃ– ಪೂರ್ಣವಾಗಿ, ತ್ಯಕ್ತ್ವಾ–ಬಿಟ್ಟು ಗೋವ್ರತಾದಿವ್ರತೈಃ ಯುಕ್ತಃ ಸನ್ – ಗೋಮಯದಲ್ಲಿ ಬಂದ ಧಾನ್ಯದಿಂದಮಾಡಿದ ಅನ್ನವನ್ನು ಮಾತ್ರ ಸ್ವೀಕರಿಸುವ (ಗೋ:) ವ್ರತವೇ ಮೊದಲಾದ ವಿಷ್ಣುಪಂಚಕಾದಿ ವ್ರತಗಳಿಂದ ಕೂಡಿದವನಾಗಿ, ಮೇದಿನೀಂ – ಭೂಮಿಯನ್ನು, ಪಾಲಯಾಮಾಸ – ಆಳಿದನು. ॥೪॥

ದದೌ ದೇಯಾನಿ ಮುಖ್ಯಾನಿ ಯಥಾಕಾಮಮಖಂಡಿತಮ್ ।
ನೈವಾರ್ಥೀ ವಿಮುಖಃ ಕಶ್ಚಿದಭೂದ್ ಯೋಗ್ಯಃ ಕದಾಚನ ॥೫॥

ಮುಖ್ಯಾನಿ ದೇಯಾನಿ – ಮುಖ್ಯವಾಗಿ ಕೊಡಬೇಕಾದ ವಸ್ತುಗಳನ್ನು, ಅಖಂಡಿತಮ್ – ಸತತವಾಗಿ, ಯಥಾಕಾಮಂ—ತೆಗೆದುಕೊಳ್ಳುವವರಿಗೆ ಸಾಕಾಗುವಷ್ಟು, ದದೌ–ಕೊಟ್ಟನು; ಯೋಗ್ಯಃ ಅರ್ಥೀಕಶ್ಚಿತ್–ಏನನ್ನಾದರೂ ಕೇಳಲುಬಂದ ಯೋಗ್ಯನಾದ ಯಾವನೂ, ಕದಾಚನ – ಎಂದೂ ಕೂಡ, ವಿಮುಖಃ–ವಿಮುಖನು (ತನ್ನ ಅಪೇಕ್ಷೆಯ ವಸ್ತುವನ್ನು ಹೊಂದದವನು) ನೈವ ಅಭೂತ್–ಆಗುತ್ತಿದ್ದಿಲ್ಲ. ॥೫॥

ಪ್ರಷ್ಟಾ ಚ ದಾತಾऽಖಿಲರಾಜನಮ್ಯೋ ಯಷ್ಟಾ ಚ ಧರ್ಮಾತ್ಮಜ ಏವ ತತ್ರ ।
ಬಭೂವ ಪಾಂಡೋರ್ಗೃಹಮಾವಸಂಶ್ಚ ರಾಜಾಧಿರಾಜೋ ವನಿತಾನಿವೃತ್ತಃ ॥೬॥

ತತ್ರ – ಆ ಪಂಚಪಾಂಡವರಲ್ಲಿ, ಧರ್ಮಾತ್ಮಜಃ ಏವ – ಧರ್ಮರಾಜನೇ, ಪ್ರಷ್ಟಾ – ತತ್ವಗಳ ಬಗ್ಗೆ ಪ್ರಶ್ನೆಮಾಡುವವನು, ದಾತಾ – ದಾನಮಾಡುವವನು, ಚ–ಮತ್ತು, ಅಖಿಲರಾಜನಮ್ಯಃ—ಎಲ್ಲ ರಾಜರಿಂದ ನಮಸ್ಕಾರ ಮಾಡಿಸಿಕೊಳ್ಳುವವನು, ಚ–ಮತ್ತು, ಯಷ್ಟಾ – ಯಜ್ಞಮಾಡುವವನು ಬಭೂವ–ಆಗಿದ್ದನು. ಚ–ಮತ್ತು, ಪಾಂಡೋಃ ಗೃಹಂ – ಪಾಂಡುರಾಜನ ಮನೆಯಲ್ಲಿ, ಆವಸನ್ ಚ–ವಾಸಿಸುವನಾಗಿ, ವನಿತಾನಿವೃತ್ತ: ಸನ್–ಸ್ತ್ರೀ ಭೋಗದಿಂದ ದೂರನಾಗಿ, ರಾಜಾಧಿರಾಜಃ ಬಭೂವಃ– ರಾಜಾಧಿರಾಜನುನಾಗಿದ್ದನು. ॥೬॥

ಭೀಮಸ್ತು ದೌರ್ಯೋಧನಮೇವ ಸದ್ಮ ಪ್ರಪೇದಿವಾನೂರ್ಜಿತವೀರ್ಯಲಬ್ಧಮ್ ।
ಕೃಷ್ಣಾಸಹಾಯಃ ಸುರರಾಜಯೋಗ್ಯಾನ ಭುಂಕ್ತ ಭೋಗಾನ್ ಯುವರಾಜ ಏವ ॥೭॥

ಭೀಮಃ ತು – ಶ್ರೀ ಭೀಮಸೇನದೇವರಾದರೂ, ಯುವರಾಜಃ ಏವ – ಯುವರಾಜರಾಗಿಯೇ, ಊರ್ಜಿತ ವೀರ್ಯಲಬ್ಧಮ್ –ಉತ್ಕೃಷ್ಟವಾದ ತಮ್ಮ ಪರಾಕ್ರಮದಿಂದ ಹೊಂದಲ್ಪಟ್ಟ ದೌರ್ಯೋಧನಂ ಸದ್ಮಏವ–ದುರ್ಯೋಧನನ ಮನೆಯನ್ನೇ, ಪ್ರಪೇದಿವಾನ್ ಸನ್–ಹೊಂದಿದವರಾಗಿ, ಕೃಷ್ಣಾಸಹಾಯಃ ಸನ್–ದ್ರೌಪದೀದೇವಿಯಿಂದ ಸಹಿತರಾಗಿ, ಸುರರಾಜಯೋಗ್ಯಾನ್ ಭೋಗಾನ್–ಇಂದ್ರದೇವರಿಗೆ ಯೋಗ್ಯವಾದ ಭೋಗಗಳನ್ನು ಅಭುಂಕ್ತ–ಭೋಗಿಸಿದರು. ॥೭॥

ಕೃಷ್ಣಾ ಚ ಪಾರ್ಥಾಂಶ್ಚತುರೋ ವಿಹಾಯ ಸುವ್ಯಕ್ತ ಸಾರಸ್ವತಶುದ್ಧಭಾವಾ ।
ರರಾಜ ರಾಜಾವರಜೇನ ನಿತ್ಯಮನನ್ಯಯೋಗೇನ ಶಿಖೇವ ವಹ್ನೇಃ ॥೮॥

ಕೃಷ್ಣಾ ಚ – ದ್ರೌಪದೀದೇವಿಯಾದರೂ ಕೂಡ, ಸುವ್ಯಕ್ತಸಾರಸ್ವತಶುದ್ಧಭಾವಾಸತೀ – ಅತಿಸ್ಪಷ್ಟವಾದ ಶುದ್ಧವಾದ (ಬೇರೆ ಶಚೀ ಶ್ಯಾಮಲಾದಿ ಯಾವದೇ ದೇವತಾಸ್ತ್ರೀಯರ ಆವೇಶದಿಂದ ಮಿಶ್ರವಲ್ಲದ) ಕೇವಲ ಭಾರತೀದೇವಿಯ ಸ್ವರೂಪವುಳ್ಳವರಾಗಿ, ಚತುರಃ ಪಾರ್ಥಾನ್-ಭೀಮರಿಂದ ಬೇರೆಯಾದ ನಾಲ್ಕು ಪಾಂಡವರನ್ನು, ವಿಹಾಯ-ಬಿಟ್ಟು, ಅನನ್ಯಯೋಗೇನ-ಬೇರೆ ಯಾವ ಸ್ತ್ರೀ ಸಂಪರ್ಕದಿಂದಲೂ ರಹಿತರಾದ, ರಾಜಾವರಜೇನ-ಧರ್ಮರಾಜನ ತಮ್ಮನಾದ ಭೀಮಸೇನದೇವರಿಂದಲೇ, ವಹ್ನೇಃ ಶಿಖಾ ಇವ-ಅಗ್ನಿಯ ಜೊತೆಗೇನೇ ಯಾವಾಗಲೂ ಇರುವ ಜ್ವಾಲೆಯಂತೆ ನಿತ್ಯಂ-ಯಾವಾಗಲೂ, ರರಾಜ-ವಿಹರಿಸುತ್ತಾ ಶೋಭಿಸಿದರು. ॥೮॥

ಪ್ರೀತ್ಯೈವ ವಿಜ್ಞಾನ ಯುಜಾऽನ್ಯಪಾರ್ಥೈಃ ಸಂವಾದತಃ ಪರಿಹೃತಾ ಗತಭಾವಿಕಾಲೇ ।
ಅಪಿ ಸ್ವಕೀಯಂ ಪತಿಮೇವ ಭೀಮಮುವಾಪ್ಯ ಸಾ ಪರ್ಯುಚರನ್ಮುದೈವ ॥೯॥

ಸಾ-ಆ ದ್ರೌಪದೀದೇವಿಯು, ಅನ್ಯಪಾರ್ಥೈಃ-ಬೇರೆ ಪಾಂಡವ(ಧರ್ಮರಾಜ, ಅರ್ಜುನ, ನಕುಲ ಸಹದೇವ)ರಿಂದ, ವಿಜ್ಞಾಯುಜಾ ಪ್ರೀತ್ಯಾ ಏವ-ದ್ರೌಪದಿಯು ಭೀಮದೇವರಿಗೇ ಪತ್ನಿಯು ನಮಗಲ್ಲ ಎಂಬ ವಿಶೇಷ ಜ್ಞಾನದಿಂದ ಕೂಡಿದ ಅತಿ ಪ್ರೀತಿಯಿಂದಲೇ, ಸಂವಾದತಃ – ಒಪ್ಪಿಗೆಯ ಮಾತಿನಿಂದ (ನೀನು ಭೀಮಸೇನದೇವರೊಬ್ಬರಿಂದಲೇ ವಿಹರಿಸು ನಮ್ಮ ಜೊತೆಗೆ ಬೇಡ ಎಂಬ ಮಾತಿನಿಂದ) ಗತಭಾವಿಕಾಲೇ-ಹಿಂದೆ ವನವಾಸ ಕಾಲದಲ್ಲಿ ಹಾಗೂ ಮುಂದೆ ರಾಜ್ಯಾಡಳಿತ ಕಾಲದಲ್ಲಿ, ಪರಿಹೃತಾ ಸತೀ-ಬಿಡಲ್ಪಟ್ಟವಳಾಗಿ, ಸ್ವಕೀಯಂ ಪತಿಂ ಭೀಮಂ ಏವ-ತನ್ನ ಪೂರ್ವರೂಪದಲ್ಲಿ ತನ್ನ ಪತಿಯೇ ಆಗಿರುವ ವಾಯುದೇವರ ಅವತಾರರಾದ ಶ್ರೀ ಭೀಮದೇವರನ್ನು, ಆಪ್ಯ-ಹೊಂದಿ, ಮುದಾ ಏವ-ಸಂತೋಷದಿಂದಲೇ, ಪರ್ಯುಚರತ್-ಸೇವಿಸಿದಳು. ॥೯॥

ರರಾಜ ರಾಜಾವರಜಸ್ತಯಾ ಸ ದ್ವಿರೂಪಯಾ ಸೋಮಕಕಾಶಿಜಾತಯಾ ।
ಶ್ರಿಯಾ ಭುವಾ ಚೈವ ಯಥಾऽಬ್ಜನಾಭೋ ನಿಹತ್ಯ ಸರ್ವಾನ್ ದಿತಿಜಾನ್ ಮಹಾಬ್ಧೌ ॥ ॥೧೦॥

ರಾಜಾವರಜಃ ಸಃ – ಧರ್ಮರಾಜನ ತಮ್ಮರಾದ ಶ್ರೀ ಭೀಮಸೇನದೇವರು, ಮಹಾಬ್ಧೌ-ಮಹಾ ಸಮುದ್ರದಲ್ಲಿ, ಸರ್ವಾನ್ ದಿತಿಜಾನ್-ಎಲ್ಲ ದೈತ್ಯರನ್ನು, ನಿಹತ್ಯ-ಕೊಂದು, ದ್ವಿರೂಪಯಾ-ಎರಡುರೂಪವುಳ್ಳ, ಸೋಮಕಕಾಶಿಜಾತಯಾ-ಪಾಂಚಾಲರಾಜ (ದ್ರುಪದ), ಹಾಗು ಕಾಶಿರಾಜರಿಂದ ಅವತರಿಸಿದ, ತಯಾ ಏವ – ಆ ಭಾರತೀದೇವಿಯಿಂದಲೇ ಕೂಡಿ, ಅಬ್ಜನಾಭಃ –ಕಮಲನಾಭನಾದ ಶ್ರೀ ಹರಿಯು, ಶ್ರಿಯಾ ಚ ಭುವಾ ಏವ ಯಥಾ-ಶ್ರೀ ಭೂರೂಪಳಾದ ಲಕ್ಷ್ಮೀದೇವಿಯಿಂದಲೇ ಕೂಡಿಕೊಂಡು ಹೇಗೋ ಹಾಗೆ, ರರಾಜ-ವಿಹರಿಸುತ್ತಾ ಶೋಭಿಸಿದರು. ॥೧೦॥

ಸರ್ವೋತ್ತುಂಗೋ ನಾಮತಃ ಪ್ರಾಣವಾಯೋರಂಶೋ ನಿಶಾಯಾಂ ಗುರುಪುತ್ರಸೂದಿತಃ ।
ಮಾತಾ ऽಸ್ಯ ದೇವೀತಿ ಚ ರೌಹಿಣೇಯೀ ಭೀಮಪ್ರಿಯಾऽऽಸೀದ್ ಯಾ ಪುರಾऽऽಸ್ಯೈವರಾಕಾ ॥೧೧॥

ಅನ್ಯಾಶ್ಚಾsಸುರ್ವಾಸುದೇವ್ಯೋ ದಿಶೋ ಯಾ ಆಪಶ್ಚ ಪೂರ್ವಂ ವಿಂಶತಿರಗ್ರ್ಯರೂಪಾಃ ।
ತಾಭಿರ್ಯುತೋ ದೈವತೈರಪ್ಯಲಭ್ಯಾನಭುಂಕ್ತ ಭೋಗಾನ್ ವಿಬುಧಾನುಗಾರ್ಚಿತಃ ॥೧೨॥

ಯಃ–ಯಾವನು, ನಾಮತಃ ಸರ್ವೋತ್ತುಂಗಃ–ಹೆಸರಿನಿಂದ ಸರ್ವೋತ್ತುಂಗನೆಂದು (ಈ ಭೂಮಿಯಲ್ಲಿ ಅವತರಿಸಿದಾಗ) ಪ್ರಸಿದ್ಧನಾದವನೋ, ಪಾಣವಾಯೋಃ ಅಂಶಃ–ಮುಖ್ಯಪ್ರಾಣದೇವರ ಮಗನಾದ ಅಹಂಕಾರಿಕ ಪ್ರಾಣವಾಯುವಿನ ಅವತಾರನೋ, ಯಃ– ಯಾವನು, ನಿಶಾಯಾಂ–ರಾತ್ರಿಯಲ್ಲಿ, ಗುರುಪುತ್ರ ಸೂದಿತಃ –ಅಶ್ವತ್ಥಾಮನಿಂದ ಸಂಹರಿಸಲ್ಪಟ್ಟನೋ, ಅಸ್ಯ–ಅಂಥ ಈ ಸರ್ವೋತ್ತುಂಗನ, ಮಾತಾ–ತಾಯಿಯಾದ, ರೌಹಿಣೇಯೀ –ವಸುದೇವಪತ್ನಿಯಾದ ರೋಹಿಣೀದೇವಿಯ ಮಗಳಾದ, ಯಾ ದೇವೀ ಇತಿ–ಯಾವಳು ದೇವಿ ಎಂಬ ಹೆಸರಿನಿಂದ ಪ್ರಸಿದ್ಧಳಾದ, ಭೀಮಪ್ರಿಯಾ ಆಸೀತ್–ಭೀಮಸೇನರ ಹೆಂಡತಿಯಾಗಿದ್ದಳೋ, ಯಾ– ಯಾವಳು, ಪುರಾ –ಮೂಲರೂಪದಲ್ಲಿ, ಅಸ್ಯ ಏವ ಭಾರ್ಯಾ–ಈ ಭೀಮರ ಮೂಲರೂಪರಾದ ವಾಯುದೇವರಿಗೇ ಹೆಂಡತಿಯಾದ, ರಾಕಾ–ಪೌರ್ಣಮಾಭಿಮಾನಿ ದೇವತೆಯಾದ ರಾಕಾ ಎಂಬುವಳೋ, ಸಾ–ಅವಳು, ಚ– ಹಾಗು, ಪೂರ್ವಂ–ಮೂಲರೂಪದಲ್ಲಿ, ಯಾಃ— ಯಾವ ಸ್ತ್ರೀಯರು, ಆಪಃ ದಿಶಃ ಚ ಆಸನ್–ನೀರಿಗೆ, ದಿಕ್ಕುಗಳಿಗೆ ಅಭಿಮಾನಿಗಳಾದವರೋ, ತಾಃ –ಅಂಥ, ಅಗ್ರ್ಯರೂಪಾಃ ವಿಂಶತಿಃ – ಶ್ರೇಷ್ಠ ಸೌಂದರ್ಯವುಳ್ಳ ಇಪ್ಪತ್ತು ಮಂದಿ ದೇವಸ್ತ್ರೀಯರು, ವಾಸುದೇವ್ಯಃ ಸತ್ಯಃ–ವಸುದೇವನ ಪುತ್ರಿಯರಾಗಿ ಅವತರಿಸಿದವರಾಗಿ, (ಭೀಮಸ್ಯ ಭಾರ್ಯಾ:) ಆಸುಃ –ಭೀಮರಿಗೆ ಪತ್ನಿಯಾಗಿದ್ದರು. – ತಾಭಿ: ಆ ಪತ್ನಿಯರಿಂದ, ಯುತ: ಸನ್ ಕೂಡಿದವರಾಗಿ, ವಿಬುಧಾನುಗಾರ್ಚಿತ: ಸನ್ ...ದೇವ ಗಂಧರ್ವರಿಂದ ಸೇವಿತರಾಗಿ, ದೈವತೈ: ಅಪಿ ಅಲಭ್ಯಾನ್ ಭೋಗಾನ್ — ದೇವತೆಗಳಿಂದಲೂ ಹೊಂದಲು ಅಶಕ್ಯವಾದಂಥ ಭೋಗಗಳನ್ನು, ಅಭುಂಕ್ತ — ಭೋಗಿಸಿದರು. ॥೧೧-೧೨॥

ವಿಶೇಷಾಂಶ — ಇತರ ಭಾರ್ಯೆಯರಿಂದ ಯುತ: ಕೂಡಿದವರು ಎಂದು ಹೇಳಿದ್ದರಿಂದ ಶ್ರೀಭೀಮದೇವರು ಅವರಿಂದ ಸೇವೆಯನ್ನು ಮಾತ್ರ ಮಾಡಿಸಿಕೊಳ್ಳುತ್ತಿದ್ದರು, ವಿಹಾರವನ್ನು ಮಾತ್ರ ಶ್ರೀಕಾಳೀದ್ರೌಪದೀ ದೇವಿಯರ ಜೋತೆಗೇನೇ ಎಂದು ಸೂಚಿತವಾಯಿತು.

ಭಾವಾನುವಾದ ೧-೧೨

ಭೀಷ್ಮಾಚಾರ್ಯರು ಶ್ರೀಕೃಷ್ಣಸ್ಮರಣೆ ಮಾಡುತ್ತಾ ಈ ದೇಹವನ್ನು ಬಿಟ್ಟು ತಮ್ಮ ಮೂಲರೂಪ ದ್ಯುವೆಂಬ ವಸುರೂಪಕ್ಕೆ ಸೇರಿದಾಗ ಧರ್ಮರಾಜನು ಅವರ ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡಿ, ದುಃಖಿತಳಾದ ಭೀಷ್ಮರಮಾತೆ ಗಂಗೆಯನ್ನು ಸಮಾಧಾನಪಡಿಸಿ, ತಾನೂ ದುಃಖಿಪಡುತ್ತಿರುವಾಗ ಅವನನ್ನು ಶ್ರೀಯಾದವಕೃಷ್ಣ ಶ್ರೀವಾಸಿಷ್ಠ ಕೃಷ್ಣ (ಶ್ರೀವೇದವ್ಯಾಸ)ರಿಬ್ಬರೂ ಸಮಾಧಾನಪಡಿಸಿದರು. ಆದರೂ ಪುನ: ದುಃಖಿಪಡುತ್ತಿರುವಾಗ, ಶ್ರೀವ್ಯಾಸದೇವರು ಧರ್ಮರಾಜನನ್ನು ಕುರಿತು ಪಾಪವಲ್ಲದ ಭಾರತಯುದ್ಧವನ್ನು ಪಾಪವೆಂದು ಸಂಶಯಪಟ್ಟ ಕಾರಣ (ಶ್ರೀಕೃಷ್ಣಪರಮಾತ್ಮನು ಹೇಳಿದಂತೆ ಅಶ್ವತ್ಥಾಮಾ ಹತಃ ಎಂದು ಹೇಳಲು ಪಾಪಬರುವದೋ ಎಂಬ ಸಂಶಯಪಟ್ಟಕಾರಣ) ನಿನಗೆ ಪಾಪಬಂದಿದೆ. ಆ ಪಾಪಪರಿಹಾರಕ್ಕಾಗಿ ಅಶ್ವಮೇಧಯಾಗದಿಂದ ಭಗವಂತನನ್ನು ಆರಾಧಿಸು, ಧರ್ಮದಿಂದ ರಾಜ್ಯವನ್ನು ಆಳು; ಅರಾಜಕರಾದ ಪ್ರಜೆಗಳನ್ನು ಪಾಲಿಸು ಎಂದು ಹೇಳಿದರು. ಧರ್ಮಜನು ಆ ಪ್ರಕಾರ, ಸಕಲ ಭೋಗಗಳನ್ನು ತ್ಯಜಿಸಿ, ಗೋವ್ರತ ಅಂದರೆ ಗೋಮೂತ್ರದಲ್ಲಿ ಇಟ್ಟ ಗೋಮಯದಲ್ಲಿ ಬಂದ ಧಾನ್ಯಗಳಿಂದ ಮಾಡಿದ ಅನ್ನದ ಭೋಜನ ಇತ್ಯಾದಿ ವ್ರತಗಳನ್ನು ಆಚರಿಸುತ್ತಾ, ಧರ್ಮದಿಂದ ರಾಜ್ಯವನ್ನು ಆಳಿದನು. ಕೊಡಬೇಕಾದ ಮುಖ್ಯ ಪದಾರ್ಥಗಳನ್ನು. ಸಾಕಷ್ಟುಕೊಡುತ್ತಿದ್ದನು. ಯಾವದೇ ಯೋಗ್ಯ ಪುರುಷನು ಏನನ್ನಾದರೂ ಅಪೇಕ್ಷಿಸಿ ಬಂದವನು ಎಂದೂ ನಿಷ್ಫಲನಾಗಿ ಹೋಗುತ್ತಿರಲಿಲ್ಲ. ಅವನು ಅಪೇಕ್ಷಿಸಿದ್ದು ಸಿಕ್ಕೇ ಸಿಗುತ್ತಿತ್ತು. ಧರ್ಮರಾಜನು ಎಲ್ಲ ರಾಜರಿಂದ ಮರ್ಯಾದಾವನ್ನು ಸ್ವೀಕರಿಸುವವನು, ಯಜ್ಞ ಮಾಡುವವನು ಆಗಿದ್ದನು, ಪಾಂಡುರಾಜನ ಗೃಹದಲ್ಲಿ

ವಾಸಿಸುತ್ತಿದ್ದನು. ಭೀಮಸೇನದೇವರು ಸ್ವಪರಾಕ್ರಮಾರ್ಜಿತವಾದ ದುರ್ಯೋಧನನ ಮನೆಯಲ್ಲಿ ಇರುತ್ತಿದ್ದರು. ದ್ರೌಪದೀ ಸಮೇತರಾಗಿ ವಾಸಿಸುತ್ತಾ ಯುವರಾಜರಾಗಿ ದೇವೇಂದ್ರನಿಗೆ ಯೋಗ್ಯವಾದ ಭೋಗಗಳನ್ನು ಭೋಗಿಸುತ್ತಿದ್ದರು. ದ್ರೌಪದೀದೇವಿಯಾದರೂ ತನ್ನಲ್ಲಿದ್ದ ಉಳಿದ ನಾಲ್ಕು ಶಚೀ,ಶ್ಯಾಮಲಾ, ಉಷಸ್ ಪಾರ್ವತೀಯರ ಆವೇಶದಿಂದ ರಹಿತಳಾಗಿ ಕೇವಲ ಭಾರೂಪಳಾಗಿತೀಸ್ವರ ಇತರನಾಲ್ಕು ಪಾಂಡವರನ್ನು ತ್ಯಜಿಸಿ ಕೇವಲ ಭೀಮಸೇನರಿಂದ ರತಳಾಗಿದ್ದಳು.

ಇತರ ಪಾಂಡವರು ಇವಳು ಭೀಮಸೇನ ದೇವರ ಪತ್ನಿಯೇ ಎಂಬ ತಿಳಿವಳಿಕೆಯಿಂದ ಸಹಿತರಾಗಿ ಸಂತೋಷದಿಂದಲೇ ದ್ರೌಪದೀದೇವಿಯಸಂಗವನ್ನು ವನವಾಸಕಾಲದಲ್ಲಿ ಹಾಗೆಯೇ ರಾಜ್ಯ ಕಾಲದಲ್ಲಿಯೂ ತ್ಯಜಿಸಿದ್ದರು. ದ್ರೌಪದೀದೇವಿಯು ಮಾತ್ರ ಈಗ ತನ್ನ ನೈಜ ಪತಿಯಾದ ಭೀಮರನ್ನು ಪಡೆದು ಸಂತಸದಿಂದ ಸೇವಿಸಿದಳು. ಅಶ್ವತ್ಥಾಮರು ರಾತ್ರಿ ಸಮಯದಲ್ಲಿ ಪಾಂಡವರ ಶಿಬಿರವನ್ನು ಹೊಕ್ಕು ಅನೇಕರನ್ನು ಸಂಹರಿಸಿದ ಸಮಯದಲ್ಲಿ ಸರ್ವೋತ್ತುಂಗ ನೆಂಬವನು (ಮುಖ್ಯಪ್ರಾಣರ ದಾಸರಾದ ಪ್ರಾಣಾದಿ ಪಂಚಕರಲ್ಲಿ ಪ್ರಾಣನ ಅವಂತಾರನು)ಸತ್ತಿದ್ದನು. ಅವನು ಭೀಮಸೇನದೇವರ ಪತ್ನಿಯಾವ, ಬಲರಾಮದೇವರ ಸೋದರಿಯಾದ, ರೋಹಿಣೀ ಪುತ್ರಿಯಾದ ದೇವಿ ಎಂಬ ವಳಲ್ಲಿ ಹುಟ್ಟಿದ್ದನು. ಆ ದೇವಿ ಎಂಬವಳು ಮೂಲರೂಪದಲ್ಲಿ ಪೌರ್ಣಮಾತಿಥಿಗೆ ಅಭಿಮಾನಿಯಾದ ರಾಕಾ ಎಂಬ ವಾಯುಪತ್ನಿಯೇ ಆಗಿದ್ದವಳು. ಹಾಗೆಯೇ ದಿಗಭಿಮಾನಿದೇವತಾಸ್ತ್ರೀಯರು, ಜಲಾಭಿಮಾನಿದೇವತಾ ಸ್ತ್ರೀಯರೇ ಒಟ್ಟು ಇಪ್ಪತ್ತು ಜನರು ವಸುದೇವನ ಹೆಣ್ಣುಮಕ್ಕಳಾಗಿ ಹುಟ್ಟಿದ್ದರು. ಅವರೆಲ್ಲರೂ ಶ್ರೀಭೀಮರ ಪತ್ನಿಯರಾಗಿದ್ದರು. ಹೀಗೆ ಒಟ್ಟು ಇಪ್ಪತ್ತೊಂದು ಮಂದಿ ಹೆಂಡತಿಯರು ಭೀಮಸೇನದೇವರ ಸೇವೆಯನ್ನು ಮಾಡುತ್ತಿದ್ದರು. ಹೀಗೆ ದೇವ ಗಂಧರ್ವರಿಂದ ಪೂಜಿತರಾಗಿ ದೇವತೆಗಳಿಗೂ ದುರ್ಲಭವಾದ ಬೋಗಗಳನ್ನು ಭೋಗಿಸುತ್ತಿದ್ದರು.

ರರಕ್ಷ ಧರ್ಮಾನಖಿಲಾನ್ ಹರೇಃ ಸ ನಿಧಾಯ ವಿಪ್ರಾನನುಶಾಸ್ಯಯುಕ್ತಾನ್।
ಸದ್ವೈಷ್ಣವಾನ್ ವಿದುಷಃ ಪಂಚ ಪಂಚ ಸವೇತನಾನ್ ಗ್ರಾಮಮನು ಸ್ವಕೀಯಾನ್॥ ॥೧೩॥

ಸಃ— ಆ ಭೀಮಸೇನ ದೇವರು, ಸದ್ವೈಷ್ಣವಾನ್– ಶ್ರೇಷ್ಠ ವಿಷ್ಣುಭಕ್ತರಾದ, ಯುಕ್ತಾನ್ ಅತ್ಯಂತ ಅರ್ಹರಾದ, ಸವೇತನಾನ್–ಸಂಬಳದಿಂದ ಸಹಿತರಾದ, ಸ್ವಕೀಯಾನ್–ತನ್ನವರಾದ, ಪಂಚ ಪಂಚ ವಿಪ್ರಾನ್–ಐದು ಐದು ಬ್ರಾಹ್ಮಣರನ್ನು, ಗ್ರಾಮಂ ಅನು–ಒಂದೊಂದು ಗ್ರಾಮಕ್ಕೂ, ಅನುಶಾಸ್ಯ–ಧರ್ಮರಕ್ಷಣವನ್ನು ಮಾಡುತ್ತಾ ಇರಿ ಎಂದು ಆಜ್ಞಾಪಿಸಿ, ಹರೇಃ ಅಖಿಲಾನ್ ಧರ್ಮಾನ್–ಶ್ರೀಹರಿಯ ಪ್ರೀತಿಕರವಾದ ಭಾಗವತಧರ್ಮಗಳನ್ನು, ರರಕ್ಷ–ರಕ್ಷಿಸಿದರು. ॥೧೩॥

ದಧಾರ ದಂಡಂ ತದವರ್ತಿಷು ಸ್ವಯಂ ಜಗ್ರಾಹ ಚಾನ್ವೇವ ಮುದಾऽಥ ತದ್ಗಾನ್।
ತದ್ವೃತ್ತಮನ್ಯೈರ್ಋಷಿ ವಿಪ್ರವರ್ಯೈಃ ಸಂಶೋಧಯನ್ ಸರ್ವಮಸೌ ಯಥಾ ವ್ಯಧಾತ್ ॥೧೪॥

ತದವರ್ತಿಷು–ಅವರನ್ನು ಹಾಗೂ ಧರ್ಮವನ್ನು ಅನುಸರಿಸುವವರ ಬಗ್ಗೆ, ದಂಡಂ–ಶಿಕ್ಷಾಕಾರ್ಯವನ್ನು, ಸ್ವಯಂ-ತಾವೇ ದಧಾರ– ಕೈ ಕೊಳ್ಳುತ್ತಿದ್ದರು. ಅಥ–ಹಾಗೂ, ತದ್ಗಾನ್ – ಅವರನ್ನು ಅನುಸರಿಸಿ ಧರ್ಮವನ್ನು ಮಾಡಿಕೊಂಡಿರುವವರನ್ನು, ಮುದಾ ಏವ–ಸಂತೋಷದಿಂದಲೇ, ಅನ್ವಜಗ್ರಾಹ – ಅನುಗ್ರಹಿಸುತ್ತಿದ್ದರು. ತದ್ವೃತ್ತಂ ಅಪಿ–ಗ್ರಾಮ ಗ್ರಾಮಕ್ಕೆ ಧರ್ಮರಕ್ಷಣೆಗಾಗಿ ಇರುವ ಐದೈದು ಮಂದಿ ಬ್ರಾಹ್ಮಣರ ನಡತೆಯನ್ನೂ ಕೂಡ, (ಈ ಬ್ರಾಹ್ಮಣರು ಕೂಡ ಪ್ರಜೆಗಳಿಂದ ದುಡ್ಡು ಇತ್ಯಾದಿಗಳನ್ನು (ಲಂಚರೂಪವಾಗಿ) ತೆಗೆದುಕೊಂಡು ಧರ್ಮರಕ್ಷಣಕಾರ್ಯದ ಬಗ್ಗೆ ಉದಾಸೀನರಾದಾರು ಎಂಬ ಶಂಕೆಯಿಂದ ಅಪರ ನಡತೆಯನ್ನು, ಅನ್ಯೈಃ ವಿಪ್ರವರ್ಯೈಃ— ಅವರಿಗಿಂತಲೂ ಶ್ರೇಷ್ಠರಾದ ಬ್ರಾಹ್ಮಣರಿಂದ. ಸಂಶೋಧಯನ್ ಸನ್ – ಶುದ್ಧ ಮಾಡಿಸುವವರಾಗಿ, ಸರ್ವಂ – ಎಲ್ಲ ಧರ್ಮರಕ್ಷಣಕಾರ್ಯವನ್ನು, ಯಥಾ ವ್ಯಧಾತ್ – ಚೆನ್ನಾಗಿ ನಡೆಯುವಂತೆ ಮಾಡಿದರು, ॥೧೪॥

ಅವತಾರಿಕೆ — ಈ ರೀತಿ ರಾಜ್ಯಾಡಳಿತದಲ್ಲಿ ಪ್ರಜೆಗಳು ಹೇಗಿದ್ದರೆಂಬುದನ್ನು ವರ್ಣಿಸುತ್ತಾರೆ—

ನಾವೈಷ್ಣವಃ ಕಶ್ಚಿದಭೂತ್ ಕುತಶ್ಚಿನ್ನೈವಾನ್ಯನಿಷ್ಠೋ ನಚ ಧರ್ಮಹಂತಾ ।
ನ ವಿಧ್ಯವರ್ತೀ ನಚ ದುಃಖಿತೋ s ಭೂನ್ನಾಪೂರ್ಣವಿತ್ತಶ್ಚ ತದೀಯರಾಷ್ಟ್ರೇ ॥೧೫॥

ತದೀಯರಾಷ್ಟ್ರೇ — ಆ ಪಾಂಡವರ ರಾಜ್ಯದಲ್ಲಿ, ಕಶ್ಚಿತ್ – ಯಾವನೂ, ಅವೈಷ್ಣವಃ — ವಿಷ್ಣು ಭಕ್ತನಲ್ಲದವನು, ನ ಅಭೂತ್ – ಇರಲಿಲ್ಲ. ಕುತಶ್ಚಿತ್ – ಯಾವದೇ (ಕಾರಣ) ಆಮಿಷದಿಂದ, ಅನ್ಯನಿಷ್ಠಃ–ಶ್ರೀ ಹರಿಯನ್ನು ಬಿಟ್ಟು ಬೇರೆಯ ದೇವತೆಯ ಬಗ್ಗೆ ನಿಷ್ಠೆ (ಸರ್ವೋತ್ತಮತ್ವ ಬುದ್ಧಿ) ಯುಳ್ಳವನು, ನೈವ – ಆಗಿರಲೇಇಲ್ಲ, ಧರ್ಮ ಹಂತಾ ನಚ — ಧರ್ಮವನ್ನು ಬಿಡುವವನು ಆಗಿರಲಿಲ್ಲ. ವಿಧ್ಯವರ್ತೀ ನಚ – ಆಜ್ಞೆಯುಲ್ಲಂಘನೆ ಮಾಡುವವನು ಇರಲಿಲ್ಲ. ದುಃಖಿತಃ ನಚ – ದುಃಖವುಳ್ಳವನಿರಲಿಲ್ಲ: ಅಪೂರ್ಣವಿತ್ತಃ ನಚ – ಸಾಲವಷ್ಟು ಧನವುಳ್ಳವನು (ದರಿದ್ರನು) ಇರಲಿಲ್ಲ. ॥೧೫॥

ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಂ ತಾಭ್ಯಾಂ ಚ ಭೀಮೇನ ಮುನೀಶ್ವರೈಶ್ಚ ।
ಸಂಶಿಕ್ಷಿತಾನಾಂ ಪ್ರಥಮಾದ್ ಯುಗಾಚ್ಚ ಗುಣಾಧಿಕಃ ಕಲಿರಾಸೀತ್‌ಪ್ರಜಾನಾಮ್ ॥೧೬॥

ವಾಸಿಷ್ಠವೃಷ್ಣಿಪ್ರವರೌ—ವಸಿಷ್ಠ ಕುಲೋತ್ಪನ್ನ ಯದುಕುಲೊತ್ಪನ್ನರಲ್ಲಿ ಶ್ರೇಷ್ಠರಾದ ಶ್ರೀವೇದವ್ಯಾಸ ಶ್ರೀಕೃಷ್ಣದೇವರನ್ನು, ಪ್ರಪಶ್ಯತಾಂ — ನಿತ್ಯದರ್ಶನಮಾಡತಕ್ಕಂಥ, ತಾಭ್ಯಾಂ — ಅವರಬ್ಬರಿಂದ ಚ – ಮತ್ತು ಭೀಮೇನ – ಭೀಮಸೇನದೇವರಿಂದ, ಮುನೀಶ್ವರೈಃ ಚ–ಶ್ರೇಷ್ಠ ಮುನಿಗಳಿಂದಲೂ ಕೂಡ, ಸಂಶಿಕ್ಷಿತಾನಾಂ – ಉಪದಿಷ್ಟರಾದ, ಪ್ರಜಾನಾಂ – ಪ್ರಜೆಗಳಿಗೆ, ಕಲಿಃ ಕಲಿಯುಗವು, ಪ್ರಥಮಾತ್ ಯುಗಾತ್ ಚ–ಮೊದಲಯುಗವಾದ ಕೃತಯುಗಕ್ಕಿಂತಲೂ ಕೂಡ, ಗುಣಾಧಿಕಃ – ಹೆಚ್ಚು ಗುಣವುಳ್ಳದ್ದು, ಆಸೀತ್–ಆಗಿತ್ತು. ॥೧೬॥

ಅವತಾರಿಕೆ :— ಅದನ್ನೇ ವಿವರಿಸುತ್ತಾರೆ.—

ಶುಭಂ ಮಹತ್ ಸ್ವಲ್ಪಫಲಂ ಕೃತೇ ಹಿ ವಿಪರ್ಯಯೇಣಾಶುಭ ಮೇಷ ದೋಷಃ ।
ತದ್ಧೀನಮಪ್ಯುಚ್ಚ ಶುಭಂ ಕೃತಾದ್ ಯುಗಾಚ್ಚಕ್ರೇ ಕಲಿಂ ಮಾರುತಿರಚ್ಯುತಾಶ್ರಯಾತ್ ॥೧೭॥

ಕೃತೇ ಹಿ—ಕೃತಯುಗದಲ್ಲಿಯಾದರೆ. ಮಹತ್ ಶುಭಂ ಅಪಿ– ದೊಡ್ಡ ಶುಭಕಾರ್ಯವೂಕೂಡ ಸ್ವಲ್ಪಫಲಂ– ಅಲ್ಪಫಲವುಳ್ಳದ್ದು, ಅಶುಭಂ – ಪಾಪಕಾರ್ಯವು. ವಿಪರ್ಯಯೇಣ – ಇವಕ್ಕೆ ವಿರುದ್ಧವಾಗಿ (ಅಂದರೆ– ಅಲ್ಪ ಪಾಪಕಾರ್ಯವೂ ಕೂಡ ಬಹುಫಲಪ್ರದವು) ಇತಿ ಏಷಃ – ಎಂಬ ಇದು, ದೋಷಃ–ದೋಷವಿದೆ. ಆದರೆ ತದ್ಧೀನಂ–ಆ ದೋಷದಿಂದ ರಹಿತವಾದ ಕಲಿಂ—ಕಲಿಯುಗವನ್ನು, ಮಾರುತಿಃ — ಶ್ರೀಭೀಮಸೇನದೇವರು, ಅಚ್ಯುತಾಶ್ರಯಾತ್– ಶ್ರೀಕೃಷ್ಣನ ಆಶ್ರಯದಿಂದ, ಕೃತಾತ್ ಯುಗಾತ್ ಅಪಿ––ಕೃತಯುಗಕ್ಕಿಂತಲೂ, ಉಚ್ಚಶುಭಂ—ಹೆಚ್ಚು ಪುಣ್ಯಫಲವುಳ್ಳದ್ದನ್ನಾಗಿ ಚಕ್ರೇ—ಮಾಡಿದರು. ॥೧೭॥

ಧನಂಜಯಃ ಪ್ರೋದ್ಯತದಂಡ ಆಸೀತ್ ಸದಾऽನ್ಯ ಚಕ್ರೇಷು ನಿಜಾಗ್ರಜೇರಿತಃ ।
ವಿಭೀಷಯಿತ್ವಾ ನೃಪತೀನ್ ಸರತ್ನಾನ್ ಪದೋರ್ನೃಪಸ್ಯಾಗ್ರಭುವೋ ನ್ಯಪಾತಯತ್ ॥೧೮॥

ಧನಂಜಯಃ-ಅರ್ಜುನನು, ನಿಜಾಗ್ರಜೇರಿತಃ ಸನ್ — ಅಣ್ಣರಾದ ಧರ್ಮಭೀಮರಿಂದ ಆಜ್ಞಾಪ್ತನಾಗಿ ಸದಾ–ಯಾವಾಗಲೂ, ಅನ್ಯಚಕ್ರೇಷು–ಪರಕೀಯ ದುಷ್ಟ ಸೈನ್ಯದ ಮೇಲೆ, ಪ್ರೋದ್ಯತದಂಡಃ — ಶಿಕ್ಷಾವನ್ನು ಮಾಡುವವನು, ಆಸೀತ್-ಆಗಿದ್ದನು, ನೃಪತೀನ್-ಪರರಾಜರನ್ನು, ವಿಭೀಷಯಿತ್ವಾ-ಹೆದರಿಸಿ, ಸರತ್ನಾನ್–ರತ್ನ ಕನಕಗಳಿಂದ ಸಹಿತರಾದ, ತಾನ್– ಆ ರಾಜರನ್ನು,(ಕಪ್ಪ-ಕಾಣಿಕೆಸಹಿತರಾದ ಆ ರಾಜರನ್ನು ಎಂದು ಭಾವ) ಅಗ್ರಭುವಃ-ತನ್ನ ಅಗ್ರಜನಾದ, ನೃಪಸ್ಯ–ಧರ್ಮರಾಜನ, ಪದೋಃ— ಪಾದಗಳಲ್ಲಿ, ನ್ಯಪಾತಯತ್–ಬೀಳಿಸುತ್ತಿದ್ದನು.(ಪರರಾಜರು ಕಪ್ಪಕಾಣಿಕೆ ತಂದು ಧರ್ಮರಾಜನಿಗೆ ಕೊಟ್ಟು ನಮಸ್ಕರಿಸುವ ಹಾಗೆ ಮಾಡುತ್ತಿದ್ದನು ಎಂದು ಭಾವ.) ॥೧೮॥

ಸದೈವ ಕೃಷ್ಣಸ್ಯ ಮುಖಾರವಿಂದಾತ್ ವಿನಿಸ್ಸೃತಂ ತತ್ವವಿನಿರ್ಣಯಾಮೃತವ್ ।
ಪಿಬನ್ ಸುತಾದ್ಯಾಧಿಮಸೌ ಕ್ರಮೇಣ ತ್ಯಜಂಶ್ಚ ರೇಮೇ s ವಿರತಾತಿಭೋಗಃ ॥೧೯॥

ಅಸೌ–ಆ ಅರ್ಜುನರು, ಕೃಷ್ಣಸ್ಯ ಮುಖಾರವಿಂದಾತ್–ಶ್ರೀ ಕೃಷ್ಣಪರಮಾತ್ಮನ ಮುಖಕಮಲದಿಂದ, ವಿನಿಸ್ಸೃತಂ–ಹೊರಟಂಥ, ತತ್ವವಿನಿರ್ಣಯಾಮೃತಂ–ತತ್ವಜ್ಞಾನವೆಂಬ ಅಮೃತವನ್ನ, ಸದಾ ಏವ–ಯಾವಾಗಲೂ, ಪಿಬನ್–ಪಾನಮಾಡುವವರಾಗಿ, ಸುತಾದ್ಯಾಧಿಂ – ಪುತ್ರ ಮೊದಲಾದ ಬಂಧುವ್ಯಾಮೋಹ (ಪ್ರಯುಕ್ತದುಃಖ)ವನ್ನು ಕ್ರಮೇಣ ತ್ಯಜನ್–ಕ್ರಮವಾಗಿ ಬಿಡುವವರಾಗಿ, ಅವಿರತಾತಿಭೋಗಃ ಸನ್–ಸದಾ ಸಕಲ ಭೋಗವುಳ್ಳವರಾಗಿ, ರೇಮೇ–ವಿಹರಿಸಿದರ್ರ. ॥೧೯॥

ದುಃಶಾಸನಸ್ಯಾs ವಸಥಂ ಸುಭದ್ರಾಚಿತ್ರಾಂಗದಾಸಹಿತೋs ಧ್ಯಾವಸಂಶ್ಚ ।
ಸ ಚಂದ್ರಿಕಾಕಾಂತಿರನೂನಬಿಂಬೋ ನಭಸ್ಥಿತಶ್ಚಂದ್ರ ಇವಾತ್ಯರೋಚತ ॥೨೦॥

ಚ–ಹಾಗು, ಅಸೌ–ಆ ಅರ್ಜುನನು, ದುಃಶಾಸನಸ್ಯ–ದುಃಶಾಸನನ, ಆವಸಥಂ – ವಾಸಸ್ಥಾನದಲ್ಲಿ, ಅಧ್ಯಾವಸನ್ ಸನ್–ವಾಸಿಸಿದವನಾಗಿ, ಸುಭದ್ರಾಚಿತ್ರಾಂಗದಾಸಹಿತಃ ಸನ್–ಸುಭದ್ರೆ ಚಿತ್ರಾಂಗದೆಯರಿಂದ ಸಹಿತನಾಗಿ, ನಭಸ್ಥಿತಃ–ಆಕಾಶದಲ್ಲಿರುವ, ಸಚಂದ್ರಿಕಾಕಾಂತಿಃ–ಚಂದ್ರಿಕಾ ಹಾಗು ಕಾಂತಿ ಎಂಬ ಭಾರ್ಯೆಯರಿಂದ ಸಹಿತನಾದ, ಅನೂನಬಿಂಬಃ–ಪೂರ್ಣಮಂಡಲದಿಂದ ಕೂಡಿದ, ಚಂದ್ರ:ಇವ–ಚಂದ್ರನಂತೆ, ಅತ್ಯರೋಚತ–ಚೆನ್ನಾಗಿ ಶೋಭಿಸಿದನು. ॥೨೦॥

ಸಮಸ್ತಭೃತ್ಯಾಶ್ರಿತವೇತನಾನಾಂ ಮಾದ್ರೇಯ ಆಸೀತ್ ಪ್ರಥಮಃ ಪ್ರದಾತಾ ।
ಸ ದುರ್ಮುಖಸ್ಯಾs ವಸಥೇs ವಸಚ್ಚ ಸ ಮದ್ರರಾಜಾತ್ಮಜಯಾsಗ್ರ್ಯವರ್ತೀ ॥೨೧॥

ಪ್ರಥಮಃ ಮಾದ್ರೇಯಃ–ಮಾದ್ರಿಪುತ್ರರಲ್ಲಿ ಹಿರಿಯನಾದ ನಕುಲನು, ಸಮಸ್ತಭೃತ್ಯಾಶ್ರಿತವೇತನಾನಾಂ ಪ್ರದಾತಾ–ಎಲ್ಲ ಭೃತ್ಯರಿಗೆ, ಆಶ್ರಯಿಸಿದವರಿಗೆ ವೇತನಗಳನ್ನು ಕೊಡುವವನು, ಆಸೀತ್–ಆಗಿದ್ದನು. ಅಗ್ರ್ಯವರ್ತೀ ಸಃ-ಶ್ರೆಷ್ಠ ಸನ್ಮಾರ್ಗದಲ್ಲಿ ರತನಾಗಿ ಅಣ್ಣನನ್ನು ಅನುಸರಿಸಿ ಇರುವ ಅವನು, ದುರ್ಮುಖಸ್ಯ–ದುರ್ಮುಖಿ ಎಂಬ ಕೌರವನ, ಆವಸಥೇ–ವಾಸಗೃಹದಲ್ಲಿ, ಮದ್ರರಾಜಾತ್ಮಜಯಾ-ಮದ್ರರಾಜನಾದ ಶಲ್ಯನ ಮಗಳಿಂದ ಕೂಡಿಕೊಂಡು, ಅವಸತ್–ವಾಸಿಸಿದನು. ॥೨೧॥

ಸಂಧಾನಭೇದಾನುಗತ ಪ್ರವೃತ್ತಿಸ್ತಿಷ್ಠಂಶ್ಚ ದುರ್ಮರ್ಷಣಶುಭ್ರಸದ್ಮನಿ ।
ನೃಪಾಂಗರಕ್ಷಃ ಪ್ರಗೃಹೀತಖಡ್ಗಸ್ತಸ್ಯಾನು ಜೋ ಮಾಗಧಕನ್ಯಯಾsssಸೀತ್ ॥೨೨॥

ತಸ್ಯ ಅನುಜಃ – ಆ ನಕುಲನ ತಮ್ಮನಾದ ಸಹದೇವನು, ಸಂಧಾನಭೇದಾನುಗತಪ್ರವೃತ್ತಿಃ ಸಂಧಾನ, ಭೇದ ಇತ್ಯಾದಿ ರಾಜನೀತಿಕಾರ್ಯಗಳಲ್ಲಿ ಪ್ರವೃತ್ತನಾದವನಾಗಿ, ಪ್ರಗೃಹೀತಖಡ್ಗಃ ಸನ್–ಕೈಯಲ್ಲಿ–ಖಡ್ಗವನ್ನು ಹಿಡಿದವನಾಗಿ, ನೃಪಾಂಗರಕ್ಷಃ ಸನ್–ನೃಪನಾದ ಧರ್ಮಜನ ಅಂಗರಕ್ಷಕನಾಗಿ, ಮಾಗಧಕನ್ಯಯಾ–ಜರಾಸಂಧನ ಮಗಳಿಂದ ಕೂಡಿಕೊಂಡು, ದುರ್ಮರ್ಷಣಶುಭ್ರಸದ್ಮನಿ––ದುರ್ಮರ್ಷಣ ಎಂಬ ಕೌರವನ ಸುಂದರ, ಸ್ವಚ್ಛಗೃಹದಲ್ಲಿ, ತಿಷ್ಠನ್ ಆಸೀತ್–ವಾಸಮಾಡುವವನು ಆಗಿದ್ದನು. ॥೨೨॥

ಸೇನಾಪತಿಃ ಕೃಪ ಆಸೀದ್ ಯುಯುತ್ಸುಃ ಸಸಂಜಯೋ ವಿದುರಶ್ಚಾsಂಬಿಕೇಯಮ್ ।
ಪಾರ್ಥೇರಿತಾಃ ಪರ್ಯಚರನ್ ಸ್ವಯಂ ಚ ಸರ್ವೇಯಥಾ ದೈವತಮಾದರೇಣ ॥೨೩॥

ಕೃಪಃ–ಕೃಪಾಚಾರ್ಯರು, ಸೇನಾಪತಿಃ ಆಸೀತ್–ಸೇನಾಪತಿಯಾಗಿದ್ದರು. ಸಸಂಜಯಃ ಯುಯುತ್ಸುಃ–ಸಂಜಯನಿಂದ ಸಹಿತನಾದ ಯುಯುತ್ಸುವು, ಚ–ಹಾಗೂ, ವಿದುರಃ–ವಿದುರರು, ಈ ಮೂವರು, ಸ್ವಯಂ ಸರ್ವೇಚ–ಸ್ವತಃ ತಾವು ಭೀಮಾದಿ ಪಾಂಡವರೆಲ್ಲರೂ ಕೂಡ, ಪಾರ್ಥೇರಿತಾಃ ಸಂತಃ–ಧರ್ಮರಾಜನಿಂದ ಆಜ್ಞಪ್ತರಾಗಿ, ಸ್ವಯಂ ಚ–ಸ್ವೇಚ್ಛೆಯಿಂದಲೂ ಕೂಡ, ಆಂಬಿಕೇಯಂ–ಧೃತರಾಷ್ಟ್ರರಾಜನನ್ನು, ದೈವತಂ ಯಥಾ–ದೇವರನ್ನು ಹೇಗೆ ಆವರದಿಂದ ಪೂಜಿಸಬೇಕೋ, ತಥಾ–ಹಾಗೆ, ಆವರೇಣ–ಆದರದಿಂದ, ಪರ್ಯುಚರನ್–ಸೇವಿಸುತ್ತಿದ್ದರು. ॥೨೩॥

ದ್ವಿರೂಪಕೃಷ್ಣಪ್ರಹಿತೇಷು ಪಾಂಡುಷು ಕ್ಷಿತಿಂ ಪ್ರಶಾಸತ್ಸು ನ ಕಶ್ಚನಾsತುರಃ ।
ನಚಾಕ್ರಮಾನ್ಮೃತ್ಯುರಭೂನ್ನ ನಾರ್ಯೋ ವಿಧವ್ಯಕಾ ನೋವಿಧುರಾ ನರಾಶ್ಚ ॥೨೪॥

ದ್ವಿರೂಪಕೃಷ್ಣಪ್ರಹಿತೇಷು–ಯಾದವಶ್ರೀಕೃಷ್ಣ, ವಾಸಿಷ್ಠಕೃಷ್ಣ (ಶ್ರೀವೇದವ್ಯಾಸ) ರೆಂಬ ಎರಡು ಕೃಷ್ಣರೂಪಗಳಿಂದ ಉಪದಿಷ್ಟರಾದ, ಆಜ್ಞಪ್ತರಾದ ಅಥವಾ ಇಬ್ಬರೂ ಕೃಷ್ಣರಿಂದ ಯಾವಾಗಲೂ ಹಿತವನ್ನು ಹೊಂದಿರುವ, ಹೊಂದುತ್ತಿರುವ, ಪಾಂಡುಷು–ಪಾಂಡವರು, ಕ್ಷಿತಿಂ ಪ್ರಶಾಸತ್ಸು–ಭೂಮಿಯನ್ನು ಆಳುತ್ತಿರಲು, ಕಶ್ಚನ–ಯಾವನೂ ಕೂಡ, ಆತುರಃ–ದುಃಖಿಯು, ನ–ಇರಲಿಲ್ಲ. ಅಕ್ರಮಾತ್–ಅಕ್ರಮವಾಗಿ, (ದೊಡ್ಡವರ ಎದುರು ಸಣ್ಣವರ) ಮೃತ್ಯುಃ–ಮರಣವು, ನ ಚ ಅಭೂತ್–ಆಗುತ್ತಿರಲಿಲ್ಲ; ನಾರ್ಯಃ– ಸ್ತ್ರೀಯರು, ವಿಧವ್ಯಕಾಃ—ವಿಧವೆಯರು, ನ–ಆಗುತ್ತಿದ್ದಿಲ್ಲ, ಚ–ಹಾಗು, ನರಾಃ–ಪುರುಷರು, ವಿಧುರಾಃ–ಸ್ತ್ರೀರಹಿತರು, ನೋ–ಆಗುತ್ತಿದ್ದಿಲ್ಲ. ॥೨೪॥

ಶಬ್ದಾದಯಶ್ಚಾಸುರತೀವಹೃದ್ಯಾ ನಿಕಾಮವರ್ಷೀ ಚ ಸುರೇಶ್ವರೋsಭೂತ್।
ಪ್ರಜಾ ಅನಾಸ್ಪೃಷ್ಟಸಮಸ್ತತಾಪಾ ಅನನ್ಯಭಕ್ತ್ಯಾs ಚ್ಯುತಮರ್ಚಯಂತಿ ॥೨೫॥

ಶಬ್ದಾದಯಃ ಚ – ಶಬ್ದರಸ, ಗಂಧ, ಸ್ಪರ್ಶ ರೂಪಗಳು,ಅತೀವ ಹೃದ್ಯಾಃ — ಅತ್ಯಂತ ಆಕರ್ಷಕಗಳು, ಆಸುಃ– ಆಗಿದ್ದವು. ಸುರೇಶ್ವರಃ– ದೇವೇಂದ್ರನು. ನಿಕಾಮವರ್ಷೀ – ಬೇಕಾದಷ್ಟು ಮಳೆಯನ್ನು ಸುರಿಸುವವನು, ಅಭೂತ್—ಆಗಿದ್ದನು. ಅನಾಸ್ಪೃಷ್ಟಸಮಸ್ತತಾಪಾಃ– ಯಾವದೇತಾಪಗಳ ಸಂಪರ್ಕವಿಲ್ಲದ, ಪ್ರಜಾಃ– ಪ್ರಜೆಗಳು, ಅನನ್ಯಭಕ್ತ್ಯಾ – ಇತರರಲ್ಲಿ ಮಾಡುವ ಭಕ್ತಿಗಿಂತ ಅತಿ ಹೆಚ್ಚಾದ ಭಕ್ತಿಯಿಂದ, ಅಚ್ಯುತಂ ಅರ್ಚಯಂತಿ— ಶ್ರೀಹರಿಯನ್ನು ಪೂಜಿಸುತ್ತಿದ್ದರು. ॥೨೫॥

ಪೃಥ್ವೀ ಚ ಗಾವಃ ಸಸರಸ್ವತೀಕಾ ನಿಕಾಮದೋಹಾ ಅಭವನ್ ಸದೈವ ।
ಅಬ್ದಾಬ್ಧಿನದ್ಯೋಗಿರಿವೃಕ್ಷಜಂಗಮಾಃ ಸರ್ವೇsಪಿ ರತ್ನಪ್ರಸವಾ ಬಭೂವುಃ ॥೨೬॥

ಪೃಥ್ವೀ – ಭೂಮಿಯು, ಚ - ಹಾಗು, ಸಸರಸ್ವತೀಕಾಃ ಗಾವಃ–ವೇದಗಳಿಂದ ಕೂಡಿವ ಆಕಳುಗಳು, ಸದಾ ಏವ–ಯಾವಾಗಲೂ, ನಿಕಾಮದೋಹಾಃ ಅಭವನ್– ಬೇಕಾದಷ್ಟು ದೋಹನ ಮಾಡುವವುಗಳು ಆಗಿದ್ದವು. ಅಬ್ದಾಬ್ಧಿನದ್ಯಃ— ಮೋಘ, ಸಮುದ್ರ ನದಿಗಳು, ಗಿರಿವೃಕ್ಷಜಂಗಮಾಃ — ಪರ್ವತ ಗಿಡ, ಪ್ರಾಣಿಗಳು, ಏತೇ ಸರ್ವೇ ಅಪಿ—ಇವೆಲ್ಲವೂ ಕೂಡ, ರತ್ನಪ್ರಸವಾಃ— ರತ್ನಗಳನ್ನು ಕೊಡುವಂಥವುಗಳು, ಬಭೂವುಃ– ಆಗಿದ್ದವು. ॥೨೬॥

ಕೃಷ್ಣಾಶ್ರ ಯಾತ್ ಸರ್ವಮಿದಂ ವಶೇ ತೇ ವಿಧಾಯ ಸಮ್ಯಕ್ ಪರಿಪಾಲಯಂತಃ ।
ದಿವೀವ ದೇವಾ ಮುಮುದುಃ ಸದೈವ ಮುನೀಂದ್ರಗಂಧರ್ವನೃಪಾದಿಭಿರ್ವೃತಾಃ ॥೨೭॥

ತೇ — ಆ ಪಾಂಡವರು, ಕೃಷ್ಣಾಶ್ರಯಾತ್ — ಶ್ರೀಕೃಷ್ಣನ ಆಶ್ರಯದಿಂದ, ಇದಂ ಸರ್ವಂ-ಈ ಎಲ್ಲ ಭೂಮಿಯನ್ನು, ವಶೇ—ತಮ್ಮ ವಶದಲ್ಲಿ, ವಿಧಾಯ ಮಾಡಿ (ಇಟ್ಟು) ಕೊಂಡು, ಸದಾ ಏವ—ಯಾವಾಗಲೂ, ಮುನೀಂದ್ರ ಗಂಧರ್ವನೃಪಾದಿಭಿಃ—ಮುನಿಶ್ರೇಷ್ಠರು, ಗಂಧರ್ವರು, ರಾಜರು ಇವರೇ ಮೊದಲಾದವರಿಂದ, ವೃತಾಃ ಸಂತಃ— ಕೂಡಿದವರಾಗಿ, ದಿವಿ—ಸ್ವರ್ಗದಲ್ಲಿ, ದೇವಾಃಇವ—ದೇವತೆಗಳಂತೆ, ಮುಮುದುಃ—ಸಂತೋಷದಿಂದ ಇದ್ದರು. ॥೨೭॥

ಭಾವಾನುವಾದ ೧೩-೨೭

ಆ ಭೀಮಸೇನದೇವರು ಶುದ್ಧ ಧರ್ಮಾಚರಣೆಯುಳ್ಳ, ವಿಷ್ಣುಭಕ್ತರಾದ ಐದೈದು ಬ್ರಾಹ್ಮಣರನ್ನು ಪ್ರತಿ ಗ್ರಾಮಕ್ಕೆ ಇಟ್ಟು, ವೇತನಕೊಟ್ಟು ಅವರಿಂದ ಆ ಗ್ರಾಮದ ಜನರ ಧರ್ಮಶಿಕ್ಷಣ ಮಾಡಿಸುತ್ತಾ ಧರ್ಮರಕ್ಷಣ ಮಾಡುತ್ತಿದ್ದರು. ಆ ಬ್ರಾಹ್ಮಣರನ್ನು ಅನುಸರಿಸಿ ಇದ್ದ ಪ್ರಜೆಗಳ ಬಗ್ಗೆ ಸಂತೋಷ ಪಟ್ಟು ಅನುಗ್ರಹಿಸುತ್ತಿದ್ದರು.

ಆ ಬಾಹ್ಮಣರನ್ನು ಮೀರಿ ಇದ್ದ ಪ್ರಜೆಗಳ ಶಿಕ್ಷೆಯನ್ನು ತಾವೇ ಮಾಡುತ್ತಿದ್ದರು. ಆ ಬ್ರಾಹ್ಮಣರು ಸರಿಯಾಗಿ ನಡಿಯುತ್ತಿದ್ದಾರೋ ಇಲ್ಲವೋ ಎಂಬುದನ್ನು ಬೇರೆ ಶ್ರೇಷ್ಠ ಬ್ರಾಹ್ಮಣರ ಮುಖಾಂತರ ವಿಚಾರ ಮಾಡಿಸುತ್ತಿದ್ದರು. ಹೀಗಾಗಿ ಆಗ ಯಾವನೇ ಆಗಲಿ ಯಾವದೇ ಕಾರಣದಿಂದ, ವಿಷ್ಣು ದ್ವೇಷಿಯಾಗಲೀ, ವಿಷ್ಣುವನ್ನು ಬಿಟ್ಟು ಇತರರನ್ನು ಸರ್ವೋತ್ತಮರನ್ನಾಗಿ ಭಾವಿಸುವವನಾಗಲೀ, ಧರ್ಮಪ್ರತಿಬಂಧಕನಾಗಲೀ, ವರ್ಣಾಶ್ರಮಧರ್ಮಗಳನ್ನು ಮೀರುವವನಾಗಲೀ, ಇರಲಿಲ್ಲ. ಅದರಿಂದಾಗಿ, ಯಾವನೂ ದುಃಖಿಯಾಗಲೀ ದರಿದ್ರನಾಗಲೀ ಇದ್ದಿಲ್ಲ. ಶ್ರೀಕೃಷ್ಣ ಹಾಗೂ ವೇದವ್ಯಾಸ ಭಗವದ್ರೂಪಗಳನ್ನು ಪ್ರತ್ಯಕ್ಷ ಕಾಣುವ,ಅವರಿಬ್ಬರಿಂದ ಹಾಗೂ ಭೀಮಸೇನದೇವರಿಂದ, ಮುನಿಗಳಿಂದ ಉಪದೇಶವನ್ನು ಹೊಂದುತ್ತಿದ್ದ ಆ ಪ್ರಜೆಗಳಿಗೆ ಕಲಿಯುಗವೂ ಕೂಡ ಕೃತಯುಗಕ್ಕಿಂತಲೂ ಶ್ರೇಷ್ಠವಾಗಿತ್ತು. ಕೃತಯುಗದಲ್ಲಿಯೂ ಕೂಡ ದೊಡ್ಡಪುಣ್ಯಕೆಲಸಕ್ಕೂಕೂಡ ಅಲ್ಪ ಫಲ, ಅಲ್ಪಪಾಪಕ್ಕೂ ಕೂಡ ಬಹು ಶಿಕ್ಷೆ ಎಂಬ ದೋಷ ವಿದೆ. ಆದರೆ ಭೀಮಸೇನದೇವರು ಕಲಿಯುಗವನ್ನು ಶ್ರೀಹರಿಯ ಕೃಪೆಯಿಂದ ಆ ದೋಷರಹಿತವನ್ನಾಗಿ ಮಾಡಿ, ಕೃತಯುಗಕ್ಕಿಂತಲೂ ಹೆಚ್ಚು ಶುಭಕರ್ಮವುಳ್ಳದ್ದನ್ನಾಗಿ ಮಾಡಿದರು. ಅಂದರೆ ಶ್ರೀಕೃಷ್ಣ ವೇದವ್ಯಾಸ ದೇವರಉರ್ಶನ ಇದ್ದದ್ದರಿಂದ ಅಲ್ಪ ಪುಣ್ಯಕಾರ್ಯವೂಕೂಡ ಬಹುಫಲ ಪ್ರದವೂ, ಬಹುದೊಡ್ಡ ಪಾಪವೂ ಕೂಡ ಅಲ್ಪ ಫಲಕವೂ ಆಗುತ್ತಿತ್ತು. ಶ್ರೀಭೀಮರ ಆಜ್ಞಾಶಕ್ತಿಯಿಂದ ಪ್ರಾಯಶಃ ಪ್ರಜೆಗಳೆಲ್ಲರೂ ಬಹು ಪುಣ್ಯಗಳನ್ನು ಮಾಡುತ್ತಿದ್ದರು. ಅರ್ಜುನನು ಧರ್ಮರಾಜನ ಅಪ್ಪಣೆಯಂತೆ ವೈರಿರಾಜರ ಶಿಕ್ಷಾ ಮಾಡಲು ಸದಾ ಉದ್ಯುಕ್ತನಾಗಿರುತ್ತಿದ್ದನು. ರಾಜರನ್ನು ಸಂಹರಿಸದೆ ಕೇವಲ ಹೇದರಿಸಿ, ಕಪ್ಪ ಕಾಣಿಕೆ ಸಹಿತವಾಗಿ ಆ ರಾಜರನ್ನು ಧರ್ಮರಾಜನ ಪಾದಕ್ಕೆ ತಂದು ಹಾಕುತ್ತಿದ್ದನು. ಶ್ರೀಕೃಷ್ಣ ಪರಮಾತ್ಮನ ಮುಖದಿಂದ ತತ್ತ್ವೋಪದೇಶವನ್ನು ಸದಾ ಪಡೆಯುತ್ತಾ, ಅಭಿಮನ್ಯುವಿನ ಮರಣದುಃಖವನ್ನು ಕ್ರಮವಾಗಿ ಬಿಡುತ್ತ ಅಪಾರ ಭೋಗಗಳನ್ನು ಕಡಿಮೆಮಾಡುತ್ತಾ, ದುಃಶಾಸನನಿದ್ದ ಮನೆಯಲ್ಲಿ ಚಿತ್ರಾಂಗದಾ ಸುಭದ್ರಾದೇವಿಯರೊಡಗೂಡಿ, ಪೂರ್ಣ ಚಂದ್ರನ ಹಾಗೆ ಶೋಭಿಸುತ್ತಿದ್ದನು. ನಕುಲನು ಭೃತ್ಯರಿಗೆ, ಆಶ್ರಿತರಿಗೆ ವೇತನವನ್ನು ಹಂಚುತ್ತಾ, ಧರ್ಮರಾಜನ ಅನುವರ್ತಿಯಾಗಿ ದುರ್ಮುಖನ ಮನೆಯಲ್ಲಿ ಶಲ್ಯರಾಜನ ಮಗಳಾದ ತನ್ನ ಪತ್ನಿಯಿಂದ ಸಹಿತನಾಗಿ ಇದ್ದನು. ಸಹದೇವನು ಸಂಧಾನ, ಭೇದ ಮೊದಲಾದ ಕಾರ್ಯಗಳುಳ್ಳವನಾಗಿ, ಧರ್ಮರಾಜನ ಅಂಗರಕ್ಷಕ ಕಾರ್ಯವನ್ನು ಮಾಡುತ್ತಾ ಜರಾಸಂಧನ ಮಗಳಾದ ತನ್ನ ಹೆಂಡತಿಯಿಂದ ಸಹಿತನಾಗಿ ದುರ್ಮರ್ಷಣನ ಮನೆಯಲ್ಲಿರುತ್ತಿದ್ದನು. ಕೃಪಾಚಾರ್ಯರು ಸೇನಾಪತಿಗಳಾಗಿದ್ದರು. ಯುಯುತ್ಸು, ಸಂಜಯ, ವಿದುರ ಎಲ್ಲರೂ ಹಾಗು ಭೀಮಾದಿಗಳು ಧರ್ಮರಾಜನು ಹೇಳಿದಂತೆ ದೇವರನ್ನು ಆದರಿಸುವಂತೆ ಆದರದಿಂದ ಧೃತರಾಷ್ಟ್ರನ ಸೇವೆ ಮಾಡುತ್ತಿದ್ದರು. ಪಾಂಡವರು ಶ್ರೀಕೃಷ್ಣವೇದವ್ಯಾಸ ದೇವರ ಮಾರ್ಗದರ್ಶನದಂತೆ ರಾಜ್ಯವನ್ನಾಳುತ್ತಿರಲು ಪ್ರಜೆಗಳು ರೋಗಪೀಡಿತರಾಗಿರಲಿಲ್ಲ, ಅಕ್ರಮಮರಣ (ದೊಡ್ಡವರ ಎದುರು ಸಣ್ಣವರ ಮರಣ) ವಿರಲಿಲ್ಲ. ಗಂಡಸರು ವಿಧುರರಾಗುತ್ತಿರಲಿಲ್ಲ; ಹೆಂಗಸರು ವಿಧವೆಯರಾಗುತ್ತಿರಲಿಲ್ಲ. ಶಬ್ದಾದಿಗಳೆಲ್ಲವೂ ಪ್ರಜೆಗಳಿಗೆ ಆನಂದಕರವಾಗಿದ್ದವು; ದೇವೇಂದ್ರನು ಸಾಕಷ್ಟು ಮಳೆಸುರಿಸುತ್ತಿದ್ದನು. ಪ್ರಜೆಗಳು ಯಾವದೇ ತಾಪರಹಿತರಾಗಿ ಅನನ್ಯಭಕ್ತಿಯಿಂದ ಶ್ರೀಹರಿಯನ್ನು ಅರ್ಚಿಸುತ್ತಿದ್ದರು. ಭೂಮಿಯು

ಬೇಕಾದಷ್ಟು ಧಾನ್ಯಗಳನ್ನು, ಆಕಳುಗಳು ಸಮೃದ್ಧಹಾಲನ್ನು, ವೇದಗಳು ತಮ್ಮಲ್ಲಿ ಹೇಳಿದಂತೆ ಕರ್ಮಗಳನ್ನಾಚರಿಸಿ ದವರಿಗೆ ಸಮೃದ್ಧ ಫಲವನ್ನು ಕೊಡುತ್ತಿದ್ದವು. ನದೀ, ಸಮುದ್ರ, ಮೋಡ, ಪರ್ವತ, ವೃಕ್ಷಗಳೂ ಕೂಡ ರತ್ನಗಳನ್ನು ಕೊಡುತ್ತಿದ್ದವು. ಪಾಂಡವರು ಶ್ರೀಕೃಷ್ಣ ವೇದವ್ಯಾಸರ ಆಶ್ರಯದಿಂದ ಈ ಭೂಮಿಯನ್ನು ತಮ್ಮ ಅಧೀನದಲ್ಲಿಟ್ಟು ಕೊಂಡು, ಚೆನ್ನಾಗಿ ರಕ್ಷಿಸುತ್ತಾ ಋಷಿ, ಗಂಧರ್ವ ರಾಜರಿಂದ ಕೂಡಿದವರಾಗಿ, ಸ್ವರ್ಗದಲ್ಲಿ ದೇವತೆಗಳಂತೆ ಸದಾ ಸಂತೋಷದಿಂದ ಇದ್ದರು,

ಸಮುಜ್ವಲಾ ಪಾಂಡವ ಕೀರ್ತಿನಾರೀ ಪದಂ ವಿಧಾಯಾಸುರಪಕ್ಷ ಮೂರ್ಧಸು ।
ವರಾಭಯೇ ಚೈವ ಸತಾಂ ಕರಾಭ್ಯಾಂ ಕೃಷ್ಣಪ್ರಸೂತಾ ಜಗದಂಡಮಾವೃಣೋತ್ ॥೨೮॥

ಕೃಷ್ಣಪ್ರಸೂತಾ–ಶ್ರೀಕೃಷ್ಣವೇದವ್ಯಾಸರಿಂದ ಹುಟ್ಟಿದ,ಸಮುಜ್ವಲಾ–ಶೋಭಿಸುವ,ಪಾಂಡವಕೀರ್ತಿನಾರೀ-ಪಾಂಡವರಕೀರ್ತಿಎಂಬ ಸ್ತ್ರೀಯು, ಅಸುರಪಕ್ಷ ಮೂರ್ಧಸು–ಅಸುರಪಕ್ಷದವರ ಶಿರಸ್ಸುಗಳಲ್ಲಿ, ಪದಂ ವಿಧಾಯ-ಕಾಲ ನ್ನಿಟ್ಟು, ಕರಾಭ್ಯಾಂ—ತನ್ನ ಎರಡೂ ಕೈಗಳಿಂದ, ಸತಾಂ–ಸಜ್ಜನರಿಗೆ, ವರಾಭಯೇ—ವರಪ್ರದಾನ, ಭಯ ಪರಿಹಾರ ಕಾರ್ಯಗಳನ್ನು ವಿಧಾಯ–ಮಾಡಿ, ಜಗದಂಡಂ–ಬ್ರಹ್ಮಾಂಡವನ್ನು, ಆವೃಣೋತ್–ಆವರಿಸಿದಳು(ವ್ಯಾಪಿಸಿದಳು.) ॥೨೮॥

ಅವತಾರಿಕೆ—ವ್ಯಾಪಿಸಿದ್ದನ್ನೇ ವಿವರಿಸುತ್ತಾರೆ—

ಪಾತಾಳಪಾದಾಂ ಪೃಥಿವೀನಿತಂಬಾಮಾಕಾಶಮಧ್ಯಾಂ ಕರಸಂತತಾಶಾಮ್।
ಗ್ರಹರ್ಕ್ಷತಾರಾಭರಣಾದ್ಯವಕ್ಷಸಂ ವಿರಿಂಚಲೋಕಸ್ಥಲಸನ್ಮುಖಾಂಬುಜಾಮ್ ॥೨೯॥

ವಿಕುಂಠನಾಥಾಭಯಹಸ್ತಮಾದರಾನ್ಮೂರ್ಧ್ನಾ ವಹಂತೀಂ ವರಭಾರತಾಖ್ಯಾಮ್ ।
ನಿಶಮ್ಯ ತಾಮೀಕ್ಷ್ಯ ಸಮಸ್ತಲೋಕಾಃಪವಿತ್ರಿತಾ ವೇದಿಭವಾಮಿವಾನ್ಯಾಮ್ ॥೩೦॥

ಪಾತಾಳ ಪಾದಾಂ—ಪಾತಾಳಲೋಕದಲ್ಲಿ ಕಾಲುಳ್ಳ, ಪೃಥಿವೀನಿತಂಬಾಂ—ಪೃಥಿವಿಯಲ್ಲಿ ಕಟಿಪಶ್ಚಾತ್ ಭಾಗವುಳ್ಳ. ಆಕಾಶಮಧ್ಯಾಂ— ಆಕಾಶದಲ್ಲಿ ಮಧ್ಯ (ಕಟಿ) ವುಳ್ಳ ಕರಸಂತತಾಶಾಂ—ಕೈಗಳಿಂದ ವ್ಯಾಪಿಸಲ್ಪಟ್ಟ ದಿಕ್ಕುಳ್ಳ (ದಿಕ್ಕುಗಳಲ್ಲಿ ಕೈಗಳುಳ್ಳ). ಗ್ರಹರ್ಕ್ಷತಾರಾಭರಣಾದ್ಯವಕ್ಷಸಂ—ಗ್ರಹ, ನಕ್ಷತ್ರ ತಾರೆಗಳೆಂಬ ಆಭರಣಗಳುಳ್ಳ ಅಂತರಿಕ್ಷಲೋಕವೆಂಬ ವಕ್ಷಸ್ಥಲವುಳ್ಳ, ವಿರಿಂಚಲೋಕಸ್ಥಲಸನ್ಮುಖಾಂಬುಜಾಂ—ಬ್ರಹ್ಮದೇವರ ಸತ್ಯಲೋಕವೆಂಬ ಸ್ಥಳದಲ್ಲಿರುವ ಸುಂದರ ಮುಖಕಮಲವುಳ್ಳ, ವಿಕುಂಠನಾಥಾಭಯಹಸ್ತಂ—ವೈಕುಂಠದೊಡೆಯನಾದ ಶ್ರೀಹರಿಯ ಅಭಯ ಹಸ್ತವನ್ನು, ಆದರಾತ್ ಮೂರ್ಧ್ನಾ ವಹಂತೀಂ— ಗೌರವದಿಂದ ತಲೆಯಲ್ಲಿ ಧರಿಸಿರುವಂಥ, ವರಭಾರತಾ-ಖ್ಯಾಂ—ಶ್ರೇಷ್ಠವಾದ ಭಾರತಕಥಾವೆಂಬ ಹೆಸರುಳ್ಳ, ತಾಂ—ಆ ಕೀರ್ತಿನಾರಿಯ ಒಗ್ಗೆ, ನಿಶಮ್ಯ—ಕೇಳಿ, ಸಮಸ್ತ ಲೋಕಾಃ—ಎಲ್ಲಜನರು, ಈಕ್ಷ್ಯ-ನೋಡಿ, ಅನ್ಯಾಂ ವೇದಿಭವಾಂ ಈಕ್ಷ್ಯ ಇವ—ಇನ್ನೊಬ್ಬ ದ್ರೌಪದೀದೇವಿಯನ್ನು ನೋಡಿದಂತೆ, ಪವಿತ್ರಿತಾಃ—ಪವಿತ್ರರಾದರು. ॥೨೯–೩೦॥

ಪ್ರಸಾಲಯತ್ಸ್ವೇವ ಧರಾಂ ಸಕೃಷ್ಣೇಷ್ವದ್ಧೈವ ಪಾರ್ಥೇಷು ಕಲಿರ್ಬಲಿಶ್ಚ।
ಸುಪಾಪದೈತ್ಯೌ ಕ್ವಚ ರಾಷ್ಟ್ರವಿಪ್ಲವಂ ಸಂಚಕ್ರತುಸ್ತಚ್ಛ್ರುತಮಾಶು ಪಾರ್ಥೈಃ ॥೩೧॥

ಸಕೃಷ್ಣೇಷು ಪಾರ್ಥೇಷು – ಶ್ರೀಕೃಷ್ಣಸಮೇತರಾದ ಪಾಂಡವರು, ಧರಾಂ–ರಾಜ್ಯವನ್ನು, ಅದ್ಧಾವಿವ–ಚೆನ್ನಾಗಿಯೇ, ಪ್ರಪಾಲಯತ್ಸು ಸತ್ಸು—ಆಳುತ್ತಿರಲು, ಸುಪಾಪದೈತ್ಯೌ—ಅತಿಪಾಪಿದೈತ್ಯರಾದ, ಕಲಿ: ಚ ಬಲಿಃ–ಕಲಿ ಮತ್ತು ಬಲಿ ಎಂಬ ಇಬ್ಬರು, ಕ್ವಚ—ಎಲ್ಲೋ ಒಂದು ಪ್ರದೇಶದಲ್ಲಿ, ರಾಷ್ಟ್ರವಿಪ್ಲವಂ—ರಾಷ್ಟ್ರಕ್ಕೆ ಹಾನಿಕರ ಕಾರ್ಯವನ್ನು, ಸಂಚಕ್ರತುಃ—ಮಾಡಿದರು, ತತ್—ಆ ವಾರ್ತೆಯು, ಆಶು—ಕೂಡಲೇ, ಪಾರ್ಥೈಃ—ಪಾಂಡವರಿಂದ, ಶ್ರುತಂ—ಕೇಳಲ್ಪಟ್ಟಿತು. ॥೩೧॥

ನೃಪೇಣ ಕೃಷ್ಣೇನ ಚ ಸಾಧು ಚೋದಿತೋ ಭೀಮಸ್ತದಾ ತೌ ಸಗಣೌ ವಿಜಿತ್ಯ।
ಬಲಿಂ ಪ್ರವಿದ್ಯಾವ್ಯ ಕಲಿಂ ನಿಬಧ್ಯ ಸಮಾನಯತ್ ಕೃಷ್ಣನೃಪೇಂದ್ರಯೋಃ ಪುರಃ ॥೩೨॥

ತದಾ—ಆಗ, ನೃಪೇಣ ಚ ಕೃಷ್ಣೇನ—ಧರ್ಮರಾಜನಿಂದ ಮತ್ತು ಶ್ರೀಕೃಷ್ಣಪರಮಾತ್ಮನಿಂದ ಸಾಧು ಚೋದಿತಃ—ಚೆನ್ನಾಗಿ ಪ್ರೇರಿಸಲ್ಪಟ್ಟ, ಭೀಮಃ—ಶ್ರೀಭೀಮಸೇನದೇವರು, ಸಗಣೌ ತೌ—ಸೈನ್ಯಸಮೂಹದಿಂದ ಸಹಿತರಾದ ಅವರಿಬ್ಬರನ್ನು, ವಿಜಿತ್ಯ—ಗೆದ್ದು, ಬಲಿಂ ಪ್ರವಿದ್ಯಾವ್ಯ—ಬಲಿಯನ್ನು ಓಡಿಸಿ, ಕಲಿಂ ನಿಬಧ್ಯ—ಕಲಿಯನ್ನು ಬಂಧಿಸಿ, ಕೃಷ್ಣನೃಪೇಂದ್ರಯೋಃ ಪುರಃ—ಶ್ರೀಕೃಷ್ಣಧರ್ಮರಾಜರೆದುರು. ಸಮಾನಯತ್—ತಂದರು. ॥೩೨॥

ಪಪ್ರಚ್ಛ ತಂ ಕೃಷ್ಣಪುರೋ ಯುಧಿಷ್ಠಿರ ಉದಾರಧೀಃ।
ಕಲೇ ಕಿಮಿತಿ ಮೇ ರಾಷ್ಟ್ರಂ ವಿಪ್ಲಾವಯಸಿ ದುರ್ಮತೇ ॥೩೩॥

ಉದಾರಧೀಃ—ಉತ್ಕೃಷ್ಟಮನಸ್ಸುಳ್ಳ, ಯುಧಿಷ್ಠಿರಃ—ಧರ್ಮರಾಜನು, ಶ್ರೀಕೃಷ್ಣಪುರಃ—ಶ್ರೀಕೃಷ್ಣಪರಮಾತ್ಮನ ಎದುರಿನಲ್ಲಿಯೇ, ತಂ—ಆ ಕಲಿಯನ್ನು, ದುರ್ಮತೇ ಕಲೇ—ಎಲೋದುರ್ಬುದ್ಧಿಯಾದ ಕಲಿಯೇ, ಕಿಮಿತಿ—ಯಾವ ಕಾರಣದಿಂದ, ಮೇ ರಾಷ್ಟ್ರಂ—ನನ್ನ ರಾಜ್ಯವನ್ನು, ವಿಪ್ಲಾವಯಸಿ—ಕೆಡಿಸುತ್ತಿರುವಿ, ಇತಿ—ಎಂದು ಪಪ್ರಚ್ಛ—ಪ್ರಶ್ನಿಸಿದನು. ॥೩೩॥

ಇತ್ಯುಕ್ತ ಆಹ ಕಾಲೋಽಯಂ ದುರ್ಯೋಧನನಿಪಾತನಮ್।
ಆರಭ್ಯಮಮ ತತ್ರ ತ್ವಂ ಬಲಾದಾಕ್ರಮ್ಯ ತಿಷ್ಠಸಿ॥
ತತೋ ಮಯಾಕೃತೋ ರಾಷ್ಟ್ರವಿಪ್ಲವಸ್ತೇ ನರಾಧಿಪ ॥೩೪॥

ಇತಿ ಉಕ್ತಃ:— ಈ ರೀತಿ ಹೇಳಿಸಿಕೊಳ್ಳಲ್ಪಟ್ಟ ಕಲಿಯು, ನರಾಧಿಪ—ಎಲೋ ಧರ್ಮರಾಜನೇ, ದುರ್ಯೋಧನನಿಪಾತನಂ ಆರಭ್ಯ—ದುರ್ಯೋಧನನು ಬಿದ್ದ ದಿನವನ್ನು ಆರಂಭಿಸಿ, ಅಯಂಕಾಲಃ—ಈ ಎಲ್ಲ ಕಾಲವು, ಮಮ ಕಾಲಃ—ನನ್ನ ಆಡಳಿತದ ಕಾಲವು. ತತ್ರ—ಅಂಥ ನನ್ನ ಕಾಲದಲ್ಲಿ, ತ್ವಂ—ನೀನು, ಬಲಾತ್—ಬಲಾತ್ಕಾರದಿಂದ, ಆಕ್ರಮ್ಯ ತಿಷ್ಠಸಿ—ಆಕ್ರಮಿಸಿ ರಾಜನಾಗಿ ಕುಳಿತಿರುವಿ. ತತಃ—ಆದ್ದರಿಂದ, ತೇ ರಾಷ್ಟ್ರವಿಪ್ಲವಃ—ನಿನ್ನ ರಾಜ್ಯನಾಶವು, ಮಯಾ ಕೃತಃ—ನನ್ನಿಂದ ಮಾಡಲ್ಪಟ್ಟಿದೆ. ಇತಿ—ಎಂದು, ಆಹ—ಹೇಳಿದನು. ॥೩೪॥

ತಮಾಹ ರಾಜಾ ರಾಜ್ಞಾಂ ಹಿ ಬಲಾದ್ ರಾಜ್ಯಂ ಪ್ರವರ್ತತೇ।
ಅಸಿ ಕಾಲಭವಂ ರಾಷ್ಟ್ರಂ ತ್ವದೀಯಂ ಮಾದೃಶೈರ್ನೃಪೈಃ।
ಹ್ರೀಯತೇ ಬಲವದ್ಭಿರ್ಹಿ ರಾಜ್ಯಾಶಾ ತೇ ಕುತಸ್ತದಾ ॥೩೫॥

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್।
ಇತಿ ತೇ ಸಂಶಯೋ ಮಾ ಭೂದ್ ರಾಜಾ ಕಾಲಸ್ಯ ಕಾರಣಮ್ ॥೩೬॥

ರಾಜಾ—ಧರ್ಮರಾಜನು ತಂ—ಆ ಕಲಿಯನ್ನು ಕುರಿತು, ರಾಜ್ಞಾಂ ಬಲಾತ್ ಹಿ—ರಾಜರ ಸಾಮರ್ಥ್ಯದಿಂದಲೇ, ರಾಜ್ಯಂ—ರಾಜ್ಯವು, ಪ್ರವರ್ತತೇ—ನಡೆಯುತ್ತದೆ. ಕಾಲಭವಂ ತ್ವದೀಯಂ ರಾಷ್ಟ್ರಂ ಅಪಿ—ಕಾಲದಿಂದ ನಿನ್ನವಶದಲ್ಲಿರುವ ರಾಜ್ಯವೂ ಕೂಡ, ಮಾದೃಶೈಃ ಬಲವದ್ಭಿಃ ನೃಪೈಃ—ನಮ್ಮಂತಹ ಬಲಿಷ್ಠ ರಾಜರಿಂದ ಹ್ರಿಯತೆ—ಕಸಿಯಲ್ಪಡುತ್ತದೆ. ತದಾ—ಹಾಗಿರುವಾಗ, ತೇ—ರಾಜ್ಯಾಶಾ ಕುತಃ—ನಿನಗೇಕೆ ರಾಜ್ಯದ ಆಶೆ ?

ಕಾಲಃ—ಕಾಲವು, ರಾಜ್ಞಃಕಾರಣಂ ವಾ—ರಾಜನನಡತೆಗೆ ಕಾರಣವೋ, ಅಥವಾ, ರಾಜಾ—ರಾಜನು, ಕಾಲಕಾರಣಂ ವಾ—ಕಾಲದಲ್ಲಿ ಆಗುವ ಕಾರ್ಯಗಳಿಗೆ ಕಾರಣನೋ ಇತಿ ಸಂಶಯಃ—ಎಂಬ ಸಂಶಯವು, ತೇ—ನಿನಗೆ ಮಾಭೂತ್—ಬೇಡ, ರಾಜಾ—ರಾಜನೇ, ಕಾಲಸ್ಯ ಕಾರಣಂ—ಕಾಲದಲ್ಲಿದ್ದ ನಡತೆಗೆ ಕಾರಣನು. ಇತಿ—ಎಂದು, ಆಹ—ಹೇಳಿದನು. ॥೩೫॥೩೬॥

ತಮುವಾಚ ಕಲಿಃ ಕಾಲೋ ಮದೀಯೋ ತ್ವಾದೃಶಃ ಕುತಃ ।
ರಾಜಾನಂ ಪೂರ್ವಮಾವಿಶ್ಯ ವಿಪ್ರಾಂಶ್ಚ ಸ್ಯಾಮಹಂ ನೃಪ ॥೩೭॥

ವಾಸುದೇವಸಹಾಯೇಷು ತೇಜೋ ಯುಷ್ಮಾಸು ನೋ ನಹಿ ।
ಕ್ವ ರಾಜಾಽಸಾವೃತೇ ಯುಷ್ಮಾನ್ ಯೋ ಮಯಾ ನಾಭಿಭೂಯತೇ ॥೩೮॥

ಮದೀಯಕಾಲೇ ಭೂಪಾಲ ವಿಪ್ರವೇದವಿರೋಧಿನಿ ।
ಮದ್ದೃಷ್ಟಿಪಾತೇ ಕ್ವ ಗುಣಾಃ ಕ್ವ ವೇದಾಃ ಕ್ವ ಸುಯುಕ್ತಯಃ ॥೩೯॥

ತಂ – ಆ ರೀತಿ ಮಾತನಾಡಿದ ಧರ್ಮರಾಜನನ್ನು ಕುರಿತು, ಕಲಿಃ–ಕಲಿಯು, ಮದೀಯೇ ಕಾಲೇ—ನನ್ನ ಆಡಳಿತದ ಕಾಲದಲ್ಲಿ, ತ್ವಾದೃಶಃ ಕುತಃ–ನಿನ್ನಂಥ ಧರ್ಮಿಷ್ಠ ರಾಜನು ಇದ್ದದ್ದು ಏಕೆ ? ನೃಪ—ಧರ್ಮರಾಜನೇ, ಅಹಂ–ನಾನು, ಪೂರ್ವಂ–ಮೊದಲು, ರಾಜಾನಂ–ರಾಜನನ್ನು, ಚ–ಮತ್ತು, ವಿಪ್ರಾನ್—ಬ್ರಾಹ್ಮಣರನ್ನು, ಆವಿಶ್ಯ–ಪ್ರವೇಶಿಸಿ, ಸ್ಯಾಂ–ಇರುವೆನು. (ತು–ಆದರೆ,) ವಾಸುದೇವಸಹಾಯೇಷು–ಶ್ರೀಕೃಷ್ಣನ ಕೃಪಾಸಹಾಯವುಳ್ಳ, ಯುಷ್ಮಾಸು–ನಿಮ್ಮಲ್ಲಿ, ಮೇ ತೇಜಃ—ನನ್ನ ಸಾಮರ್ಥ್ಯವು, ನಹಿ–ನಡೆಯುಲಾರದು. ಯುಷ್ಮಾನ್ ಋತೇ—ನಿಮ್ಮನ್ನು ಬಿಟ್ಟು, ಮಯಾ–ನನ್ನಿಂದ, ಯಃ – ಯಾವನು, ನ ಅಭಿಭೂಯತೇ—ಪರಾಭವಿಸಲ್ಪಡನವನಿಲ್ಲವೋ (ನಿನಗೆ ವಶನಾಗುವವನಿಲ್ಲವೋ), ಅಸೌ–ಅಂಥ ರಾಜಾ–ರಾಜನು, ಕ್ವ–ಎಲ್ಲಿದ್ದಾನೆ ? ಭೂಪಾಲ–ಎಲೋ ರಾಜನೇ, ವಿಪ್ರವೇದವಿರೋಧಿನಿ—ಬ್ರಾಹ್ಮಣವೇದಗಳಿಗೆ ವಿರೋಧಿಯಾದ, ಮದೀಯಕಾಲೇ—ನನ್ನ ಕಾಲದಲ್ಲಿ, ಮದ್ದೃಷ್ಟಿಪಾತೇ—ನಿನ್ನ ದೃಷ್ಟಿಬಿದ್ದಿರುವಾಗ, ಗುಣಾಃ ಕ್ವ– (ಗುಣಗಳಿಗೆ ಸ್ಥಾನವೆಲ್ಲಿ ?) ಗುಣಗಳಿಲ್ಲಿ?, ವೇದಾಃ ಕ್ವ–ವೇದಗಳೆಲ್ಲಿ ? ಸುಯುಕ್ತಯಃ ಕ್ವ—ಶ್ರೇಷ್ಠ ನಿರ್ದುಷ್ಟಯುಕ್ತಿಗಳೆಲ್ಲಿ ? (ಅಂದರೆ ಅವುಗಳಿಗೆಲ್ಲ ಸ್ಥಾನವೆಲ್ಲಿರುತ್ತದೆ? ಎಂದು, ಅಭಿಪ್ರಾಯ) ಇತಿ—ಎಂದು ಉವಾಚ–ಮಾತನಾಡಿದನು. ॥೩೭–೩೮–೩೯॥

ಜಗಾದ ನೃಪತಿಃ ಸತ್ಯಂ ಕಲೇ ವಕ್ಷ್ಯನೃತೋಽಪಿ ಸನ್ ।
ನೋಚಯೇ ತ್ವರ್ತವಚನಾದ್ ಯದಾಽಸ್ಮತ್ಸಂತತೇಃ ಪರಮ್ ।
ವಿಲುಂಪಸ್ಯಖಿಲಾನ್ ಧರ್ಮಾನ್ ಕರಂ ತತ್ರಾಪಿ ನೋಽರ್ಪಯ ॥೪೦॥

ಸೀಮಾಧಿರ್ಬಹುವಾಕ್ಯಂ ಚ ತುಲಾಮಾನೇ ಚ ಮೇ ಕರಃ ।
ನೈವಾತಿಕ್ರಮಮೇತೇಷಾಂ ಕುರು ಸರ್ವಾತ್ಮನಾ ಕ್ವಚಿತ್ ॥೪೧॥

ಅವತಾರಿಕೆ—ಕಲಿಯು ಅರ್ಪಿಸಬೇಕಾದ ಕರಗಳನ್ನೇ ಹೇಳುತ್ತಾ ಇದ್ದಾರೆ ।

ನೃಪತಿಃ—ಧರ್ಮರಾಜನು, ಕಲೇ—ಎಲೋ ಕಲಿಯೇ, ಅನೃತಃಸನ್ ಅಪಿ—ನೀನು ಅನೃತ (ಮಿಥ್ಯಾ) ವಚನಸ್ವರೂಪನೇ ಆದರೂ ಕೂಡ, (ಯಾವಾಗಲೂ ಸುಳ್ಳು ಮಾತಾಡುವವನೇ ಆಗಿದ್ದರೂ ಕೂಡ),

ಸತ್ಯಂ ವಕ್ಷಿ—ಸತ್ಯವಾದ ಮಾತನ್ನು ಹೇಳುತ್ತಿರುವಿ, ಋತವಚನಾತ್ ತು—ಆ ರೀತಿಯಾದ ಸತ್ಯಮಾತಾಡಿದ್ದರಿಂದಲೇ, (ತ್ವಾಂ—ನಿನ್ನನ್ನು); ಮೋಚಯೇ—ಬಂಧನದಿಂದ ಬಿಡುತ್ತೇನೆ. ಅಸ್ಮತ್ಸಂತತೇಃ ಪರಂ—ನಮ್ಮ ಸಂತತಿಯ ನಂತರದಲ್ಲಿ, ಯದಾ—ಯಾವಾಗ, ಅಖಿಲಾಶ್ ಧರ್ಮಾನ್—ಎಲ್ಲ ಧರ್ಮಗಳನ್ನು, ವಿಲುಂಪಸಿ—ಲೋಪ (ಹಾನಿಗೊಳಿಸುವಿಯೋ, ತತ್ರ ಅಪಿ—ಆ ಸಮಯದಲ್ಲಿಯೂ ಕೂಡ, ನಃ—ನಮಗೆ, ಕರಂ—ಕರವನ್ನು, ಅರ್ಪಯ—ಒಪ್ಪಿಸು ಸೀಮಾ—ಇಬ್ಬರ ಸ್ಥಳಗಳ ನಡುವಿನ ಗಡುಪ್ರದೇಶವು, ಅಧಿಃ—ಸಾಲಕ್ಕಾಗಿ ಅಡವಿಟ್ಟವಸ್ತುವು, ಬಹುವಾಕ್ಯಂ—ಬಹುಜನರ ಮಾತು, ಚ—ಮತ್ತು, ತುಲಾಮಾನೇ—ತಕ್ಕಡಿ ಹಾಗು ಮಾಪು, ಇವುಗಳು, ಮೇ ಕರಃ—ನನಗೆ ಕೊಡಬೇಕಾದ ಕರಗಳು. ತ್ವಂ—ನೀನು, ಏತೇಷಾಂ—ಈ ಕರಗಳ, ಅತಿಕ್ರಮಂ—ಅತಿಕ್ರಮಣವನ್ನು, ಕ್ವಚಿತ್—ಎಂದೂ, ಸರ್ವಾತ್ಮನಾ—ಸರ್ವಥಾ, ನ ಏವ ಕುರು—ಮಾಡಲೇ ಬೇಡ, ಇತಿ—ಎಂದು, ಜಗಾದ—ಕಲಿಗೆ ಹೇಳಿದನು. ॥೪೦-೪೧॥

ತವಾಹ ಭಗವಾನ್ ಕೃಷ್ಣೋ ಯಾವತ್ ಪಾಂಡವಸಂತತಿಃ ।
ತಾವನ್ನ ತೇ ಭವೇಚ್ಛಕ್ತಿಃ ಪ್ರವೃತ್ತಸ್ಯಾಪಿ ಭೂತಲೇ ॥೪೨॥

ಪಾಂಡವೇಭ್ಯಃ ಪರಂ ಯಾವತ್ ಕ್ಷೇಮುಕಃ ಕ್ರಮವರ್ಧಿತಾ ।
ಕ್ಷೇಮುಕಾತ್ ಪರತಃ ಪೂರ್ತಿಂ ಶಕ್ತಿಸ್ತೇ ಯಾಸ್ಯತಿ ಧ್ರುವಮ್ ॥೪೩॥

ನ ದ್ರಷ್ಟವ್ಯಂ ಭೂತಲಂ ತೇ ಕುತ ಏವ ಸ್ಪೃಕೇರ್ಭುವಮ್ ।
ಯಾವತ್ ಪಾರ್ಥಾ ಅಹಂ ಚಾತ್ರ ತತೋ ಭುವಿ ಪದಂ ಕುರು ॥೪೪॥

ತಂ—ಆ ಕಲಿಯನ್ನು ಕುರಿತು, ಭಗವಾನ್ ಕೃಷ್ಣಃ—ಷಡ್ಗುಣೈಶ್ವರ್ಯಪೂರ್ಣನಾದ ಶ್ರೀಕೃಷ್ಣ ಪರಮಾತ್ಮನು, ಯಾವತ್ ಪಾಂಡವಸಂತತಿಃ—ಪಾಂಡವರ ಸಂತತಿಯು ಎಲ್ಲಿಯವರೆಗೆ ಇರುವದೋ, ತಾವತ್—ಅಲ್ಲಿಯವರೆಗೆ, ಭೂತಲೇ ಪ್ರವೃತ್ತಸ್ಯ ಅಪಿ ತೇ—ಭೂಮಿಯಲ್ಲಿದ್ದರೂ ಕೂಡ ನಿನಗೆ, ಶಕ್ತಿಃನಭವೇತ್—ಸಾಮರ್ಥ್ಯವಿರಲಾರದು, ಪಾಂಡವೇಭ್ಯಃಪರಂ—ಪಾಂಡವರ ನಂತರ, ಯಾವತ್ ಕ್ಷೇಮುಕಃ— ಕ್ಷೇಮುಕರಾಜನ ಪರ್ಯಂತ ಕ್ರಮವರ್ಧಿತಾ—ಕ್ರಮವಾಗಿ ಬೆಳೆಯುವ, ತೇ ಶಕ್ತಿಃ—ನಿನ್ನ ಶಕ್ತಿಯು, ಕ್ಷೇಮುಕಾತ್ ಪರತಃ—ಕ್ಷೇಮುಕರಾಜನ ನಂತರ, ಧ್ರುವಂ—ಖಂಡಿತವಾಗಿ ಪೂರ್ತಿಂ—ಪೂರ್ಣತೆಯನ್ನು, ಯಾಸ್ಯತಿ—ಹೊಂದುವದು, ಯಾವತ್—ಎಲ್ಲಿಯತನಕ, ಪಾರ್ಥಾಃ—ಪಾಂಡವರು, ಚ—ಮತ್ತು, ಅಹಂ—ನಾನು, ಅತ್ರ, ಇಲ್ಲಿರುವೆವೋ, ತಾವತ್—ಅಲ್ಲಿಯವರೆಗೆ ತೇ—ನಿನ್ನಿಂದ, ಭೂತಳಂ—ಭೂಮಿಯು, ನ ದ್ರಷ್ಟವ್ಯಂ ಏವ—ನೋಡಲ್ಪಡಲೇಬಾರದು, (ಹಾಗಿರುವಾಗ), ಭುವಂ—ಭೂಮಿಯನ್ನು, ಕುತಃ ಸ್ಪೃಶೇಃ—ಹೇಗೆ ಮುಟ್ಟಲು ಶಕ್ಯ (ಭೂಮಿಯಲ್ಲಿರಲು ಹೇಗೆ ಶಕ್ಯ?)ತತಃ—ನಂತರ, ಭುವಿ—ಭೂಮಿಯಲ್ಲಿ, ಪದಂ ಕುರು—ಹೆಜ್ಜೆಯನ್ನಿಡು. ಇತಿ—ಎಂದು, ಆಹ—ಹೇಳಿದನು. ॥೪೨॥೪೩॥೪೪॥

ಇತ್ಯುಕ್ತೋ ವಾಸುದೇವೇನ ಮೋಚಿತೋ ಧರ್ಮಜೇನ ಚ ।
ತಾನ್ ಪ್ರಣಮ್ಯ ಯಯೌ ಪಾರೇ ಸಮುದ್ರಸ್ಯಾಽಶ್ರಯದ್ ಗುಹಾಮ್ ।
ಪಾರ್ಥಾಶ್ಚ ಕೃಷ್ಣಸಹಿತಾ ರಕ್ಷಂತಃ ಕ್ಷ್ಮಾಂಮುದಂ ಯಯುಃ ॥೪೫॥

ಇತಿ—ಈ ರೀತಿಯಾಗಿ, ವಾಸುದೇವೇನ—ಶ್ರೀಕೃಷ್ಣನಿಂದ, ಉಕ್ತಃ—ಹೇಳಿಸಿಕೊಳ್ಳಲ್ಪಟ್ಟ, ಚ—ಹಾಗೂ ಧರ್ಮಜೇನ—ಧರ್ಮರಾಜನಿಂದ, ಮೋಚಿತಃ—ಬಿಡಿಸಲ್ಪಟ್ಟ ಆ ಕಲಿಯು, ತಾನ್—ಆ ಪಾಂಡವರನ್ನು ಹಾಗು ಶ್ರೀಕೃಷ್ಣ ಪರಮಾತ್ಮನನ್ನು, ಪ್ರಣಮ್ಯ—ನಮಸ್ಕರಿಸಿ, ಯಯೌ—ಹೋದನು. ಸಮುದ್ರಸ್ಯ ಪಾರೇ—ಸಮುದ್ರದ

ಆಚೆಯಲ್ಲಿ, ಗುಹಾಂ—ಗುಹೆಯೊಂದನ್ನು, ಆಶ್ರಯತ್—ಆಶ್ರಯಿಸಿದನು. ಪಾರ್ಥಾಃ ಚ—ಪಾಂಡವರಾದರೂ ಕೃಷ್ಣಸಹಿತಾಃ ಸಂತಃ—ಶ್ರೀಕೃಷ್ಣ ಪರಮಾತ್ಮನಿಂದ ಸಹಿತರಾಗಿ, ಕ್ಷ್ಮಾಂ ರಕ್ಷಂತಃ ಸಂತಃ—ಭೂಮಿಯನ್ನು ರಕ್ಷಿಸುವವರಾಗಿ, ಮುದಂ ಯಯುಃ—ಸಂತೋಷವನ್ನು ಹೊಂದಿದರು. ॥೪೫॥

ಭಾವಾನುವಾದ ೨೮ ರಿಂದ ೪೫

ಪಾತಾಳ ಲೋಕದಲ್ಲಿ ಪಾದವುಳ್ಳ ಭೂಲೋಕದಲ್ಲಿ ನಿತಂಬ ಪ್ರದೇಶವುಳ್ಳ, ಆಕಾಶದಲ್ಲಿ ಕಟಿಯುಳ್ಳ ದಿಕ್ಕುಗಳಲ್ಲಿ ಕರಗಳನ್ನು ಹಬ್ಬಿಸಿರುವ, ಗ್ರಹನಕ್ಷತ್ರ ಮೊದಲಾದ ಆಭರಣಗಳುಳ್ಳ, ಅಂತರಿಕ್ಷ ಲೋಕದಲ್ಲಿ ವಕ್ಷಃಸ್ಥಲವುಳ್ಳ, ಸತ್ಯ ಲೋಕದಲ್ಲಿ ಮುಖವುಳ್ಳ, ವೈಕೂಂಠಾಧಿಪತಿಯಾದ ಶ್ರೀಹರಿಯ ಅಭಯ ಹಸ್ತವನ್ನು ತನ್ನ ತಲೆಯಲ್ಲಿ ಹೊತ್ತಿರುವ, ತನ್ನ ಪಾದವನ್ನು ಅಸುರಪಕ್ಷದವರ ತಲೆಯಲ್ಲಿಟ್ಟಿರುವ, ತನ್ನ ಕೈಗಳಿಂದ ಸಜ್ಜನರಿಗೆ ವರ ಹಾಗೂ ಅಭಯಗಳನ್ನು ಸೂಚಿಸುವ, ಶ್ರೀಕೃಷ್ಣ ಶ್ರೀ ವೇದವ್ಯಾಸರಿಂದ ಹುಟ್ಟಿದ ಭಾರತ ಎಂಬ ಹೆಸರುಳ್ಳ ಪಾಂಡವರ ಕೀರ್ತಿ ಎಂಬ ಹೆಂಗಸನ್ನು ನೋಡಿದ ಜನರು ಇನ್ನೊಬ್ಬ ದ್ರೌಪದೀದೇವಿಯನ್ನು ನೋಡಿದಂತೆ ಪವಿತ್ರರಾಗುತ್ತಿದ್ದರು, ಮತ್ತು ಆನಂದಪಡುತ್ತಿದ್ದರು. ಹೀಗೆ ಕೀರ್ತಿಸಂಪನ್ನರಾಗಿ ಪಾಂಡವರು ಶ್ರೀಕೃಷ್ಣನಿಂದ ಸಹಿತರಾಗಿ ಭೂಮಿಯನ್ನು ಆಳುತ್ತಿರಲು, ಕಲಿ ಹಾಗು ಬಲಿ ಎಂಬ ಪಾಪಿ ದೈತ್ಯರು ಎಲ್ಲೋ ಒಂದು ಕಡೆ ರಾಷ್ಟ್ರಕ್ಕೆ ಉಪದ್ರವಕರ ಕಾರ್ಯವನ್ನು ಮಾಡುತ್ತಿದ್ದದ್ದನ್ನು ಪಾಂಡವರು ಕೇಳಿದರು. ಆಗ ಶ್ರೀಕೃಷ್ಣಪರಮಾತ್ಮನು ಹಾಗು ಧರ್ಮರಾಜನುಹೇಳಿದಂತೆ ಶ್ರೀಭೀಮ ಸೇನದೇವರು ಅವರ ಹತ್ತಿರ ಹೋಗಿ ಯುದ್ಧಮಾಡಿ ಸ್ವೈನ್ಯಸಮೇತರಾದ ಅವರನ್ನು ಗೆದ್ದು, ಬಲಿಯನ್ನು ಓಡಿಸಿ ಕಲಿಯನ್ನು ಬಂಧಿಸಿ ಶ್ರೀಕೃಷ್ಣ ಧರ್ಮರಾಜರ ಎದುರು ತಂದು ಹಾಕಿದರು. ಧರ್ಮರಾಜನು ಶ್ರೀಕೃಷ್ಣನೆದುರಿನಲ್ಲಿಯೇ ಕಲಿಯನ್ನು ಕುರಿತು ನನ್ನ ರಾಷ್ಟ್ರವನ್ನು ಏತಕ್ಕಾಗಿ ಹಾಳುಮಾಡುತ್ತಿದ್ದೀ ಎಂದು ಕೇಳಿದನು. ಅದಕ್ಕೆ ಕಲಿಯು ದುರ್ಯೋಧನನು ಬಿದ್ದ ದಿನದಿಂದ ಈ ಕಾಲವು ನನ್ನದು. ಅಂಥದ್ದರಲ್ಲಿ ನೀನೇ ಬಲಾತ್ಕಾರದಿಂದ ಇರುವಿ. ಆದ್ದರಿಂದ ನಿನ್ನ ರಾಜ್ಯಕ್ಕೆ ಹಾನಿಯನ್ನು ನಾನು ಮಾಡುತ್ತಿರುವೆನು ಎಂದು ಅಂದನು. ಅದಕ್ಕೆ ಧರ್ಮರಾಜನು ರಾಜರ ಸಾಮರ್ಥ್ಯದಿಂದ ರಾಜ್ಯವು ನಡೆಯುವದು. ನಿನ್ನಂಥವರ ಕಾಲದಲ್ಲಿರುವ ರಾಜ್ಯವಾದರೂ ಕೂಡ ರಾಜರಿಂದಲೇ ರಕ್ಷಿತವಾಗುವಂಥದ್ದು, ನಮ್ಮಂಥ ಬಲಿಷ್ಠ ರಾಜರು ನಿನ್ನಂಥವರ ರಾಜ್ಯವನ್ನು ಕಸಿಯಬಲ್ಲರು, ಹೀಗಿರುವಾಗ ನಿನಗೇಕೆ ರಾಜ್ಯದ ಆಶೆ? ರಾಜನು ಕಾಲದ ಆಧೀನನಾಗುವನೋ? ಕಾಲವೇ ರಾಜನವಶದಲ್ಲಿರುವದೋ? ಎಂದು ಸಂಶಯವುಬೇಡ, ರಾಜನ ಅಧೀನದಲ್ಲಿಯೇ ಕಾಲವಿರುವದು ಎಂದು ಹೇಳಿದನು. ಅದಕ್ಕೆ ಕಲಿಯು 'ನನ್ನ ಆಡಳಿತದಕಾಲದಲ್ಲಿ ನಿನ್ನಂಥ. ಧರ್ಮಿಷ್ಠರಾಜನು ಇರಲು ಹೇಗೆ ಶಕ್ಯವಾದೀತು? ನಾನು ಮೊದಲು ರಾಜರನ್ನು, ಬ್ರಾಹ್ಮಣರನ್ನು ಪ್ರವೇಶಿಸಿ ಎಲ್ಲ ಪ್ರಜೆಗಳನ್ನು ಕೆಡಿಸುವೆನು. ಶ್ರೀಕೃಷ್ಣನ ಸಹಾಯವುಳ್ಳ ನಿಮ್ಮನ್ನು ಪ್ರವೇಶಿಸಿ ಕೆಡಿಸಲು ಮಾತ್ರ ನನಗೆ ಶಕ್ಯವಾಗುತ್ತಿಲ್ಲ ನಿಮ್ಮನ್ನು ಬಿಟ್ಟರೆ ನನ್ನ ವಶದಲ್ಲಿಲ್ಲದ ರಾಜನ್ಯಾವನಿದ್ದಾನೆ? ವಿಪ್ರವೇದಗಳಿಗೆ ವಿರೋಧಿಯಾದ ನನ್ನ ಕಾಲದಲ್ಲಿ ನನ್ನ ದೃಷ್ಟಿ ಬಿದ್ದಾಗ ಎಲ್ಲಿಯ ಬ್ರಾಹ್ಮಣರು ? ಎಲ್ಲಿಯ ವೇದಗಳು? ಎಲ್ಲಿಯ ಗುಣಗಳು? (ಇವೆಲ್ಲ ಎಲ್ಲಿ ಉಳಿಯುವವು?) ಎಂದು ಮಾತನಾಡಿದನು. ಆಗ ಧರ್ಮರಾಜನು ಎಲೋ ಕಲಿಯೇ, ಯಾವಾಗಲೂ ಸುಳ್ಳೇ ಮಾತಾಡುವವನಾದರೂ ನೀನು ಈಗ ಸತ್ಯವನ್ನೇ ಹೇಳಿರುವಿಯಾದ್ದರಿಂದ ನಿನ್ನನ್ನು ಬಂಧನದಿಂದ ಬಿಡಿಸುವೆನು. ಆದರೆ ನಮ್ಮ ಸಂತತಿಯ ನಂತರ ಮಾತ್ರ ನಿನ್ನ ಕಾರ್ಯನಡೆಯಲಿ; ಆಗಲೂ ಕೂಡ ನಮಗೆ ಕಪ್ಪ—ಕಾಣಿಕೆಗಳನ್ನು ಕೊಡಬೇಕು. ಅದ್ಯಾವವೆಂದರೆ, ಗಡಿಪ್ರದೇಶ, ಅಡವಿಟ್ಟಪದಾರ್ಥ, ತಕ್ಕಡಿ ಹಾಗೂ ಮಾಪು ಇವು. ಇವುಗಳಿಗನುಸಾರವಾಗಿಯೇ ಜನರು ನಡೆಯುವಂತಿರಲಿ, ಇವುಗಳನ್ನು ಮೀರುವಂತೆ ಮಾತ್ರ ನೀನು ಮಾಡಬೇಡ' ಎಂದು ಹೇಳಿದನು. ಶ್ರೀ ಕೃಷ್ಣಪರಮಾತ್ಮನು, ಕಲಿಗೆ 'ನೀನು ಭೂಮಿಯಲ್ಲಿದ್ದರೂ, ಪಾಂಡವರ ಸಂತತಿಯು ಇರುವವರೆಗೆ ನಿನಗೆ ನಿನ್ನ ಪೂರ್ಣ ಶಕ್ತಿ ಬರಲಾರದು. ಪಾಂಡವರ ಆಡಳಿತದ ನಂತರ ಕ್ರಮವಾಗಿ ಬೆಳೆಯುತ್ತಾ ಹೋಗುವ ನಿನ್ನ ಶಕ್ತಿಯು ಕ್ಷೇಮಕರಾಜನ ನಂತರ ಪೂರ್ಣವಾಗುವದು. ನಾನು ಹಾಗು ಪಾಂಡವರು ಭೂಮಿಯಲ್ಲಿರುವ

ತನಕ ನೀನು ಭೂಮಿಯನ್ನು ನೋಡಲೂ ಕೂಡ ಆಗದು; ಹಾಗಿರುವಾಗ ಸ್ಪರ್ಶಿಸಲು ಹೇಗೆ ಶಕ್ಯ? ಆದ್ದರಿಂದ ನಮ್ಮ ನಂತರ ಭೂಮಿಯಲ್ಲಿ ನಿನ್ನ ಹೆಜ್ಜೆಯನ್ನಿಡು' ಎಂದು ಹೇಳಿದನು. ಹೀಗೆ ಹೇಳಿದಾಗ ಶ್ರೀಕೃಷ್ಣ—ಧರ್ಮರಾಜರಿಂದ ಬಿಡಿಸಲ್ಪಟ್ಟ ಕಲಿಯು ಶ್ರೀಕೃಷ್ಣ—ಪಾಂಡವರನ್ನು ನಮಸ್ಕರಿಸಿ ಅವರ ರಾಜ್ಯವನ್ನು ಬಿಟ್ಟುಕೊಟ್ಟು ಸಮುದ್ರ ಗುಹೆಯೊಂದನ್ನಾಶ್ರಯಿಸಿದ್ದನು. ಪಾಂಡವರಾದರೂ ಶ್ರೀಕೃಷ್ಣನ ರಕ್ಷಣೆಯಲ್ಲಿದ್ದವರಾಗಿ ಭೂಮಿಯನ್ನು ರಕ್ಷಿಸುತ್ತಾ ಸಂತೋಷದಿಂದಿದ್ದರು.

ಏವಂ ಪಾರ್ಥಾನ್ ಪ್ರತಿಷ್ಠಾಪ್ಯ ಶಕ್ರಪ್ರಸ್ಥೇ ತು ಸಾರ್ಜುನಃ ।
ಕ್ರೀಡನ್ ದಿವ್ಯಾಃ ಕಥಾಃ ಪ್ರಾಹ ಪುತ್ರಶೋಕಾಪನುತ್ತಯೇ ।
ಗೀತೋಕ್ತಂ ವಿಸ್ಮೃತಂ ಚಾಸ್ಮೈ ಪುನರ್ವಿಸ್ತರತೋಽವದತ್ ॥೪೬॥

(ಕೃಷ್ಣಃ—ಶ್ರೀಕೃಷ್ಣಪರಮಾತ್ಮನು), ಏವಂ—ಈ ರೀತಿಯಾಗಿ, ಪಾರ್ಥಾನ್—ಪಾಂಡವರನ್ನು, ಶಕ್ರಪ್ರಸ್ಥೇತು ಇಂದ್ರ ಪ್ರಸ್ಥದಲ್ಲಿ, ಪ್ರತಿಷ್ಠಾಪ್ಯ—ಇಟ್ಟು, ಸಾರ್ಜುನಃ ಸನ್—ಅರ್ಜುನನಿಂದ ಸಹಿತನಾಗಿ, ಕ್ರೀಡನ್ ಸನ್-ವಿಹರಿಸುವವನಾಗಿ, ಪುತ್ರಶೋಕಾಪನುತ್ತಯೇ-ಅರ್ಜುನನಿಗೆ ಪುತ್ರಶೋಕ ಪರಿಹಾರವಾಗುವದಕ್ಕಾಗಿ, ದಿವ್ಯಾಃ ಕಥಾಃ—ಶ್ರೇಷ್ಠವಾದ ಕಥೆಗಳನ್ನು, ಪ್ರಾಹ—ಹೇಳಿದನು ಚ—ಮತ್ತು. ವಿಸ್ಮೃತಂ—ಅರ್ಜುನನಿಂದ ಮರೆಯಲ್ಪಟ್ಟ, ಗೀತೋಕ್ತಂ-ಗೀತೋಪದೇಶದಲ್ಲಿ ಹೇಳಲ್ಪಟ್ಟ ವಿಷಯವನ್ನು, ಪುನಃ—ಮತ್ತೆ, ಅಸ್ಮೈ—ಈ ಅರ್ಜುನನಿಗೆ, ವಿಸ್ತರತಃ—ವಿಸ್ತಾರವಾಗಿ, ಅವದತ್—ಹೇಳಿದನು. ॥೪೬॥

ಅವತಾರಿಕೆ :- ಏನು ಉಪದೇಶಿಸಿದನು ಎಂಬುದನ್ನೇ ಹೇಳುತ್ತಾರೆ.

ವಾಣೀ ಪ್ರಾಣೋ ವಾಸುದೇವ ಇತ್ಯೇತೈರಖಿಲಂ ತತಮ್ ।
ಸರ್ವೋತ್ತಮತ್ವಮೇತೇಷಾಂ ಸರ್ವಮೇತದ್ವಶೇ ಜಗತ್ ।
ಉತ್ತರೋತ್ತರಮೇತೇಽಪಿ ಗುಣೋಚ್ಚಾಸ್ತದ್ವಶೇಽಪರೇ ॥೪೭॥

ವಾಣೀ, ಪ್ರಾಣಃ. ವಾಸುದೇವಃ ಇತಿಏತೈಃ—ಸರಸ್ವತೀದೇವಿಯು, ಮುಖ್ಯಪ್ರಾಣದೇವರು, (ಶ್ರೀಲಕ್ಷ್ಮೀದೇವಿಯರು) ಶ್ರೀಹರಿಯು ಇವರಿಂದ, ಅಖಿಲಂ—ಇಡೀ ಜಗತ್ತು, ತತಂ—ವ್ಯಾಪಿಸಲ್ಪಟ್ಟಿದೆ. ಏತೇಷಾಂ ಸರ್ವೋತ್ತಮತ್ವಂ—ಇವರಿಗೆ ಕ್ರಮವಾಗಿ ಸರ್ವೋತ್ತಮತ್ವವು ಮುಖ್ಯವಾಗಿ ಇದೆ. ಸರ್ವಂ ಜಗತ್—ಎಲ್ಲ ಜಗತ್ತು, ಏತದ್ವಶೇ—ಈ ಎಲ್ಲರ ವಶದಲ್ಲಿದೆ. ಏತೇ ಅಪಿ—ಇವರೂ ಕೂಡ, ಉತ್ತರೋತ್ತರಂ—ಮೊದಲಿನವರಿಗಿಂತ ಮುಂದಿನವರು, ಗುಣೋಚ್ಚಾಃ—ಗುಣಗಳಿಂದ ಶ್ರೇಷ್ಠರು. ಅಪರೇ—ಉಳಿದ ಎಲ್ಲರೂ, ತದ್ವಶೇ—ಈ ಮೂವರ ಆಧೀನದಲ್ಲಿರುವರು. ॥೪೭॥

ಇತ್ಥಂ ಹರೇರ್ವಶೇ ಸರ್ವಂಗುಣಪೂರ್ಣಶ್ಚ ಸ ಪ್ರಭುಃ ।
ಏಕ ಏವ ನ ಚಾನ್ಯೋಽಸ್ತಿ ಪ್ರಾಣೋಚ್ಚಾ ತದಧೋ ರಮಾ ॥೪೮॥

ಇತ್ಥಂ—ಹೀಗೆ, ಸರ್ವಂ—ಎಲ್ಲ ಜಗತ್ತೂ, ಹರೇಃ ವಶೇ—ಶ್ರೀಹರಿಯ ವಶದಲ್ಲಿ ಇದೆ. ಪ್ರಭುಃ—ಸರ್ವಸ್ವಾಮಿಯಾವ, ಚ—ಮತ್ತು, ಗುಣಪೂರ್ಣಃ—ಗುಣಪರಿಪೂರ್ಣನಾದವನು, ಸಃ ಏಕಃ ಏವ—ಅವನೊಬ್ಬನೇ ಅನ್ಯಃನಚ ಅಸ್ತಿ—ಬೇರೆಯಾವನೂ ಇಲ್ಲ, ಪ್ರಾಣೋಚ್ಚಾ ರಮಾ—ಮುಖ್ಯಪ್ರಾಣದೇವರಿಗಿಂತ ಉತ್ತಮಳಾದ ಶ್ರೀ ರಮಾದೇವಿಯು, ತದಧಃ—ಆ ಶ್ರೀಹರಿಗಿಂತ ಅಧಮಳು. ॥೪೮॥

ಸ ಹುತಾಶ ಇತಿ ಪ್ರೋಕ್ತೋ ಹುತಮತ್ಯಖಿಲಂ ಯತಃ ।
ವಾಕ್ಪ್ರಣವಮಧ್ಯಗೋ ನಿತ್ಯಂ ಧಾರಯತ್ಯಖಿಲಂ ಜಗತ್ ।
ಸ ಈಶೋ ಬ್ರಹ್ಮರುದ್ರಾದ್ಯಾ ಜೀವಾ ಏವ ಪ್ರಕೀರ್ತಿತಾಃ ॥೪೯॥

ಯತಃ—ಯಾವ ಕಾರಣದಿಂದ, ಸಃ—ಆ ಭಗವಂತನೇ ಹುತಂ ಅಖಿಲಂ—ಆಹುತಿಯಾಗಿ ಅಗ್ನಿಯಲ್ಲಿ ಹಾಕಿದ್ದನ್ನೆಲ್ಲವನ್ನು, ಅತ್ತಿ—ಸ್ವೀಕರಿಸುವನೋ, ತತಃ—ಆದ್ದರಿಂದ ಹುತಾಶಃ ಇತಿ ಪ್ರೋಕ್ತಃ—ಹುತಾಶನೆಂದು ಕರೆಯಲ್ಪಡುವನು. ವಾಕ್ಪ್ರಣವ ಮಧ್ಯಗಃ ಸನ್—ಶ್ರೀವಾಣೀ ಪ್ರಾಣರ ಹೃದಯ ಮಧ್ಯವಲ್ಲಿರುವವನಾಗಿ, ಅಖಿಲಂ ಜಗತ್—ಎಲ್ಲ ಜಗತ್ತನ್ನು, ಧಾರಯತಿ—ರಕ್ಷಿಸುತ್ತಾನೆ. ॥೪೯॥

ಯೇ ತಸ್ಯಾನಾದಿಸದ್ಭಕ್ತಾ ಮುಕ್ತಿಯೋಗ್ಯಾಹಿತೇ ಸ್ಮೃತಾಃ ।
ಅನಾದಿದ್ವೇಷಿಣೋ ಯೇಽಸ್ಮಿಂಸ್ತಮೋಯೋಗ್ಯಾಃ ಸುಪಾಪಿನಃ ॥೫೦॥

ಯೇ—ಯಾರು, ತಸ್ಯ—ಆ ಶ್ರೀಹರಿಯ, ಅನಾದಿಸದ್ಭಕ್ತಾಃ—ಅನಾದಿಕಾಲದಿಂದ ಭಕ್ತರೋ, ತೇ ಹಿ—ಅವರೇ, ಮುಕ್ತಿಯೋಗ್ಯಾಃ ಸ್ಮೃತಾಃ—ಮುಕ್ತಿಯೋಗ್ಯರೆಂದೆನಿಸುವರು. ಯೇ—ಯಾರು, ಅಸ್ಮಿನ್—ಈ ಶ್ರೀಹರಿಯಲ್ಲಿ, ಅನಾದಿದ್ವೇಷಿಣಃ—ಅನಾದಿಕಾಲದಿಂದ ದ್ವೇಷವುಳ್ಳವರೋ. ತೇ—ಅವರು, ಸುಪಾಪಿನಃ—ಅತಿಪಾಪಿಗಳು, ತಮೋಯೋಗ್ಯಾಃ—ಅಂಧಂ ತಮೋ ಯೋಗ್ಯರು ಎಂದು. ಸ್ಮೃತಾಃ—ಎನಿಸುವರು, ॥೫೦॥

ವಿಶ್ರಮಧ್ಯಾ ಇತಿ ಜ್ಞೇಯಾಃ ಸಂಸಾರ ಪರಿವರ್ತಿನಃ ।
ಏವಂ ಜೀವಾಸ್ತ್ರಿಧಾ ಪ್ರೋಕ್ತಾ ಭವಂತ್ಯೇತೇ ನಚಾನ್ಯಥಾ ॥೫೧॥

ವಿಶ್ರಾಃ—ವಿಶ್ರರಾಗಿರುವವರು ಅಂದರೆ ಭಕ್ತಿ ಮಾಗು ದ್ವೇಷ ಬರಡನ್ನು ಅನಾದಿಕಾಲದಿಂದ ಮಾಡುತ್ತಿರುವವರು, ಮಧ್ಯಾಃ—ಮುಕ್ತಿ ತಪಸ್ಸು ಎಲ್ಲವರ ಮಧ್ಯವಲ್ಲಿರುವವರು, ಸಂಸಾರ ಪರಿವರ್ತಿನಃ—ಸಂಸಾರದಲ್ಲಿ ತಿರುಗುತ್ತಿರುವವರು, ನಿತ್ಯಸಂಸಾರಿಗಳು ಎಂದು, ಸ್ಮೃತಾಃ—ಕರಿಸಿಕೊಳ್ಳವರು). ಏವಂ—ಈ ರೀತಿಯಾಗಿ ಜೀವಾಃ—ಜೀವರು. ತ್ರಿಧಾ ಪ್ರೋಕ್ತಾಃ ಭವಂತಿ—ಮೂರು ರೀತಿಯಾಗಿ (ಶಾಸ್ತ್ರದಲ್ಲಿ) ಹೇಳಲ್ಪಡತ್ತಾರೆ. ನಚ ಅನ್ಯಥಾ—ಇದಕ್ಕೆ ವಿರುದ್ಧವಾಗಿ ಅಲ್ಲ, ॥೫೧॥

ತಾರತಮ್ಯಂಚ ವಿಜ್ಞೇಯಂ ಲಿಂಗೈರ್ದೈಹಿಕಮಾನಸೈಃ ।
ವಿಷ್ಣೋರ್ಲಿಂಗಾನುಸಾರಿತ್ವತ್ತಾರತಮ್ಯಾತ್ ತದೀಕ್ಷಣವತ್ ॥೫೨॥

(ಏಷಾಂ—ಈ ಜೀವರ) ತಾರತಮ್ಯಂಚ—ತಾರತಮ್ಯವೂಕೂಡ, ದೈಹಿಕಮಾನಸೈಃ—ದೈಹಿಕಮಾನಸಿಕವಾದ ಲಿಂಗೈಃ—ಚಿಹ್ನಗಳಿಂದ (ದೈಹಿಕ ಶಕ್ತಿ, ಪರಿಮಾಣಗಳಿಂದ, ಮಾನಸಿಕ ಜ್ಞಾನ ಭಕ್ತಿ ಮೊದಲಾದ ಗುಣಗಳ ತಾರತಮ್ಯದಿಂದ) ವಿಜ್ಞೇಯಂ—ತಿಳಿಯಲ್ಪಡಬೇಕು. ವಿಷ್ಣೋಃ ಲಿಂಗಾನುಸಾರಿತ್ವಾತ್—ಶ್ರೀಹರಿ ಪ್ರೀತಿಕರವಾದ ಆ ಲಿಂಗಗಳ ತಾರತಮ್ಯದಿಂದ, ತದೀಕ್ಷಣಂ—ಆ ಜೀವರ ತಾರತಮ್ಯದ ಜ್ಞಾನವು ಸಂಪಾದಿಸಲ್ಪಡಬೇಕು. ॥೫೨॥

ವಿಷ್ಣೋರಸ್ತದನುಗಾನಾಂ ಚ ಪ್ರೀತಿಕೃದ್ ಧರ್ಮ ಈರಿತಃ ।
ಅಧರ್ಮೋಽನ್ಯ ಇಯಂ ನಿಷ್ಠಾ ಪ್ರಲಾಪಃ ಕಿಂ ಕರಿಷ್ಯತಿ ॥೫೩॥

ವಿಷ್ಣೋಃ—ಶ್ರೀಹರಿಗೆ, ಚ—ಮತ್ತು, ತದನುಗಾನಾಂ—ಅವನ ಭಕ್ತರಿಗೆ, ಪ್ರೀತಿಕೃತ್—ಪ್ರೀತಿಕರವಾದ ಕಾರ್ಯವ್ಯಾವದೋ ಅದು, ಧರ್ಮಃ ಈರಿತಃ—ಧರ್ಮವೆಂದು ಹೇಳಲ್ಪಡುವದು ಅನ್ಯಃ—ಉಳಿದಕಾರ್ಯವು, ಅಧರ್ಮಃ—ಅಧರ್ಮವು. ಇಯಂ—ಈ ರೀತಿಯಾಗಿ ನಿಶ್ಚಿತವಾಗಿ ತಿಳಿದು ಅದರಂತೆ ನಡತೆಯು, ನಿಷ್ಠಾ—ದೀಕ್ಷೆ ಎಂದೆನಿಸುವದು. (ಅದನ್ನು ಬಿಟ್ಟುಕೊಟ್ಟು) ಪ್ರಲಾಪಃ—ನೀನು ಮಾಡುತ್ತಿರುವ ದುಃಖಪ್ರಲಾಪವು, ಕಿಂ ಕರಿಷ್ಯತಿ—ನಿನಗೇನು ಶ್ರೇಯಸ್ಸನ್ನುಂಟುಮಾಡಿತು? ॥೫೩॥

ಏವಮಾದ್ಯನುಶಾಸ್ಯಾಜಃ ಪಾರ್ಥಂ ಪಾರ್ಥೈಃ ಸುಸತ್ಕೃತಃ ।
ಕಥಂಚಿತ್ ತಾನವಸ್ಥಾಪ್ಯ ಸುದೂರಾನುಗತಾನ್ ಪ್ರಭುಃ ।
ಸುಭದ್ರಾಸಹಿತಃ ಪ್ರಾಯಾದ್ ಯಾನೇನ ದ್ವಾರಕಾಪುರೀಮ್ ॥೫೪॥

ಅಜಃ ಪ್ರಭುಃ—ಉತ್ಪತ್ತಿರಹಿತನಾದ ಸಮರ್ಥನಾದ ಶ್ರೀ ಕೃಷ್ಣನು, ಏವಮಾದಿ—ಇದೇ ಮೊದಲಾದ ವಿಷಯವನ್ನು ಪಾರ್ಥಂ ಅನುಶಾಸ್ಯ – ಅರ್ಜುನನಿಗೆ ಉಪದೇಶಿಸಿ, ಪಾರ್ಥೈಃ ಸುಸತ್ಕೃತಃ ಸನ್– ಪಾಂಡವರಿಂದ ಪೂಜಿತನಾಗಿ, ಸುದೂರಾನುಗತಾನ್ – ತಾನು ಹೊರಟಾಗ ತನ್ನನ್ನು ಬಹುದೂರದವರೆಗೆ ಬೆನ್ನು ಹತ್ತಿ ಬಂದಿರುವ, ತಾನ್ – ಆ ಪಾಂಡವರನ್ನು, ಕಥಂಚಿತ್ ಅವಸ್ಥಾಪ್ಯ—ಹೇಗೋ ಸಮಾಧಾನ ಮಾಡಿ, ನಿಲ್ಲಿಸಿ, ಸುಭದ್ರಾ ಸಹಿತಃ ಸನ್– ಸುಭದ್ರೆಯಿಂದ ಸಹಿತನಾಗಿ, ಯಾನೇನ–ರಥದಿಂದ, ದ್ವಾರಕಾಪುರೀಮ್ – ದ್ವಾರಕೆಗೆ, ಪ್ರಾಯಾತ್—ಹೊರಟನು. ॥೫೪॥

ಭಾವಾನುವಾದ ೪೬ – ೫೪

ಹೀಗೆ ಶ್ರೀಕೃಷ್ಣಪರಮಾತ್ಮನು ಪಾಂಡವರನ್ನು ರಾಜ್ಯದಲ್ಲಿ ಸ್ಥಾಪಿಸಿಟ್ಟು, ಅವರೊಟ್ಟಿಗೆ ಇರುತ್ತಾ ವಿಶೇಷವಾಗಿ ಅರ್ಜುನನ ಜೊತೆಗೆ ಕ್ರೀಡಿಸುತ್ತಾ, ಅರ್ಜುನನಿಗೆ ಆದ ಅಭಿಮನ್ಯು ಮರಣದ ದುಃಖದ ಪರಿಹಾರಕ್ಕಾಗಿ ಬೇರೆ ಬೇರೆ ಕಥಾಗಳನ್ನು, ಹಾಗು ಅವನಿಗೆ ಹಿಂದೆ ಯುದ್ಧಾರಂಭದಲ್ಲಿ ಹೇಳಿದ ಆದರೆ ಅವನು ಈಗ ಮರೆತಿರುವ ಗೀತೆಯ ವಿಷಯಗಳನ್ನು ಪುನಃ ವಿಸ್ತರಿಸಿ ಉಪದೇಶಿಸಿದನು. ಸರಸ್ವತೀ (ಭಾರತೀ), ಪ್ರಾಣದೇವರು(ಬ್ರಹ್ಮದೇವರು) ಶ್ರೀಲಕ್ಷ್ಮೀದೇವಿಯು, ಶ್ರೀಹರಿಯು ಇವರು ಎಲ್ಲ ಜಗವನ್ನೇ ವ್ಯಾಪಿಸಿ ಇರುವರು. ಉಳಿದೆಲ್ಲರಿಗಿಂತ ಇವರು ಉತ್ತಮರ ಇವರಧೀನವು ಇಡೀ ಜಗತ್ತು. ಇವರಲ್ಲಿಯೂ ಮೊದಲಿನವರಿಗಿಂತಲೂ ಮುಂದಿನವರು ಉತ್ತಮರು. ಹೀಗಾಗಿ ಶ್ರೀಹರಿಯ ವಶದಲ್ಲಿ ರಮಾದಿ ಸಮಸ್ತ ಪ್ರಪಂಚವೇ ಇದೆ. ಅವನೊಬ್ಬನೇ ಗುಣಪೂರ್ಣನು. ಅವನ ನಂತರದಲ್ಲಿ ಶ್ರೀರಮಾದೇವಿಯು, ಅವರ ನಂತರ ಶ್ರೀಪ್ರಾಣದೇವರು ಬ್ರಹ್ಮದೇವರು. ಆ ಶ್ರೀಹರಿಯೇ ಎಲ್ಲರೂ ಅಗ್ನಿಯದ್ವಾರಾ ಕೊಡತಕ್ಕ ಆಹುತಿಗಳನ್ನು ಸ್ವೀಕರಿಸುವನು. ಆದ್ದರಿಂದ ಅವನಿಗೇ ಹುತಾಶನೆಂದು ಹೆಸರು. ಇದೇರೀತಿ ಎಲ್ಲ ಶಬ್ದಗಳಿಂದ ಅವನೇ ವಾಚ್ಯನು. ಅವನು ವಾಣೀ ಪ್ರಾಣರ ಹೃದಯದಲ್ಲಿಯೂ ಪ್ರೇರಕನಾಗಿದ್ದು ಇಡೀ ಜಗತ್ತನ್ನೇ ಧರಿಸಿರುವನು. ಅವನು ದೇವರೆಂದೆನಿಸುವನು. ಬ್ರಹ್ಮಾದಿಗಳೆಲ್ಲರೂ ಜೀವರೆಂದು ಕರಿಸಿಕೊಳ್ಳುವರು. ಯಾವ ಜೀವರು ಅನಾದಿಕಾಲದಿಂದಲೂ ಸ್ವರೂಪತಃ ಅವನ ಭಕ್ತರಾಗಿರುವರೋ ಅವರು ಮುಕ್ತಿಯೋಗ್ಯರೆಂದು ಕರಿಸಿಕೊಳ್ಳುವರು. ಆದರೆ ಅದಕ್ಕೆ ವಿರುದ್ಧವಾಗಿ ಯಾರು ಅವನಲ್ಲಿ ಅನಾದಿಕಾಲದಿಂದಲೂ ಸ್ವರೂಪತಃ ದ್ವೇಷಿಗಳೇ ಆಗಿರುವರೋ ಪಾಪಿಗಳಾದ ಅವರು ತಮೋಯೋಗ್ಯರು ಎಂದು ಕರಿಸಿಕೊಳ್ಳುವರು. ಯಾರು ಅನಾದಿಯಾಗಿ ಭಕ್ತಿ—ದ್ವೇಷ ಎರಡನ್ನೂ ಮಿಶ್ರವಾಗಿ ಮಾಡುತ್ತಲಿರುವರೋ ಅವರು ನಿತ್ಯ ಸಂಸಾರಿಗಳೆಂದೆನಿಸುವರು. ಹೀಗೆ ಜೀವರು ತ್ರಿವಿಧರೇ ಇರುವರು ಇದಕ್ಕಿಂತ ಬೇರೆ ಪ್ರಕಾರವಿಲ್ಲವೇ ಇಲ್ಲ. ಈ ಜೀವರಲ್ಲಿಯೂ ತಾರತಮ್ಯವನ್ನು ದೈಹಿಕ ಲಿಂಗಗಳಿಂದ ಅಂದರೆ ದೈಹಿಕ ಪರಿಮಾಣದಿಂದ ಉದಾಃ—ಬ್ರಹ್ಮದೇವರ ದೇಹವು ಮಹತ್ತತ್ವದ ಪರ್ಯಂತ ಸ್ಥಾ ಅದನ್ನು ವ್ಯಾಪಿಸಿಯೂ ಇರುವದು. ಗರುಡ ಶೇಷ ರುದ್ರದೇವರ ದೇಹವು ಮಹತ್ತತ್ವಕ್ಕಿಂತಲೂ ಕೆಳಗೆ ಅಹಂಕಾರ ತತ್ವದತನಕ ಇರುವದು. ಅದಕ್ಕಿಂತ ಕೆಳಗಿರುವ ಮನಸ್ತತ್ವದತನಕ ಇಂದ್ರ ಸ್ಕಂದರ ದೇಹವಿರುವದು. ಹೀಗೆ

ಕಡಿಮೆ ಕಡಿಮೆ ಪರಿಮಾಣವುಳ್ಳ ದೇಹವುಳ್ಳವರು ಹೆಚ್ಚು ಪರಿಮಾಣವುಳ್ಳವರಿಗಿಂತ ಕಡಿಮೆ ಎಂದು ತಿಳಿಯಬೇಕು ಹಾಗು ಮಾನಸಿಕ ಲಿಂಗಗಳಿಂದ ಅಂದರೆ ಜ್ಞಾನ ಭಕ್ತಿ ವೈರಾಗ್ಯಗಳಿಂದ.
ಉದಾಃ— ಬ್ರಹ್ಮದೇವರು ಎಲ್ಲ ವೇದಗಳಲ್ಲಿ ಹೇಳಿವ ಎಲ್ಲ ಗುಣಗಳನ್ನು ತಿಳಿಯುವರು, ರುದ್ರಾದಿದೇವತೆಗಳು ಅವರಿಗಿಂತ ಕ್ರಮವಾಗಿ ಕಡಿಮೆ ತಿಳಿಯುವರು. ಈ ಜ್ಞಾನದ ತಾರತಮ್ಯವು ಆ ದೇವತೆಗಳ ತಾರತಮ್ಯವನ್ನು ತಿಳಿಯಲು ಜ್ಞಾಪಕವಾಗುವದು. ಆ ಪ್ರಕಾರ ತಾರತಮ್ಯವನ್ನು ತಿಳಿದು ಅವರ ಉಪಾಸನೆಯನ್ನು ಮಾಡಬೇಕು. ಶ್ರೀಹರಿಗೆ ಅವನ ಭಕ್ತರಿಗೆ ಸಂತೋಷಕರವಾವದ್ದು ಯಾವದೋ ಅದು ಧರ್ಮವೆಂದು ಕರಿಸಿಕೊಳ್ಳುವದು, ಪ್ರೀತಿಕರವಲ್ಲದ್ದು ಅಧರ್ಮ. ಈ ರೀತಿ ಜ್ಞಾನದಲ್ಲಿ ದಾರ್ಢ್ಯ– ದೀಕ್ಷೆ ಬೇಕು. ಪ್ರಲಾಪ ಮಾಡುವದರಿಂದ ಏನು ಪ್ರಯೋಜನ ? ಇದೇ ಮೊದಲಾಗಿ ಉಪದೇಶವನ್ನು ಶ್ರೀಕೃಷ್ಣನು ಅರ್ಜುನನಿಗೆ ಮಾಡಿ ಪಾಂಡವರಿಂದ ಸತ್ಕೃತನಾಗಿ ಹೊರಟಾಗ ಅವನ ಬೆನ್ನು ಹತ್ತಿಯೇ ಬಂದ ಪಾಂಡವರನ್ನು ಸಮಾಧಾನ ಮಾಡಿ, ನಿಲ್ಲಿಸಿ ಸುಭದ್ರಾಸಹಿತನಾಗಿ ದ್ವಾರಕೆಗೆ ಹೋದನು.

ಸಮಾಧಿವಿರತೋದಂಕ ಪರಿಪೃಷ್ಟಃ ಪಥಿ ಪ್ರಭುಃ ।
ಹತಂ ದುರ್ಯೋಧನಂ ಪ್ರಾಹ ಸಭ್ರಾತೃಸುತಸೈನಿಕಮ್ ॥೫೫॥

ಪಥಿ–(ದ್ವಾರಕೆಗೆ ಹೊರಟಾಗ) ದಾರಿಯಲ್ಲಿ, ಸಮಾಧಿವಿರತೋದಂಕಪರಿಪೃಷ್ಟಃ–ಧ್ಯಾನವನ್ನು ಮುಗಿಸಿ ಎದ್ದ ಉದಂಕ ಮುನಿಯಿಂದ ಕೇಳಲ್ಪಟ್ಟ (ಎಲ್ಲಿ ಹೋಗಿದ್ದೆ, ಎಲ್ಲಿಂದ ಬಂದೆ, ಏನು ಸಮಾಚಾರ ಎಂದು ವಿಚಾರಿಸಲ್ಪಟ್ಟ), ಪ್ರಭುಃ–ಸಮರ್ಥನಾದ ಶ್ರೀಕೃಷ್ಣಪರಮಾತ್ಮನು, ಸಭ್ರಾತೃಸುತಸೈನಿಕಮ್ ದುರ್ಯೋಧನಂ ಹತಂ ಪ್ರಾಹ –ಸಹೋದರರು, ಮಕ್ಕಳು, ಸೈನಿಕರಿಂದ ಸಹಿತನಾವ ದುರ್ಯೋಧನನನ್ನು ಸತ್ತವನನ್ನಾಗಿ ಹೇಳಿದನು. ॥೫೫॥

ತಂ ಶಿಷ್ಯವಧಕೋಪೇನ ಶಪ್ತುಮಾತ್ಮಾನ ಮುದ್ಯತಮ್ ।
ಕೇಶವೋಽವಮನಾಯದ್ ವಾಕ್ಯೈರ್ವಿಶ್ವರೂಪಂ ಪ್ರದರ್ಶ್ಯ ಚ ॥೫೬॥

ಮದ್ಭಕ್ತೋ ನಿತರಾಮೇಷ ಮದಾರಾಧನತತ್ಪರಃ ।
ಮಾಮವಜ್ಞಾಯ ನಿರಯಂ ಮಾಽನುತ್ಥಾನಂ ವ್ರಜೇದಿತಿ ॥೫೭॥

ಶಿಷ್ಯವಧಕೋಪೇನ–ಶಿಷ್ಯನಾದ ದುರ್ಯೋಧನನ ವಧದ ಸಿಟ್ಟಿನಿಂದ, ಆತ್ಮಾನಂ–ತನ್ನನ್ನು (ಶ್ರೀಕೃಷ್ಣನನ್ನು) ಶಪ್ತುಂ–ಶಪಿಸಲು, ಉದ್ಯತಂ–ಉದ್ಯುಕ್ತನಾದ, ತಂ–ಆ ಉದಂಕ ಮುನಿಯನ್ನು, ಕೇಶವಃ–ಶ್ರೀಕೃಷ್ಣಪರಮಾತ್ಮನು, ನಿತರಾಂ ಮದ್ಭಕ್ತಃ–ಅತ್ಯಂತವಾಗಿ ನನ್ನ ಭಕ್ತನಾದ, ಮದಾರಾಧನತತ್ಪರಃ–ನನ್ನ ಆರಾಧನೆಯಲ್ಲಿ ಆಸಕ್ತನಾವ, ಏಷಃ ಈ ಉದಂಕನು, ಮಾಂ ಅವಜ್ಞಾಯ–ನನ್ನನ್ನು ತಿರಸ್ಕರಿಸಿ, ಅನುತ್ಥಾನಂ ನಿರಯಂ–ಮೇಲೇಳದ ನರಕವನ್ನು (ಅಂಧತಮಸ್ಸನ್ನು), ಮಾ ವ್ರಜೇತ್ ಇತಿ–ಹೊಂದುವಂತಾಗದಿರಲಿ ಎಂಬ ಕಾರಣದಿಂದ, ವಾಕ್ಯೈಃ—ತಿಳಿಹೇಳುವ ಮಾತುಗಳಿಂದ, ಚ–ಮತ್ತು, ವಿಶ್ವರೂಪಂ ಪ್ರದರ್ಶ್ಯ—ತನ್ನ ವಿಶ್ವರೂಪವನ್ನು ತೋರಿಸಿ, ಅಶಮಯತ್—ಸಮಾಧಾನ ಮಾಡಿದನು (ಸಿಟ್ಟನ್ನು ಶಾಂತಗೊಳಿಸಿದನು). ॥೫೬-೫೭॥

ಕೃಪಯಾ ವಾಸುದೇವೇನ ಬೋಧಿತಃ ಶಾಂತಮಾನಸಃ ।
ಪಶ್ಚಾತ್ತಾಪಾಭಿತಪ್ತಾತ್ಮಾ ತಮೇವ ಶರಣಂ ಯಯೌ ॥೫೮॥

ವಾಸುದೇವೇನ—ಶ್ರೀಕೃಷ್ಣಪರಮಾತ್ಮನಿಂದ, ಕೃಪಯಾ–ದಯೆಯಿಂದ, ಬೋಧಿತಃ–ಉಪದೇಶಿಸಲ್ಪಟ್ಟ ಆ ಉದಂಕರು, ಶಾಂತಮಾನಸಃಸನ್–ಕೋಪವನ್ನು ಬಿಟ್ಟಮನಸ್ಸುಳ್ಳವರಾಗಿ, ಪಶ್ಚಾತ್ತಾಪಾಭಿತಪ್ತಾತ್ಮಾ ಸನ್—ಪಶ್ಚಾತ್ತಾಪವನ್ನು ಪಡೆದವರಾಗಿ, ತಮೇವ—ಆ ಶ್ರೀಕೃಷ್ಣಪರಮಾತ್ಮನನ್ನೇ, ಶರಣಂ ಯಯೌ—ಮೊರೆಹೊಕ್ಕರು. ॥೫೮॥

ತಸ್ಮೈ ದೇವೋಽಭಯಂ ದತ್ವಾ ಪ್ರೇಷಯಿಷ್ಯೆಽಮೃತಂ ತವ ।
ದಾತುಂ ಶಕ್ರಮಿತಿ ಪ್ರೋಕ್ತ್ವಾ ಯಯೌ ದ್ವಾರವತೀಂ ಪ್ರಭುಃ ॥೫೯॥

ದೇವಃ—ಕ್ರೀಡಾದಿ ಗುಣವಿಶಿಷ್ಟನಾದ, ಪ್ರಭುಃ—ಸಮರ್ಥನಾದ ಶ್ರೀಕೃಷ್ಣಪರಮಾತ್ಮನು, ತಸ್ಮೈ–ಆ ಉದಂಕರಿಗೆ, ಅಭಯಂ ದತ್ವಾ–ಅಭಯಪ್ರದಾನ ಮಾಡಿ, ತವ—ನಿನಗೆ, ಅಮೃತಂ ದಾತುಂ–ಅಮೃತವನ್ನು ಕೊಡಲು, ಶಕ್ರಂ ಪ್ರೇಷಯಿಷ್ಯೇ–ದೇವೇಂದ್ರನನ್ನು ಕಳಿಸುವೆ ಇತಿ–ಎಂದು, ಪ್ರೋಕ್ತ್ವಾ–ಹೇಳಿ, ದ್ವಾರವತೀಂ–ದ್ವಾರಕೆಗೆ ಯಯೌ–ಹೋದನು. ॥೫೯॥

ಅಥಾಽದಿದೇಶ ದೇವೇಶಂ ವಾಸುದೇವೋಽಮೃತಂ ಮುನೇಃ ।
ದೇಹೀತಿ ವಂಚಯಿಷ್ಯಾಮೀತ್ಯಾಹ ಸೋಽಪಿ ಕ್ಷ್ಮಾಪಯನ್ ॥೬೦॥

ಅಥ–ದ್ವಾರಕೆಗೆ ಹೋದನಂತರ, ವಾಸುದೇವಃ—ಶ್ರೀಕೃಷ್ಣಪರಮಾತ್ಮನು, ಮುನೇಃ–ಉದಂಕ ಮುನಿಗೆ, ಅಮೃತಂ–ಅಮೃತವನ್ನು, ದೇಹಿ–ಕೊಡು, ಇತಿ–ಎಂದು, ದೇವೇಶಂ–ಇಂದ್ರದೇವನನ್ನು ಕುರಿತು, ಆದಿದೇಶ–ಆಜ್ಞಾಪಿಸಿದನು. ಸಃ ಅಪಿ– ಆ ಇಂದ್ರನಾದರೂ, ಕ್ಷಮಾಪಯನ್–(ತಾನು ಶ್ರೀಕೃಷ್ಣನು ಹೇಳಿದಂತೆ ಮಾಡದಿರುವದಕ್ಕೆ) ಕ್ಷಮೆ ಕೇಳುತ್ತಾ, ವಂಚಯಿಷ್ಯಾಮಿ–ಆ ಮುನಿಗೆ ವಂಚನೆ ಮಾಡುತ್ತೇನೆ, ಇತಿ—ಎಂದು, ಆಹ–ಹೇಳಿದನು. ॥೬೦॥

॥ಓಮಿತ್ಯುಕ್ತ್ವೋ ಭಗವತಾ ತತ್ಸ್ನೇಹಾತ್ ಸ ಶಚೀಪತಿಃ ।
ಸುಜುಗುಪ್ಸಿತಮಾತಂಗ ವೇ ಷೋ ಭೂತ್ವಾ ಮುನಿಂ ಯಯೌ ॥೬೧॥

ಭಗವತಾ—ಶ್ರೀಕೃಷ್ಣಪರಮಾತ್ಮನಿಂದ ತತ್ಸ್ನೇಹಾತ್– ಆ ಇಂದ್ರನ ಮೇಲಿನ ಸ್ನೇಹದಿಂದ, ಓಂ ಇತಿ-ಉಕ್ತಃ—ಹಾಗೇ ಆಗಲಿ ಎಂದು ಹೇಳಿಸಿಕೊಳ್ಳಲ್ಪಟ್ಟ, ಶಚೀಪತಿ—ಶಚೀಪತಿಯಾದ ಇಂದ್ರನು, ಸುಜುಗುಪ್ಸಿತ ಮಾತಂಗವೇಷಃ ಭೂತ್ವಾ—ಅತ್ಯಂತ ಹೇಯವಾದ ಚಾಂಡಾಲವೇಷ ವುಳ್ಳವನಾಗಿ, ಮುನಿಂ–ಉದಂಕಮುನಿಯಹತ್ತಿರ ಯಯೌ–ಹೋದನು. ॥೬೧॥

ಮೂತ್ರಸ್ರೋತಸಿ ಸೋಽಧಶ್ಚ ನಿಧಾಯ ಕಲಶಂ ವಶೀ ।
ಮೂತ್ರಯನ್ನಿವ ತಂ ಪ್ರಾಹ ವಾಸುದೇವಃ ಸುಧಾಮಿವ ॥೬೨॥

ಮಹರ್ಷೇ ಪ್ರೇಷಯಾಮಾಸ ತವಾರ್ಥೇ ತಾಮಿಬೀತಿಚ ।
ಸ ಮೂತ್ರಮಿತಿ ಮತ್ವಾತಂ ಯಾಹೀ ತ್ಯೇವಾಽಹ ಭರ್ತ್ಸಯನ್ ।
ವಂಚಯಿತ್ವೈವ ತಂ ಶಕ್ರೋ ಯಯೌ ಪ್ರೀತಃ ಸ್ವಮಾಲಯಮ್ ॥೬೩॥

ಸಃ—ಆ ಇಂದ್ರದೇವನು, ವಶೀ ಚ–ಎಲ್ಲ ಇಂದ್ರಿಯನಿಗ್ರಹ ಶಕ್ತನಾಗಿದ್ದರಿಂದ ಮೂತ್ರ ನಿಗ್ರಹವನ್ನು ಮಾಡಿದವನಾದರೂ ಕೂಡ, ಕಲಶಂ–ಸುಧಾಕಲಶವನ್ನು, ಅಧಃ—ಕೆಳಗೆ, ಮೂತ್ರ ಸ್ರೋತಸಿ— ಮೂತ್ರದ್ವಾರದ

ಪತ್ತಿರ, ನಿಧಾಯ—ಇಟ್ಟು, ಮೂತ್ರಯನ್ ಇವ-ಅದರಲ್ಲಿ ದೂತ್ರ ಬಿಡುವವನಂತೆ ನಟಿಸುತ್ತಾ. ತಂ—ಆ ಮುನಿಯನ್ನು ಕುರಿತು, ಮಹರ್ಷೇ—ಎಲೋ ಋಷಿಯೇ ವಾಸುದೇವಃ—ಶ್ರೀಷೇಕಪರಮಾತ್ಮನು. ಇಮಾಂ ಸುಧಾಂ—ಈ ಅಮೃತವನ್ನು, ತವ ಅರ್ಥೇ—ನಿನ್ನ ಸಲುವಾಗಿ. ಪ್ರೇಷಯಾಮಾಸ- ಕಳಿಸಿರುವನು, ತಾಂ—ಆ ಅಮೃತವನ್ನು, ಪಿಬ—ಕುಡಿ, ಇತಿ ಚ—ಎಂದೂ ಕೂಡ, ಪ್ರಾಹ—ಹೇಳಿದನು. ಸಃ—ಆ ಋಷಿಯಾದರೂ, ಮೂತ್ರಂ ಇತಿ ಮತ್ವಾ-ಅದನ್ನು ಮೂತ್ರವೆಂದು ತಿಳಿದು, ತಂ—ಆ ಇಂದ್ರನನ್ನು ಕುರಿತು, ಭರ್ತ್ಸಯನ್ ಸನ್—ನಿಂದಿಸುತ್ತಾ, ಯಾಹಿ ಇತಿ ಏವ- ಹೊರಡು ಎಂದೇ, ಆಹ—ಹೇಳಿದನು, ಶಕ್ರಃ—ದೇವೇಂದ್ರನು ತಂ—ಆ ಮುನಿಯನ್ನು, ವಂಚಯಿತ್ವಾ ಏವ- ವಂಚಿಸಿಯೇ, ಪ್ರೀತಃ ಸನ್—ಸಂತುಷ್ಟನಾಗಿ, ಸ್ವಂ ಆಲಯಂ— ತನ್ನ ಸ್ಥಾನಕ್ಕೆ, ಯಯೌ—ಹೋದನು, ॥೬೨—೬೩॥

ಆವತಾರಕೆ—ವಂಚಿಸಲು ಕಾರಣವನ್ನು ತಿಳಿಸುತ್ತಿದ್ದಾರೆ—

ಅಸಾಧಾರಣಮನ್ನಂ ಹಿ ದೇವಾನಾಮಮೃತಂ ಸಖಾ ।
ಅನ್ಯಪೀತಿಸ್ತತಸ್ತನ್ಯ ದೇವಾನಾಂ ಪರಮಾಪ್ರಿಯಾ ॥೬೪॥

ಹಿ—ಯಾವಕಾರಣದಿಂದ, ಅಮೃತಂ—ಅಮೃತವು, ದೇವಾನಾಂ—ದೇವತೆಗಳ, ಅಸಾಧಾರಣಂ ಅನ್ನಂ—ಅಸಾಧಾರಣವಾದ ಆಹಾರವೋ (ದೇವತೆಗಳಿಗೇ ಬೀಸಲಾದದ್ದೋ) ತತಃ- ಆ ಕಾರಣದಿಂದ, ತಸ್ಯ-ಆ ಅಮೃತದ, ಅನ್ಯಪೀತಿಃ ತು— ದೇವತೆಗಳಲ್ಲದವರಿಂದ ಪಾನವು, ದೇವಾನಾಂ—ದೇವತೆಗಳಿಗೆ, ಪರಮಾಪ್ರಿಯಾ— ಅತ್ಯಂತವಾಗಿ ಅಸಮ್ಮತವು. (ಆದ್ದರಿಂದ ವಂಚಿಸಿದನು,) ॥೬೪॥

ಆತ್ಮದತ್ತಪ್ರಸಾದಾಚ್ಚ ಸ್ವಾಪರಾಧಾತ್ ಪ್ರಚೋದಿತೇ ।
ಉದಂಕೇ ವಾಸುದೇವಸ್ತು ಯುಕ್ತಮಿತ್ಯೇವ ಮನ್ಯತೇ ॥೬೫॥

ಉದಂಕೇ—ಉದಂಕ ಮುನಿಯಲ್ಲಿ. ಆತ್ಮದತ್ತಪ್ರಸಾದಾತ್—ಸ್ವಾಭಾವಿಕವಾಗಿ ಕೊಡಲ್ಪಟ್ಟ ಅಮೃತದಿಂದ ಅಮೃತಸಿಗುವದಕ್ಕೆ ಕಾರಣವಾದ ಅನುಗ್ರಹದಿಂದ, ಸ್ವಾಪರಾಧಾತ್—ತಾನೇ ಮಾಡಿದ ಅಪರಾಧ (ಪವಿತ್ರವಾದದ್ದರ ಬಗ್ಗೆ ಅಪಾವಿತ್ರ್ಯ ಶಂಕಾರೂಪದೋಷ) ದಿಂದ, ಪ್ರಚೋದಿತೇ ಸತಿ—ವಂಚಿಸಲ್ಪಡುತ್ತಿರಲು, ವಾಸುದೇವಃ ತು—ಶ್ರೀಕೃಷ್ಣಪರಮಾತ್ಮನೂ ಕೂಡ, ಯುಕ್ತಂ ಇತಿ ಏವ—ಯೋಗ್ಯವೆಂದೇ. ಮನ್ಯತೇ— ಅಭಿಪ್ರಾಯ ಪಡುತ್ತಾನೆ, (ಎಂದೂ ಇವನು ತಿಳಿದು ವಂಚಿಸಿದನು.) ॥೬೫॥

ಸ್ವಪುರೀಂ ಪ್ರಾಪ್ಯ ಯದುಭಿಃ ಪೂಜಿತಃ ಶೂರಸೂನವೇ ।
ವೃತ್ತಾಂತಂ ಕಥಯಾಮಾಸ ಕೇಶವೋ ಯದುಸಂಸದಿ ॥೬೬॥

ಕೇಶವಃ—ಶ್ರೀಕೃಷ್ಣಪರಮಾತ್ಮನು, (ದಾರಿಯಲ್ಲಿ ಇಷ್ಟೆಲ್ಲಾ ಮಾಡಿಕೊಂಡು) ಸ್ವಪುರೀಂ ಪ್ರಾಪ್ಯ-ತನ್ನ ದ್ವಾರಕೆಯನ್ನು ಹೊಂದಿ, ಯದುಭಿಃ ಪೂಜಿತಃ ಸನ್—ಯಾದವರಿಂದ ಪೂಜಿತನಾಗಿ, ಯದುಸಂಸದಿ—ಯಾದವರ ಸಭೆಯಲ್ಲಿ, ಶೂರಸೂನವೇ—ವಸುದೇವನಿಗೆ, ವೃತ್ತಾಂತಂ—ಎಲ್ಲ ಯುದ್ಧದ ವಾರ್ತೆಯನ್ನು, ಕಥಯಾಮಾಸ—ಹೇಳಿದನು. ॥೬೬॥

ವಧಮಂತರಿತಂ ಸೂನೋಃ ಸಾತ್ವತೇಶೇನ ಸಾತ್ವತೀ ।
ಪ್ರಣಮ್ಯ ಕಥಯೇತ್ಯುಚೇತತ ಆಹ ಜನಾರ್ದನಃ ॥೬೭॥

ಸಾತ್ವತೇಶೇನ – ಯಾದವಕುಲಸ್ವಾಮಿಯಾದ ಶ್ರೀಕೃಷ್ಣಪರಮಾತ್ಮನಿಂದ, ಅಂತರಿತಂ— ಬಚ್ಚಿಡ ಲ್ಪಟ್ಟ, ಸೂನೋಃವಧಂ—ತನ್ನ ಮಗನಾದ ಅಭಿಮನ್ಯುವಿನ ಮರಣದ ವಾರ್ತೆಯನ್ನು, ಕಥಯ ಇತಿ— ಹೇಳಿಬಿಡು ಎಂದು, ಸಾತ್ವತೀ—ಸುಭದ್ರೆಯು, ಪ್ರಣಮ್ಯ–ಶ್ರೀಕೃಷ್ಣನಿಗೆ ನಮಸ್ಕರಿಸಿ, ಊಚೇ—ಹೇಳಿದಳು. ತತಃ—ಅನಂತರ, ಜನಾರ್ದನಃ—ಶ್ರೀಕೃಷ್ಣಪರಮಾತ್ಮನು, ಆಹ—ಹೇಳಿದನು. ॥೬೭॥

ತತಃ ಸುದುಃಖಿತಾಃ ಶೂರಪುತ್ರಾದ್ಯಾ ಅಭಿಮನ್ಯವೇ ।
ಶ್ರಾದ್ಧದಾನಾನಿ ಬಹುಶಶ್ಚಕ್ರುಃ ಕೇಶವಸಂಯುತಾಃ ॥೬೮॥

ತತಃ—ಆ ವಾರ್ತೆಯನ್ನು ಕೇಳಿದನಂತರ, ಸುದುಃಖಿತಾಃ— ಬಹು ದುಃಖಿಗಳಾದ, ಶೂರಪುತ್ರಾದ್ಯಾಃ– ವಸುದೇವನೇ ಮೊದಲಾದವರು, ಕೇಶವಸಂಯುತಾಃ ಸಂತಃ–ಶ್ರೀಕೃಷ್ಣ ಪರಮಾತ್ಮನಿಂದ ಸಹಿತರಾಗಿ, ಅಭಿಮನ್ಯವೇ– ಅಭಿಮನ್ಯುವಿಗೋಸ್ಕರ, ಶ್ರಾದ್ಧದಾನಾನಿ—ಶ್ರಾದ್ಧ ತರ್ಪಣ, ದಾನಗಳನ್ನು, ಬಹುಶಃ–ಬಹಳವಾಗಿ, ಚಕ್ರುಃ— ಮಾಡಿದರು. ॥೬೮॥

ಭಾವಾನುವಾದ ೫೫—೬೮

ಭಗವಾನ್ ಶ್ರೀಕೃಷ್ಣನು ದ್ವಾರಕೆಯ ದಾರಿಯಲ್ಲಿ ಬರುತ್ತಿರುವಾಗ ಅದೇ ಇನ್ನು ಸಮಾಧಿಯಿಂದ ಎಚ್ಚತ್ತ ಉದಂಕ ಮುನಿಯು ಭೇಟಿಯಾಯಿತು. ಆ ಮುನಿಗಳು ಶ್ರೀಕೃಷ್ಣಪರಮಾತ್ಮನ ಹತ್ತಿರ ಎಲ್ಲಿಂದ ಬಂದದ್ದು ? ಏನು ಸಮಾಚಾರ ? ಎಂದು ವಿಚಾರಿಸಿದಾಗ, ಶ್ರೀಕೃಷ್ಣಪರಮಾತ್ಮನು ತಾನು ಮಹಾಭಾರತ ಯುದ್ಧಮಾಗಿಸಿ ಹೊರಟ ಹಾಗು ಆ ಯುದ್ಧದಲ್ಲಿ ದುರ್ಯೋಧನಾದಿಗಳ ಮರಣದ ವಿಚಾರವನ್ನು ತಿಳಿಸಿದನು. ಅದನ್ನು ಕೇಳಿದ ಆ ಮುನಿಯು ತನ್ನ ಶಿಷ್ಯ ದುರ್ಯೋಧನನನ್ನು ಈ ಶ್ರೀಕೃಷ್ಣನೇ ಸಂಹಾರಮಾಡಿಸಿದನು ಎಂದು ಭಗವಂತನ ಮೇಲೆ ಸಿಟ್ಟಿ ಗೆದ್ದು ಶಪಿಸಲು ಉದ್ಯುಕ್ತನಾದಾಗ, ಶ್ರೀಕೃಷ್ಣಪರಮಾತ್ಮನು ತನ್ನ ಭಕ್ತನಾದ ಈ ಮುನಿಯು ನನ್ನ ವಿರೋಧ ಮಾಡಿ, ಶಪಿಸಿ, ನರಕವನ್ನು ಹೊಂದಬೇಕಾದೀತು; ಹಾಗಾಗಬಾರದು ಎಂದು ಕರುಣೆಯಿಂದ ಆ ಮುನಿಗೆ ತನ್ನ ವಿಶ್ವರೂಪವನ್ನು ತೋರಿಸಿ ಬೋಧನೆ ಮಾಡಿದಾಗ ತಿಳಿವಳಿಕೆಯನ್ನು ಪಡೆದ ಆ ಮುನಿಯು, ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪಬಟ್ಟು, ಕ್ಷಮೆಕೇಳಿ ಶ್ರೀಕೃಷ್ಣನನ್ನೇ ಮೊರೆಹೊಂದಿದನು. ಆಗ ಶ್ರೀಕೃಷ್ಣಪರಮಾತ್ಮನು ಅಭಯನೀಡಿ, ನಿನಗೆ ಅಮೃತವನ್ನು ಕೊಡಲು ಇಂದ್ರನನ್ನು ಕಳಿಸುವೆ ಎಂದು ಹೇಳಿ, ದ್ವಾರಕೆಗೆ ತೆರಳಿದನು. ಅಮೃತವನ್ನು ಒಯ್ದು ಕೊಡಲು ಇಂದ್ರನಿಗೆ ಆಜ್ಞಾಪಿಸಿದನು. ಆದರೆ ಇಂದ್ರದೇವನು ಅಮೃತವು ದೇವತೆಗಳಿಗೇ ಮೀಸಲಾದ ಆಹಾರವಾದ್ದರಿಂದ ಅದು ಬೇರೆಯವರಿಗೆ ಸಿಗುವಂತಾಗಬಾರದು ಎಂದು ನಾನು ಆ ಮುನಿಯನ್ನು ವಂಚಿಸುತ್ತೇನೆ, ಕ್ಷಮಿಸಬೇಕು ಎಂದು ಪ್ರಾರ್ಥಿಸಿದನು. ಭಗವಂತನು ದೇವತಾ ಸ್ನೇಹದಿಂದ ಹಾಗೇ ಆಗಲಿ ಎಂದು ಹೇಳಿದನು. ಇಂದ್ರದೇವನು ಚಾಂಡಾಲ ವೇಷವನ್ನು ಧರಿಸಿ ಅಮೃತ ಕಲಶವನ್ನು ತನ್ನ ಮೂತ್ರ ದ್ವಾರದ ಹತ್ತಿರ ಹಿಡಿದುಕೊಂಡು ಕೂಡಲೇ ನೀರನ್ನು ಸೃಷ್ಟಿಸಿ ಅದರಲ್ಲಿ ಬೀಳುವಂತೆ ಮಾಡಿ ಮೂತ್ರವನ್ನು ಹೊಯ್ಯುತ್ತಿರುವಂತೆ ತೋರಿಸುತ್ತಾ, ಆ ಮುನಿಯನ್ನು ಕುರಿತು ಎಲೋ ಮುನಿಯೇ, ಇಕೋ ತೆಗೆದುಕೋ, ಅಮೃತವನ್ನು; ಶ್ರೀಕೃಷ್ಣನು ನಿನಗಾಗಿ ಕಳಿಸಿರುವನು ಎಂದು ಹೇಳಿದನು. ಆಗ ಆ ಮುನಿಯು ಅದು ಮೂತ್ರವೆಂದು ಭ್ರಮಿಸಿ, ಆ ಇಂದ್ರನನ್ನು ಬೈಯುತ್ತಾ ನಡೆ ನಡೆ ಎಂದು ಹೇಳಿದನು. ಅದನ್ನು ಕೇಳಿದ ಇಂದ್ರನು ಕೂಡಲೇ ಹೊರಟು ಹೋದನು. ಅಮೃತವು ದೇವತೆಗಳಿಂದ ಬೇರೆಯವರಿಗೆ ಸಿಗುವದು ದೇವತೆಗಳಿಗೆ ಇಷ್ಟವಲ್ಲ. ಆದ್ದರಿಂದ ಮುನಿಯು ತನ್ನದೇ ಅಪರಾಧದಿಂದ(ತಪ್ಪು ತಿಳಿವಳಿಕೆಯಿಂದ)ಅಮೃತ ವಂಚಿತನಾದರೆ ಶ್ರೀಕೃಷ್ಣನು ಅದನ್ನು ಸರಿಯೆಂದೇ ಭಾವಿಸುವನು ಎಂದು ಇಂದ್ರನು ತಿಳಿದು ವಂಚಿಸಿದನು. ಶ್ರೀಕೃಷ್ಣಪರಮಾತ್ಮನು ದ್ವಾರಕೆಗೆ ಬಂದು ಎಲ್ಲ ಯಾದವರಿಂದ ಪೂಜಿತನಾಗಿ, ತಂದೆ ವಸುದೇವನಿಗೆ ಯುದ್ಧದ ಎಲ್ಲ ವೃತ್ತಾಂತವನ್ನು ತಿಳಿಸುತ್ತಾ ಅಭಿಮನ್ಯುವಿನ ಮರಣದ ಸುದ್ದಿಯನ್ನು ಮಾತ್ರ ತಿಳಿಸಲಿಲ್ಲ. ಆಗ ಸುಭದ್ರಾದೇವಿಯು ಅದೊಂದನ್ನು ಏಕೆ ಬಚ್ಚಿಟ್ಟಿರುವಿ ?

ಹೇಳಿಬಿಡು ಎಂದಾಗ ಅದನ್ನು ಹೇಳಿದನು. ಅದನ್ನು ಕೇಳಿದ ಯಾದವರೆಲ್ಲರೂ ದುಃಖಿತರಾಗಿ, ಅವನಿಗಾಗಿ ಶ್ರಾದ್ಧ ತರ್ಪಣ ದಾನಾದಿಗಳನ್ನು ಬಹಳವಾಗಿ ಮಾಡಿದರು.

ನಿವಸತ್ಯತ್ರ ವಿಶ್ವೇಶೇ ಧರ್ಮಪುತ್ರಃ ಕ್ರತೂತ್ತಮಮ್ ।
ಅಶ್ವಮೇಧಮನುಷ್ಠಾತುಂ ನಾವಿಂದದ್ ವಿತ್ತಮಂಜಸಾ ॥೬೯॥

ಅತ್ರ—ಇಲ್ಲಿ ದ್ವಾರಕೆಯಲ್ಲಿ, ವಿಶ್ವೇಶೇ—ಜಗದೊಡೆಯನಾದ ಶ್ರೀಕೃಷ್ಣಪರಮಾತ್ಮನು, ನಿವಸತಿ ಸತಿ—ವಾಸಿಸುಸುತ್ತಿರಲು, ಧರ್ಮಪುತ್ರಃ—ಧರ್ಮಜನಾದ ಯುಧಿಷ್ಠಿರನು ಕ್ರತೂತ್ತಮಂ ಅಶ್ವಮೇಧಂ—ಯಜ್ಞಗಳಲ್ಲಿ ಶ್ರೇಷ್ಠವಾದ ಅಶ್ವಮೇಧವನ್ನು, ಅಂಜಸಾ ಅನುಷ್ಠಾತುಂ—ಚೆನ್ನಾಗಿ ಮಾಡಲು, ವಿತ್ತಂ—ಹಣವನ್ನು ನ ಆವಿಂದತ್—ಹೊಂದಿರಲಿಲ್ಲ (ಧನವನ್ನು ಹೇಗೆ ಸಂಪಾದಿಸುವದು ಎಂದು ತಿಳಿಯದಾಗಿತ್ತು) ॥೬೯॥

ಹತಶೇಷಾತ್ ಕ್ಷತ್ರಸಂಘಾತ್ ಕರಂ ನೈಚ್ಛದ್ ದಯಾಪರಃ ।
ನಚ ಮಧ್ಯಮಕಲ್ಪೇನ ಯಷ್ಟುಂ ತಸ್ಯ ಮನೋಗತಮ್ ॥೭೦॥

ದಯಾಪರಃ - ದಯಾಳುವಾದ, ಧರ್ಮರಾಜನು ಹತಶೇಷಾತ್‌ಕ್ಷತ್ರಸಂಘಾತ್ – ಸತ್ತವರಿಗಿಂತ ಬೇರೆಯಾದ, ಉಳಿದಂಥ ರಾಜರಿಂದ, ಕರಂ – ಕರವನ್ನು, ನ ಐಚ್ಛತ್ – ತೆಗೆದುಕೊಳ್ಳಲು ಇಚ್ಛಿಸಲಿಲ್ಲ. ಮಧ್ಯಮಕಲ್ಪೇನ – ಇದ್ದದ್ದುಡ್ಡಿನಿಂದ ಮಧ್ಯಮವಾಗಿ, ಯಷ್ಟುಂ ಯಜ್ಞವನ್ನು ಮಾಡಲು, ತಸ್ಯ ವ ನೋಗತಂ ನಚ – ಅವನ ಮನಸ್ಸಿಲ್ಲಿರಲಿಲ್ಲ. ॥೭೦॥

ವಿಜ್ಞಾಯ ನಿತ್ಯವಿಜ್ಞಾತನಿಖಿಲೋ ಬಾದರಾಯಣಃ ।
ಆವಿರ್ಭೂತೋ ಹಿಮವತಃ ಶೃಂಗಂ ಯತ್ರಾಭಿಸಂಗತಮ್ ॥೭೧॥

ಮೇರುಶೃಂಗೇಣ ಯತ್ರೈವ ವಿಷ್ಣುಃ ಸ್ವಾತ್ಮಾನಮವ್ಯಯಮ್ ।
ಲೋಕಸ್ಯ ಸಂಗ್ರಹಾಯೇಜೇ ಕರ್ಮಬಂಧೋಜ್ಝಿತೋಽಪಿ ಸನ್ ॥೭೨॥

ಶಂಕರಾದ್ಯಾಃ ಸುರಾಃ ಯತ್ರ ಮರುತ್ತಶ್ಚೀಜಿರೇ ಹರಿಮ್ ।
ಪಾನವೋ ವೃಷಪರ್ವಾ ಚ ತತ್ರಾಸ್ತಿ ಧನಮುಷ್ಣಯುಮ್ ॥೭೩॥

ತಚ್ಛಂಕರಶರೀರಸ್ಥಂ ಜಾನುದಗ್ನ್ಯಂ ಹರಿಂ ಪರಮ್ ।
ಇಷ್ಟ್ವೈವಾನುಜ್ಞಯಾ ತಸ್ಯ ಸ್ವೀಕೃತ್ಯಯಜ ತೇನ ಚ ।
ಇತ್ಯಾಹ ವ್ಯಾಸವಾಕ್ಯಾನು ಭೀಮೋಽಪ್ಯಾಹ ನೃಪೋತ್ತಮಮ್ ॥೭೪॥

ನಿತ್ಯವಿಜ್ಞಾತನಿಖಿಲಃ— ಯಾವಾಗಲೂ ಎಲ್ಲವನ್ನು ತಿಳಿದಂಥ, ಬಾದರಾಯಣಃ— ಶ್ರೀವೇದವ್ಯಾಸದೇವರು, ವಿಜ್ಞಾಯ—ಇದೆಲ್ಲವನ್ನು ತಿಳಿದು, ಆವಿರ್ಭೂತಃ— ಪ್ರಕಟರಾದರು, (ಹಾಗು ಧರ್ಮರಾಜನನ್ನು ಕುರಿತು) ಯತ್ರ—ಎಲ್ಲಿ, ಹಿಮವತಃ ಶೃಂಗಾ—ಹಿಮವತ್ಪರ್ವತದ ಶಿಖರವು, ಯತ್ರ—ಎಲ್ಲಿ, ಮೇರುಶೃಂಗೇಣ—ಮೇರು ಪರ್ವತದ ಶಿಖರದಿಂದ, ಅಭಿಸಂಗತಂ—ಮಿಲಿತವಾಗಿದೆಯೋ, ತತ್ರ ಏವ—ಅಲ್ಲಿಯೇ, ವಿಷ್ಣುಃ—ಶ್ರೀಹರಿಯು, ಕರ್ಮ ಬಂಧೋಜ್ಝಿತಃ ಸನ್ ಅಪಿ—ಕರ್ಮ ಬಂಧನದಿಂದ ದೂರನಾದರೂ ಕೂಡ, ಲೋಕಸ್ಯ ಸಂಗ್ರಾಹಾಯ—ಲೋಕ

ಸಂಗ್ರಹಕ್ಕಾಗಿ, ಲೋಕಶಿಕ್ಷಣಕ್ಕಾಗಿ, ಅವ್ಯಯಂ ಸ್ವಾತ್ಮಾನಂ— ನಾಶರಹಿತನಾದ, ತನ್ನನ್ನೇ ಈಜೇ—ಯಜ್ಞದದ್ವಾರಾ ಆರಾಧಿಸಿರುವನೋ, ಚ— ಮತ್ತು, ಶಂಕರಾದ್ಯಾಃ ಸುರಾಃ ಚ—ರುದ್ರದೇವರೇ ಮೊದಲಾದ ದೇವತೆಗಳೂಕೂಡ, ಚ—ಮತ್ತು, ಮರುತ್ತಃ—ಮರುತ್ತರಾಜನು, ದಾನವಃ ವೃಷಪರ್ವಾ ಚ—ರಾಕ್ಷಸರಾಜನಾದ ವೃಷಪರ್ವನೂ ಕೂಡ, ಯತ್ರ—ಎಲ್ಲಿ, ಹರಿಂ—ಶ್ರೀಹರಿಯನ್ನು ಈಜಿರೇ—ಆರಾದಿಸಿರುವರೋ, ತತ್ರ—ಅಲ್ಲಿ, ಅಕ್ಷಯಂ ಧನಂ ಅಸ್ತಿ—ಅಲ್ಲಿ ತೀರಲಾರದಷ್ಟು ಧನವಿದೆ, ಶಂಕರಶರೀರಸ್ಥಂ—ರುದ್ರದೇವರದೇಹದಲ್ಲಿ ಅಂತರ್ಯಾಮಿಯಾಗಿರುವ ಪರಂ—ಸರ್ವೋತ್ತಮನಾದ, ಹರಿಂ—ಶ್ರೀಹರಿಯ ಅವತಾರರಾದ, ಜಾಮದ್ಯಗ್ನಂ—ಶ್ರೀಪರುಶುರಾಮದೇವರನ್ನ ಇಷ್ಟ್ವಾ—ಆರಾಧಿಸಿ, ತಸ್ಯಾನುಜ್ಞಯಾ ಏವ—ಅವರ ಅಪ್ಪಣೆಯಿಂದಲೇ, ತತ್—ಆ ದುಡ್ಡನ್ನು, ಸ್ವೀಕೃತ್ಯ—ತೆಗೆದುಕೊಂಡು, ತೇನ ಚ—ಆ ದುಡ್ಡಿನಿಂದಲೇ, ಯಜ—ಯಜ್ಞಮಾಡು, ಇತಿ—ಎಂದು, ಆಹ—ಹೇಳಿದರು ವ್ಯಾಸವಾಕ್ಯಾನು—ಶ್ರೀವ್ಯಾಸದೇವರಮಾತಿನ ನಂತರ, ಭೀಮಃ ಅಪಿ—ಭೀಮಸೇನದೇವರೂಕೂಡ, ನೃಪೋತ್ತಮಂ —ಶ್ರೀಧರ್ಮರಾಜನನ್ನು ಕುರಿತು, ಆಹ—ಹೇಳಿದರು ॥೭೧-೭೨-೭೩-೭೪॥

ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯೋಽಖಿಲೇಶ್ವರಃ ।
ಸ ಶಂಕರಶರೀರಸ್ಥೋ ಯಜ್ಞೋಚ್ಛಿಷ್ಟಧನಾಧಿಪಃ ॥೭೫॥

ಅಖಿಲೇಶ್ವರಃ—ಎಲ್ಲಕ್ಕೂ ಒಡೆಯನಾದ, ಜಾಮದಗ್ನ್ಯಃ ವಿಷ್ಣುಃ—ಪರಶುರಾಮ ಸ್ವರೂಪಿಯಾದ ಶ್ರೀಹರಿಯು, ಧನಸ್ಯ ದೇವತಾ—ಧನಕ್ಕೆ ನಿಯಾಮಕ ದೇವತೆಯು. ಸಃ—ಆ ಶ್ರೀಹರಿಯೇ, ಶಂಕರ ಶರೀರಸ್ಥಃಸನ್ —ರುದ್ರದೇವರ ದೇಹದಲ್ಲಿ ಅಂತರ್ಯಾಮಿಯಾಗಿರುವವನಾಗಿ, ಯಜ್ಞೋಚ್ಛಿಷ್ಟಧನಾಧಿಪಃ—ಯಜ್ಞದಲ್ಲಿ ಉಳಿದ ಧನದ ನಿಯಾಮಕನು. ॥೭೫॥

ತೇನೈವ ವಿಷ್ಣುನಾ ದತ್ತಮರ್ಜುನಾಯಾಸ್ತ್ರಮುತ್ತಮಮ್ ।
ಕಾರ್ಯಾಣ್ಯನ್ಯಾನಿ ಚಾಸ್ಮಾಕಂ ಕೃತಾನ್ಯೇತೇನ ವಿಷ್ಣುನಾ ॥೭೬॥

ತೇನ ವಿಷ್ಣುನಾ ಏವ—ಆ ರುದ್ರಾಂತರ್ಯಾಮಿ ಶ್ರೀಹರಿಯಿಂದಲೇ, ಉತ್ತಮಂ ಅಸ್ತ್ರಂ—ಶ್ರೇಷ್ಠವಾದ ಪಾಶುಪತಾಸ್ತ್ರವು, ಅರ್ಜುನಾಯ—ಅರ್ಜುನನಿಗೆ, ದತ್ತಂ—ಕೊಡಲ್ಪಟ್ಟಿದೆ. ಅಸ್ಮಾಕಂ—ನಮ್ಮ, ಅನ್ಯಾನಿ ಕಾರ್ಯಾಣಿ— ಬೇರೆ ಕಾರ್ಯಗಳೂಕೂಡ, ಏತೇನ ವಿಷ್ಣುನಾ—ಈ ಶ್ರೀಕೃಷ್ಣರೂಪಿ ಶ್ರೀಹರಿಯಿಂದಲೇ, ಕೃತಾನಿ—ಮಾಡಲ್ಪಟ್ಟಿವೆ ॥೭೬॥

ಸ ಬ್ರಹ್ಮರುದ್ರಶಕ್ರಾದಿ ಪದದಾತಾಽಖಿಲಪ್ರದಃ ।
ಸ್ವತಂತ್ರಃ ಪರತಂತ್ರಾಂಸ್ತಾನಾವರ್ತಯತಿ ಚೇಚ್ಛಯಾ ॥೭೭॥

ಸಃ—ಆ ಶ್ರೀಹರಿಯೇ, ಬ್ರಹ್ಮರುದ್ರಶಕ್ರಾದಿಪದದಾತಾ—ಬ್ರಹ್ಮರುದ್ರ,ಇಂದ್ರ ಮೊದಲಾದ ಪದವಿಗಳನ್ನು ಯೋಗ್ಯರಿಗೆ ಕೊಡತಕ್ಕವನು. ಅಖಿಲಪ್ರದಃ—ಎಲ್ಲವನ್ನು ಕೊಡುವವನು ಇವನೇ, ಸ್ವತಂತ್ರಃ—ಸ್ವತಂತ್ರನಿವನೇ, ಪರತಂತ್ರಾನ್ತಾನ್—ಪರತಂತ್ರರಾದ ಬ್ರಹ್ಮಾದಿ ಜೀವರನ್ನು, ಇಚ್ಛಯಾ—ತನ್ನ ಇಚ್ಛೆಯಂತೆ- ಆವರ್ತಯತಿ—ನಡೆಸುತ್ತಾನೆ. ॥೭೭॥

ಪ್ರಿಯೋಽಸ್ಮಾಕಂ ಪ್ರಿಯಾಸ್ತಸ್ಯ ಸರ್ವದೈವ ವಯಂ ನೃಪ ।
ಅತಸ್ತದಭ್ಯನುಜ್ಞಾತಧನೇನೈವ ಯಜಾಮಹೇ ॥೭೮॥

(ಆ ಶ್ರೀಕೃಷ್ಣನು) ಅಸ್ಮಾಕಂ ಸರ್ವದಾ ಪ್ರಿಯಃ—ನಮಗೆ ಯಾವಾಗಲೂ ಪ್ರಿಯನು, ವಯಂ— ನಾವು, ಸರ್ವದಾ—ಯಾವಾಗಲೂ, ತಸ್ಯ ಪ್ರಿಯಾಃ—ಅವನಿಗೆ ಪ್ರಿಯರು ಅತಃ—ಆದ್ದರಿಂದ (ಯಾವಾಗಲೂ ನಮ್ಮ ಹಿತವನ್ನು ಅವನೇ ಮಾಡುವವನಾದ್ದರಿಂದ) ತದಭ್ಯನುಜ್ಞಾತಧನೇನ ಏವ—ಆ ಭಗವಂತನು ಆದೇಶಿಸಿದ ಧನದಿಂದಲೇ, ಯಜಾಮಹೇ—ಯಜ್ಞವನ್ನು ಮಾಡೋಣ. ॥೭೮॥

ಸೋಽಯಂ ಪಿತಾಮಹೋಽಸ್ಮಾಕಂ ವ್ಯಾಸಸ್ತನ್ನಃ ಪ್ರದಾಸ್ಯತಿ ।
ಇತ್ಯುಕ್ತ್ವಾ ತಂ ಪುರಸ್ಕೃತ್ಯ ಕೃಷ್ಣದ್ವೈಪಾಯನಂ ಯಯುಃ ॥೭೯॥

ಅಸ್ಮಾಕಂ ಪಿತಾಮಹಃ—ನಮ್ಮ ಅಜ್ಜನಾದ, ಸಃ ಅಯಂ ವ್ಯಾಸಃ—ಆ ಶ್ರೀಹರಿಯ ಅವತಾರರಾದ ಈ ವೇದವ್ಯಾಸದೇವರು, ನಃ—ನಮಗೆ, ತತ್—ಮೇರು ಹಿಮಾಲಯ ಸಂಗಮದಲ್ಲಿರುವ ಧನವನ್ನು, ಪ್ರದಾಸ್ಯತಿ—ಕೊಡುವರು' ಇತಿ—ಎಂದು, ಉಕ್ತ್ವಾ – ಹೇಳಿ, ತಂ ಕೃಷ್ಣದ್ವೈಪಾಯನಂ—ಆ ವೇದವ್ಯಾಸದೇವರನ್ನು, ಪುರಸ್ಕೃತ್ಯ—ಮುಂದೆ ಮಾಡಿಕೊಂಡು, ಯಯುಃ—ಪಾಂಡವರು ಹೊರಟರು. ॥೭೯॥

ಧನಂ ಕೃಷ್ಣಃ ಸಮಾದಾಯ ಸಮಂತಾಚ್ಛತಯೋಜನಮ್ ।
ದದೌ ತೇಷಾಂ ತೇಽಪಿ ಚೋಹುರ್ಹಸ್ತ್ಯಶ್ವೋಷ್ಟ್ರಶ್ವನರಾದಿಭಿಃ ॥೮೦॥

ಕೃಷ್ಣಃ – ಶ್ರೀ ವಾಸಿಷ್ಠ ಕೃಷ್ಣರು (ಶ್ರೀವೇದವ್ಯಾಸದೇವರು), ಸಮಂತಾತ್ ಶತಯೋಜನಂ—ಸುತ್ತಲೂ ಒಂದುನೂರು ಯೋಜನ ವಿಸ್ತಾರವುಳ್ಳ ಪ್ರದೇಶದಷ್ಟು, ಧನಂ—ಹಣವನ್ನು, ಸಮಾದಾಯ – ತೆಗೆದು ಕೊಂಡು ಬಂದು, ತೇಷಾಂ – (ಧರ್ಮರಾಜನೊಬ್ಬನನ್ನು ಬಿಟ್ಟು) ಆ ಪಾಂಡವರಿಗೆ, ದದೌ–ಕೊಟ್ಟರು. ತೇ ಅಪಿ – ಆ ಪಾಂಡವರೂ ಕೂಡ, ಹಸ್ತ್ಯಶ್ವೋಷ್ಟ್ರಶ್ವನರಾದಿಭಿಃ - ಆನೆ, ಒಂಟೆ, ಕುದುರೆ, ಮನುಷ್ಯ ಮೊದಲಾದವರಿಂದ–ಊಹುಃ—ಹೊರಿಸಿ ಒಯ್ದರು. ॥೮೦॥

ಯುಧಿಷ್ಠಿರಮೃತೇ ಸರ್ವೇ ಭೀಮಸೇನಪುರೋಗಮಾಃ ।
ಯಜ್ಞಾರ್ಥಮೂಹಿರೇ ಭೂರಿ ಸ್ವರ್ಣಮುದ್ಯದ್ರವಿಪ್ರಭಮ್ ॥೮೧॥

ಯುಧಿಷ್ಠಿರಂ ಋತೇ ಧರ್ಮರಾಜನೊಬ್ಬನನ್ನು ಬಿಟ್ಟು, ಭೀಮಪುರೋಗಮಾಃ ಸರ್ವೇ – ಭೀಮ ಸೇನದೇವರೇ ಮೊದಲಾದ ಎಲ್ಲ ಪಾಂಡವರೂ, ಯಜ್ಞಾರ್ಥಂ – ಯಜ್ಞಕ್ಕಾಗಿ ಉದ್ಯದ್ರವಿಪ್ರಭಂ – ಅದೇ ಉದಿತನಾಗುತ್ತಿರುವ ಸೂರ್ಯನಂತೆ ತೇಜಸ್ಸುಳ್ಳ, ಭೂರಿ – ಬಹಳವಾದ, ಸ್ವರ್ಣಂ ಭಂಗಾರವನ್ನು, ಊಹಿರೇ – ಹೊತ್ತು ತಂದರು. ॥೮೧॥

ತದೈವ ವಾಸುದೇವೋಽಪಿ ಸಭಾರ್ಯಃ ಸಹ ಭದ್ರಯಾ ।
ಆಗಚ್ಛನ್ ಹಸ್ತಿನಪುರಂ ಪಥ್ಯುದಂಕೇನ ಪೂಜಿತಃ ॥೮೨॥

ತದಾಪಿವ – ಅದೇ ಸಮಯದಲ್ಲಿ, ಸಭಾರ್ಯಃ ವಾಸುದೇವಃ ಅಪಿ – ರುಕ್ಮಿಣ್ಯಾದಿ ಪತ್ನಿಯರಿಂದ ಸಹಿತನಾವ ಶ್ರೀಕೃಷ್ಣಪರಮಾತ್ಮನೂ ಕೂಡ, ಭದ್ರಯಾ ಸಹ – ಸುಭದ್ರೆಯಿಂದ ಸಹಿತನಾಗಿ, ಹಸ್ತಿನಪುರಂ – ಹಸ್ತಿನಾವತಿಗೆ, ಆಗಚ್ಛನ್‌ಸನ್ – ಬರುವವನಾಗಿ, ಪಥಿ - ಮಾರ್ಗದಲ್ಲಿ, ಉದಂಕೇನ ಪೂಜಿತಃ - ಉದಂಕ ಮಹರ್ಷಿಯಿಂದ ಪೂಜಿಸಲ್ಪಟ್ಟನು. ॥೮೨॥

ತತ್ಕಾಮವರ್ಷಿಣೋ ಮೇಘಾಂಸ್ತಸ್ಯ ವತ್ಸೋದಕಾರ್ಥಿನಃ ।
ಸಫಲಂ ಸ್ವವರಂ ಕೃತ್ವಾ ಜಗಾಮ ಗಜಸಾಹ್ವಯಮ್ ॥೮೩॥

ಉದಕಾರ್ಥಿನಃ – ನೀರಿನ ಅಪೇಕ್ಷೆಯುಳ್ಳ, ತಸ್ಯ ಆ ಉದಂಕರಿಗೆ, ತತ್ಕಾಮಪರ್ಷಿಣಃ – ಅವರ ಅಪೇಕ್ಷಿತ ನೀರನ್ನು ಸುರಿಸತಕ್ಕ, ಮೇಘಾನ್ ಮೇಘಗಳನ್ನು, ದತ್ವಾ – ಕೊಟ್ಟು, ಸ್ವವರಂ ತಾನು ಹಿಂದೆ ದ್ವಾರಕೆಗೆ ಹೋಗುವಾಗ ಕೊಟ್ಟ ವರವ (ಮಾತ)ನ್ನು (ಅಮೃತವನ್ನು ಕಳಿಸಿ ಕೊಡುವೆ ಎಂಬ ಮಾತನ್ನು)' ಸಫಲಂ – (ಅಮೃತ ಎಂದರೆ ನೀರು ಎಂಬ ಅರ್ಥವಿದ್ದದ್ದರಿಂದ) ಸಫಲವನ್ನಾಗಿ, ಕೃತ್ವಾ – ಮಾಡಿ, ಗಜಸಾಹ್ವಯಂ– ಹಸ್ತಿನಾವತಿಗೆ, ಜಗಾಮ ಹೊರಟನು. ॥೮೩॥

ಭಾವಾನುವಾದ—೬೯—೮೩

ಹೀಗೆ ಶ್ರೀಕೃಷ್ಣಪರಮಾತ್ಮನು ಇರುವಾಗ ಆ ಕಡೆಗೆ ಧರ್ಮರಾಜನಿಗೆ ಭೀಷ್ಮಾಚಾರ್ಯರ ಮಾತಿನಂತೆ ಅಶ್ವಮೇಧಯಾಗವನ್ನು ಮಾಡುವ ಇಚ್ಛೆಯಾಯಿತು. ಆದರೆ ಅದಕ್ಕಾಗಿ ದುಡ್ಡಿಲ್ಲ ಎಂಬ ವಿಚಾರದಲ್ಲಿದ್ದನು. ಉಳಿದ ರಾಜರಿಂದ ಕಪ್ಪ ಕಾಣಿಕೆಯನ್ನು ಸಂಗ್ರಹಿಸಿ ಯಜ್ಞ ಮಾಡಲೂ ಮನಸ್ಸಿಲ್ಲ, ಇದ್ದ ದುಡ್ಡಿನಲ್ಲೇ ಸಾಧಾರಣ ರೀತಿ (ಮಧ್ಯಮ ರೀತಿ)ಯಲ್ಲಿ ಮಾಡಲೂ ಮನಸ್ಸಿರಲಿಲ್ಲ. ಈ ಗೊಂದಲದಲ್ಲಿ ಧರ್ಮರಾಜನಿರುವಾಗ ಎಲ್ಲ ಬಲ್ಲ ಶ್ರೀವೇದವ್ಯಾಸದೇವರು ಪ್ರಕಟರಾಗಿ, ಹಿಮವತ್ಪರ್ವತದ ಶೃಂಗವು ಮೇರುಪರ್ವತದ ಶೃಂಗದ ಜೊತೆಗೆ ಸೇರುವ ಸ್ಥಳದಲ್ಲಿ ಹಿಂದೆ ಶ್ರೀಮನ್ನಾರಾಯಣ ದೇವರು ಲೋಕ ಶಿಕ್ಷಣಕ್ಕಾಗಿ (ತನ್ನನ್ನು ಉದ್ದೇಶಿಸಿಯೇ) ಯಜ್ಞ ಮಾಡಿರುವನು. ರುದ್ರಾದಿದೇವತೆಗಳು, ಮರುತ್ತ ರಾಜನು, ವೃಷಪರ್ವರಾಜನು ಇವರೂ ಕೂಡ ಅಲ್ಲಿಯೇ ಯಜ್ಞ ಮಾಡಿರುವರು. ಯಜ್ಞ ಮಾಡಿದ ನಂತರ ಉಳಿದ ಧನವನ್ನು ಅವರೆಲ್ಲರೂ ಅಲ್ಲಿಯೇ ಬಿಟ್ಟು ಹೋಗಿರುವರು. ಆ ಅಕ್ಷಯ ಧನವು ಅಲ್ಲಿದೆ. ಯಜ್ಞಶೇಷಧನದ ಅಭಿಮಾನಿಗಳು ಶ್ರೀರುದ್ರದೇವರು. ಅವರ ಅಂತರ್ಯಾಮಿಯಾದ ಶ್ರೀಪರಶುರಾಮ ದೇವರು ನಿಯಾಮಕರು. ಆದ್ದರಿಂದ ರುದ್ರಾಂತರ್ಯಾಮಿ ಪರಶುರಾಮದೇವರನ್ನು ಆರಾಧಿಸಿ ಅವರ ಅನುಜ್ಞೆಯನ್ನು ಪಡೆದು ಆ ಧನವನ್ನು ತೆಗೆದುಕೊಂಡು ಬಂದು ಅದರಿಂದ ಯಜ್ಞವನ್ನು ನಡೆಸು" ಎಂದು ಹೇಳಿದರು. ಭೀಮಸೇನ ದೇವರೂ ಕೂಡ ತಮ್ಮ ಅಣ್ಣನನ್ನು ಕುರಿತು ಶ್ರೀವೇದವ್ಯಾಸ ದೇವರ ಮಾತನ್ನೇ ತಿಳಿಸಿ "ಶ್ರೀಹರಿಯೇ ನಮಗಾಗಲಿ, ಬ್ರಹ್ಮರುದ್ರಾದಿ ಸಕಲ ದೇವತೆಗಳಿಗಾಗಲಿ ಸರ್ವವನ್ನು ಕೊಡುವನು, ಅವನೇ ಸ್ವತಂತ್ರನು, ಉಳಿದವರೆಲ್ಲರೂ ಪರತಂತ್ರರು. ಅವರೆಲ್ಲವನ್ನು ಪ್ರೇರಿಸುವವನು ಅವನೇ. ಅವನೇ ನಮಗೆ ಅತಿ ಪ್ರಿಯನು. ಅವನಿಗೆ ನಾವು ಪ್ರಿಯರು. ನಮ್ಮ ಎಲ್ಲ ಕಾರ್ಯಗಳು ಉದಾಹರಣೆಗಾಗಿ ನಮ್ಮ ತಮ್ಮ ಅರ್ಜುನನಿಗೆ ಪಾಶುಪತಾಸ್ತ್ರಪ್ರಾಪ್ತಿ ಇತ್ಯಾದಿ ಇತರ ಕಾರ್ಯಗಳೆಲ್ಲವೂ ಅವನ ಅನುಗ್ರಹದಿಂದಲೇ ಆಗಿವೆ. ಆದ್ದರಿಂದ ಆ ಶ್ರೀಹರಿಯಿಂದ ಅದೇಶಿಸಲ್ಪಟ್ಟಂತೆ ಧನವನ್ನು ತಂದು ಅದರಿಂದಲೇ ಯಜ್ಞವನ್ನು ಮಾಡುವಾ. ನಮ್ಮ ಅಜ್ಜನಾದ ಈ ವೇದವ್ಯಾಸ ದೇವರೇ ನಮಗೆ ಆ ಧನವನ್ನು ಕೊಡುವರು." ಎಂದು ಹೇಳಿದರು. ಎಲ್ಲರೂ ವೇದವ್ಯಾಸ ದೇವರನ್ನು ಮುಂದಿಟ್ಟುಕೊಂಡು ಹೋದರು. ಶ್ರೀವ್ಯಾಸದೇವರು ಆ ಸ್ಥಳದಿಂದ ಪರ್ವತ ಪ್ರಾಯವಾದ ಧನರಾಶಿಯನ್ನು ಕೊಟ್ಟರು. ಧರ್ಮರಾಜನೊಬ್ಬನನ್ನು ಬಿಟ್ಟು ಉಳಿದ ನಾಲ್ಕೂ ಪಾಂಡವರು ಆನೆ, ಒಂಟೆ, ಕುದುರೆ, ಮನುಷ್ಯರು ಮೊದಲಾದವರ ಮೇಲೆ ಆ ಧನವನ್ನು ಹೊರಿಸಿಕೊಂಡು ಬಂದರು. ಇವರು ಎಲ್ಲಿರೂ ಬರುವ ಸಮಯಕ್ಕೆ ಶ್ರೀಕೃಷ್ಣಪರಮಾತ್ಮನೂ ತಂಗಿ ಸುಭದ್ರೆಯಿಂದ, ತನ್ನ ಪತ್ನಿಯರಿಂದ ಸಹಿತನಾಗಿ ಅಶ್ವಮೇಧ ಯಾಗಕ್ಕಾಗಿ ಬರುತ್ತಿರುವಾಗ ದಾರಿಯಲ್ಲಿ ಪುನಃ ಉದಂಕಋಷಿಗಳು ಸಿಕ್ಕರು, ಆಗ ಅವರು ಶ್ರೀಕೃಷ್ಣಪರಮಾತ್ಮನನ್ನು ಭಕ್ತಿಯಿಂದ ಪೂಜಿಸಿದರು. ಆಗ ಅವರಿಗೆ ತುಂಬಾ ನೀರಡಿಕೆಯೂ ಆಗಿತ್ತು. ಅವರಿಗೆ ಅಮೃತದಂಥ ನೀರನ್ನು ಸುರಿಸತಕ್ಕ ಮೋಡಗಳನ್ನು ಕೊಟ್ಟು 'ಅಮೃತವನ್ನು ಕಳಿಸುತ್ತೇನೆ' ಎಂದು ಹಿಂದೆ ತಾನು ಹೇಳಿದ ಮಾತನ್ನು ಸತ್ಯ ಮಾಡಿಕೊಂಡು ಹಸ್ತಿನಾವತಿಗೆ ಹೋದನು.

ವಿಶೇಷಾರ್ಥ:—ಅಮೃತ ಶಬ್ದಕ್ಕೆ ನೀರು ಎಂದೂ ಅರ್ಥವಿದೆಯಾದ್ದರಿಂದ ಆ ಅರ್ಥವನ್ನಿಟ್ಟುಕೊಂಡೇ ಶ್ರೀಹರಿಯು ಆಗ ಹೇಳಿದ್ದರಿಂದ ಆ ಪ್ರಕಾರ ಈಗ ಅದನ್ನು ಕೊಟ್ಟಿದ್ದರಿಂದ ಅವನ ಮಾತು ಸತ್ಯವೇ ಆಯಿತು. ಮೋಡಗಳಿಗೆ ಅಭಿಮಾನಿಯು ಇಂದ್ರನಾದ್ದರಿಂದ ಇಂದ್ರನ ಮೂಲಕ ಕೊಡುತ್ತೇನೆ ಎನ್ನುವ ಮಾತೂ ಸತ್ಯವೇ ಆಯಿತು.

ಆಸನ್ನೇಷ್ವೇವ ಪಾರ್ಥೇಷು ವ್ಯಾಸೇ ಚ ಪುರುಷೋತ್ತಮೇ ।
ಪ್ರವಿವೇಶ ಪುರಂ ಕೃಷ್ಣಸ್ತದಾऽಸೂತೋತ್ತರಾ ಮೃತಮ್ ॥೮೪॥

ಪಾರ್ಥೇಷು – ಪಾಂಡವರು, ಆಸನ್ನೇಷು ಸತ್ಸುವಿವ – ಬರುತ್ತಿರಲಾಗಿಯೇ, ಪುರುಷೋತ್ತಮೇ ವ್ಯಾಸೇ ಚ – ಪುರುಷೋತ್ತಮರಾದ ಶ್ರೀವೇದವ್ಯಾಸದೇವರೂ ಕೂಡ ಬರುತ್ತಿರಲು, ಕೃಷ್ಣಃ ಶ್ರೀಯಾದವಕೃಷ್ಣನೂ ಕೂಡ – ಪುರಂ –ಪಟ್ಟಣವನ್ನು, ಪ್ರವಿವೇಶ – ಪ್ರವೇಶಿಸಿದನು. ತದಾ – ಆಗಲೇ, ಉತ್ತರಾ – ಉತ್ತರಾದೇವಿಯು, ಮೃತಂ – ಸತ್ತಮಗು (ಪರೀಕ್ಷಿತ)ವನ್ನು, ಅಸೂತ – ಪ್ರಸವಿಸಿದಳು. ॥೮೪॥

ದ್ರೌಣ್ಯಸ್ತ್ರಸೂದಿತಂ ಬಾಲಂ ದೃಷ್ಟ್ವಾ ಕುಂತ್ಯಾದಿಕಾಃ ಸ್ತ್ರೀಯಃ ।
ಶರಣ್ಯಂ ಶರಣಂ ಜಗ್ಮುರ್ವಾಸುದೇವಂ ಜಗತ್ಪತಿಮ್ ॥೮೫॥

ದ್ರೌಣ್ಯಸ್ತ್ರಸೂದಿತಂ – ಅಶ್ವತ್ಥಾಮಾಚಾರ್ಯರ ಅಸ್ತ್ರದಿಂದ ಮೃತವಾದ, ಬಾಲಂ–ಆ ಕೂಸನ್ನು,ದೃಷ್ಟ್ವಾ–ನೋಡಿ, ಕುಂತ್ಯಾದಿಕಾಃ ಸ್ತ್ರಿಯಃ – ಕುಂತೀದೇವಿಯೇ ಮೊದಲಾದ ಸ್ತ್ರೀಯರು, ಶರಣ್ಯಂ – ರಕ್ಷಣೆಗಾಗಿ ಹೊಂದಲರ್ಹನಾದ ಜಗತ್ಪತಿಂ – ಜಗದ್ರಕ್ಷಕನಾದ, ವಾಸುದೇವಂ - ಶ್ರೀಕೃಷ್ಣಪರಮಾತ್ಮನನ್ನು, ಶರಣಂ ಜಗ್ಮುಃ - ಮೊರೆ ಹೊಕ್ಕರು. ॥೮೫॥

ಪ್ರತ್ಯಕ್ಷಮಾತ್ಮನಾ ಗರ್ಭೇ ರಕ್ಷಿತಂ ಪ್ರಸವೇ ಹತಮ್ ।
ಪುನರುಜ್ಜೀವ ಯಾಮಾಸ ಕೇಶವಃ ಪಾರ್ಥತಂತವೇ ॥೮೬॥

ಕೇಶವಃ – ಶ್ರೀಕೃಷ್ಣನು, ಗರ್ಭೇ - ಉತ್ತರೆಯ ಗರ್ಭದಲ್ಲಿ ಪ್ರತ್ಯಕ್ಷಂ ಆತ್ಮನಾ ರಕ್ಷಿತಂ—ಪ್ರತ್ಯಕ್ಷವಾಗಿ ತನ್ನಿಂದ ರಕ್ಷಿಸಲ್ಪಟ್ಟ, ಪ್ರಸವೇ – ಪ್ರಸವಕಾಲದಲ್ಲಿ, ಹತಮ್ – ಸಂಹರಿಸಲ್ಪಟ್ಟ ಆ ಮಗುವನ್ನು, ಪಾರ್ಥತಂತವೇ–ಪಾಂಡವರ ಸಂತತಿಯುಳಿಯುವಂತಾಗಿ, ಪುನಃ – ಮತ್ತೆ, ಉಜ್ಜೀವಯಾಮಾಸ–ಬದುಕಿಸಿದನು. ॥೮೬॥

ತದೈವ ವಿವಿಶುಃ ಪಾರ್ಥಾ ಸ್ಸ ಕೃಷ್ಣಾಃ ಸಧನೋಚ್ಚಯಾಃ ।
ಸರ್ವೇಮುಮುದಿರೇ ದೃಷ್ಟ್ವಾ ಪೌತ್ರಂ ಕೇಶವರಕ್ಷಿತ್ಮ್ ॥೮೭॥

ತದಾ ಏವ - ಆ ಸಮಯದಲ್ಲಿಯೇ, ಸಧನೋಚ್ಚಯಾಃ - ಧನದ ರಾಶಿಯಿಂದ ಸಹಿತರಾದ, ಸಕೃಷ್ಣಾಃ – ಶ್ರೀವೇದವ್ಯಾಸದೇವರಿಂದ (ದ್ರೌಪದಿಯಿಂದ) ಸಹಿತರಾದ ಸರ್ವೇಪಾರ್ಥಾಃ – ಎಲ್ಲ ಪಾಂಡವರು, ವಿವಿಶುಃ– –ಪ್ರವೇಶಿಸಿದರು, ಕೇಶವರಕ್ಷಿತಂ – ಶ್ರೀಕೃಷ್ಣನಿಂದ ರಕ್ಷಿಸಲ್ಪಟ್ಟ, ಪೌತ್ರಂ ಮೊಮ್ಮಗನನ್ನು, ದೃಷ್ಟ್ವಾ – ನೋಡಿ, ಮುಮುದಿರೇ – ಸಂತೋಷಪಟ್ಟರು. ॥೮೭॥

ದದೌ ದಾನಾನಿ ಬಹುಶೋ ಧರ್ಮಪುತ್ರೋ ಯುಧಿಷ್ಠಿರಃ ।
ಪೌತ್ರಜನ್ಮನಿ ಹೃಷ್ಟಾತ್ಮಾ ವಾಸುದೇವಂ ನನಾಮ ಚ ॥೮೮॥

ಪೌತ್ರಜನ್ಮನಿ–ಮೊಮ್ಮಗನ ಜನ್ಮವಾದಾಗ, ಹೃಷ್ಟಾತ್ಮಾ – ಸಂತುಷ್ಟನಾದ ಧರ್ಮಪುತ್ರಃ ಯುಧಿಷ್ಠಿರಃ– ಯಮಧರ್ಮನ (ಮಗನಾದ) ಅವತಾರನಾದ ಯುದಿಷ್ಠಿರನು, ಬಹುಶಃ—ಬಹಳವಾಗಿ, ದಾನಾನಿ– ದಾನಗಳನ್ನು ದದೌ–ಕೊಟ್ಟನು. ಚ–ಮತ್ತು, ವಾಸುದೇವಂ–ಶ್ರೀಕೃಷ್ಣಪರಮಾತ್ಮನನ್ನು, ನನಾಮ–ಕೃತಜ್ಞತೆಯಿಂದ ನಮಸ್ಕರಿಸಿದನು. ॥೮೮॥

ಕುಂತೀ ಕೃಷ್ಣಾ ಸುಭದ್ರಾಭಿರ್ವೈರಾಟ್ಯಾಽನ್ಯಾಭಿಕೇವಚ ।
ಪಾಂಡವೈಃ ಪುರುಷೈಶ್ಚಾನ್ಯೈಃ ಸಂಸ್ತುತಃ ಪ್ರಣತೋ ಹರಿಃ ॥೪೯॥

ಹರಿಃ—ಶ್ರೀಕೃಷ್ಣಪರಮಾತ್ಮನು, ಕುಂತೀಕೃಷ್ಣಾಸುಭದ್ರಾಭಿಃ—ಕುಂತಿದೇವಿ, ದ್ರೌಪದಿದೇವಿಸುಭದ್ರೆಯರಿಂದ, ವೈರಾಟ್ಯಾ—ಉತ್ತರಾದೇವಿಯಿಂದ, ಚ–ಮತ್ತು, ಪಾಂಡವೈಃ—ಪಾಂಡವರಿಂದ, ಅನ್ಯೈಃ ಪುರುಷೈಃ ಚ–ಬೇರೆ ಪುರುಷರಿಂದಲೂ ಕೂಡ, ಸಂಸ್ತುತಃ– ಸ್ತುತಿಸಲ್ಪಟ್ಟನು, ಪ್ರಣತಃ ಚ–ಮತ್ತು ನಮಸ್ಕರಿಸಲ್ಪಟ್ಟನು. ॥೪೯॥

ತತಃ ಕೃಷ್ಣಾಭ್ಯನುಜ್ಞಾತಾಃ ಪಾರಾಶರ್ಯಸದಸ್ಯಕಾಃ ।
ಆರೇಭಿರೇಽಶ್ವಮೇಧಂ ತೇ ಮುನಿಭಿರ್ಬ್ರಹ್ಮವಾದಿಭಿಃ ॥೫೦॥

ತತಃ—ಆನಂತರ, ಕೃಷ್ಣಾಭ್ಯನುಜ್ಞಾತಾಃ–ಶ್ರೀಕೃಷ್ಣಪರಮಾತ್ಮನಿಂದ ಶ್ರೀವೇದವ್ಯಾಸದೇವರಿಂದ ಅಜ್ಞಪ್ತರಾದ, ಪಾರಾಶರ್ಯಸದಸ್ಯಕಾಃ–ಶ್ರೀವೇದವ್ಯಾಸರ ಮಾರ್ಗದರ್ಶನದಲ್ಲಿರುವ ಋತ್ವಿಜರು, ಬ್ರಹ್ಮವಾದಿಭಿಃ–ವೇದಮಂತ್ರಗಳನ್ನು ಹೇಳತಕ್ಕ ಮುನಿಗಳಿಂದ, ಅಶ್ವಮೇಧಂ–ಅಶ್ವಮೇಧ ಯಾಗವನ್ನು, ಆರೇಭಿರೇ—ಪ್ರಾರಂಭವಾಡಿಸಿದರು. ॥೫೦॥

ಸರ್ವಯಜ್ಞಾತ್ಮಕಂ ತೇಷಾಮಶ್ವಮೇಧಂ ಜಗತ್ಪತಿಃ ।
ಕಾರಯಾಮಾಸ ಭಗವಾನ್ ಕೃಷ್ಣದ್ವೈಪಾಯನಃ ಸ್ವಯಮ್ ॥೫೧॥

ಜಗತ್ಪತಿಃ ಭಗವಾನ್ ಕೃಷ್ಣದ್ವೈಪಾಯನಃ–ಜಗದೊಡೆಯನಾದ, ಭಗವದವತಾರಿಯಾದ ಶ್ರೀವೇದವ್ಯಾಸದೇವರು, ಸ್ವಯಂ–ತಾನೇ, ತೇಷಾಂ–ಆ ಪಾಂಡವರ, ಅಶ್ವಮೇಧಂ–ಅಶ್ವಮೇಧ ಯಾಗವನ್ನು, ಸರ್ವಯಜ್ಞಾತ್ಮಕಂ–ಎಲ್ಲ ಯಜ್ಞಗಳ ಸ್ವರೂಪವನ್ನಾಗಿ (ಎಲ್ಲ ಯಜ್ಞ ಮಾಡಿದಾಗ ಬರುವ ಫಲ ಈ ಅಶ್ವಮೇಧದಿಂದಲೇ ಪಾಂಡವರಿಗೆ ಬರುವಂತೆ) ಕಾರಯಾಮಾಸ–ಮಾಡಿಸಿದರು. ॥೫೧॥

ಸಾಧನಾನಿ ತು ಸರ್ವಾಣಿ ಶಾಲಾಂ ಚೈವ ಹಿರಣ್ಮಯೀಮ್ ।
ಪವಮಾನಸುತಶ್ಚಕ್ರೇ ಕೃಷ್ಣದ್ವೈಪಾಯನೇರಿತಃ ॥೫೨॥

ಕೃಷ್ಣದ್ವೈಪಾಯನೇರಿತಃ–ಶ್ರೀವೇದವ್ಯಾಸದೇವರಿಂದ ಪ್ರೇರಿತರಾದ, ಪವಮಾನಸುತಃ–ವಾಯುದೇವರ ಪುತ್ರ (ಅವತಾರ)ರಾದ ಶ್ರೀಭೀಮಸೇನದೇವರು, ಸರ್ವಾಣಿ ಸಾಧನಾನಿ–ಎಲ್ಲ ಸಾಧನಸಾಮಗ್ರಿಗಳನ್ನು (ಹಿರಣ್ಮಯಾನಿ–ಭಂಗಾರದವುಗಳನ್ನಾಗಿ), ಚ–ಮತ್ತು, ಶಾಲಾಂ ಚ–ಯಜ್ಞಶಾಲೆಯನ್ನೂ ಕೂಡ, ಹಿರಣ್ಮಯೀಂ—ಸುವರ್ಣಖಚಿತವನ್ನಾಗಿಯೇ, ಚಕ್ರೇ—ಮಾಡಿದರು. ॥೫೨॥

ಭಾವಾನುವಾದ—ಲಳ—೯೨

ವೇದವ್ಯಾಸದೇವರು ಪಾಂಡವರಿಂದ ಸಮೇತರಾಗಿ ಊರಿಗೆ ಬರುತ್ತಿರುವ ಹೊತ್ತಿಗೇ ಶ್ರೀಕೃಷ್ಣ ಪರಮಾತ್ಮನೂ ಬಂದನು. ಅದೇ ಸಮಯಕ್ಕೆ ಗರ್ಭಿಣಿ ಉತ್ತರಾದೇವಿಯು ಅಶ್ವತ್ಥಾಮಾಚಾರ್ಯರ ಬ್ರಹ್ಮಾಸ್ತ್ರ ಪ್ರಭಾವದಿಂದ ಮೃತವಾದ ಮಗುವನ್ನೇ ಪ್ರಸವಿಸಿದಳು. ಆಗ ಕುಂತೀದೇವಿ ಮೊದಲಾದ ಎಲ್ಲ ಸ್ತ್ರೀಯರು ಶ್ರೀಕೃಷ್ಣ

ನನ್ನೇ ವೊರೆಹೊಕ್ಕು ಪ್ರಾರ್ಥಿಸಿದರು. ಆಗ ಶ್ರೀಕೃಷ್ಣಪರಮಾತ್ಮನು ಗರ್ಭದೊಳಗೆ ತಾನೇ ರಕ್ಷಿಸಿದ, ಆದರೆ ಈಗ ಪ್ರಸವಕಾಲದಲ್ಲಿ ತನ್ನ ರಕ್ಷಣೆಯನ್ನುಹಿಂದೆಗೆದದ್ದರಿಂದ ಮೃತವಾದ ಆ ಮಗುವತ್ತು ಪಾಂಡವರ ಸಂತತಿ ಉಳಿಯು ವಂತಾಗಲಿ ಎಂಬ ಇಚ್ಛೆಯಿಂದ ಪುನಃ ಬದಕಿಸಿದನು.

ವಿಶೇಷಾಂಶಃ—ಈ ರೀತಿ ಮಾಡಿದ್ದರಿಂದ ಗರ್ಭದೊಳಗೆ ರಕ್ಷಿಸಿದವನು ತಾನೇ ಎಂದೂ ತೋರಿಸಿ ದಂತಾಯಿತು ಒಂದು ವೇಳೆ ತಾನು ರಕ್ಷಿಸಿದ್ದಿಲ್ಲವಾದರೆ ಗರ್ಭದಲ್ಲಿ ಆಗಲೇ ಸತ್ತು ಹೋಗುತ್ತಿತ್ತು. ಹೀಗೆ ಪೂರ್ಣ ವಾಗಿ ಬೆಳೆಯಲು ಅವಕಾಶವಿದ್ದಿದ್ದಿಲ್ಲ. ಬೆಳೆದಿದೆ ಎಂದಮೇಲೆ ಈಗ ಪ್ರಸವಾನಂತರ ಬದುಕಿಸಿದ ತಾನೇ ಗರ್ಭದ ಒಳಗೂ ರಕ್ಷಿಸಿದವನು ಎಂದು ತಿಳಿಸಿದಂತಾಯಿತು.

ಈ ರೀತಿ ಕೂಸು ಬದುಕಿದ ಸಮಯದಲ್ಲಿ ಪಾಂಡವರು ಭಗವಂತ ಶ್ರೀ ವೇದವ್ಯಾಸದೇವರಿಂದ ಹಾಗೂ ಅವರಿಂದಲೇ ಕೊಡಲ್ಪಟ್ಟ ಧನರಾಶಿಯಿಂದ ಸಹಿತರಾಗಿಯೇ ಬಂದರು ಹುಟ್ಟಿದ ಮೊಮ್ಮಗನನ್ನು ನೋಡಿದ ಅವರು ಬಹು ಸಂತೋಷಪಟ್ಟರು ಧರ್ಮರಾಜನು ಬಹುಸಂತೋಷದಿಂದ ದಾನಗಳನ್ನು ಮಾಡಿದನು; ಶ್ರೀಕೃಷ್ಣ ಶ್ರೀವೇದವ್ಯಾಸ ದೇವರನ್ನು ಭಕ್ತಿಕೃತಜ್ಞತೆಗಳಿಂದ ನಮಸ್ಕರಿಸಿದನು. ಕುಂತೀ, ದ್ರೌಪದೀದೇವಿ, ಸುಭದ್ರೆ, ಉತ್ತರೆ ಮೊದಲಾದ ಎಲ್ಲ ಸ್ತ್ರೀಯರು, ಪಾಂಡವರು ಹಾಗು ಇತರರೆಲ್ಲರೂ ಶ್ರೀಕೃಷ್ಣನನ್ನು ಸ್ತುತಿಸಿದರು. ನಂತರ ಶ್ರೀವೇದವ್ಯಾಸದೇವರ ಅಪ್ಪಣೆಯ (ಮಾರ್ಗದರ್ಶನದ) ಪ್ರಕಾರ ಎಲ್ಲ ಋತ್ವಿಜರು ಅಶ್ವಮೇಧ ಯಾಗವನ್ನು ಆರಂಭಿಸಿದರು. ಎಲ್ಲ ಯಜ್ಞ ಗಳನ್ನು ಮಾಡಿದಾಗ ಏನು ಫಲ ಬರಬೇಕೋ ಅದು ಪೂರ್ಣವಾಗಿ ಈ ಯಜ್ಞದಿಂದಲೇ ಬರುವಂತೆ ಈ ಯಜ್ಞವನ್ನು ಭಗವಂತನು ತಾನೇ ಮಾಡಿಸಿದನು. ಶ್ರೀಭೀಮಸೇನದೇವರು ಶ್ರೀ ವ್ಯಾಸರ ಆಜ್ಞಾಪ್ರಕಾರ ಯಜ್ಞ ಸಾಧನಗಳನ್ನು, ಯಜ್ಞ ಶಾಲೆಯನ್ನು ಭಂಗಾರಮಯವಾದದ್ದನ್ನಾಗಿ ಮಾಡಿದ್ದರು.

ಅಥಾನುಮಂತ್ರಿತೋತ್ಸೃಷ್ಟಂ ಪುರೋಹಿತಪುರಸ್ಕೃತಮ್ ।
ತುರಗಂ ಕೃಷ್ಣಸಾರಂಗಮನುಯಯಾಜ ವಾಸವಿಃ ॥೯೩॥

ಅಥ–ಅನಂತರ ಅನುಮಂತ್ರಿತೋತ್ಸೃಷ್ಟಂ—ಅಭಿಮಂತ್ರಣಪೂರ್ವಕವಾಗಿ ಬಿಡಲ್ಪಟ್ಟ, ಪುರೋಹಿತ ಪುರಸ್ಕೃತಂ—ಪುರೋಹಿತನಿಂದ ಕೂಡಿದ, ಕೃಷ್ಣಸಾರಂಗಂ—ಕೃಷ್ಣಸಾರಂಗಮೃಗದಂತೆ ವರ್ಣವಿರುವ, ತುರಗಂ—ಕುದುರೆಯನ್ನು. ವಾಸವಿಃ—ಅರ್ಜುನನು, ಅನುಪದವ್ರಾಜ–ಅನುಸರಿಸಿಹೊರಟನು. (ಬೆನ್ನುಹತ್ತಿಹೊರಟನು.) ॥೯೩॥

ಸ ಜಿತ್ವಾ ರುಂಧತಃ ಸರ್ವಾನ್ ನೃಪತೀಞ್ಛಸ್ತ್ರತೇಜಸಾ ।
ಚಾರಯಾಮಾಸ ಸರ್ವೇಷು ರಾಷ್ಟ್ರೇಷ್ವಶ್ವಂ ವಿಜಿತೋಽರಿಭಿಃ ॥೯೪॥

ಸಃ—ಆ ಅರ್ಜುನನು, ರುಂಧತಃ—ಕುದುರೆಯನ್ನು ತಡೆಯುವ, ಸರ್ವಾನ್ ನೃಪತೀನ್—ಎಲ್ಲ ರಾಜರನ್ನು, ಶಸ್ತ್ರತೇಜಸಾ—ಆಯುಧಸಾಮರ್ಥ್ಯದಿಂದ, ಜಿತ್ವಾ—ಗೆದ್ದು, ಅರಿಭಿಃ—ಅಜಿತಃಸನ್—ವೈರಿಗಳಿಂದ ಪರಾಜಿತನಾಗದೇ, ಸರ್ವೇಷು ರಾಷ್ಟ್ರೇಷು—ಎಲ್ಲ ದೇಶಗಳಲ್ಲಿ, ಚಾರಯಾಮಾಸ—ಕುದುರೆಯನ್ನು ಅಡ್ಡಾಡಿಸಿ ದನು. ॥೯೪॥

ಯುಧಿಷ್ಠಿರಾಜ್ಞಯಾ ತೇನ ನ ಕಶ್ಚಿನ್ನಿಹತಸ್ತದಾ ।
ಆಹೂತಾಶ್ಚ ನೃಪಾಸ್ತೇನ ಯಜ್ಞಾರ್ಥಂ ಪ್ರೀಯತಾಽಖಿಲಾಃ ॥೯೫॥

ಯುಧಿಷ್ಠಿರಾಜ್ಞಯಾ—ಧರ್ಮರಾಜನ ಅಪ್ಪಣೆಯ ಪ್ರಕಾರ, ತದಾ—ಕುದುರೆಯನ್ನು ಓಡಾಡಿಸುವ ಸಂದರ್ಭದಲ್ಲಿ, ತೇನ—ಆ ಅರ್ಜುನನಿಂದ, ಕಶ್ಚಿತ್—ಯಾವನೊಬ್ಬನೂ ಕೂಡ, ನ ನಿಹತಃ—ಕೊಲ್ಲಲ್ಪಡಲಿಲ್ಲ, ಪ್ರೀಯತಾ—ಎಲ್ಲ ಸದ್ರಾಜರನ್ನು ಆಮಂತ್ರಿಸುವ ಬಗ್ಗೆ ಸಂತೋಷದಿಂದ ಕೂಡಿದ, ತೇನ—ಆ ಅರ್ಜುನನಿಂದ. ಅಖಿಲಾಃ ನೃಪಾಃ—ಎಲ್ಲ ರಾಜರೂ, ಯಜ್ಞಾರ್ಥಂ—ಅಶ್ವಮೇಧಯಾಗಕ್ಕಾಗಿ, ಆಹೂತಾಃ—ಆಮಂತ್ರಿಸಲ್ಪಟ್ಟರು. ॥೯೫॥

ಮಣಲೂರಂ ಕ್ರಮಾತ್ ಪ್ರಾಪ್ತಸ್ತತ್ರೈನಂ ಬಭ್ರುವಾಹನಃ ।
ಅಭ್ಯಯಾದರ್ಘ್ಯಪಾದ್ಯಾದ್ಯೈಸ್ತಮಾಹ ವಿಜಯಃ ಸುತಮ್ ॥೯೬॥

ವಿಜಯಃ—ಅರ್ಜುನನು, ಕ್ರಮಾತ್—ದೇಶದಿಂದ ದೇಶಕ್ಕೆ ಸಂಚರಿಸುವ ಕ್ರಮದಿಂದ, ಮಣಲೂರಂ - ಮಣಿಲೂರದೇಶಕ್ಕೆ, ಪ್ರಾಪ್ತಃ—ಬಂದನು, ತತ್ರ—ಆ ಊರಿನಲ್ಲಿ, ಬಭ್ರುವಾಹನಃ—ಬಭ್ರುವಾಹನನೆಂಬವನು ಏನಂ—ಈ ಅರ್ಜುನನನ್ನು ಕುರಿತು, ಅರ್ಘ್ಯಪಾದ್ಯಾದ್ಯೈಃ - ಅರ್ಘ್ಯಪಾದ್ಯ ವೊದಲಾದ ಉಪಚಾರದ್ರವ್ಯಗಳಿಂದ (ಕೂಡಿಕೊಂಡು), ಅಭ್ಯಯಾತ್—ಎದುರುಗೊಂಡನು, ವಿಜಯಃ—ಅರ್ಜುನನು, ತಂ ಸುತಂ— ಮಗನಾದ ಆ ಬಭ್ರುವಾಹನನನ್ನು ಕುರಿತು, ಆಹ - ಹೇಳಿದನು. ॥೯೬॥

ಯೋದ್ಧುಕಾಮೋಽಸ್ಮ್ಯಮಾದಾಯ ತ್ವಯಾಽದ್ಯಾಭಿಗತೋ ಹ್ಯಹಮ್ ।
ನ ಪ್ರೀಯೇ ಪೌರುಷಂ ಧಿಕ್ ತೇ ಯನ್ಮೇಧ್ಯಾಶ್ವೋ ನ ವಾರಿತಃ ॥೯೭॥

ಯೋದ್ಧುಕಾಮಃ ಅಹಂ - ನಿನ್ನಜೊತೆಗೆ ಯುದ್ಧಮಾಡುವ ಇಚ್ಛೆಯುಳ್ಳ ನಾನು, ಅದ್ಯ - ಇಂದು, ತ್ವಯಾ—ನಿನ್ನಿಂದ, ಅರ್ಘ್ಯಂ ಆದಾಯ - ಅರ್ಘ್ಯಾದಿಉಪಚಾರಗಳನ್ನು ತಂದು, ಅಭಿಗತಃ ಹಿ = ಎದುರುಗೊಳ್ಳಲ್ಪಟ್ಟೆನೋ, ಆದ್ದರಿಂದ, ಅಹಂ ನಾನು, ನ ಪ್ರೀಯೇ—ಸಂತೋಷಪಡಲಿಲ್ಲ, ಯತ್—ಯಾವಕಾರಣದಿಂದ, ಮೇಧ್ಯಾಶ್ವಃ - ಯಜ್ಞದ ಕುದುರೆಯು, ನ ವಾರಿತಃ—ತಡೆಯಲ್ಪಡಲಿಲ್ಲವೋ, ತತಃ—ಆದ್ದರಿಂದ, ತೇ ಪೌರುಷಂ ಧಿಕ್—ನಿನ್ನ ಪರಾಕ್ರಮಕ್ಕೆ ಧಿಕ್ಕಾರವಿರಲಿ. ॥೯೭॥

ತದಾಽಪಿ ಪಿತೃಭಕ್ತ್ಯೈನಮಯುಧ್ಯಂತಮುಲೂಪಿಕಾ ।
ಪ್ರಾಹ ಯುಧ್ಯಸ್ವ ಯತ್ ಪ್ರೀತ್ಯೈ ಗುರೋಃ ಕಾರ್ಯಮಸಂಶಯಮ್ ।
ಪ್ರೀಣನಾಯೈವ ಯುದ್ಧ್ಯಸ್ವ ಪಿತ್ರೇಸಂದರ್ಶಯನ್ ಬಲಮ್ ॥೯೮॥

ತದಾ ಅಪಿ – ಅರ್ಜುನನು ಹಾಗೆ ಹೇಳಿದಾಗಲೂ ಕೂಡ, ಪಿತೃಭಕ್ತ್ಯಾ – ತಂದೆಯಲ್ಲಿಯ ಭಕ್ತಿಯಿಂದ, ಅಯುಧ್ಯಂತಂ – ಯುದ್ಧಮಾಡದಿದ್ದ, ಏನಂ – ಈ ಬಭ್ರುವಾಹನನನ್ನು, ಉಲೂಪಿಕಾ – ಉಲೂಪಿಯು (ನಾಗಕನ್ಯೆಯು), ಯತ್ - ಯಾವಕಾರ್ಯವು, ಗುರೋಃಪ್ರೀತ್ಯೈ – ತಂದೆಯ ಸಂತೋಷಕ್ಕೆ ಕಾರಣವಾಗುವದೋ, ತತ್—ಆ ಕಾರ್ಯವು, ಅಸಂಶಯಂ ಕಾರ್ಯಂ – ನಿಸ್ಸಂಶಯವಾಗಿ ಮಾಡಲ್ಪಡಬೇಕು. ಆದ್ದರಿಂದ, ಯುಧ್ಯಸ್ವ – ಯುದ್ಧಮಾಡು, ಗುರೋಃ ಪ್ರೀಣನಾಯ ಏವ – ತಂದೆಯ ಸಂತೋಷಕ್ಕಾಗಿಯೇ, ತೇ ಬಲಂ – ನಿನ್ನ ಶಕ್ತಿಯನ್ನು, ಪಿತ್ರೇ ಸಂದರ್ಶಯನ್‌ಸನ್ – ತಂದೆಗೆ ತೋರಿಸುವವನಾಗಿ, ಯುದ್ಧ್ಯಸ್ವ ಯುದ್ಧಮಾಡು, ಇತಿ ಎಂದು, ಪ್ರಾಹ– ಹೇಳಿದಳು. ॥೯೮॥

ಇತ್ಯುಕ್ತ್ವೋ ಯುಯುಧೇ ಪಿತ್ರಾ ಬಲಂ ಸರ್ವಂ ಪ್ರದರ್ಶಯನ್ ।
ಅರ್ಜುನಸ್ತು ಸುತಸ್ನೇಹಾನ್ಮಂದಂ ಯೋಧಯತಿ ಸ್ಮಯನ್ ॥೯೯॥

ಇತಿ ಉಕ್ತಃ—ಈ ರೀತಿ ಉಲೂಪಿಯಿಂದ ಹೇಳಿಸಿಕೊಳ್ಳಲ್ಪಟ್ಟ ಬಭ್ರುವಾಹನನು, ಸರ್ವಂ ಬಲಂ ಪ್ರದರ್ಶಯನ್‌ಸನ್ – ತನ್ನ ಎಲ್ಲ ಸಾಮರ್ಥ್ಯವನ್ನು ತೋರಿಸುವವನಾಗಿ, ಪಿತ್ರಾ – ತಂದೆಯಾದ ಅರ್ಜುನನಿಂದ ಕೂಡಿಕೊಂಡು (ಅರ್ಜುನನ ಜೊತೆಗೆ) ಯುಯುಧೇ – ಯುದ್ಧ ಮಾಡಿದನು. ಅರ್ಜುನಃ ತು ಅರ್ಜುನನಾದರೂ, ಸುತಸ್ನೇಹಾತ್ – ಮಗನ ಮೇಲಿನ ಸ್ನೇಹದಿಂದ, ಸ್ಮಯನ್‌ಸನ್ – ಆಶ್ಚರ್ಯಪಡುತ್ತಾ ಆಶ್ಚರ್ಯಪಡಿಸುತ, ಮಂದಂ – ಮೆಲ್ಲನೇ, ಯೋಧಯತಿ – ಯುದ್ಧಮಾಡುತ್ತಿದ್ದನು. ॥೯೯॥

ಸ ತು ಸರ್ವಾಯುಧ ಕ್ಷೇಪೇಽಪ್ಯವಿಕಾರಂ ಧನಂಜಯಮ್ ।
ದೃಷ್ಟ್ವಾ ಬಾಲ್ಯಾತ್ ಪರೀಕ್ಷಾಯೈ ಮಂತ್ರಪೂತಂ ಮಹಾಶರಮ್ ।
ಚಿಕ್ಷೇಪ ಪಿತ್ರೇ ದೈವೇನ ತೇನೈನಂ ಮೋಹ ಆವಿಶತ್ ॥೧೦೦॥

ಸಃ ತು – ಆ ಬಭ್ರುವಾಹನನಾದರೂ, ಸರ್ವಾಯುಧಕ್ಷೇಪೇ ಅಪಿ – ಎಲ್ಲ ಆಯುಧಗಳ ಪ್ರಯೋಗ ಮಾಡಿದರೂ ಕೂಡ, ಅವಿಕಾರಂ – ವಿಕಾರವನ್ನೇ ಹೊಂದದಿರುವ, ಧನಂಜಯಂ – ಅರ್ಜುನನನ್ನು, ದೃಷ್ಟ್ವಾ—ನೋಡಿ, ಬಾಲ್ಯಾತ್—ಬಾಲಬುದ್ಧಿಯಿಂದ (ಅಜ್ಞಾನದಿಂದ) ಪರೀಕ್ಷಾಯೈ—ನನ್ನ ಮಂತ್ರದಲ್ಲಿ ಸಾಮರ್ಥ್ಯ ಪುಟವೋ ಇಲ್ಲವೋ ನೋಡುವಾ ಎಂದು ಪರೀಕ್ಷೆಗಾಗಿ, ಮಂತ್ರಪೂತಂ— ಮಂತ್ರದಿಂದ ಅಭಿಮಂತ್ರಿತವಾದ, ಮಾಹಾಶರಂ—ಪ್ರಬಲವಾದ ಬಾಣವನ್ನು, ಪಿತ್ರೇ—ತಂದೆಯಾದ ಅರ್ಜುನನಿಗೆ, ಚಿಕ್ಷೇಪ—ಪ್ರಯೋಗಿಸಿದನು, ದೈವೇನ—ದೇವಸಂಕಲ್ಪದಿಂದ (ಅಧರ್ಮದಿಂದ ಭೀಷ್ಮಾದಿಹನನ ರೂಪ ಅಪರಾಧದಿಂದ ಅರ್ಜುನನೂ ಕೂಡ ಯುದ್ಧದಲ್ಲಿ ಬಹುವೇದನೆಯನ್ನು ಹೊಂದಲಿ ಎಂಬ ದೇವತಾಶಾಪದಿಂದ) ಕೂಡಿದ ತೇನ—ಆ ಬಾಣದಿಂದ ಏವಂ—ಈ ಅರ್ಜುನನನ್ನು ಮೋಹಃ—ಮೂರ್ಛೆಯು, ಆವಿಶತ್—ಆವರಿಸಿತು. ॥೧೦೦॥

ಮೂರ್ಛಿತಂ ತಂ ಗುರುಂ ದೃಷ್ಟ್ವಾ ತದ್ಭಕ್ತ್ಯಾ ಭೃಶದುಃಖಿತಃ ।
ಪ್ರಾಯೋಪವಿಷ್ಟಸ್ತನ್ಮಾತಾ ವಿಲಲಾಪಾತಿದುಃಖಿತಾ ॥೧೦೧॥

ಮೂರ್ಛಿತಂ—ಮೂರ್ಛೆಯನ್ನು ಹೊಂದಿದ, ತಂ ಗುರುಂ—ಆ ತಂದೆಯನ್ನು, ದೃಷ್ಟ್ವಾ—ನೋಡಿ, ತದ್ಭಕ್ತ್ಯಾ—ಪಿತೃಭಕ್ತಿಯಿಂದ, ಭೃಶದುಃಖಿತಃ–ಬಹುದುಃಖವನ್ನು ಹೊಂದಿದ ಬಭ್ರುವಾಹನನು, ಪ್ರಾಯೋಪವಿಷ್ಟಃ–ಆಮರಣ ಉಪವಾಸವನ್ನು ಕೈಕೊಂಡನು. ತನ್ಮಾತಾ—ಅವನ(ಬಭ್ರುವಾಹನನ) ತಾಯಿಯಾದ ಚಿತ್ರಾಂಗದೆಯು ಅತಿದುಃಖಿತಾ ಸತೀ—ಬಹುದುಃಖಿಯಾಗಿ, ವಿಲಲಾಪ—ಪ್ರಲಪಿಸಿದಳು.(ಅತ್ತಳು). ॥೧೦೧॥

ವಿಜಗರ್ಹ ತದೋಲೂಪೀಂ ಧಿಗ್ ಜಗತ್ತ್ರಯಪೂಜಿತಂ ।
ಆಜೀಘನೋ ಮೇ ಭರ್ತಾರಂ ಪುತ್ರೇಣೈವಾವಿಜಾನತಾ ॥೧೦೨॥

ಲೋಕವೀರಂ ಪತಿಂ ಹಿತ್ವಾನ ಮೇ ಕಾರ್ಯಂ ಸುತೇನ ಚ ।
ಪತಿಲೋಕಮಹಂ ಯಾಸ್ಯೇ ತೃಪ್ತಾಭವ ಕಲಿಪ್ರಿಯೇ ॥೧೦೩॥

ತದಾ—ಆಗ, (ಆ ಚಿತ್ರಾಂಗದೆಯು), ಉಲೂಪೀಂ—ಉಲೂಪಿಯನ್ನು, ಜಗತ್ತ್ರಯಪೂಜಿತಂ—ಮೂರುಲೋಕದಲ್ಲಿ ಪೂಜಿತನಾದ, ಮೇ ಭರ್ತಾರಂ–ನನ್ನ ಪತಿಯನ್ನು. ಅವಿಜಾನತಾ ಪುತ್ರೇಣ ಏವ—ತಿಳಿವಳಿಕೆಯಿಲ್ಲದ ಮಗನಿಂದಲೇ, ಅಜೀಘನಃ—ಕೊಲ್ಲಿಸಿದಿ, ಧಿಕ್—ನಿನಗೆ ಧಿಕ್ಕಾರವಿರಲಿ; ಲೋಕವೀರಂ ಪತಿಂ—ತ್ರಿಲೋಕವೀರನಾದ ನನ್ನ ಪತಿಯನ್ನು. ಹಿತ್ವಾ—ಬಿಟ್ಟು, ಸುತೇನ ಚ—ಕೇವಲ ನನ್ನ ಮಗನಿಂದ ಮೇ—ನನಗೆ, ನ ಕಾರ್ಯಂ—ಪ್ರಯೋಜನವಿಲ್ಲ. (ಆದ್ದರಿಂದ), ಅಹಂ—ನಾನು, ಪತಿಲೋಕಂ—ಪತಿಯು ಹೋದ ಲೋಕವನ್ನುಕುರಿತು, ಯಾಸ್ಯೇ—ಹೋಗುವೆನು. ಕಲಿಪ್ರಿಯೇ—ಕಲಹಪ್ರಿಯಳಾದ ಎಲೋ ಉಲೂಪಿಯೇ, ತೃಪ್ತಾ ಭವ–ನೀನು ಸಂತೋಷದಿಂದ ಇರು, ಇತಿ—ಎಂದು, ವಿಜಗರ್ಹ—ಬಹುವಾಗಿ ನಿಂದಿಸಿದಳು, ॥೧೦೨॥೧೦೩॥

ಇತ್ಯುಕ್ತ್ವಾ ಮರಣಾಯೈವ ತಾಂ ವಿನಿಶ್ಚಿತಮಾನಸಾಮ್ ।
ಧರಾಯಾಂ ವಿಲುಠಂತೀಂ ಚ ದೃಷ್ಟ್ವಾ ಭುಜಗನಂದಿನೀ ॥೧೦೪॥

ನಾಗಲೋಕಾತ್ ಸಮಾದಾಯ ವಿಶಲ್ಯಕರಣೀಂ ಕ್ಷಣಾತ್ ।
ಉತ್ಥಾಪಯಾಮಾಸ ಪತಿಂ ತ್ರಿಲೋಕಾತಿರಂಥ ತಯಾ ॥೧೦೫॥

ಇತಿ ಉಕ್ತ್ವಾ—ಹೀಗೆ ಹೇಳಿ, ಮರಣಾಯ ಏವ—ಸಾಯುವದಕ್ಕಾಗಿಯೇ, ವಿನಿಶ್ಚಿತಮಾನಸಾಂ–ನಿಶ್ಚಯಿಸಲ್ಪಟ್ಟ ಮನಸ್ಸುಳ್ಳ, ಧರಾಯಾಂ— ಭೂಮಿಯಲ್ಲಿ, ವಿಲುಠಂತೀಂ — ಹೊರಳಾಡುತ್ತಿರುವ, ತಾಂ–ಆ ಚಿತ್ರಾಂಗದೆಯನ್ನು, ದೃಷ್ಟ್ವಾ—ನೋಡಿ, ಭುಜಗನಂದಿನೀ—ನಾಗಕುಮಾರಿಯಾದ ಆ ಉಲೂಪಿಯು, ಕ್ಷಣಾತ್–ಕ್ಷಣಕಾಲದಲ್ಲಿಯೇ, ವಿಶಲ್ಯಕರಣೀಂ—ಒಳನಟ್ಟ ಆಯುಧವನ್ನು ಹೊರದೆಗೆಯುತಕ್ಕ ಔಷಧಿಯನ್ನು, ನಾಗಲೋಕಾತ್–ನಾಗಲೋಕದಿಂದ, ಸಮಾದಾಯ—ತೆಗೆದುಕೊಂಡು ಬಂದು, ತಯಾ—ಆ ಔಷಧಿಯಿಂದ, ತ್ರಿಲೋಕಾತಿರಥಂ—ಮೂರುಲೋಕಗಳಲ್ಲಿ ಅತಿರಥನಾದ, ಪತಿಂ—ತನಗೂ ಪತಿಯಾದ ಅರ್ಜುನನನ್ನು, ಉತ್ಥಾಪಯಾಮಾಸ—ಎಬ್ಬಿಸಿದಳು ॥೧೦೪॥೧೦೫॥

ಭಾವಾನುವಾದ ೯೩-೧೦೫

ಯಜ್ಞಾಶ್ವವನ್ನು ಅಭಿಮಂತ್ರಣಾದಿಪೂರ್ವಕವಾಗಿ ಬಿಟ್ಟಾಗ ಅದನ್ನು ಬೆನ್ನಹತ್ತಿ ಅರ್ಜುನನು ನಡೆದನು. ಆ ಅಶ್ವವನ್ನು ತಡೆವ ಎಲ್ಲ ರಾಜರನ್ನು ಗೆದ್ದು ತಾನೆಂದೂ ಸೋಲದೇ ಎಲ್ಲ ದೇಶಗಳಲ್ಲಿ ಅಡ್ಡಾಡಿಸುತ್ತಾ ನಡೆಸಿದನು. ಆದರೆ ಯಾವ ರಾಜರನ್ನೂ ಕೂಡ ಕೊಲ್ಲಲಿಲ್ಲ. ಧರ್ಮರಾಜನ ಅಪ್ಪಣೆಯೇ ಹಾಗಿತ್ತು. ಎಲ್ಲ ರಾಜರಿಗೂ ಆಮಂತ್ರಣವನ್ನು ಕೊಟ್ಟು ಮುಂದೆ ಹೋಗುತ್ತಿದ್ದನು. ಹೀಗೆ ಸಂಚಾರ ಕ್ರಮದಿಂದ ಮಣಲೂರ ಗ್ರಾಮಕ್ಕೆ ಬಂದನು. ಅಲ್ಲಿಗೆ ಕುದುರೆಯು ಬಂದಾಗ ಅಲ್ಲಿರುವ ಬಭ್ರುವಾಹನನು ಇದು ತನ್ನ ತಂದೆಯು ಮಾಡುವ ಯಜ್ಞದ ಕುದುರೆ ಎಂದು ತಿಳಿದು ಅದನ್ನು ಕಟ್ಟಲಿಲ್ಲ, ಅಷ್ಟೇ ಅಲ್ಲ ಅರ್ಜುನನನ್ನು ಅರ್ಘ್ಯಪಾದ್ಯಾದಿ ಪೂರ್ವಕವಾಗಿ ಸ್ವಾಗತಿಸಿದನು. ಅದನ್ನು ಕಂಡ ಅರ್ಜುನನು "ನಾನು ನಿನ್ನ ಜೊತೆಗೆ ಯುದ್ಧ ಮಾಡಬೇಕೆಂಬ ಇಚ್ಛೆಯಿಂದ ಬಂದರೆ ನೀನು ಅರ್ಘ್ಯಾದಿಪೂರ್ವಕ ಪೂಜೆ ಸಲ್ಲಿಸಲು ಬರುವದನ್ನು ನೋಡಿದ ನನಗೆ ಏನೂ ಸಂತೋಷವಾಗಲಿಲ್ಲ. ಯಜ್ಞಾಶ್ವವನ್ನು ಕಟ್ಟಲಾರದ ನಿನ್ನ ಪರಾಕ್ರಮಕ್ಕೆ ಧಿಕ್ಕಾರವು." ಎಂದು ಹೇಳಿದರೂ ಕೂಡ ಬಭ್ರುವಾಹನನು ಪಿತೃಭಕ್ತಿಯಿಂದಾಗಿ ಯುದ್ಧ ಮಾಡಲು ಪ್ರವೃತ್ತನಾಗಲಿಲ್ಲ. ಆಗ ಅವನನ್ನು ಕುರಿತು ನಾಗಕನ್ಯಾ ಉಲುಪಿಯು 'ತಂದೆಗೆ ಸಂತೋಷಕರವಾದ ಕಾರ್ಯವನ್ನು ಮಕ್ಕಳಾದವರು ಅವಶ್ಯವಾಗಿ ಮಾಡಬೇಕು; ಆದ್ದರಿಂದ ನಿನ್ನ ಪರಾಕ್ರಮವನ್ನು ತೋರಿಸುತ್ತಾ ಯುದ್ಧಮಾಡಿ ತಂದೆಯನ್ನು ಸಂತೋಷಪಡಿಸು ಎಂದು ಹೇಳಿದಳು. ಆಗ ಬಭ್ರುವಾಹನನು ತಂದೆಯ ಜೊತೆಗೆ ಯುದ್ಧವನ್ನು ಮಾಡುತ್ತಾ ತನ್ನ ಸಾಮರ್ಥ್ಯವನ್ನು ಪ್ರಕಟಮಾಡಹತ್ತಿದನು. ಅರ್ಜುನನಾದರೂ ಮಗ ಎಂಬ ಅಂತಃಕರಣದಿಂದ ಮೆಲ್ಲನೆ ಯುದ್ಧ ಮಾಡಹತ್ತಿದನು. ಬಭ್ರುವಾಹನನು ಯಾವದೇ

ಆಯುಧಗಳನ್ನು ಪ್ರಯೋಗಿಸಿದರೂ ಅರ್ಜುನನಿಗೆ ಏನೂ ಆಗದಿರುವಾಗ, ತಾನು ಕಲಿತ (ಅಸ್ತ್ರ) ಮಂತ್ರ ಪೂರಿತ ಶರವನ್ನು ಪ್ರಯೋಗಿಸಿ ನೋಡುವಾ; ಪರಿಣಾಮವಾಗುವದೋ–ಹೇಗೆ? ನನಗೆ ಮಂತ್ರಸಿದ್ಧಿಯಾಗಿದೆಯೋ ಹೇಗೆ ಎಂದು ವಿಚಾರಿಸಿ, ಯಾರಲ್ಲಿ ಪರೀಕ್ಷೆ ಮಾಡಬೇಕು; ಯಾರಲ್ಲಿ ಮಾಡಬಾರದು ಎಂಬ ಆಜ್ಞಾನದಿಂದಾಗಿ ಪ್ರಯೋಗಿಸಿದನು. ದೇವತಾ ಸಂಕಲ್ಪದ ಪ್ರಕಾರ ಅವರಿಂದ ಅವನಿಗೆ ಮೋಹವೂ ಬಂದಿತು. ತಂದೆಯು ಮೂರ್ಛಿತನಾದಾಗ ಬಭ್ರುವಾಹನನು ದುಃಖದಿಂದ ಆಮರಣಾಂತೋಪವಾಸವನ್ನು ಕೈಕೊಂಡು ಕುಳಿತನು. ಅವನ ತಾಯಿ ಚಿತ್ರಾಂಗದೆಯೂ ದುಃಖದಿಂದ ಅಳಲಾರಂಭಿಸಿದಳು; ಯುದ್ಧಕ್ಕಾಗಿ ಪ್ರೇರಿಸಿದ ಉಲೂಪಿಯನ್ನು ಬೈದಳು. ತ್ರಿಲೋಕಪೂಜಿತನಾದ ನನ್ನ ಪತಿಯನ್ನು ಕೊಂದಿಟ್ಟಿ ನೀನು. ಅಜ್ಞಾನಿಯಾದ ಮಗನಿಗೆ ತಿಳಿಹೇಳುವದನ್ನು ಬಿಟ್ಟು ಯುದ್ಧಕ್ಕೆ ಪ್ರೇರಿಸಿ ಅನಾಹುತ ಮಾಡಿದಿ. ಧಿಕ್ಕಾರವಿರಲಿ ನಿನಗೆ; ಪತಿಯಿಲ್ಲದೇ ನನಗೇನು ಕೆಲಸ ಈ ಲೋಕದಲ್ಲಿ? ನಾನು ಪತಿಯನ್ನು ಅನುಸರಿಸಿ ಪತಿಲೋಕಕ್ಕೇ ಹೋಗುವೆನು (ಸಾಯುವೆನು), ಕಲಹಪ್ರಿಯಳಾದ ನೀನು ಸಂತಸಪಡು? ಎಂದು ಉಲೂಪಿಗೆ ಹೇಳಿದಳು. ಮರಣ ಹೊಂದುವದೆಂದು ನಿಶ್ಚಯಿಸಿದ, ಭೂಮಿಯ ? ಹೊರಳಾಡುವ ಆ ಚಿತ್ರಾಂಗದೆಯನ್ನು ನೋಡಿದ ಉಲೂಪಿಯು ನಾಗಲೋಕದಿಂದ ವಿಶಲ್ಯಕರಣೀ ಎಂಬ ಔಷಧಿಯನ್ನು ತಂದು ಹಚ್ಚಿ ಪತಿಯಾದ ಅರ್ಜುನನನ್ನು ಎಬ್ಬಿಸಿದಳು.

ಪ್ರಹಸ್ಯೋವಾಚ ಚ ತದಾಶ್ರುತಂ ವಾಕ್ಯಂ ಪುರಾ ಮಯಾ ।
ಸುರಲೋಕೇ ಸುರೈಃ ಪ್ರೋಕ್ತಂ ಭೀಷ್ಮಾದ್ಯಾ ನಾತಿದರ್ಮತಃ ॥೧೦೬॥

ಯದ್ಧತಾಸ್ತೇನ ದೋಷೇಣ ಪಾರ್ಥಸ್ತೇನಾತಿವೇದನಾಮ್ ।
ರಣೇ ವ್ರಜೇದಿತಿ ನ ತತ್ ಪರತಃಸ್ಯಾದಿತಿ ಹ್ಯಹಮ್ ।
ವಚನಾದೇವ ದೇವಾನಾಂ ಯುದ್ಧ್ಯೇತ್ಯಾತ್ಮಜಮಬ್ರವಮ್ ॥೧೦೭॥

ಚ—ಹಾಗು, ತದಾ—ಆಗ ಬದುಕಿಸಿದ ಕಾಲದಲ್ಲಿ, (ಉಲೂಪಿಯು), ಪ್ರಹಸ್ಯ—ನಕ್ಕು, ಪುರಾ—ಹಿಂದೆ, ಸುರಲೋಕೇ—ದೇವಲೋಕದಲ್ಲಿ, ಸುರೈಃಪ್ರೋಕ್ತಂ—ದೇವತೆಗಳಿಂದ ಹೇಳಲ್ಪಟ್ಟ, ಯತ್—ಯಾವ ಕಾರಣದಿಂದ, ಭೀಷ್ಮಾದ್ಯಾಃ—ಭೀಷ್ಮರೇ ಮೊದಲಾದವರು, ಅತಿಧರ್ಮತಃ—ಪೂರ್ಣ ಧರ್ಮದಿಂದ, ನ ಹತಾಃ–ಸಂಪರಿಸಲ್ಪಡಲಿಲ್ಲವೋ, ತೇನ ದೋಷೇಣ—ಆ ದೋಷದಿಂದ, ಪಾರ್ಥಃ—ಅರ್ಜುನನು, ರಣೇ—ಯುದ್ಧದಲ್ಲಿ, ಅತಿವೇದನಾಂ-ಬಹು ವೇದನೆಯನ್ನು, ವ್ರಜೇತ್—ಹೊಂದಲಿ, ಇತಿ–ಎಂಬ, ವಾಕ್ಯಂ—ಮಾತು, ಮಯಾ–ನನ್ನಿಂದ, ಶ್ರುತಂ–ಕೇಳಲ್ಪಟ್ಟಿತು, ತತ್—ಆಗಬೇಕಾದ ಆ ವೇದನೆಯು ಪರತಃ—ಬೇರೆಯವರಿಂದ, ನ ಸ್ಯಾತ್—ಆಗದಿರಲಿ, ಇತಿ–ಎಂದು, ದೇವಾನಾಂ—ದೇವತೆಗಳ, ವಚನಾತ್ಪಿತ—ಅರ್ಜುನನಿಗೆ ಮಗನಿಂದ ವೇದನೆಯಾಗುವ ಮಾತಿದ್ದದ್ದರಿಂದಲೇ, ಅಹಂ—ನಾನು ಯುದ್ಧ ಇತಿ—ಯುದ್ಧಮಾಡುಎಂದು, ಆತ್ಮಜಂ—ಮಗನನ್ನು ಕುರಿತು, ಅಬ್ರವಂ—ಹೇಳಿದೆನು. ॥೧೦೫—೧೦೭॥

ದೇವಾನಾಮೇವ ಸಂಕಲ್ಪಾನ್ಮೂರ್ಛಿತಶ್ಚಾರ್ಜುನೋಽಭವತ್ ।
ಭುಕ್ತದೋಷಫಲಶ್ಚಾಯಂ ಪುನರ್ಭೋಕ್ಷ್ಯತಿ ನಾನ್ಯತಃ ॥೧೦೮॥

ದೇವಾನಾಂ ಸಂಕಲ್ಪಾತ್ ಏವ—ದೇವತೆಗಳ ಸಂಕಲ್ಪದ ಪ್ರಕಾರವೇ, ಅರ್ಜುನಃ—ಅರ್ಜುನನು ಮೂರ್ಛಿತಃ ಚ ಅಭವತ್—ಮೂರ್ಛಿತನೂ ಆದನು. ಭುಕ್ತದೋಷ ಫಲಃ—ತನ್ನ ದೋಷದಫಲವನ್ನು ಭೋಗಿಸಿರುವ, ಅಯಂ—ಈ ಅರ್ಜುನನು, ಪುನಃ—ಮತ್ತೆ, ಅನ್ಯತಃ—ಬೇರೆಯವರಿಂದ, ನ ಭೋಕ್ಷ್ಯತಿ — ಭೋಗಿಸುವಂತೆ ಆಗುವದಿಲ್ಲ. ॥೧೦೮॥

ಅನ್ಯೇನ ಪಾತಿತಸ್ಯಾಸ್ಯ ಯಶೋ ನಶ್ಯೇತ್ ತ್ರಿಲೋಕಗಮ್ ।
ನಾರ್ಜುನಸ್ಯ ಯಶೋ ನಶ್ಯೇದಿತಿ ದೈವೈರಿದಂ ಕೃತಮ್ ॥೧೦೯॥

ಅನ್ಯೇನ ಪಾತಿತಸ್ಯ ಅಸ್ಯ—ಬೇರೆಯವರಿಂದ ಮೂರ್ಛಿತನಾಗಿ ಬೀಳಿಸಲ್ಪಟ್ಟ ಈ ಅರ್ಜುನನ, ತ್ರಿಲೋಕಗಂ ಯಶಃ—ಮೂರು ಲೋಕದಲ್ಲಿರುವ ಕೀರ್ತಿಯು, ನಶ್ಯೇತ್—ನಶಿಸೀತು, ಅರ್ಜುನಸ್ಯ—ಅರ್ಜುನನ, ಯಶಃ—ಕೀರ್ತಿಯ ು, ನ ನಶ್ಯೇತ್—ನಶಿಸದಿರಲಿ, ಇತಿ—ಎಂಬ ಉದ್ದೇಶದಿಂದ, ದೇವೈಃ—ದೇವತೆಗಳಿಂದ, ಇದಂ—ಇಷ್ಟೆಲ್ಲ ವ್ಯವಸ್ಥೆಯು, ಕೃತಂ—ಮಾಡಲ್ಪಟ್ಟಿತು ॥೧೦೯॥

ಇತ್ಯುಕ್ತಃ ಪ್ರೀತಿಮಾಪೇದೇ ಪುತ್ರಭಾರ್ಯಾಯುತೋಽರ್ಜುನಃ ।
ಯಜ್ಞಾರ್ಥಂ ತಾವಥಾಽಹೂಯ ಪೂಜಿತಃ ಪ್ರಯಯೌ ತತಃ ॥೧೧೦॥

ಇತಿ ಉಕ್ತಃ —ಹೀಗೆ ಉಲೂಪಿಯಿಂದ ಹೇಳಲ್ಪಟ್ಟ, ಪುತ್ರಭಾರ್ಯಾಯುತಃ —ಮಗ (ಬಭ್ರುವಾಹನ), ಹೆಂಡತಿ (ಚಿತ್ರಾಂಗದೆ) ಯರಿಂದ ಕೂಡಿದ, ಅರ್ಜುನಃ —ಅರ್ಜುನನು, ಪ್ರೀತಿಂ ಆಪೇದೇ—ಸಂತೋಷವನ್ನು ಹೊಂದಿದನು, ಅಥ—ನಂತರ, ಪೂಜಿತಃ ಸನ್—ಅವರೆಲ್ಲರಿಂದ ಪೂಜಿತನಾಗಿ, ತೌ—ಚಿತ್ರಾಂಗದೆ ಬಭ್ರುವಾಹನ–ರಿಬ್ಬರನ್ನು, ಯಜ್ಞಾರ್ಥಂ ಆಹೂಯ—ಯಜ್ಞಕ್ಕೆ ಬರಲು ಆಮಂತ್ರಿಸಿ, ತತಃ—ಆ ಊರಿನಿಂದ, ಪ್ರಯಯೌ—ಹೊರಟನು. ॥೧೧೦॥

ದ್ವಾರಕಾಯಾಃ ಸಮೀಪಸ್ಥಂ ಪ್ರದ್ಯುಮ್ನಾದ್ಯಾಃ ಸುತಾಃ ಹರೇಃ ।
ಪ್ರಸಹ್ಯಾಶ್ವಮುಪಾಜಹ್ರುರಾಹ್ವಯಂತೋಽರ್ಜುನಂ ಯುಧೇ ॥೧೧೧॥

ದ್ವಾರಕಾಯಾಃ ಸಮೀಪಸ್ಥಂ—ದ್ವಾರಕೆಯ ಸಮೀಪದಲ್ಲಿ ಬಂದಿರುವ, ಅಶ್ವಂ—ಕುದುರೆಯನ್ನು, ಹರೇಃ ಸುತಾಃ —ಶ್ರೀಕೃಷ್ಣಪರಮಾತ್ಮನ ಮಕ್ಕಳಾದ, ಪ್ರದ್ಯುಮ್ನಾದ್ಯಾಃ —ಪ್ರದ್ಯುಮ್ನ ಮೊದಲಾದವರು, ಪ್ರಸಹ್ಯ—ಬಲಾತ್ಕಾರದಿಂದ, ಅರ್ಜುನಂ—ಅರ್ಜುನನನ್ನು, ಯುಧೇ—ಯುದ್ಧಕ್ಕಾಗಿ, ಆಹ್ವಯಂತಃ ಸಂತಃ—ಕರೆಯುವವರಾಗಿ, ಅಪಾಜಹ್ರುಃ—ಅಪಹರಿಸಿ (ಬಂಧಿಸಿ) ದರು. ॥೧೧೧॥

ಸುಭದ್ರಾಹರಣಂ ಮಾಷ್ಟ್ರಂ ನೀತೇಽಶ್ವೇ ತೈರ್ಧನಂಜಯಃ ।
ಗೌರವಾದ್ವಾಸುದೇವಸ್ಯ ಮಾತುಲಸ್ಯ ಚ ಕೇವಲಮ್ ॥೧೧೨॥

ಮಾತುಲಾಯಾಬ್ರವೀದಶ್ವಂ ಹೃತಂ ಪೌತ್ರೈರಬಂಧುವತ್ ।
ಸ ನಿರ್ಭರ್ತ್ಸ್ಯ ಕುಮಾರಾಂಸ್ತಾನ್ ಮೋಕ್ಷ್ಯಮಶ್ವಮುವೋಚಯತ್ ॥೧೧೩॥

ಸುಭದ್ರಾಹರಣಂ—ಸುಭದ್ರಾಹರಣವನ್ನು ಅರ್ಜುನನು ಮಾಡಿದ್ದರಿಂದ ಯಾದವರಿಗೆ ಬಂದ ಅಸಾಮರ್ಥ್ಯ ರೂಪ ಅಪಕೀರ್ತಿಯನ್ನು, ಮಾಷ್ಟ್ರಂ—(ಅರ್ಜುನನನ್ನು ಎದುರಿಸಲು ನಾವು ಸಮರ್ಥರು ಎಂದು ತೋರಿಸಿ) ಪರಿಹರಿಸಿಕೊಳ್ಳಲು, ತೈಃ —ಆ ಯಾದವಕುಮಾರರಿಂದ, ಅಶ್ವೇ ನೀತೇ ಸತಿ— ಕುದುರೆಯು ಒಯ್ಯಲ್ಪಡುತ್ತಿರಲು, ಧನಂಜಯಃ—ಅರ್ಜುನನು, ವಾಸುದೇವಸ್ಯ—ಶ್ರೀಕೃಷ್ಣಪರಮಾತ್ಮನ ಮೇಲಿನ,

ಚ—ಮತ್ತು, ಮಾತುಲಸ್ಯ—ಸೋದರಮಾವನಾದ ವಸುದೇವನ ಮೇಲಿನ, ಗೌರವಾತ್ ಕೇವಲಂ—ಗೌರವದಿಂದಲೇ, ಮಾತುಲಾಯ—ಸೋದರಮಾವನಾದ ವಸುದೇವನಿಗೆ, ಪೌತ್ರೈಃ—ಅವನ ಮೊಮ್ಮಕ್ಕಳಿಂದ, ಅಬಂಧುವತ್—ಬಂಧುಗಳಲ್ಲದವರಂತೆ, ಅಶ್ವಂ—ಕುದುರೆಯನ್ನು, ಹೃತಂ—ಅಪಹರಿಸಲ್ಪಟ್ಟದ್ದನ್ನು, ಅಬ್ರವೀತ್—ಹೇಳಿದನು ಸಃ —ಆ ವಸುದೇವನು, ತಾನ್ ಕುಮಾರಾನ್—ಆ ಮಕ್ಕಳನ್ನು, ನಿರ್ಭರ್ತ್ಸ್ಯ—ಬೈದು ಜಬರಿಸಿ, ಮೇಧ್ಯಂ ಅಶ್ವಂ—ಯಜ್ಞ ಕುದುರೆಯನ್ನು, ಅಮೋಚಯತ್—ಬಿಡಿಸಿದನು. ॥೧೦೨॥ ॥೧೦೩॥

ಮಾತುಲಂ ಸ ಪ್ರಣಮ್ಯಾಥ ಯಜ್ಞಾರ್ಥಂ ತಾನ್ ನಿಮಂತ್ರ್ಯ ಚ ।
ಗಚ್ಛನ್ ಗಜಾಹ್ವಯಂ ದೂತಮಗ್ರತೋಽಯಾಪಯನ್ನೃಪೇ ॥೧೧೪॥

ಅಥ—ನಂತರ, ಸಃ—ಅರ್ಜುನನು, ಮಾತುಲಂ—ಸೋದರಮಾವ ವಸುದೇವನನ್ನು, ಪ್ರಣಮ್ಯ—ನಮಿಸಿ, ತಾನ್—ಆ ಎಲ್ಲ ಯಾದವರನ್ನು, ಯಜ್ಞಾರ್ಥಂ—ಯಜ್ಞಕ್ಕೆ, ನಿಮಂತ್ರ್ಯ—ಆಮಂತ್ರಿಸಿ, ಗಜಾಹ್ವಯಂ—ಹಸ್ತಿನಾವತಿಯನ್ನು ಕುರಿತು, ಗಚ್ಛನ್ ಸನ್—ಹೊರಟವನಾಗಿ, ಅಗ್ರತಃ—ಮುಂದೆ, ನೃಪೇ—ಧರ್ಮರಾಜನ ಕಡೆಗೆ. ದೂತಂ—ತನ್ನ ದೂತನನ್ನು, ಯಾಪಯತ್—ಕಳಿಸಿದನು ॥೧೧೪॥

ಸಕೃಷ್ಣಃ ಸಹಸೋದರ್ಯಃ ಶ್ರುತ್ವಾಽಸೌ ಪ್ರಾಪ್ತಮರ್ಜುನಮ್ ।
ಪ್ರೀತೋ ಬಾಷ್ಪಾಭಿಪೂರ್ಣಾಕ್ಷೋ ಭ್ರಾತೃಸ್ನೇಹಾದಭಾಷತ ॥೧೧೫॥

ಸಕೃಷ್ಣಃ—ಶ್ರೀಕೃಷ್ಣನಿಂದ ಸಹಿತನಾದ, ಸಹಸೋದರ್ಯಃ—ಸೋದರರಿಂದ ಸಹಿತನಾದ, ಅಸೌ—ಆ ಧರ್ಮರಾಜನು, ಅರ್ಜುನಂ—ಅರ್ಜುನನನ್ನು, ಪ್ರಾಪ್ತಂ—ಬಂದವನನ್ನಾಗಿ, ಶ್ರುತ್ವಾ—ಕೇಳಿ, ಪ್ರೀತಃ ಸನ್—ಸಂತುಷ್ಟನಾಗಿ, ಬಾಷ್ಪಾಭಿಪೂರ್ಣಾಕ್ಷಃ ಸನ್—ಕಣ್ಣುಗಳಲ್ಲಿ ಆನಂದಬಾಷ್ಪಗಳಿಂದ ಕೂಡಿದವನಾಗಿ, ಭ್ರಾತೃಸ್ನೇಹಾತ್—ಸಹೋದರ ಸ್ನೇಹದಿಂದ, ಅಭಾಷತ—ಮಾತನಾಡಿದನು. ॥೧೧೫॥

ಭಾವಾನುವಾದ—೧೦೬—೧೧೫

ಗಂಡನನ್ನು ಬದುಕಿಸಿದ ಉಲೂಪಿಯು, ನಗುತ್ತ ಚಿತ್ರಾಂಗದೆಯನ್ನು ಕುರಿತು ನೋಡು ಚಿತ್ರಾಂಗದೆ, ದೇವಲೋಕದಲ್ಲಿ ದೇವತೆಗಳು ಆಡಿದ ಮಾತನ್ನು ನಾನು ಕೇಳಿದ್ದೇನೆ. ಅದನ್ನು ಹೇಳುವೆ ಕೇಳು. ಅದೇನೆಂದರೆ—ಭೀಷ್ಮಾದಿಗಳನ್ನು ಪರಿಪೂರ್ಣಧರ್ಮದಿಂದಲೇ ಸಂಹರಿಸಲಾಗಿಲ್ಲವಾದ್ದರಿಂದ ಅರ್ಜುನನೂ ಕೂಡ ಯುದ್ಧದಲ್ಲಿ ಬಹುವೇದನೆಯನ್ನು ಹೊಂದುವಂತಾಗಲಿ, ಆದರೆ ಬೇರೆಯವರಿಂದ ವೇದನೆಯಾಗುವದು ಬೇಡ, ಅವನ ಮಗನಿಂದಲೇ ಆಗಲಿ; ಅಂದರೆ ಅವನ ಕೀರ್ತಿಗೆ ಧಕ್ಕೆಯಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ನಾನು ನಿನ್ನ ಮಗನಿಗೆ ಯುದ್ಧಮಾಡು ಎಂದು ಹೇಳಿದ್ದು. ಆ ದೇವತಾ ಸಂಕಲ್ಪದ ಪ್ರಕಾರವೇ ಅರ್ಜುನನು ಮೂರ್ಛಿತನಾದದ್ದು. ತನ್ನ ದೋಷದ ಫಲವನ್ನು ಭೋಗಿಸಿಯಾಯಿತು. ಇನ್ನು ಬೇರೆಯವರಿಂದ ಭೋಗಿಸುವ ಪ್ರಸಂಗವೇ ಇಲ್ಲ. ಇದೆಲ್ಲ ಸಂಗತಿಯನ್ನು ತಿಳಿದ ಅರ್ಜುನನೂ ಹೆಂಡತಿ ಮಕ್ಕಳಿಂದ ಕೂಡಿ ಸಂತೋಷಪಟ್ಟು, ಅವರಿಬ್ಬರಿಗೂ ಯಜ್ಞಕ್ಕೆ ಬರಹೇಳಿ, ಅಲ್ಲಿಂದ ಹೊರಟನು. ದ್ವಾರಕೆಯ ಸಮೀಪದಲ್ಲಿ ಅರ್ಜುನನಿರುವಾಗ, ಶ್ರೀಕೃಷ್ಣನ ಮಕ್ಕಳಾದ ಪ್ರದ್ಯುಮ್ನಾದಿಗಳು ಬಲಾತ್ಕಾರದಿಂದ ಯಜ್ಞಾಶ್ವವನ್ನು ಬಂಧಿಸಿದರು. ಯುದ್ಧಮಾಡಿ ಗೆದ್ದು, ಅದನ್ನು ಬಿಡಿಸಿಕೊ ಎಂದು ಅರ್ಜುನನಿಗೆ ಹೇಳಿದರು. ಸುಭದ್ರಾದೇವಿಯನ್ನು ತಮಗೆಲ್ಲ ಮೋಸಮಾಡಿ ಅಪಹರಿಸಿದ್ದಕ್ಕೆ ಸೇಡನ್ನು ತೀರಿಸಲು ಮತ್ತು ಅರ್ಜುನನ ಜೊತೆಗೆ ಯುದ್ಧ ಮಾಡಲು ಹೆದರಿ ಅವಳನ್ನು ತರುವ

ಪ್ರಯತ್ನಕ್ಕೆ ಯಾದವರು ಹೋಗಲಿಲ್ಲ ಎಂಬ ತಮಗಿದ್ದ ಅಪಕೀರ್ತಿಯನ್ನು ಈಗ ಯುದ್ಧಮಾಡಿ ಅಳಿಸಬೇಕೆಂದೂ ಅವರ ಉದ್ದೇಶವಿತ್ತು. ಅವರು ಬಂಧಿಸಿದಾಗ ಅರ್ಜುನನು ಮಾತ್ರ, ಶ್ರೀಕೃಷ್ಣ ಪರಮಾತ್ಮನ ಮೇಲಿನ ಹಾಗು ಸೋದರಮಾವನಾದ ವಸುದೇವನ ಮೇಲಿನ ಗೌರವದಿಂದ ಯುದ್ಧ-ಕ್ಕಿಳಿಯದೇ ವಸುದೇವನಿಗೆ ವಿಷಯವನ್ನು ತಿಳಿಸಿದನು. ಆಗ ವಸುದೇವನು ಆ ಮಕ್ಕಳನ್ನು ಜಬರಿಸಿ ಕುದುರೆಯನ್ನು ಬಿಡಿಸಿದನು. ಅರ್ಜುನನು ವಸುದೇವನಿಗೆ ನಮಿಸಿ, ಎಲ್ಲರಿಗೂ ಯಜ್ಞಕ್ಕೆ ಬರಹೇಳಿ ಹಸ್ತಿನಾವತಿಗೆ ಹೊರಟನು ಈ ಎಲ್ಲ ಸುದ್ದಿಯನ್ನು ಧರ್ಮರಾಜನಿಗೆ ತಿಳಿಸಲು ದೂತನನ್ನು ಮುಂದೆ ಕಳಿಸಿದನು. ಎಲ್ಲವನ್ನು ಕೇಳಿದ, ಅರ್ಜುನನು ಬಂದದ್ದನ್ನು ತಿಳಿದ ಧರ್ಮರಾಜನು ಬಹಳ ಸಂತೋಷದಿಂದ, ಆನಂದ ಬಾಷ್ಪಗಳನ್ನು ಸುರಿಸುತ್ತಾ ಮಾತನಾಡಿದನು.

ವಿಶೇಷಾಂಶ—ಭೀಷ್ಮಾದಿಗಳನ್ನು ಅತಿ ಧರ್ಮದಿಂದ ಸಂಹರಿಸಲಿಲ್ಲ ಎಂದರೆ ಅಧರ್ಮದಿಂದ ಕೊಂದದ್ದು ಎಂದು ಅರ್ಥವಲ್ಲ. ಭೀಷ್ಮಾದಿಗಳನ್ನು ಸಂಹರಿಸದಿದ್ದರೆ ವಿಷ್ಣುದ್ವಿಟ್‌ತದನುಬಂಧಿ ನಿಗ್ರಹ ರೂಪವಾದ ಧರ್ಮವನ್ನು ಬಿಟ್ಟಂತಾಗಿ ಬಹು ಅಧರ್ಮವು ಘಟಿಸುತ್ತಿತ್ತು. ಸಂಹರಿಸುವಾಗ ಶಿಖಂಡಿಯನ್ನು ನಿಲ್ಲಿಸಿ ಕೊಲ್ಲುವ ಉಪಾಯದ ಅನುಸರಣೆ ಮಾಡಿದ್ದರಿಂದ ಸ್ವಲ್ಪ ಅಧರ್ಮ ಎಂದೆನಿಸಿದರೂ ಮಹಾ ಅಧರ್ಮ ತಪ್ಪಿದ್ದರಿಂದ ಬಹು ಧರ್ಮವೇ ಘಟಿಸಿದ್ದರಿಂದ ದೋಷವಾಗಿಲ್ಲ.

ವಾಸುದೇವ ನ ಪಶ್ಯಾಮಿ ದುರ್ಲಕ್ಷಣಮಜಾರ್ಜುನೇ ।
ಕೇನ ದುರ್ಲಕ್ಷಣೇನಾಯಂ ಬಹುದುಃಖೀ ಪ್ರವಾಸಗಃ ॥೧೧೬॥

ಅಜ—ಉತ್ಪತ್ತಿ ರಹಿತನಾದ, ವಾಸುದೇವ....ಶ್ರೀಕೃಷ್ಣ ಪರಮಾತ್ಮನೇ, ಅರ್ಜುನೇ—ಅರ್ಜುನನ ಶರೀರದಲ್ಲಿ, ದುರ್ಲಕ್ಷಣಂ—ಯಾವದೇ ದುರ್ಲಕ್ಷಣವನ್ನು, ನ ಪಶ್ಯಾಮಿ—ಕಾಣುವದಿಲ್ಲ, ಅಯಂ—ಈ ಅರ್ಜುನನು, ಕೇನ ದುರ್ಲಕ್ಷಣೇನ – ಯಾವ ದುರ್ಲಕ್ಷಣದಿಂದಾಗಿ, ಪ್ರವಾಸಗಃ ಸನ್—ಯಾವಾಗಲೂ ಹೆಚ್ಚಾಗಿ ಪ್ರವಾಸದಲ್ಲಿರು-ವವನಾಗಿ, ಬಹುದುಃಖೀ—ಬಹುದುಃಖಪೂರ್ಣವನಾಗಿರುವನು (ಎಂದು ಕೇಳಿದನು) ॥೧೧೬॥

ಪೃಷ್ಟಸ್ತಂ ಕೇಶವಃ ಸ್ಮಾಹ ಭ್ರಾತಾ ತೇ ದೀರ್ಘಪಿಂಡಿಕಃ ।
ತೇನಾಯಂ ದುಃಖಬಹುಲಃ ಇತ್ಯುಕ್ತ್ವಾ ಪುನರೇವ ಚ ।
ವದಂತಮೇವ ಪಾಂಚಾಲೀ ಕಟಾಕ್ಷೇಣ ನ್ಯವಾರಯತ್ ॥೧೧೭॥

(ಇತಿ) ಪೃಷ್ಟಃ—ಹೀಗೇ ಕೇಳಿಸಿಕೊಳ್ಳಲ್ಪಟ್ಟ, ಕೇಶವಃ — ಶ್ರೀಕೃಷ್ಣ ಪರಮಾತ್ಮನು, (ಧರ್ಮರಾಜನನ್ನು ಕುರಿತು), ತೇ ಭ್ರಾತಾ—ನಿನ್ನ ಸಹೋದರನಾದ ಅರ್ಜುನನು, ದೀರ್ಘಪಿಂಡಿಕಃ —ಉದ್ದ ದೇಹವುಳ್ಳವನು ಆಗಿರುವನು. ತೇನ—ಆ ದುರ್ಲಕ್ಷಣದಿಂದ, ಅಯಂ—ಈ ಅರ್ಜುನನು, ದು:ಖಬಹುಲ: —ಬಹುದು:ಖಿಯಾಗಿರುವನು, ಇತಿ ಉಕ್ತ್ವಾ—ಎಂದು ಹೇಳಿ, ಪುನ: ಏವ ಚ—ಮತ್ತೆ ಕೂಡ, ವದಂತಂ—ದೋಷವನ್ನು ಹೇಳಲುದ್ಯುಕ್ತನಾದ ಶ್ರೀಕೃಷ್ಣನನ್ನು, ಪಾಂಚಾಲೀ—ದ್ರೌಪದೀದೇವಿಯು, ಕಟಾಕ್ಷೇಣ—ನೋಟದ ಸೂಚನೆಯಿಂದ, ನ್ಯವಾರಯತ್—ತಡೆದಳು. ॥೧೧೭॥

ಸಮಸ್ತಲಕ್ಷಣಾಭಿಜ್ಞಾಃ ಕೃಷ್ಣಃಸತ್ಯವ್ರತೋದರ: ।
ಕೃಷ್ಣಾ ಚ ಪಂಚನೋ ನಾಸ್ತಿ ವಿದ್ಯಾ ಶುದ್ಧೀಯಮುಂಜಸಾ ॥೧೧೮॥

ಪ್ರಸಂಗಾತ್ ಪ್ರಾಪ್ತುಮಿಚ್ಛೇತ್ ತಾಂ ವಿದ್ಯಾಶೀಲೋ ಯುಧಿಷ್ಠಿರಃ ।
ಇತಿ ಲೋಭಾತ್ ತು ಪಾಂಚಾಲೀ ವಾಸುದೇವಂ ನ್ಯವಾರಯತ್ ॥೧೧೯॥

ಸಮಸ್ತಲಕ್ಷಣಾಭಿಜ್ಞಃ —ಶರೀರದ ಎಲ್ಲ ಲಕ್ಷಣಗಳನ್ನು ತಿಳಿದವರು. ಕೃಷ್ಣಃ —ಶ್ರೀಕೃಷ್ಣ ಪರಮಾತ್ಮನು, ಸತ್ಯಾ—ಸತ್ಯಭಾಮಾದೇವಿಯು, ವೃಕೋದರಃ — ಭೀಮಸೇನದೇವರು, ಚ—ಮತ್ತು, ಕೃಷ್ಣಾ—ದ್ರೌಪದೀದೇವಿಯು (ಈ ನಾಲ್ಕೇ ಜನರು), ಪಂಚಮಃ ನಾಸ್ತಿ—ಐದನೆಯವನಿಲ್ಲ, ಇಯಂ ವಿದ್ಯಾ—ಈ ವಿದ್ಯೆಯು, ಅಂಜಸಾ ಶುದ್ಧಾ—ಬಹುಶ್ರೇಷ್ಠವಾದದ್ದು, ಪ್ರಸಂಗಾತ್—ಈಗ ಅದರ ಪ್ರಸಕ್ತಿ ಬಂದದ್ದರಿಂದ, ವಿದ್ಯಾಶೀಲಃ —ವಿದ್ಯಾಸಂಪಾದನೆ ಮಾಡುವ ಸ್ವಭಾವದವನಾದ, ಯುಧಿಷ್ಠಿರಃ —ಧರ್ಮರಾಜನು ಲೋಭಾತ್—ವಿದ್ಯಾ ಸಂಗ್ರಹದ ಇಚ್ಛೆಯಿಂದ, ತಾಂ ವಿದ್ಯಾಂ—ಆ ವಿದ್ಯೆಯನ್ನು, ಪ್ರಾಪ್ತುಂ ಇಚ್ಛೇತ್—ಹೊಂದಲು ಇಚ್ಛಿಸಿಯಾನು ಎಂಬ ಕಾರಣದಿಂದ, ಪಾಂಚಾಲೀ—ದ್ರೌಪದೀದೇವಿಯು, ವಾಸುದೇವಂ—ಶ್ರೀಕೃಷ್ಣ ಪರಮಾತ್ಮನನ್ನು, ನ್ಯವಾರಯತ್—ತಡೆದಳು. ॥೧೧೮॥ ॥೧೧೯॥

ತದ್ಗೌರವಾದ್ ವಾಸುದೇವೋ ನೋತ್ತರಂ ಪ್ರತ್ಯಭಾಷತ ।
ವಿಸ್ಮಾರಯಾಮಾಸ ಚ ತಂ ಪ್ರಬ್ರುವಾಣಃ ಕಥಾಂತರಮ್ ॥೧೨೦॥

ತದ್ಗೌರವಾತ್—ಆ ದ್ರೌಪದೀಅಭಿಪ್ರಾಯದ ಮೇಲಿನ ಸಮ್ಮತಿಯಿಂದ, ವಾಸುದೇವಃ—ಶ್ರೀಕೃಷ್ಣನು, ಉತ್ತರಂ—ಮುಂದಿನ ಲಕ್ಷಣ ಕಥನ ರೂಪ ಉತ್ತರವನ್ನು, ನ ಪ್ರತ್ಯಭಾಷತ—ಹೇಳಲಿಲ್ಲ, ಕಥಾಂತರಂ—ಬೇರೆ ಕಥೆಯನ್ನು, ಪ್ರಬ್ರುವಾಣಃ ಸನ್—ಹೇಳುವವನಾಗಿ, ತಂ—ಆ ಧರ್ಮರಾಜನಿಗೆ ಅದರ ಬಗ್ಗೆ, ವಿಸ್ಮಾರಯಾಮಾಸ—ಮರೆಯಿಸಿಬಿಟ್ಟನು. ॥೧೨೦॥

ಉದರಸ್ಯ ಕಿಂಚಿದಾಧಿಕ್ಯಂ ವೃಷಣಾಧಿಕ್ಯಮೇವ ಚ ।
ಸವ್ಯಬಾಹೋಸ್ತಥಾऽऽಧಿಕ್ಯಂ ದುರ್ಲಕ್ಷಣಮಥೋऽರ್ಜುನೇ ॥೧೨೧॥

ನೈವೋಕ್ತಂ ವಾಸುದೇವೇನ ದೃಶ್ಯಮಾನಮಪಿ ಸ್ಫುಟಮ್ ।
ಜ್ಞಾನಾನಂದಹ್ರಾಸಕರಾ ಹ್ಯೇತೇ ದೋಷಾಃ ಸದಾತನಾಃ ॥೧೨೨॥

॥

ಅಥೋ—ಅಷ್ಟೇ ಅಲ್ಲದೇ, ಅರ್ಜುನೇ—ಅರ್ಜುನನಲ್ಲಿ, ಸ್ಫುಟಮ್—ಸ್ಪಷ್ಟವಾಗಿ, ದೃಶ್ಯಮಾನಂ—ತೋರುವಂಥ, ದುರ್ಲಕ್ಷಣಂ—ಶರೀರದ ಅವಲಕ್ಷಣವಾದ, ಉದರಸ್ಯ ಕಿಂಚಿತ್ ಆಧಿಕ್ಯಂ—ಉದರಭಾಗದ ಸ್ವಲ್ಪ ಹೆಚ್ಚಳವು, ವೃಷಣಾಧಿಕ್ಯಂ—ವೃಷಣದಲ್ಲಿಯು ಹೆಚ್ಚಳವು, ತಥಾ—ಹಾಗೂ, ಸವ್ಯಬಾಹೋಃ ಆಧಿಕ್ಯಂ—ಎಡಗೈಯ ಆಧಿಕ್ಯವು. ವಾಸುದೇವೇನ—ಶ್ರೀಕೃಷ್ಣಪರಮಾತ್ಮನಿಂದ, ನೈವ ಉಕ್ತಂ—ಹೇಳಲ್ಪಡಲೇಇಲ್ಲ. ಏತೇ ದೋಷಾಃ —ಈ ದೋಷಗಳು, ಸದಾತನಾಃ —ಸದಾಕಾಲ ಜೀವರಲ್ಲಿರುವವುಗಳೇ. ಜ್ಞಾನಾನಂದ ಹ್ರಾಸಕರಾಃ—ಜ್ಞಾನಾನಂದಾದಿಗುಣಗಳ ಹ್ರಾಸವನ್ನು ಮಾಡುವಂಥವುಗಳು. ॥೧೨೧॥ ॥೧೨೨॥

ಸಮಸ್ತಜೀವರಾಶೌ ತದ್ ದುಷ್ಟಲಕ್ಷಣವರ್ಜಿತೌ ।
ಪೂರ್ಣಚಿತ್ಸುಖಶಕ್ತ್ಯಾದೇರ್ಯೋಗ್ಯೌ ಕೃಷ್ಣಾ ಚ ಮಾರುತಿಃ ॥೧೨೩॥

ತತ್—ಆದ್ದರಿಂದ (ದುರ್ಲಕ್ಷಣಗಳು ಜ್ಞಾನಾದಿಗುಣಗಳಪೂರ್ಣತೆಗೆ ವಿರೋಧಿಗಳಾದ್ದರಿಂದ) ಸಮಸ್ತಜೀವರಾಶೌ—ಎಲ್ಲ ಜೀವರ ಸಮೂಹದಲ್ಲಿ, ದುಷ್ಟಲಕ್ಷಣವರ್ಜಿತೌ—ದುರ್ಲಕ್ಷಣಗಳಿಂದ ರಹಿತರಾದವರು, ಪೂರ್ಣಚಿತ್ಸುಖಶಕ್ತ್ಯಾದೇಃ—ಪೂರ್ಣಜ್ಞಾನ, ಸುಖ, ಶಕ್ತಿ ಮೊದಲಾದ ಗುಣಗಳಿಗೆ, ಯೋಗ್ಯೌ—ಯೋಗ್ಯರಾದ, ಕೃಷ್ಣಾ ಚ ಮಾರುತಿಃ—ದ್ರೌಪದೀ (ಭಾರತೀ). ಮತ್ತು ವಾಯುದೇವರು (ಭೀಮರು) ಇವರಿಬ್ಬರೇ. ॥೧೨೩॥

ಅನಾದಿದುಃಖಹೀನತ್ವೇ ಸುಖಾಧಿಕ್ಯೇ ಚ ಲಕ್ಷಣಮ್ ।
ರುಕ್ಮಿಣೀಸತ್ಯಭಾಮಾದಿರೂಪಾಯಾಃ ಶ್ರಿಯ ಏವ ತು ॥೧೨೪॥

ಮುಖ್ಯಂ ತತೋಽಪಿ ಮುಖ್ಯಂ ತು ಸ್ವಾತಂತ್ರ್ಯಾದೇರಶೇಷತಃ ।
ಗುಣರಾಶೇಃ ಪರಂ ಲಿಂಗಂ ನಿತ್ಯಂ ವ್ಯಾಸಾದಿರೂಪಿಣಃ ।
ವಿಷ್ಣೋರೇವ ನಚಾನ್ಯಸ್ಯ ಸ ಹ್ಯೇಕಃ ಪೂರ್ಣಸದ್ಗುಣಃ ॥೧೨೫॥

ಅನಾದಿ ದುಃಖಹೀನತ್ವೇ—ಅನಾದಿಕಾಲದಿಂದಲೂ ದುಃಖರಹಿತರಾಗಿರುವದರಬಗ್ಗೆ, ಚ—ಮತ್ತು ಸುಖಾಧಿಕ್ಯೇ—ಅನಾದಿಕಾಲದಿಂದ ಸುಖಪೂರ್ಣತೆಯಿರುವದರ ಬಗ್ಗೆ, ಮುಖ್ಯಂ ಲಕ್ಷಣಮ್—ಜ್ಞಾಪಕವಾದ ಮುಖ್ಯವಾದ ಶರೀರಲಕ್ಷಣವು, ರುಕ್ಮಿಣೀ ಸತ್ಯಭಾಮಾದಿರೂಪಾಯಾಃ—ರುಕ್ಮಿಣೀ ಸತ್ಯಭಾಮಾದಿರೂಪಳಾದ ಶ್ರಿಯಃ ಏವ—ಶ್ರೀಲಕ್ಷ್ಮೀದೇವಿಗೇ ಇರುವದು. ತತಃ ಅಪಿ—ಆ ಲಕ್ಷ್ಮೀದೇವಿಗಿಂತಲೂ, ಮುಖ್ಯಂ—ಮುಖ್ಯವಾದ, ಸ್ವಾತಂತ್ರ್ಯಾದೇಃ—ಸ್ವಾತಂತ್ರ್ಯ ಮೊದಲಾದ, ಅಶೇಷತಃ ಗುಣರಾಶೇಃ—ಎಲ್ಲ ಗುಣಗಳರಾಶಿಗೆ, ಪರಂ ಲಿಂಗಂ—ಮುಖ್ಯ ಜ್ಞಾಪಕವಾದ ಶರೀರಲಕ್ಷಣವು, ನಿತ್ಯಂ—ಯಾವಾಗಲೂ, ವ್ಯಾಸಾದಿರೂಪಿಣಃ—ವ್ಯಾಸಾದಿರೂಪವುಳ್ಳ. ವಿಷ್ಣೋಃ ಏವ—ಶ್ರೀಹರಿಗೇ ಇರುವದು, ಅನ್ಯಸ್ಯ ನ ಚ—ಬೇರೆಯವರಿಗೆ ಇರುವದಿಲ್ಲ. ಸಃ ಏಕಃ ಹಿ—ಅವನೊಬ್ಬನೇ, ಪೂರ್ಣಸದ್ಗುಣಃ—ಪೂರ್ಣ ಸದ್ಗುಣವುಳ್ಳವನು. ॥೧೨೪॥ ॥೧೨೫॥

ಭಾವಾನುವಾದ—೧೧೬—೧೨೫

ಸ್ವಾಮೀ ಶ್ರೀಕೃಷ್ಣನೇ, ಅರ್ಜುನನಲ್ಲಿ ದುಃಖಕಾರಣಗಳಾದ ಅಂಥ ದುರ್ಲಕ್ಷಣಗಳೇನೂ ಕಾಣುವದಿಲ್ಲ. ಆದರೂ ಇವನು ಯಾವಾಗಲೂ ಪ್ರವಾಸದಲ್ಲಿದ್ದು ದುಃಖಿಯಾಗಲು ಕಾರಣವೇನು ? ಎಂದು ಶ್ರೀಕೃಷ್ಣನನ್ನು ಧರ್ಮರಾಜನು ಕೇಳಿದನು. ಆಗ ಶ್ರೀಕೃಷ್ಣನು ಧರ್ಮರಾಜನಿಗೆ ನಿನ್ನ ತಮ್ಮ ಅರ್ಜುನನಿಗೆ ದೀರ್ಘದೇಹ, ಉದ್ದ ಹಿಂಬಡ ಎಂಬ ದುರ್ಲಕ್ಷಣವಿದ್ದರಿಂದ, ಬಹುದುಃಖಿಯಾಗಿರುವನು ಎಂದು ಹೇಳಿ ಇನ್ನೂ ಬೇರೆ ದುರ್ಲಕ್ಷಣಗಳನ್ನು ಹೇಳುವದರಲ್ಲಿದ್ದನು. ಆಗ ದ್ರೌಪದೀದೇವಿಯು ಕಣ್ಣಸನ್ನೆಯನ್ನು ಮಾಡಿ ಹೇಳದಿರುವಂತೆ ಸೂಚಿಸಿದಳು. ಏಕೆಂದರೆ ಈ ಲಕ್ಷಣವಿದ್ಯೆಯು ಶುದ್ಧವಾದದ್ದು; ಅತಿ ಗೋಪ್ಯವಾದದ್ದು. ಇದನ್ನು ತಿಳಿದವರು ದೇವರು. ಶ್ರೀ ಲಕ್ಷ್ಮೀದೇವಿಯು ಶ್ರೀ ವಾಯುದೇವರು, ಹಾಗೂ ಶ್ರೀ ಭಾರತೀದೇವಿಯೆರು ಈ ನಾಲ್ವರೇ. ಇವರನ್ನು ಬಿಟ್ಟು ಬೇರೆ ಯಾರೂ ತಿಳಿದಿಲ್ಲ. ಈಗ ಲಕ್ಷಣಗಳನ್ನು ಹೇಳುತ್ತಾ ಹೋದರೆ ಅದನ್ನು ಕೇಳುತ್ತಿರುವ ಧರ್ಮರಾಜನು ಹೆಚ್ಚು ಹೆಚ್ಚು ವಿದ್ಯಾ ಸಂಗ್ರಹ ಮಾಡುವ ಇಚ್ಛೆಯುಳ್ಳವನಾದ್ದರಿಂದ ಈ ವಿದ್ಯವನ್ನು ಕೂಡಾ ಸಂಪಾದಿಸಲು ಇಚ್ಛಿಸಬಹುದು. ಆದರೆ ಅದಕ್ಕೆ ಅವನು ಅರ್ಹನಲ್ಲ ಎಂದು ತಿಳಿದು ಸೂಚಿಸಿದಳು. ಅದನ್ನು ತಿಳಿದ ಶ್ರೀಕೃಷ್ಣನೂ ಕೂಡ ದ್ರೌಪದೀದೇವಿಯ ಅಭಿಪ್ರಾಯದ ಬಗ್ಗೆ ಸಮ್ಮತಿಯಿಂದ ಲಕ್ಷಣಗಳನ್ನು ಹೇಳುವದನ್ನು ನಿಲ್ಲಿಸಿ ಬೇರೆ ವಿಷಯವನ್ನು ಮಾತಾಡುತ್ತಾ ಈ ವಿಷಯವನ್ನು ಮರೆಯಿಸಿದನು. ಅರ್ಜುನನಲ್ಲಿ ಉದರಾಧಿಕ್ಯ, ವೃಷಣಾಧಿಕ್ಯ, ಎಡಗೈಯಲ್ಲಿ ಆಧಿಕ್ಯ ಈ ದುರ್ಲಕ್ಷಣಗಳು ಸ್ಪಷ್ಟವಾಗಿದ್ದವು, ಆದರೂ ಕೂಡ

ಅದ್ಯಾವದನ್ನೂ ಶ್ರೀಕೃಷ್ಣನು ಹೇಳಿರಲಿಲ್ಲ. ಈ ದೋಷಗಳು ಜ್ಞಾನಾನಂದಾದಿಗುಣಗಳ ಹ್ರಾಸವನ್ನುಂಟು ಮಾಡುವವು, ಎಲ್ಲ ಜೀವರಲ್ಲಿಯೂ ಇದ್ದೇಇರುವವು. ಜೀವರಲ್ಲಿ ದುರ್ಲಕ್ಷಣ ರಹಿತರೆಂದರೆ ಶ್ರೀ ವಾಯು ದೇವರು ಹಾಗು ಶ್ರೀಭಾರತೀದೇವಿ ಇವರಿಬ್ಬರೇ. ಅವರು ಪೂರ್ಣಜ್ಞಾನಾನಂದಾದಿಗುಣಗಳುಳ್ಳವರು. ಅನಾದಿಕಾಲದಿಂದಲೂ ದು:ಖರಹಿತರು, ಸುಖಪೂರ್ಣರೂ ಆಗಿದ್ದನ್ನುಜ್ಞಾಪಿಸುವ ಲಕ್ಷಣವು ಶ್ರೀ ರುಕ್ಮಿಣೀ ಸತ್ಯಭಾಮಾರೂಪರಾದ ಶ್ರೀಲಕ್ಷ್ಮೀದೇವಿಗೇ ಇರುವದು. ಅವಳಿಗಿಂತಲೂ ಮುಖ್ಯವಾಗಿ ಆ ಲಕ್ಷಣವು ಶ್ರೀವ್ಯಾಸಾದಿರೂಪಿಯಾದ ಶ್ರೀಹರಿಗೇ ಇರುವದು. ಅವನಲ್ಲಿರುವ ಸ್ವಾತಂತ್ರ್ಯಾದಿ ಪೂರ್ಣ ಸದ್ಗುಣಗಳಿಗೆ ಜ್ಞಾಪಕವಾಗಿರುವದು. ಅವನೊಬ್ಬನೇ ಸದಾ ಪೂರ್ಣಗುಣನಾದ್ದರಿಂದ ಅವನೊಬ್ಬನಿಗೇ ಆ ಲಕ್ಷಣವಿರುವದು.

ಸಾಶ್ವೇಽರ್ಜುನೇ ಯಜ್ಞವಾಟಂ ಪ್ರವಿಷ್ಟೇಽಸ್ಯ ಸಹೋದರಾ: ।
ಪೂಜಿತಾ: ಪೂಜಯಾಮಾಸುರ್ಮುದಿತಾ: ಸಹಕೇಶವಾಃ ॥೧೨೬॥

ಸಾಶ್ವೇ—ಯಾಗ ಕುದುರೆಯಿಂದ ಸಹಿತನಾದ, ಅರ್ಜುನೇ—ಅರ್ಜುನನು, ಯಜ್ಞವಾಟಂ—ಯಜ್ಞಶಾಲೆಯನ್ನು, ಪ್ರವಿಷ್ಟೇ ಸತಿ—ಪ್ರವೇಶಿಸುತ್ತಿರಲು, ಮುದಿತಾಃ —ಸಂತುಷ್ಟರಾದ, ಪೂಜಿತಾ: —ಅರ್ಜುನನಿಂದ ಮರ್ಯಾದಿಸಲ್ಪಟ್ಟ, ಸಹಕೇಶವಾ; —ಶ್ರೀಕೃಷ್ಣನಿಂದ ಸಹಿತರಾದ, ಅಸ್ಯ ಸಹೋದರಾ: —ಈ ಅರ್ಜುನನ ಸಹೋದರರು, ಪೂಜಯಾಮಾಸುಃ—ಅರ್ಜುನನ್ನು ಆಲಿಂಗನಾದಿಗಳಿಂದ ಪೂಜಿಸಿದರು. ॥೧೨೬॥

ತತ: ಸ ಯಜ್ಞೋ ಯದುವೀರರಕ್ಷಿತೋ ವ್ಯಾಸೋಪದಿಷ್ಟೋ ಮುನಿಭಿ: ಪ್ರವರ್ತಿತಃ ।
ಅಶೋಭತಾಲಂ ಸಕಲೈರ್ನೃಪೈಶ್ಚ ಸಮಾಗತೈರ್ವಿಪ್ರವರೈಶ್ಚ ಜುಷ್ಟಃ ॥೧೨೭॥

ತತಃ —ಅನಂತರ ಯದುವೀರರಕ್ಷಿತಃ ಶ್ರೀಕೃಷ್ಣಕೃಪಾರಕ್ಷಿತವಾದ, ವ್ಯಾಸೋಪದಿಷ್ಟಃಶ್ರೀ ವೇದವ್ಯಾಸದೇವರ ಮಾರ್ಗದರ್ಶನದಲ್ಲಿ ನಡೆಸಲ್ಪಟ್ಟ, ಮುನಿಭಿಃ ಪ್ರವರ್ತಿತಃ —ಋಷಿಗಳಿಂದ ಮಾಡಿಸಲ್ಪಟ್ಟ ಸಮಾಗತೈಃ —ಯಜ್ಞಕ್ಕಾಗಿ ಬಂದಂಥ ಸಕಲೈಃ ನೃಪೈಃ —ಎಲ್ಲ ರಾಜರಿಂದ, ಚ—ಮತ್ತು, ಸಕಲೈಃ ವಿಪ್ರವರೈಃ —ಎಲ್ಲ ಬ್ರಾಹ್ಮಣಶ್ರೇಷ್ಠರಿಂದ, ಜುಷ್ಟಃ —ಕೂಡಿದ, ಸಃ ಯಜ್ಞಃ —ಆ ಯಜ್ಞವು, ಅಲಂ ಅಶೋಭತ—ಚೆನ್ನಾಗಿ ಶೋಭಿಸಿತು. ॥೧೨೭॥

ಸ ಕೃಷ್ಣಯುಗ್ಮೇನ ಚ ಭಾರ್ಗವೇಣ ತ್ರಿಧಾ ವಿಭಕ್ತೇನ ಪರೇಣಪುಂಸಾ ।
ಆಧಿಷ್ಠಿತೋಽಶೋಭತ ವಿಶ್ವನೇತದ್ ವಿಶ್ವಾದಿರೂಪೇಣ ಯಥೈವ ತೇನ ॥೧೨೮॥

ಕೃಷ್ಣಯುಗ್ಮೇಣ—ಎರಡು ಕೃಷ್ಣರೂಪ (ಯಾದವ ಕೃಷ್ಣ—ವಾಸಿಷ್ಠಕೃಷ್ಣರೂಪ)ಗಳಿಂದ, ಚ—ಮತ್ತು, ಭಾರ್ಗವೇಣ—ಪರಶುರಾಮ ರೂಪದಿಂದ, (ಹೀಗೆ) ತ್ರಿಧಾ ವಿಭಕ್ತೇನ—ಮೂರುರೂಪವುಳ್ಳ, ಪರೇಣ ಪುಂಸಾ—ಸರ್ವೋತ್ತಮ ಪುರುಷನಾದ ಶ್ರೀ ಹರಿಯಿಂದ, ಅಧಿಷ್ಠಿತಃ —ಕೂಡಿದ, ಸಃ—ಆ ಯಜ್ಞವು, ವಿಶ್ವಾದಿರೂಪೇಣ—ವಿಶ್ವ ಮೊದಲಾದ (ತೈಜಸ, ಪ್ರಾಜ್ಞ) ರೂಪಗಳಿಂದ (ಅಧಿಷ್ಠಿತಂ—ಕೂಡಿದ), ಏತತ್ ವಿಶ್ವಂ—ಈ ಪ್ರಪಂಚವು, ಯಥಾ ಶೋಭತೇ—ಹೇಗೆ ಶೋಭಿಸುವದೋ, ತಥಾ ಏವ—ಹಾಗೆಯೇ, ಅಶೋಭತ—ಶೋಭಿಸಿತು. ॥೧೨೮॥

ಯಥಾ ವಿರಿಂಚಸ್ಯ ಪುರಾಽಽಸ ಯಜ್ಞೋ ಯಥೈವ ಶಕ್ರಸ್ಯ ಶತಕ್ರತುತ್ವೇ ।
ತಥೈವ ಸೋಽಭೂದ್ ವಿಧಿಶರ್ವಶಕ್ರಪೂರ್ವೈ: ಸುರೈರಾವಿರಲಂಕೃತೋಽಧಿಕಮ್ ॥೧೨೯॥

ಪುರಾ—ಹಿಂದೆ, ವಿರಿಂಚಸ್ಯ ಯಜ್ಞಃ—ಬ್ರಹ್ಮದೇವರ ಯಜ್ಞವು, ಯಥಾ ಆಸ—ಹೇಗೆ ಆಯಿತೋ, ಶಕ್ರಸ್ಯ—ಇಂದ್ರದೇವರಿಗೆ, ಶತಕ್ರತುತ್ವೇ—ಶತಕ್ರತುತ್ವವನ್ನು ತಂದು ಕೊಡತಕ್ಕ ವಿಷಯದಲ್ಲಿ, ಯಜ್ಞಃ—ಯಜ್ಞವು ಯಥಾ ಆಸ—ಹೇಗೆ ನಡೆಯಿತೋ, ತಥಾ ಏವ—ಹಾಗೆಯೇ, ಸಃ—ಆ ಪಾಂಡವರ ಯಜ್ಞವೂ ಕೂಡ, ವಿಧಿಶರ್ವಶಕ್ರಪೂರ್ವೈಃ—ಬ್ರಹ್ಮದೇವರು, ರುದ್ರದೇವರು ಮೊದಲಾದ, ಸುರೈಃ—ದೇವತೆಗಳಿಂದ, ಅಧಿಕಂ—ಬಹುವಾಗಿ, ಅಲಂಕೃತಃ — ಅಲಂಕರಿಸಲ್ಪಟ್ಟದ್ದು, ಆವಿರಭೂತ್—ಪ್ರತ್ಯಕ್ಷ ಆಗಿತ್ತು ॥೧೫೯॥

ನ ದೇವಗಂಧರ್ವಮುನಿಸ್ವಧರ್ಮಮರ್ತ್ಯಾದಿಕೇಷ್ವಾಸ ಸ ಯೋಽತ್ರ ನಾಽಸ ।
ಸ್ವಲಂಕೃತೈರ್ನಾಕಿಜನೈಃ ಸಕಾಂತೈರರೂರುಚೆನ್ನಾಕವದೇತದೋಕಃ ॥೧೫೦॥

ಅತ್ರ—ಈ ಯಜ್ಞಸಭೆಯಲ್ಲಿ, ಯಃ—ಯಾವ ವ್ಯಕ್ತಿಯು ನ ಆಸ—ಬಂದಿರಲಿಲ್ಲವೋ, ಸಃ—ಅಂಥವನು, ದೇವಗಂಧರ್ವಮನಿಸ್ವಧರ್ಮಮರ್ತ್ಯಾದಿಕೇಷು—ದೇವತೆಗಳು, ಗಂಧರ್ವರು, ಮುನಿಗಳು, ಧರ್ಮನಿಷ್ಠರಾದ ಮನುಷ್ಯರು ಇವರಲ್ಲಿ, ನ ಆಸ—ಇರಲಿಲ್ಲ, (ಅಂದರೆ ದೇವ ಗಂಧರ್ವಾದಿಗಳೆಲ್ಲರೂ ಇಲ್ಲಿಗೆ ಬಂದೇ ಬಂದಿದ್ದರು. ಎಂದು ತಾತ್ಪರ್ಯ) ಸಕಾಂತೈಃ —ಪತ್ನೀಸಹಿತರಾದ ಸ್ವಲಂಕೃತೈಃ—ಚೆನ್ನಾಗಿ ಅಲಂಕೃತರಾದ, ನಾಕಿಜನೈಃ —ಸ್ವರ್ಗದ (ದೇವಲೋಕದ) ಜನರಿಂದ, ಏತದೋಕಃ —ಈ ಯಜ್ಞಸ್ಥಳವು, ನಾಕವತ್—ಸ್ವರ್ಗದಂತೆ, ಅರೂರುಚತ್—ಬಹಳ ಶೋಭಿಸಿತು. ॥೧೫೦॥

ತತ್ರೈವ ತತ್ತ್ವಾನಿ ಸಸಂಶಯಾನಿ ನಿಸ್ಸಂಶಯಾನ್ಯಾಸುರಲಂ ವಿವಾದೇ ।
ಪರಸ್ಪರೋತ್ಥೇಹರಿಣಾ ತ್ರಿರೂಪಿಣಾ ಸಂಸ್ಥಾಪಿತಾನ್ಯಗ್ರ್ಯವಚೋಭಿರುಚ್ಚೈಃ ॥೧೫೧॥

ತತ್ರ ಏವ—ಆ ಯಜ್ಞಸಭೆಯಲ್ಲಿಯೇ, ಪರಸ್ಪರೋತ್ಥೇವಿವಾದೇ ಸತಿ—ಜನರು ಪರಸ್ಪರ ಚರ್ಚೆಗಳನ್ನು ಮಾಡುತ್ತಿರಲು, ಸಸಂಶಯಾನಿ ತತ್ತ್ವಾನಿ—ಸಂದಿಗ್ಧವಾದ ತತ್ತ್ವಗಳೂ ಕೂಡ, ತ್ರಿರೂಪಿಣಾ ಹರಿಣಾ—ಮೂರುರೂಪವುಳ್ಳ ಶ್ರೀ ಹರಿಯಿಂದ, ಉಚ್ಚೈಃ ಯಥಾ ಭವತಿ ತಥಾ—ಸ್ಪಷ್ಟವಾಗಿ ಹೇಗೆ ಆಗಬೇಕೋ ಹಾಗೆ, ಅಗ್ರ್ಯವಚೋಭಿಃ –ಶ್ರೇಷ್ಠ ಪ್ರಮಾಣವಾಕ್ಯಗಳಿಂದ, ಸಂಸ್ಥಾಪಿತಾನಿ ಸಂತಿ—ಪ್ರತಿಪಾದಿಸಲ್ಪಟ್ಟವುಗಳಾಗಿ, ಅಲಂ ನಿಸ್ಸಂಶಯಾನಿ ಆಸುಃ—ಪೂರ್ಣ ನಿಸ್ಸಂದಿಗ್ಧ (ನಿಶ್ಚಿತ) ಗಳಾದವು. ॥೧೫೧॥

ಪ್ರಗೀತಗಂಧರ್ವವರಃ ಪ್ರನೃತ್ತಸದಪ್ಸರಾಃ ಸಂತತವಾದಿವಿಪ್ರಃ ।
ವಿವೇಚಯದ್ದೇವನೃಪೌಘ ಏಕೋ ರರಾಜ ರಾಜಾಽಖಿಲ ಸತ್ಕ್ರತೂನಾಮ್ ॥೧೫೨॥

ಪ್ರಗೀತಗಂಧರ್ವವರಃ —ಉತ್ಕೃಷ್ಟ ಗಾಯನ ಮಾಡುತ್ತಿದ್ದ ಶ್ರೇಷ್ಠಗಂಧರ್ವರಿಂದ ಕೂಡಿದ, ಪ್ರನೃತ್ತಸದಪ್ಸರಾಃ —ಉತ್ತಮನರ್ತನ ಮಾಡುವ ಅಪ್ಸರಾಸ್ತ್ರೀಯರಿಂದ ಕೂಡಿದ, ಸಂತತವಾದಿವಿಪ್ರಃ—ಸದಾಕಾಲ ವೇದವನ್ನು ಹೇಳುವ ಬ್ರಾಹ್ಮಣರಿಂದ ಕೂಡಿದ, ವಿವೇಚಯದ್ದೇವನೃಪೌಘಃ—ತತ್ತ್ವ ವಿಚಾರವನ್ನು ಮಾಡುತ್ತಿರುವ ದೇವತೆಗಳು ಹಾಗು ರಾಜರಿಂದ ಕೂಡಿದ, ಅಖಿಲಸತ್ಕ್ರತೂನಾ—ಎಲ್ಲ ಶ್ರೇಷ್ಠಯಾಗಗಳಿಗೂ, ಏಕಃ ರಾಜಾ—ಮುಖ್ಯರಾಜನಂತೆ ಶ್ರೇಷ್ಠವಾದ ಆ ಅಶ್ವಮೇಧಯಾಗವು, ರರಾಜ—ಶೋಭಿಸಿತು. ॥೧೫೨॥

ಸಮುಸ್ತದೇವ್ಯಃ ಸಹವಾಸುದೇವ್ಯಃ ಸ್ವಲಂಕೃತಾಃ ಫುಲ್ಲಮುಖಾರವಿಂದಾಃ ।
ವಿಚೇರುರತ್ರೈವ ಸಹಾಪ್ಸರೋಭಿರ್ನಿಷೇದುರಪ್ಯಚ್ಯುತ ಸತ್ಕಥಾರವಾಃ ॥೧೫೩॥

ಸಹವಾಸುದೇವ್ಯಃ —ಶ್ರೀಕೃಷ್ಣಪತ್ನಿಯರಿಂದ ಸಹಿತರಾದ, ಫುಲ್ಲಮುಖಾರವಿಂದಾ; —ಅರಳಿದ ಮುಖಿವಕಮಲವುಳ್ಳ. ಸ್ವಲಂಕೃತಾಃ — ಚೆನ್ನಾಗಿ ಅಲಂಕೃತರಾದ, ಸಮಸ್ತದೇವ್ಯಃ—ಎಲ್ಲ ದೇವಸ್ತ್ರೀಯರು, ಅಪ್ಸರೋಭಿಃ ಸಹ ಏವ—ಅಪ್ಸರಾಸ್ತ್ರೀಯರಿಂದ ಕೂಡಿಕೊಂಡೇ, ಅತ್ರ—ಈ ಯಜ್ಞಸ್ಥಳದಲ್ಲಿ, ವಿಚೇರುಃ — ಸಂಚರಿಸಿದರು, ಅಚ್ಯುತಸತ್ಕಥಾರಮಾಃ ಸತ್ಯಃ —ಶ್ರೀಹರಿಯ ಕಥಾಗಳಲ್ಲಿ ಮಗ್ನರಾಗಿ, ಸಂತೋಷ ಪಡುತ್ತಾ, ನಿಷೇದುಃ —ಕುಳಿತಿದ್ದರು. ॥೧೩೩॥

ನ ವೈ ಮುಮುಕ್ಷುರ್ನ ಬುಭೂಷುರತ್ರ ನ ವೈವಿವಿತ್ಸುಶ್ಚ ಕುತೋಃ ಬುಭುಕ್ಷುಃ ।
ನಾಸತ್ಯಕಾಮಾ ಅಭವನ್ ಕುತಶ್ಚಿತ್ ಪ್ರದಾತರಿ ಪ್ರಾಜ್ಞವರೇಽನಿಲಾತ್ಮಜೇ ॥೧೩೪॥

ಅತ್ರ—ಈ ಯಜ್ಞದಲ್ಲಿ. ಮುಮುಕ್ಷುನಃ ವೈ—ಮೋಕ್ಷಾಪೇಕ್ಷಿಯು ಇರಲೇ ಇಲ್ಲ. (ಭಗವದ್ದರ್ಶನವೇ ಇದ್ದದ್ದರಿಂದ). ಬುಭೂಷುಃ; ನವೈ—ಐಶ್ವರ್ಯವುಳ್ಳವನು ಆಗಬೇಕು ಎಂಬ ಇಚ್ಛೆಯುಳ್ಳವನು ಇರಲಿಲ್ಲ (ಎಲ್ಲರೂ ಐಶ್ವರ್ಯ ಪೂರ್ಣರೇ ಆಗಿದ್ದರು). ವಿವಿತ್ಸುಃ ಚ ನವೈ—ಜ್ಞಾನದ ಅಪೇಕ್ಷೆಯುಳ್ಳವನಾಗಿರಲಿಲ್ಲ, (ಎಲ್ಲರೂ ಜ್ಞಾನ ಪೂರ್ಣರೇ ಆಗಿದ್ದರು.) ಹೀಗಿರುವಾಗ, ಬುಭುಕ್ಷುಃ ಕುತಃ—ಹಸಿವೆಯುಳ್ಳವನು ಇರಲು ಹೇಗೆ ಶಕ್ಯ? ಹೀಗೆ, ಪ್ರಾಜ್ಞವರೇ—ಜ್ಞಾನಿಶ್ರೇಷ್ಠರಾದ, ಅನಿಲಾತ್ಮಜೇ—ವಾಯುಪುತ್ರರಾದ ಶ್ರೀಭೀಮಸೇನದೇವರು, ಪ್ರದಾತರಿ ಸತಿ—ಕೊಡುವವರಾಗಿರುವಾಗ, ಕೇ ಅಪಿ—ಯಾರೂ ಕೂಡ, ಕುತಶ್ಚಿತ್—ಯಾವ ರೀತಿಯಿಂದಲೂ, ಅಸತ್ಯಕಾಮಾಃ—ವ್ಯರ್ಥವಾದ ಇಚ್ಛೆಯುಳ್ಳವರು ನ ಅಭವನ್—ಆಗಿರಲಿಲ್ಲ. ॥೧೩೪॥

ದಿನೇ ದಿನೇ ತತ್ರ ಮಹಾನ್ನಪರ್ವತಾಃ ಸಭಕ್ಷ್ಯಸಾರಾ ರಸವಂತ ಊರ್ಜಿತಾಃ ।
ನದ್ಯಃ ಪಯಃಸರ್ಪಿರಜಸ್ರಪೂರ್ಣಾಃ ಸಮೋಕ್ಷಿಕಾದ್ಯಾ ಅಪಿ ಪಾಯಸಹ್ರದಾಃ ॥೧೩೫॥

ತತ್ರ—ಆ ಯಜ್ಞದಲ್ಲಿ, ದಿನೇ ದಿನೇ—ಪ್ರತಿದಿನವೂ, ಸಭಕ್ಷ್ಯಸಾರಾಃ —ಶ್ರೇಷ್ಠಭಕ್ಷ್ಯಗಳಿಂದ ಸಹಿತವಾದ, ರಸವಂತಃ —ರುಚಿಭರಿತವಾದ, ಬಹುರಸಗಳಿಂದ ಕೂಡಿದ, ಊರ್ಜಿತಾಃ; —ಎತ್ತರವಾದ ಮಹಾನ್ನಪರ್ವತಾಃ — ಪರ್ವತ ಪ್ರಾಯವಾದ ಬಹುಅನ್ನದರಾಶಿಗಳು, ಸಮೋಕ್ಷಿಕಾದ್ಯಾಃ — ಜೇನುತುಪ್ಪದಿಂದ ಸಹಿತಗಳಾದ, ಪಯಃಸರ್ಪಿರಜಸ್ರಪೂರ್ಣಾಃ—ಹಾಲು, ತುಪ್ಪ ಇವುಗಳಿಂದ ಪೂರ್ಣವಾಗಿ ತುಂಬಿದ, ನದ್ಯಃ — ನದಿಗಳು. ಅಪಿ—ಹಾಗು, ಪಾಯಃಸಹ್ರದಾಃ—ಪಾಯಸದ್ದ ಸರೋವರಗಳು, (ಇದ್ದವು) ॥೧೩೫॥

ಹ್ರದಾ ಮಹಾಂತಸ್ತ್ರಿದಶಾದಿಯೋಗ್ಯಾಃ ಸುಯೋಗಯುಕ್ತಾ ಹರಿಚಂದನಾದೇಃ ।
ತಥಾಽಂಜನಾಲಕ್ತಕಮುಖ್ಯಮಂಡನದ್ರವ್ಯಾಗ್ರ್ಯವಾಪ್ಯೋಮಣಿಕಾಂಚನೋದ್ಭವಾಃ ॥೧೩೬॥

ತ್ರಿದಶಾದಿಯೋಗ್ಯಾಃ —ದೇವತಾದಿಗಳಿಗೆ ಯೋಗ್ಯಗಳಾದ, ಮಹಾಂತಃ —ದೊಡ್ಡವಾದ, ಸುಯೋಗಯುಕ್ತಾಃ —ಕುಂಕುಮ, ಕಸ್ತೂರಿ ಮೊದಲಾದ ಮಂಗಲದ್ರವ್ಯಗಳಿಂದ ಮಿಶ್ರವಾದ, ಹರಿಚಂದನಾದೇಃ ಹ್ರದಾಃ — ಹರಿಚಂದನ, ಕೃಷ್ಣಾಗರು ರಕ್ತಚಂದನಗಳ, ಹ್ರದಾಃ — ಸರೋವರಗಳು, ತಥಾ—ಹಾಗು, ಮಣಿಕಾಂಚನೋದ್ಭವಾಃ — ರತ್ನ ಭಂಗಾರಗಳಿಂದ ಕಟ್ಟಲ್ಪಟ್ಟ, ಅಂಜನಾಲಕ್ತಕಮುಖ್ಯಮಂಡನದ್ರವ್ಯಾಗ್ರ್ಯವಾಪ್ಯಃ—ಕಾಡಿಗೆ, ಬೆರಳು,ತುಟಿಗಳ ಅಲಂಕಾರ ದ್ರವ್ಯಗಳು ಇವೇ ಮುಖ್ಯವಾದ ಅಲಂಕಾರದ್ರವ್ಯಗಳು ಶ್ರೇಷ್ಠ ಭಾವಿಗಳು (ಇದ್ದವು) ॥೧೩೬॥

ಯಥೇಷ್ಟಪಾನಾಶನಭೋಗಶಿಷ್ಟಾಃ ಸಹಸ್ರಶೋ ಮಾರುತಿನಾ ತು ಕಾರಿತಾಃ ।
ಗಂಧಾ ರಸಾದ್ಯಾಶ್ಚ ಸಮಸ್ತಭೋಗಾ ದಿವೀವ ತತ್ರಾऽಸುರತೀವ ಹೃದ್ಯಾಃ ॥೧೩೭॥

ಮಾರುತಿನಾ—ಭೀಮಸೇನದೇವರಿಂದ, ಕಾರಿತಾಃ —ಮಾಡಿಸಲ್ಪಟ್ಟ, ಯಥೇಷ್ಟಪಾನಾಶನಭೋಗ ಶಿಷ್ಟಾಃ —ಬೇಕಾದಷ್ಟು ಪಾನಅಶನಭೋಗಗಳಿಗೆ ಯೋಗ್ಯವಾದ, ಸಹಸ್ರಶಃ —ಸಹಸ್ರಾರು ಸಂಖ್ಯಾಕವಾದ, ಗಂಧಾಃ —ಗಂಧಗಳು, ಚ—ಹಾಗು, ರಸಾದ್ಯಾಃ ಸಮಸ್ತಭೋಗಾಃ —ರಸವೇ ಮೊದಲಾದ ಸಮಸ್ತಭೋಗಗಳು (ಭೋಗಸಾಮಗ್ರಿಗಳು), ತತ್ರ—ಆ ಯಜ್ಞದಲ್ಲಿ, ದಿವಿ ಇವ—ಸ್ವರ್ಗದಲ್ಲಿದ್ದವುಗಳು ಹೇಗೋ ಹಾಗೆ, ಅತೀವ ಹೃದ್ಯಾಃ —ಬಹುಮನೋಹರವಾದವುಗಳು, ಆಸುಃ —ಆಗಿದ್ದವು. ॥೧೩೭॥

ನೈತಾದೃಶಃ ಕಶ್ಚನ ಭೂತಪೂರ್ವೋ ಮಖೋ ವಿನಾ ರಾಮವಿರಿಂಚ ವಜ್ರಿಣಾಮ್ ॥
ಮಖಾನಿತಿ ಪ್ರೋಚುರಶೇಷ ಲೋಕಾ ದೃಷ್ಟ್ವಾ ಮಖಂ ತಂ ಪುರುಷೋತ್ತಮೇರಿತಮ್ ॥೧೩೮॥

ಪುರೋಷತ್ತಮೇರಿತಂ—ಸರ್ವೋತ್ತಮರಾದ ಶ್ರೀಕೃಷ್ಣ ಶ್ರೀವೇದವ್ಯಾಸದೇವರಿಂದ ಪ್ರೇರಿತವಾಗಿ ಮಾಡಿಸಲ್ಪಟ, ತಂ ಮಖಂ—ಆ ಯಜ್ಞವನ್ನು, ದೃಷ್ಟ್ವಾ—ನೋಡಿ, ಅಶೇಷಲೋಕಾಃ — ಎಲ್ಲ ಜನರು, ರಾಮ ವಿರಿಂಚವಜ್ರಿಣಾಂ—ಶ್ರೀರಾಮದೇವರು, ಬ್ರಹ್ಮದೇವರು, ಇಂದ್ರದೇವರು ಮಾಡಿದ, ಮಖಾನ್ ವಿನಾ—ಯಜ್ಞಗಳನ್ನು ಬಿಟ್ಟರೆ, ಏತಾದೃಶ: ಕಶ್ಚನಮಖಃ —ಈ ತರಹದ ಯಜ್ಞವ್ಯಾವದೂ ನ ಭೂತಪೂರ್ವಃ —ಹಿಂದೆ ಆಗಿಲ್ಲ, ಇತಿ—ಎಂದು, ಪ್ರೋಚುಃ —ಹೇಳುತ್ತಿದ್ದರು. ॥೧೩೮॥

ಸ ಏವಮುದ್ಧಾ ಹರಿದೈವತಃ ಕ್ರತುಃ ಪಂಚಾಶ್ವಮೇಧಾತ್ಮಕಉಚ್ಚಕಲ್ಪಃ ।
ದಿನೇ ದಿನೇ ಸ್ವೃದ್ಧಗುಣೋ ಬಭೂವ ಮುದಾವಹೋ ವತ್ಸರಪಂಚಕತ್ರಯವಮ್ ॥೧೩೯॥

ಏವಂ—ಈ ರೀತಿಯಾಗಿ, ಉಚ್ಚಕಲ್ಪಃ —ಉತ್ತಮ ಕಲ್ಪವಾದ, ಪಂಚಾಶ್ವಮೇಧಾತ್ಮಕಃ —ಐದು ಅಶ್ವಮೇಧ ಯಾಗರೂಪವಾದ, ಹರಿದೈವತಃ —ಶ್ರೀಹರಿಯೇ ಆರಾಧ್ಯದೇವರಾಗಿವುಳ್ಳ, ದಿನೇ ದಿನೇ—ಪ್ರತಿದಿನವೂ, ಸ್ವದ್ಧ ಗುಣಃ —ಗುಣಾಭಿವೃದ್ಧಿಯಿಂದ ಕೂಡಿದ, ಸಃ ಕ್ರತುಃ —ಆ ಯಾಗವು, ವತ್ಸರಪಂಚಕತ್ರಯಂ—ಹದಿನೈದು ವರ್ಷಗಳ ಪರ್ಯಂತವಾಗಿ, ಮುದಾವಹಃ ಸನ್—ಆನಂದಕರವಾಗಿ, ಅದ್ಧಾ ಬಭೂವ—ಚೆನ್ನಾಗಿ ನಡೆಯಿತು. ॥೧೩೯॥

ಯಜ್ಞಾವಸಾನೇ ನಿಖಿಲಾಶ್ಚ ಪಾಂಡವಾಃ ಕೃಷ್ಣಾ ಚ ಪೃಥ್ವೀಮಖಿಲಾಂ ಸವಿತ್ತಾಮ್ ।
ಮಾಂಗಲ್ಯಮಾತ್ರಂ ದಯಿತಾಶರೀರೇ ನಿಧಾಯ ಸರ್ವಾಭರಣಾನಿ ಚೈವ ।
ಸಮರ್ಪಯಾಮಾಸುರಜೇ ವರೇಣ್ಯೇ ವ್ಯಾಸೇ ವಿಭಾಗಾಯ ಯಥೋಕ್ತವೃತ್ವಿಜಾಮ್॥೧೪೦॥

ಯಜ್ಞಾವಸಾನೇ—ಯಜ್ಞದಕೊನೆಯಲ್ಲಿ, ನಿಖಿಲಾ: ಪಾಂಡವಾ: —ಎಲ್ಲ ಪಾಂಡವರು; ಚ—ಮತ್ತು ಕೃಷ್ಣಾ ಚ—ದ್ರೌಪದೀದೇವಿಯೂ ಕೂಡ, ಸವಿತ್ತಾಂ—ಕೋಶಧನ ಸಹಿತವಾದ, ಅಖಿಲಾಂ ಪೃಥ್ವೀಂ—ಎಲ್ಲ ಭೂಮಿಯನ್ನು, ಚ—ಹಾಗು, ದಯಿತಾಶರೀರೇ—ತಮ್ಮ ಪತ್ನಿಯ ಶರೀರದ ಮೇಲೆ, ಮಾಂಗಲ್ಯಮಾತ್ರಂ—ಸುವಾಸಿನಿಯರಿಗೆ ಅವಶ್ಯವಾಗಿ ಇರಬೇಕಾದ ಮಂಗಲ ಸೂತ್ರವೊಂದನ್ನು ಮಾತ್ರ, ನಿಧಾಯ—ಇಟ್ಟು, ಸರ್ವಾಭರಣಾನಿ ಚ—ಉಳಿದೆಲ್ಲ ಆಭರಣಗಳನ್ನೂ ಕೂಡ, ಋತ್ವಿಜಾಂ ವಿಭಾಗಾಯ—ಋತ್ವಿಜರಿಗೆ ವಿಭಾಗ ಮಾಡಿಕೊಡುವದಕ್ಕಾಗಿ, ವರೇಣ್ಯೇ ಅಜೇ ವ್ಯಾಸೇ—ಸ್ತುತ್ಯರಾದ, ಉತ್ಪತ್ತಿರಹಿತರಾದ, ಶ್ರೀವೇದವ್ಯಾಸದೇವರಲ್ಲಿ ಸಮರ್ಪಯಾಮಾಸುಃ ಏವ—ಸಮರ್ಪಿಸಿಯೇ ಬಿಟ್ಟರು. ॥೧೪೦॥

ಭಾವಾನುವಾದ ೧೨೬—೧೪೦

ಅರ್ಜುನನು ಕುದುರೆಯನ್ನು ಸಂಚಾರ ಮಾಡಿಸಿಕೊಂಡು ವಿಜಯಿಯಾಗಿ ಯಜ್ಞಸ್ಥಳಕ್ಕೆ ಪ್ರವೇಶಿಸಿದಾಗ, ಶ್ರೀಕೃಷ್ಣನು ಮತ್ತು ಎಲ್ಲ ಸಹೋದರರು ಸಂತೋಷಪಟ್ಟು ಪರಸ್ಪರ ಸತ್ಕಾರವನ್ನು ಮಾಡಿದರು. ನಂತರ ಶ್ರೀವೇದವ್ಯಾಸದೇವರ ಮಾರ್ಗದರ್ಶನದಲ್ಲಿ ಶ್ರೀಕೃಷ್ಣಪರಮಾತ್ಮನ ರಕ್ಷಣೆಯಲ್ಲಿ ಯಜ್ಞವನ್ನು ಮುನಿಗಳು ಪ್ರಾರಂಭಿಸಿದರು. ಎಲ್ಲ ರಾಜಶ್ರೇಷ್ಠರು, ಎಲ್ಲ ಬ್ರಾಹ್ಮಣಶ್ರೇಷ್ಠರು ಆ ಯಜ್ಞದ ಸ್ಥಳದಲ್ಲಿದ್ದು ಯಜ್ಞವನ್ನು ವೀಕ್ಷಿಸುತ್ತಾ ಸಂತೋಷಪಡುತ್ತಿದ್ದಾರೆ. ಶ್ರೀಭಗವಂತನ ಶ್ರೀ ಕೃಷ್ಣ – ವ್ಯಾಸ – ಪರಶುರಾಮ ಹೀಗೆ ಮೂರು ರೂಪಗಳಿಂದ ಕೂಡಿದ ಆ ಯಜ್ಞವು ವಿಶ್ವ (ಜಾಗ್ರದವಸ್ಥಾ ಪ್ರೇರಕ ರೂಪ), ತೈಜಸ (ಸ್ವಪ್ನಾವಸ್ಥಾ ಪ್ರೇರಕರೂಪ), ಪ್ರಾಜ್ಞರೂಪ (ನಿದ್ರಾ, ಸುಷುಪ್ತಿಗೆ ಪ್ರೇರಕವಾದರೂಪ) ಗಳಿಂದ ಕೂಡಿದ ಇಡೀ ಜಗತ್ತು ಶೋಭಿಸುವಂತೆ ಶೋಭಿಸಿತು. ಇಂದ್ರ ಬ್ರಹ್ಮಾದಿಗಳು ಮಾಡಿದ ಯಜ್ಞದಂತಿತ್ತು ಆ ಯಜ್ಞ. ಈ ಯಜ್ಞಕ್ಕೆ ಬಾರದವರು ಯಾರೂ ಇರಲಿಲ್ಲ. ಬ್ರಹ್ಮಾದಿ ದೇವತೆಗಳು, ಋಷಿಗಳು, ಗಂಧರ್ವರು ಎಲ್ಲರೂ ಇದ್ದರು. ಎಲ್ಲರೂ ಪರಸ್ಪರ ತತ್ವಚರ್ಚೆಗಳನ್ನು ಮಾಡುತ್ತಿದ್ದರು. ಮೂರು ಭಗವದ್ರೂಪಗಳು ನಿರ್ಣಯವನ್ನು ಕೊಡುತ್ತಿದ್ದವು. ಹೀಗಾಗಿ ಅಲ್ಲಿದ್ದವರಿಗೆ ಯಾರಿಗಾದರೂ ತತ್ವ ಸಂಶಯಗಳಿದ್ದರೆ ಅವು ಆ ಯಜ್ಞಸಭೆಯಲ್ಲಿ ಪರಿಹಾರವಾದವು. ಗಂಧರ್ವರಗಾನ, ಅಪ್ಸರೆಯರ ನರ್ತನ, ವಿಪ್ರರ ವೇದಧ್ವನಿ, ದೇವತೆಗಳ ಹಾಗು ರಾಜರ ತತ್ವಜಿಜ್ಞಾಸೆಗಳಿಂದ ಕೂಡಿದ ಆ ಯಜ್ಞವು ಎಲ್ಲ ಯಜ್ಞಗಳಿಗಿಂತ ಶ್ರೇಷ್ಠವಾಗಿ ಶೋಭಿಸಿತು. ಚೆನ್ನಾಗಿ ಅಲಂಕೃತರಾದ ಶ್ರೀಕೃಷ್ಣಪತ್ನಿಯರು, ಇತರ ದೇವಸ್ತ್ರೀಯರು ಈ ಯಜ್ಞದಲ್ಲಿ ಅಚೆ ಈಚೆ, ಅಲೆದಾಡುತ್ತಿದ್ದರು (ಅನೇಕಕಾರ್ಯಗಳಿಗಾಗಿ), ಶ್ರೀ ಹರಿಯ ಕಥೆಗಳನ್ನು ಕೇಳುತ್ತಾ ಸಂತೋಷಪಡುತ್ತಾ ಕುಳಿತಿರುತ್ತಿದ್ದರು. ಆ ಯಜ್ಞದಲ್ಲಿ ಎಲ್ಲರ ಅಪೇಕ್ಷೆಗಳು ಪೂರ್ಣವೇ ಆಗುತ್ತಿದ್ದವು. ಉದಾ– ಮೋಕ್ಷಾಪೇಕ್ಷೆಯೂ ಕೂಡ ಮೋಕ್ಷದಲ್ಲಿರುವಂತೆ ಮೂರು ಭಗವದ್ರೂಪ ದರ್ಶನವು ಸದಾ ಇದ್ದದ್ದರಿಂದ, ಮೋಕ್ಷದಲ್ಲಿದ್ದಂತೆ ಆಗುತ್ತಿದ್ದದ್ದರಿಂದ ಪೂರ್ಣವಾಗುತ್ತಿತ್ತು. ಹೀಗೆ ಭೀಮಸೇನರು ದಾತೃಗಳಾಗಿರುವ ಆ ಯಜ್ಞದಲ್ಲಿ ಯಾರ ಆಶೆಗಳೂ ಅಪೂರ್ಣವಾಗಿರಲಿಲ್ಲ, ಪ್ರತಿದಿನವೂಕೂಡ ಅನ್ನ, ಭಕ್ಷ್ಯ ಭೋಜ್ಯ, ಪಾಯಸ, ಘೃತಾದಿಗಳಿಲ್ಲವೂ ಪರ್ವತ ನದಿ ಸರೋವರಾಕಾರಗಳಲ್ಲಿರುತ್ತಿದ್ದವು. ದೇವತೆಗಳಿಗೆ ಯೋಗ್ಯವಾದ ಗಂಧ, ಕಾಡಿಗೆ, ಅಲಕ್ತಕ ಇತ್ಯಾದಿ ಶ್ರೇಷ್ಠ ಲೇಪನ ದ್ರವ್ಯ ಅಲಂಕಾರದ್ರವ್ಯಗಳ ಭಾವಿಗಳೇ ಇದ್ದವು. ಆ ಭಾವಿಗಳೂ ಕೂಡ ಭಂಗಾರ ರತ್ನಗಳಿಂದ ಖಚಿತವಾಗಿದ್ದವು. ಗಂಧರಸಾದಿಸಮಸ್ತಭೋಗಗಳಿಲ್ಲವೂ ಆಕರ್ಷಕಗಳೇ ಆಗಿದ್ದವು. ಈ ಯಜ್ಞವನ್ನು ನೋಡಿ ಅನುಭವಿಸಿದ ಪ್ರತಿಯೊಬ್ಬನೂ ಕೂಡ ಶ್ರೀ ರಾಮಚಂದ್ರ, ಬ್ರಹ್ಮದೇವರು, ಇಂದ್ರ ಇವರು ಮಾಡಿದ ಯಜ್ಞಗಳನ್ನು ಬಿಟ್ಟರೆ ಈ ಯಜ್ಞಕ್ಕೆ ಸದೃಶವಾದ ಬೇರೆ ಯಜ್ಞವೇ ಇಲ್ಲ ಎಂದು ಉದ್ಗರಿಸುತ್ತಿದ್ದರು. ಇಂಥ ಶ್ರೇಷ್ಠವಾದ ಆ ಯಜ್ಞವು ಐದು ಅಶ್ವಮೇಧಸ್ವರೂಪದ್ದಾಗಿದ್ದು ಶ್ರೀ ಹರಿಪ್ರೀತ್ಯುದ್ದೇಶ್ಯವಾಗಿಯೇ ಹದಿನೈದು ವರ್ಷಗಳವರೆಗೆ ನಡೆಯಿತು. ಯಜ್ಞವು ಮುಗಿದಾಗ ದ್ರೌಪದೀಸಮೇತರಾದ ಪಾಂಡವರೆಲ್ಲರೂ ಸಕಲಾಭರಣಸಹಿತ – ವಾಗಿ ಸಕಲಸಂಪತ್ತನ್ನು, ಎಲ್ಲ ರಾಜ್ಯವನ್ನು ಋತ್ವಿಜರಿಗೆ ಶಾಸ್ತ್ರೀಯವಾಗಿ ವಿಭಾಗ ಮಾಡಿಕೊಡುವದಕ್ಕಾಗಿ ಶ್ರೀವೇದವ್ಯಾಸದೇವರಿಗೆ ಸಮರ್ಪಣೆ ಮಾಡಿದರು. ಪತ್ನಿಯರ ಕೊರಳಲ್ಲಿ ಮಂಗಲ ಸೂತ್ರವೊಂದನ್ನು ಬಿಟ್ಟು ಉಳಿದೆಲ್ಲವನ್ನು ಸಮರ್ಪಿಸಿದರು.

ಅವತಾರಿಕೆ :— ಋತ್ವಿಜರಿಗೆ ವಿಭಾಗ ಮಾಡಲಿಕ್ಕಾಗಿ ಕೊಟ್ಟರೋ ಎಂಬಂತೆ ತೋರಿತು ವಿನಃ ವಾಸ್ತವಿಕವಾಗಿ ಶ್ರೀ ಹರಿಗೇ ಸಮರ್ಪಿಸಿದ್ದು ಎಂದು ಹೇಳುತ್ತಾರೆ–

ಪ್ರಿಯೋ ವಿಭಾಗೋ ಯದಮುಷ್ಯ ವಿಷ್ಣೋರತೋ ವಿಭಾಗಾರ್ಥಮಿವಾऽರ್ಪಯಂಸ್ತೇ ।
ಹೃದಾ ಸಮಸ್ತಂ ಹರಯೇऽರ್ಪಿತಂ ತೈಃ ಸ ಹಿ ದ್ವಿಜಸ್ಥೋऽಪಿ ಸಮಸ್ತಕರ್ತಾ ॥೧೪೧॥

ಯತ್ —ಯಾವ ಕಾರಣದಿಂದ, ವಿಷ್ಣೋಃ —ಶ್ರೀ ಹರಿಗೆ, ವಿಭಾಗಃ—ಅವರವರ ಯೋಗ್ಯತೆಗೆ ಅನು ಗುಣವಾಗಿ ಹಂಚುವದು, ಪ್ರಿಯಃ —ಪ್ರಿಯವಾದದ್ದೋ. ಅತಃ—ಆದ್ದರಿಂದ, ತೇ—ಆ ಪಾಂಡವರು, ವಿಭಾ ಗಾರ್ಥಂ ಇವ—ವಿಭಾಗಮಾಡಲಿಕ್ಕಾಗಿ ಎಂಬಂತೆ. ಅರ್ಪಯನ್—ಸಮರ್ಪಿಸಿದರು. ಸಮಸ್ತಂ—ಎಲ್ಲವೂ. ಹರಯೇ—ಶ್ರೀಹರಿಗೆ, ಹೃದಾ—ಮನಃ ಪೂರ್ವಕವಾಗಿ, ತೈಃ ಅರ್ಪಿತಂ—ಅವರಿಂದ ಸಮರ್ಪಿಸಲ್ಪಟ್ಟಿತ್ತು. ಹಿ—ಏಕೆಂದರೆ, ಸಃ —ಆ ಶ್ರೀಹರಿಯೇ, ದ್ವಿಜಸ್ಥಃ ಸನ್ ಅಪಿ—ಬ್ರಾಹ್ಮಣರೊಳಗಿದ್ದವನಾಗಿ ಕೂಡ, ಸಮಸ್ತ ಕರ್ತಾ—ಸರ್ವಕರ್ತನಾಗಿರುವನು. ॥೧೪೦॥

ಅವತಾರಿಕೆ :— ಕೇವಲ ಧನವನ್ನು ಮಾತ್ರ ಸಮರ್ಪಿಸಿದ್ದಲ್ಲ. ದೇಹೇಂದ್ರಿಯಾದಿಗಳನ್ನೂ ಸಮರ್ಪಿಸಿದರು ಎಂದು ಹೇಳುವರು.

ದೇಹೇಂದ್ರಿಯಪ್ರಾಣಮನಾಂಸಿ ಚೇತನೈಃ ಸಹೈವ ತಸ್ಮಾ ಅತಿಸೃಜ್ಯ ನೇಮುಃ ।
ತ್ವದೀಯ ಮೇತನ್ನಿಖಿಲಂ ವಯಂ ಚ ನಾಸ್ತ್ಯಸ್ಮದೀಯಂ ಕ್ವಚ ಕಿಂಚನೇಶ ।
ಸ್ವತಂತ್ರ ಏಕೋಽಸಿ ನ ಕಶ್ಚಿದನ್ಯಃ ಸರ್ವತ್ರ ಪೂರ್ಣೋಽಸಿ ಸದೇತಿ ಹೃಷ್ಟಾಃ ॥೧೪೨॥

ಹೃಷ್ಟಾಃ —ಸಂತುಷ್ಟರಾದ, ಪಾಂಡವರು, ಚೇತನೈಃ ಸಹಏವ—ತಮ್ಮ ಚೇತನಗಳಿಂದ ಕೂಡಿಕೊಂಡೇ, ದೇಹೇಂದ್ರಿಯಪ್ರಾಣಮನಾಂಸಿ—ದೇಹ, ಇಂದ್ರಿಯ, ಪ್ರಾಣ ಮನಸ್ಸುಗಳನ್ನು, ತಸ್ಮೈ—ಆ ವೇದವ್ಯಾಸ ದೇವರಿಗೆ, ಅತಿಸೃಜ್ಯ—ಸಮರ್ಪಿಸಿ,ನೇಮುಃ—ನಮಿಸಿದರು. ಏತತ್ ನಿಖಿಲಂ—ಇದೆಲ್ಲವೂ, ತ್ವದೀಯಂ—ನಿನ್ನದೇ ಆಗಿದೆ, ವಯಂ ಚ—ನಾವೂ ಕೂಡ ನಿನ್ನ ಅಧೀನರೇ ಆಗಿದ್ದೇವೆ. ಹೇ ಈಶ—ಹೇ ನಿಯಾಮಕರಾದ ವೇದವ್ಯಾಸರೇ, ಅಸ್ಮದೀಯಂ—ನಮ್ಮದು ಎಂಬುದು, ಕ್ವ ಚ—ಎಲ್ಲಿಯೂ, ಕಿಂಚನ—ಏನೂ ನ ಅಸ್ತಿ—ಇರುವದಿಲ್ಲ. ಸ್ವತಂತ್ರಃ —ಸ್ವತಂತ್ರನಾದವನು, ತ್ವಂ ಏಕಃ ಅಸಿ—ನೀನೊಬ್ಬನೇ ಇರುವಿ. ಅನ್ಯಃ ಕಶ್ಚಿತ್ ನ—ಬೇರೆಯಾವನೂ ಇಲ್ಲ, ಸದಾ ಸರ್ವತ್ರ ಪೂರ್ಣಃ ಅಸಿ—ಯಾವಾಗಲೂ ಎಲ್ಲ ವಿಷಯದಲ್ಲಿಯೂ ಪೂರ್ಣನಿರುವಿ ಇತಿ—ಎಂದು ಸ್ತುತಿಸಿದರು. ॥೧೪೨॥

ತತೋ ವಿಭಕ್ತೇ ಮುನಯೋಽವದಂಸ್ತೇ ಪ್ರತ್ಯರ್ಪಯಾವೋ ವಯಮೇಷು ರಾಜ್ಯಮ್ ।
ಪೂರ್ಣಾ ಹಿರಣ್ಯೇನ ವಯಂ ಧರಾಯಾಃ ಪ್ರಪಾಲನೇ ಯೋಗ್ಯತಮಾ ಇಮೇ ಹಿ ॥೧೪೩॥

ತತಃ —ಆ ರೀತಿ ಪಾಂಡವರು ಅರ್ಪಿಸಿದನಂತರ, ವಿಭಕ್ತೇಸತಿ—ಧನವು ರಾಜ್ಯವು ವಿಭಜಿಸಲ್ಪಡುತ್ತಿರಲು, ತೇ ಮುನಯಃ —ಆ ಋತ್ವಿಜರು, ಋಷಿಗಳು ಎಲ್ಲರೂ, ವಯಂ—ನಾವು ಹಿರಣ್ಯೇನ ಪೂರ್ಣಾಃ —ಭಂಗಾರ ಧನ ಇದರಿಂದಲೇ ತೃಪ್ತರು,ಧರಾಯಾಃ ಪ್ರಪಾಲನೇ—ರಾಜ್ಯದ ರಕ್ಷಣೆಯ ವಿಷಯದಲ್ಲಿ, ಇಮೇ ಹಿ—ಈ ಪಾಂಡವರೇ, ಯೋಗ್ಯತಮಾಃ—ಅತ್ಯಂತ ಯೋಗ್ಯರು (ಆದ್ದರಿಂದ), ರಾಜ್ಯಂ—ರಾಜ್ಯವನ್ನು, ಏಷು—ಇವರಲ್ಲಿಯೇ (ಪಾಂಡರಿಗೆ), ಪ್ರತ್ಯರ್ಪಯಾವಃ —ವಾಪಸ್ಕೊಡುತ್ತೇವೆ. ಇತಿ—ಎಂದು, ಆವದನ್—ಹೇಳಿದರು. ॥೧೪೩॥

ಪಾರ್ಥಾಃ ಸಭಾರ್ಯಾ ದ್ವಿಜವಾಕ್ಯಮೇತನ್ನಿಶಮ್ಯ ಕೃಷ್ಣಾಯ ಪುನಃ ಪ್ರಣಮ್ಯ ।
ಊಚುಸ್ತಪೋ ನೋಽಸ್ತು ವನೇಽರ್ಪಯಿತ್ವಾ ರಾಜ್ಯಂ ಮಹಾಂತೇ ತ್ವಯಿ ಧರ್ಮಲಬ್ಧಮ್ ॥೧೪೪॥

ಸಭಾರ್ಯಾ ಪಾರ್ಥಾಃ —ಪತ್ನೀಸಹಿತರಾದ ಪಾಂಡವರು, ಏತತ್ ವಾಕ್ಯಂ ನಿಶಮ್ಯ—ಈ ಮುನಿ ವಚನವನ್ನು ಕೇಳಿ, ಕೃಷ್ಣಾಯ—ಶ್ರೀವೇದವ್ಯಾಸದೇವರಿಗೆ, ಪುನಃ ಪ್ರಣಮ್ಯ—ಮತ್ತೆ ನಮಸ್ಕರಿಸಿ, (ಶ್ರೀವೇದ

ವ್ಯಾಸರೇ), ಮಖಾಂತೇ—ಯಜ್ಞದ ಅಂತ್ಯದಲ್ಲಿ, ಧರ್ಮಲಬ್ಧಂ—ಧರ್ಮನ್ಯಾಯಗಳಿಂದ ಸಂಪಾದಿಸಲ್ಪಟ್ಟ ಈ ರಾಜ್ಯವನ್ನು, ತ್ವಯಿ—ನಿನ್ನಲ್ಲಿ. ಅರ್ಪಯಿತ್ವಾ—ಸಮರ್ಪಿಸಿ, ನಃ—ನಮಗೆ, ವನೇ—ಅರಣ್ಯದಲ್ಲಿ, ತಪಃ—ತಪಸ್ಸು, ಅಸ್ತು—ಇರಲಿ, ಇತಿ—ಎಂದು, ಊಚುಃ—ಹೇಳಿದರು. ॥೧೪೪॥

ಇತೀರಿತಃ ಪ್ರಾಹ ಸ ಬಾದರಾಯಣೋ ಮುನೀಶ್ವರೈಸ್ತ್ಯನುಯಾಚಿತಃ ಪ್ರಭುಃ ।
ಹಿರಣ್ಮಯೇವ ಸ್ವಮಿದಂ ಮುನೀನಾಂ ಮದಾಜ್ಞಯಾ ಭುಂಗ್ಧ್ವಮಶೇಷರಾಜ್ಯಮ್ ॥೧೪೫॥

ಸಮರ್ಪಿತಂ ಮೇ ಫಲವಚ್ಚ ತತ್ ಸ್ಯಾತ್ ಪುನರ್ಗ್ರಹೋ ನೈವ ಚ ದೋಷಕಾರೀ ।
ಪಿತಾಮಹೋಽಹಂ ಭವತಾಂ ವಿಶೇಷತೋ ಗುರುಃ ಪತಿಶ್ಚೈವ ತತೋ ಮದರ್ಹಥ ॥೧೪೬॥

ಇತಿ ಈರಿತಃ—ಈ ರೀತಿ ಪಾಂಡವರಿಂದ ಹೇಳಲ್ಪಟ್ಟ, ಪ್ರಭುಃ ಸಃ ಬಾದರಾಯಣಃ— ಸಮರ್ಥರಾದ ಆ ವೇದವ್ಯಾಸದೇವರು, ಮುನೀಶ್ವರೈಃ ಅಪಿ ಅನುಯಾಚಿತಃ ಸನ್ — ಋಷಿಶ್ರೇಷ್ಠರಿಂದಲೂ ಪುನಃ (ನಮಗೆ ರಾಜ್ಯ ಬೇಡ ಎಂದು) ಪ್ರಾರ್ಥಿಸಲ್ಪಟ್ಟವರಾಗಿ, (ಪಾಂಡವರನ್ನು ಕುರಿತು)ಮುನೀನಾಂ—ಋಷಿಗಳಿಗೆ, ಹಿರಣ್ಮಯಂ ಸ್ವಂ ಏವ—ಈ ಬಂಗಾರ ರೂಪವಾದ ಸಂಪತ್ತಷ್ಟೇ, (ಇರಲಿ), ಅಶೇಷರಾಜ್ಯಂ — ಎಲ್ಲ ರಾಜ್ಯವನ್ನು, ಮದಾಜ್ಞಯಾ — ನನ್ನ ಅಪ್ಪಣೆಯ ಪ್ರಕಾರ, ಭುಂಗ್ಧ್ವಂ — ಭೋಗಿಸಿರಿ, ಮೇ— ನನಗೆ, ಸಮರ್ಪಿತಂ ಯತ್ — ಯಾವ ಕಾರಣದಿಂದ ಸಮರ್ಪಿಸಲ್ಪಟ್ಟಿದೆಯೋ, ತತ್ — ಆದ್ದರಿಂದ, ಫಲವತ್ ಚ ಸ್ಯಾತ್ — ದಾನಫಲ ಪ್ರದವೂ ಆಗುವದು, ಚ — ಮತ್ತು, ಯತಃ — ಯಾವಕಾರಣದಿಂದ, ಅಹಂ — ನಾನು, ಭವತಾಂ— ನಿಮಗೆ, ಪಿತಾಮಹಃ — ಅಜ್ಜನು, ವಿಶೇಷತಃ ಗುರುಃ — ವಿಶೇಷವಾಗಿ ಗುರುವು, ಪತಿಃ ಚ — ಪಾಲಕನೂ ಆಗಿರುವೆನೋ, ತತಃ — ಆ ಕಾರಣದಿಂದ, ಮತ್ — ನನ್ನದೆಶೆಯಿಂದ, ಪುನರ್ಗ್ರಹಃ—ಮತ್ತೆ ತೆಗೆದುಕೊಳ್ಳುವದು ನೈವ ದೋಷಕಾರೀ —ದೋಷಕರವಾಗುವದಿಲ್ಲ ಆದ್ದರಿಂದ. ಅರ್ಹಥ — ತೆಗೆದುಕೊಳ್ಳಲು ಅರ್ಹರು ಇರುವಿರಿ. ಇತಿ — ಎಂದು, ಪ್ರಾಹ — ಹೇಳಿದರು. ॥ ೧೪೫ — ೧೪೬ ॥

ಇತೀರಿತಾಸ್ತೇ ಪ್ರತಿಪದ್ಯ ರಾಜ್ಯಂ ದದುರ್ಹಿರಣ್ಮಂ ನಿಖಿಲಂ ಚ ತಸ್ಮೈ ।
ವಿಭಜ್ಯ ವಿಪ್ರಾನ್ ಸ ನಿಜಂ ತು ಭಾಗಮುದಾತ್ ಪೃಥಾಯೈ ನಿಖಿಲಂ ಪ್ರಸನ್ನಃ ॥೧೪೭॥

ಇತಿ ಈರಿತಾಃ ತೇ — ಈ ರೀತಿ ಶ್ರೀವೇದವ್ಯಾಸದೇವರಿಂದ ಹೇಳಲ್ಪಟ್ಟ ಆ ಪಾಂಡವರು, ರಾಜ್ಯಂ— ರಾಜ್ಯವನ್ನು, ಪ್ರತಿಪದ್ಯ — ಸ್ವೀಕರಿಸಿ, ನಿಖಿಲಂ ಹಿರಣ್ಮಂ — ಎಲ್ಲ ಭಂಗಾರಾದಿ ಸಂಪತ್ತನ್ನು, ತಸ್ಮೈ — ಆ ಶ್ರೀವೇದವ್ಯಾಸದೇವರಿಗೇ, ದದುಃ — ಸಮರ್ಪಿಸಿದರು. ಸಃ ತು — ಅವರಾದರೂ, ವಿಪ್ರಾನ್ — ಎಲ್ಲ ಬ್ರಾಹ್ಮಣರಿಗೆ, ವಿಭಜ್ಯ — ವಿಭಾಗಮಾಡಿ (ಹಂಚಿ) ನಿಜಂ ನಿಖಿಲಂ ಭಾಗಂ ತು — ತನ್ನ ಪಾಲಿನ ಎಲ್ಲ ಭಾಗವನ್ನು ಮಾತ್ರ, ಪ್ರಸನ್ನಃ ಸನ್—ಸಂತೋಷಯುಕ್ತರಾಗಿಯೇ, ಪೃಥಾಯೈ—ಕುಂತೀದೇವಿಗೆ,ಅದಾತ್—ಕೊಟ್ಟರು. ॥೧೪೭॥

ಸಭಾರ್ಯಕಾಣಾಂ ವರರತ್ನಭೂಷಣಾನ್ಯಶೇಷತಃ ಪುತ್ರಭುವಾಂ ಪ್ರದಾಯ ।
ಪೃಥಕ್ಪೃಥಗ್ ಯೋಗ್ಯವರಾನಥೈಭ್ಯಃ ಪ್ರಾದಾತ್ ಪ್ರಭುಸ್ತೇ ಮುದಿತಾಃ ಪ್ರಣೇಮುಃ ॥೧೪೮॥

ಪ್ರಭುಃ—ಸ್ವಾಮಿಯಾದ ಆ ಶ್ರೀವೇದವ್ಯಾಸದೇವರು, ಸಭಾರ್ಯಕಾಣಾಂ—ಪತ್ನೀ ಸಮೇತರಾದ,

ಅಶೇಷತಃ ಪುತ್ರಭುವಾಂ—ತನ್ನ ಮಗನಾದ ಪಾಂಡುರಾಜನ ಮಕ್ಕಳಾದ ಪಾಂಡವರಿಗೆ ಎಲ್ಲರಿಗೂ. ಪೃಥಕ್ ಪೃಥಕ್—ಪ್ರತ್ಯೇಕ ಪ್ರತ್ಯೇಕವಾಗಿ. ವರರತ್ನಭೂಷಣಾನಿ ಪ್ರದಾಯ—ಶ್ರೇಷ್ಠ ರತ್ನ ಖಚಿತವಾದ ಆಭರಣಗಳನ್ನು ಕೊಟ್ಟು, ಏಭ್ಯಃ—ಇವರಿಗೆ, ಪೃಥಕ್ ಪೃಥಕ್—ಪ್ರತ್ಯೇಕಪ್ರತ್ಯೇಕವಾಗಿಯೇ, ಯೋಗ್ಯವರಾನ್—ಯೋಗ್ಯವಾದ ವರಗಳನ್ನು, ಪ್ರಾದಾತ್—ಕೊಟ್ಟರು. ಮುದಿತಾಃ ತೇ—ಸಂತುಷ್ಟರಾದ ಆ ಪಾಂಡವರು. ಪ್ರಣೇಮುಃ—ನಮಸ್ಕರಿಸಿದರು. ॥೧೪೮॥

ತದ್ ಯಜ್ಞಪಂಚಕಮಜಸ್ರಿಗುಣಾಂ ಸ ಏಭ್ಯಃ ಸದ್ದಕ್ಷಿಣಾಂ ಕ್ರತುಪತಿರ್ನಿಖಿಲಾಮವಾಪ್ಯ ।
ಚಕ್ರೇಽಶ್ವಮೇಧತ್ರಯಮೇಕಮೇಕಂ ತೇಷಾಂ ಹರಿರ್ಬಹುಸುವರ್ಣಕನಾಮಧೇಯಮ್ ॥೧೪೯॥

ಕ್ರತುಪತಿಃ — ಎಲ್ಲ ಯಜ್ಞಗಳ ಸ್ವಾಮಿಯಾದ, ಸಃಹರಿಃ – ಆ ವೇದವ್ಯಾಸದೇವರು, ತ್ರಿಗುಣಾಂ ಸದ್ದಕ್ಷಿಣಾಂ — ಆ ಐದು ಯಜ್ಞಗಳಿಗೆ ಕೊಡಬೇಕಾದ ದಕ್ಷಿಣಾಕ್ಕಿಂತಲೂ ಮೂರು ಪಟ್ಟು ಹೆಚ್ಚು ದಕ್ಷಿಣಾವನ್ನು ಏಭ್ಯ —ಈ ಪಾಂಡವರಿಂದ ಈ ಎಲ್ಲ ಬ್ರಾಹ್ಮಣರಿಗೆ, ಅವಾಪ್ಯ ಹೊಂದಿಸಿ [ಕೊಡಿಸಿ], ಬಹು ಸುವರ್ಣಕನಾಮಧೇಯಂ — ಬಹು ಭಂಗಾರದಿಂದ ಕೂಡಿದ್ದು ಎಂದು ಪ್ರಸಿದ್ಧವಾದ, ತತ್ ಯಜ್ಞಪಂಚಕಂ—ಆ ಐದು ಯಜ್ಞಗಳನ್ನು, ತೇಷಾಂ ಏಕಂ ಏಕಂ—ಪ್ರತಿ ಒಬ್ಬೊಬ್ಬ ಪಾಂಡವರನ್ನ ಕುರಿತು, ಅಶ್ವಮೇಧತ್ರಯಂ — ಮೂರು ಮೂರು ಅಶ್ವಮೇಧ ಮಾಡಿದ ಫಲಪ್ರದವನ್ನಾಗಿ, ಚಕ್ರೇ ಮಾಡಿದರು. ॥೧೪೯॥

ಭಾವಾನುವಾದ ೧೪೧—೧೪೯

ಪಾಂಡವರು ತಮ್ಮ ಸರ್ವಸ್ವವನ್ನು ಮನಃ ಪೂರ್ವಕವಾಗಿ ಶ್ರೀಹರಿಗೇ ಸಮರ್ಪಿಸಿದ್ದರೂಕೂಡ, ತಾರತಮ್ಯಕ್ಕನುಸಾರವಾಗಿ ಬ್ರಾಹ್ಮಣರಿಗೆ ಋತ್ವಿಜರಿಗೆ ಹಂಚಲು ಎಂಬಂತೆ ಸಮರ್ಪಿಸಿದರು. ಬ್ರಾಹ್ಮಣರಿಗೆ ಕೊಟ್ಟರೂ ಅವರ ಒಳಗಿದ್ದು ತೆಗೆದುಕೊಳ್ಳುವವನೂ ಶ್ರೀಹರಿಯೇ. ತಮ್ಮ ದೇಹ, ಇಂದ್ರಿಯ, ಪ್ರಾಣ, ಮನಸ್ಸುಗಳನ್ನೂ ಕೂಡ ಶ್ರೀಹರಿಗೆ ಸಂತಸದಿಂದ ಸಮರ್ಪಿಸಿ ಸ್ವಾಮಿ, ಎಲ್ಲವೂ ನಿನ್ನದೇ, ನಮ್ಮದೇನೂ ಇಲ್ಲ. ನೀನೊಬ್ಬನೇ, ಸ್ವತಂತ್ರನು, ಪೂರ್ಣನು, ಎಂದು ಸ್ತುತಿಸಿ ನಮಸ್ಕರಿಸಿದರು. ಶ್ರೀವೇದವ್ಯಾಸದೇವರು ಋತ್ವಿಜರಿಗೆ ಹಂಚಿದಾಗ ಅವರು 'ಸ್ವಾಮೀ, ನಮಗೆ ಧನವು ಮಾತ್ರ ಸಾಕು, ಭೂಮಿಯು ಬೇಡ, ಅದರ ರಕ್ಷಣೆಗೆ ಈ ಕ್ಷತ್ರಿಯರಾದ ಪಾಂಡವರೇ ಸಮರ್ಥರು, ಅರ್ಹರು ಆದ್ದರಿಂದ ಇವರಿಗೇ ತಿರುಗಿ ಕೊಡುವೆವು' ಎಂದು ಹೇಳಿದರು ಆಗ ಪಾಂಡವರು ಶ್ರೀವ್ಯಾಸದೇವರಿಗೆ 'ಸ್ವಾಮೀ ಧರ್ಮ ನ್ಯಾಯಗಳಿಂದ ಲಬ್ಧವಾದ ಈ ರಾಜ್ಯವನ್ನುನಿಮಗೇ ಸಮರ್ಪಿಸಿ ನಾವು ವನಕ್ಕೆ ಹೋಗುವೆವು. ಅಲ್ಲಿ ತಪಸ್ಸನ್ನಾಚರಿಸುವೆವು. ಅದೇ ಸಾಕು ಎಂದು ಹೇಳಿ ನಮಿಸಿದರು. ಈ ರೀತಿಯಾಗಿ ಇಬ್ಬರೂ ಪ್ರಾರ್ಥಿಸಿದಾಗ, ಶ್ರೀವೇದವ್ಯಾಸದೇವರು ಭಂಗಾರ, ಧನ ಸಂಪತ್ತು ಮಾತ್ರ ಮುನಿಗಳಿಗಿರಲಿ, ರಾಜ್ಯವನ್ನು ನನ್ನ ಅಪ್ಪಣೆಯಂತೆ ನೀವೇ ಭೋಗಿಸಿರಿ. ನೀವು ನನಗೆ ಸಮರ್ಪಿಸಿದ್ದರಿಂದ ಆ ಫಲವೂ ಇದೆ. ನಾನು ನಿಮಗೆ ಅಜ್ಜ ಹಾಗೂ ಗುರುವಾದ್ದರಿಂದ ನನ್ನದನ್ನು ನೀವು ಸ್ವೀಕರಿಸುವದರಿಂದ ದತ್ತಾಪಹಾರ ದೋಷವೇನೂ ಒರುವದಿಲ್ಲ. ಆದ್ದರಿಂದ ತೆಗೆದುಕೊಳ್ಳಿರಿ ಎಂದು ಹೇಳಿದರು. ಆಗ ಪಾಂಡವರು ರಾಜ್ಯವನ್ನು ತೆಗೆದುಕೊಂಡು, ಎಲ್ಲ ಹಿರಣ್ಯಸಂಪತ್ತನ್ನು ದೇವರಿಗೆ ಕೊಟ್ಟರು. ಶ್ರೀವೇದವ್ಯಾಸದೇವರು ಆ ಸಂಪತ್ತನ್ನು ಎಲ್ಲ ಋತ್ವಿಜರಿಗೆ ಯೋಗ್ಯವಾಗಿ ಹಂಚಿ, ತನಗೆ ಬರಬೇಕಾದ ಎಲ್ಲ ಭಾಗವನ್ನು ಕುಂತೀದೇವಿಗೆ ಇತ್ತನು. ಪಾಂಡವರಿಗೆ ಅವರ ಪತ್ನಿಯರಿಗೆ ನವರತ್ನಖಚಿತವಾದ ಆಭರಣಗಳನ್ನು ಹಾಗೂ ವರಗಳನ್ನು ಕೊಟ್ಟರು. ಸ್ವೀಕರಿಸಿದ ಅವರು ಸಂತುಷ್ಟರಾಗಿ ನಮಸ್ಕರಿಸಿದರು. ಯಜ್ಞಸ್ವಾಮಿಯಾದ ಶ್ರೀವೇದವ್ಯಾಸದೇವರು ಆ ಯಜ್ಞದಲ್ಲಿ ಮೂರು ಮೂರ್ಮು ಪಟ್ಟು ಹೆಚ್ಚು ದಕ್ಷಣಾದಿಗಳನ್ನು ಬ್ರಾಹ್ಮಣರಿಗೆ ಕೊಡಿಸಿ ಒಂದೊಂದು ಅಶ್ವಮೇಧವು ಮೂರು ಮೂರು ಅಶ್ವಮೇಧಗಳ ಫಲಪ್ರದವನ್ನಾಗಿ ಮಾಡಿಸಿ ಒಬ್ಬೊಬ್ಬ ಪಾಂಡವನು ಮೂರು ಮೂರು ಅಶ್ವಮೇಧಗಳನ್ನು ಮಾಡಿದಂತೆ ಮಾಡಿಸಿದರು.

ಸಕೃಷ್ಣೇಷ್ವಥ ಪಾರ್ಥೇಷು ಸುಸ್ನಾತಾವಭೃಥೇಷ್ವಲಮ್ ।
ಪಂಚೇಂದ್ರವದ್ ವಿರಾಜತ್ಸು ಸ್ತೂಯಮಾನೇಷ್ವೃಷೀಶ್ವರೈಃ ॥೧೫೦॥

ಸ್ತೂಯಮಾನೇ ಚ ತದ್ಯಜ್ಞೇ ಕ್ರೋಧೋ ನಕುಲತಾಂ ಗತಃ ।
ಕೃತ್ವೋಗ್ರಗರ್ಜನಂ ಯಜ್ಞಂ ತಾಂಶ್ಚ ಯಜ್ಞಕೃತೋಽಖಿಲಾನ್ ॥೧೫೧॥

ಗರ್ಹಯನ್ನೂಚಿವಾನಿತ್ಥಂ ಭಾರ್ಯಾಪುತ್ರಸ್ಮೃಷಾಯುತಃ ।
ಸಕ್ತುಪ್ರಸ್ಥಮದಾದ್ ವಿಪ್ರ : ಉಂಛವೃತ್ತಿಃ ಸುಭಕ್ತಿತಃ ॥೧೫೨॥

ಧರ್ಮಾಯಾತಿಥಯೇ ತಸ್ಯ ಕಲಾಂ ನಾರ್ಹತಿಷೋಡಶೀಮ್ ।
ಯಜ್ಞೋಽಯಮಿತಿ ಹೇತುಂ ಚ ವಿಪ್ರೈಃ ಪೃಷ್ಟೋಽಭ್ಯಭಾಷತ ॥೧೫೩॥

ಅಥ – ಅನಂತರ, ಸಕೃಷ್ಣೇಷು ಶ್ರೀಕೃಷ್ಣಸಮೇತರಾದ, ಸುಸ್ನಾತಾವಭೃಥೇಷು — ಅವಭೃಥ ಸ್ನಾನವನ್ನು ಮಾಡಿದಂತಹ, ಪಾರ್ಥೇಷು ಪಾಂಡವರು, ಪಂಚೇಂದ್ರವತ್–ಐದು ಇಂದ್ರರತೆ, ಅಲಂ ವಿರಾಜತ್ಸು ಸತ್ಸು — ಚೆನ್ನಾಗಿ ಶೋಭಿತರಾಗಿರುತ್ತಿರಲು, ಋಷೀಶ್ವರೈ :— ಶ್ರೇಷ್ಠ ಋಷಿಗಳಿಂದ, ಸ್ತೂಯಮಾನೇಷು ಸತ್ಸು—ಸ್ತುತಿಸಲ್ಪಡುತ್ತಿರಲು, ಚ – ಮತ್ತು, ತದ್ಯಜ್ಞೇ — ಪಾಂಡವರ ಆ ಯಜ್ಞವು, ಸ್ತೂಯಮಾನೇ ಸತಿ— ಪ್ರಶಂಸಿಸಲ್ಪಡುತ್ತಿರಲು, ಕ್ರೋಧಃ—ಕ್ರೋಧದ ಅಭಿಮಾನಿದೈತ್ಯನು, ನಕುಲತಾಂ—ಮುಂಗ[ಲಿ]ಸಿಯ ರೂಪವನ್ನು ಗತಃ ಸನ್ — ಹೊಂದಿದವನಾಗಿ, ಉಗ್ರಗರ್ಜನಂ — ಭಯಂಕರ [ಕರ್ಕಶ] ವಾದ ಗರ್ಜನವನ್ನು, ಕೃತ್ವಾ – ಮಾಡಿ, ಯಜ್ಞಂ –ಆ ಯಜ್ಞವನ್ನು, ಮತ್ತು, ಅಖಿಲಾನ್ ತಾನ್ ಯಜ್ಞಕೃತಃ— ಯಜ್ಞ ಮಾಡಿದ ಆ ಎಲ್ಲ ಪಾಂಡವರನ್ನು, ಗರ್ಹಯನ್ ಸನ್— ನಿಂದಿಸುವವನಾಗಿ, ಇತ್ಥಂ — ಈ ಮುಂದೆ ಹೇಳುವರೀತಿ, ಊಚಿವಾನ್ — ಮಾತನಾಡಿದನು. ಭಾರ್ಯಾಪುತ್ರಸ್ಮೃಷಾಯುತ :— ಪತ್ನೀಪುತ್ರಸಹಿತನಾಗಿ ಉಂಛವೃತ್ತಿ:–ಉಂಛವೃತ್ತಿಯಲ್ಲಿರುವ, ವಿಪ್ರಃ— ಬ್ರಾಹ್ಮಣನೊಬ್ಬನು, ಸಕ್ತುಪ್ರಸ್ಥಂ —ಸಕ್ತುಪ್ರಸ್ಥ ಧಾನ್ಯವನ್ನು, ಅತಿಥಯೇ — ಅತಿಥಿಯಾಗಿ ಬಂದಿರುವ, ಧರ್ಮಾಯ–ಯಮಧರ್ಮನಿಗೆ, ಸುಭಕ್ತಿತಃ — ಬಹುಭಕ್ತಿಯಿಂದ, ಅದಾತ್ — ಕೊಟ್ಟನು. ತಸ್ಯ — ಆ ದಾನಕಾರ್ಯದ, ಷೋಡಶೀಂ ಕಲಾಂ ಅಪಿ — ಹದಿನಾರನೆಯ ಅಂಶದ ಸಾಮ್ಯವನ್ನೂ ಕೂಡಾ, ಅಯಂ ಯಜ್ಞಃ— ಪಾಂಡವರ ಈ ಯಜ್ಞವು, ನ ಅರ್ಹತಿ—ಹೊಂದಿರುವದಿಲ್ಲ. ತತ್ರ — ಆದರ ಬಗ್ಗೆ)–ಏಕೆ ಸಾಮ್ಯವನ್ನು ಹೊಂದಿಲ್ಲ ಎಂಬ ಬಗ್ಗೆ) ಹೇತುಂ — ಕಾರಣವನ್ನು, ವಿಪ್ರೈಃ ಬ್ರಾಹ್ಮಣರಿಂದ, ಪೃಷ್ಟಃ — ಕೇಳಿಸಿಕೊಳ್ಳಲ್ಪಟ್ಟ ಆ ಮುಂಗಲಿ ರೂಪದ ದೈತ್ಯನು, ಅಭ್ಯಭಾಷತ—ಮುಂದೆ ಹೇಳುವಂತೆ ಮಾತಾಡಿದನು,॥೧೫೦॥॥೧೫೧॥॥೧೫೨॥॥೧೫೩॥

ಅತಿಥೇಸ್ತಸ್ಯ ಪಾದೋದಕ್ಲಿನ್ನಃ ಪಾರ್ಶ್ವೋ ಹಿರಣ್ಮಯಃ ।
ಏಕೋ ಮಮಾಭೂದಪರಃ ಸರ್ವತೀರ್ಥೋದಕೇಷ್ವಪಿ ॥೧೫೪॥

ಮಜ್ಜತೋಽವಭೃಥೇಷ್ವದ್ಧಾ ಯಜ್ಞಾನಾಮತ್ರ ಚಾಽದರಾತ್ ।
ನಾ ಭೂದಿತ್ಯಥ ತತ್ತತ್ತ್ವವೇದಿಭಿರ್ಮುನಿಪುಂಗವೈಃ ॥೧೫೫॥

ಕೃಷ್ಣೇನ ಚ ತಮೋಽಂಧಂ ತಂ ಪ್ರಾಪಯದ್ಭಿಃ ಸ್ಮಿತೇಕೃತೇ ।
ಅದರ್ಶನಂ ಜಗಾಮಾಽಶು ತಮಃ ಪ್ರಾಪ ಚ ಕಾಲತಃ ।
ತದರ್ಥಮೇವ ಹೈರಣ್ಯಃ ಪಾರ್ಶ್ವಸ್ತಸ್ಯಾಭವತ್ ಪುರಾ ॥೧೫೬॥

ತಸ್ಯ ಅತಿಥೇ:— ಆ ಅತಿಥಿಯ, ಪಾದೋದಕ್ಲಿನ್ನಃ — ಪಾದಪ್ರಕ್ಷಾಲನದ ಉದಕದಲ್ಲಿ, ತೊಯ್ಯಲ್ಪಟ್ಟ, ಮಮ ಏಕಃ ಪಾರ್ಶ್ವ: — ನನ್ನ ಒಂದು ಬದಿಯು, ಹಿರಣ್ಮಯಃ ಅಭೂತ್— ಭಂಗಾರವಾಯವು ಆಯಿತು.[ಆದರೆ], ಸರ್ವತೀರ್ಥೋದಕೇಷು—ಎಲ್ಲ ತೀರ್ಥಗಳ ಅವಭೃಥಗಳಲ್ಲಿ, ಚ – ಮತ್ತು, ಅತ್ರ – ಈ ಪಾಂಡವರ ಯಜ್ಞದ ಅವಭೃಥದಲ್ಲಿ, ಆದರಾತ್ ಮಜ್ಜತಃ ಅಪಿ–ಆದರದಿಂದ ಸ್ನಾನ ಮಾಡಿದರೂ ಕೂಡ ನನ್ನ, ಅಪರಃ — ಇನ್ನೊಂದು ಬದಿಯು, ಹಿರಣ್ಮಯ: —ಬಂಗಾರಮಯವು, ನಅಭೂತ್—ಆಗಲಿಲ್ಲ, ಇತಿ—ಎಂಬ ಕಾರಣವನ್ನು, [ಹೇಳಿದನು.] ಅಥ—ಈ ಮಾತನ್ನು ಕೇಳಿದನಂತರ, ತತ್ತತ್ತ್ವವೇದಿಭಿ: — ವಾಸ್ತವಿಕ ವಿಷಯವನ್ನು ತಿಳಿದಂಥ, ತಂ—ಆ ಕ್ರೋಧ ದೈತ್ಯನನ್ನು, ಅಂಧಂ ತಮಃ —ಅಂಧಂತಮಸ್ಸಿಗೆ ಪ್ರಾಪಯದ್ಭಿ: —ಕಳಿಸಲು ಅಪೇಕ್ಷೆಯುಳ್ಳ, ಮುನಿಪುಂಗವೈಃ—ಶ್ರೇಷ್ಠ ಋಷಿಗಳಿಂದ ಚ – ಹಾಗು, ಕೃಷ್ಣೇನ – ಶ್ರೀಕೃಷ್ಣಪರಮಾತ್ಮನಿಂದ, ಸ್ಮಿತೇ ಕೃತೇ—ಮಂದಹಾಸವು ಮಾಡಲ್ಪಡುತ್ತಿರಲು, [ಆ ದೈತ್ಯನು] ಆಶು–ಕೂಡಲೇ ಅದರ್ಶನಂ ಜಗಾಮ – ಕಾಣದಿರುವಿಕೆಯನ್ನು ಹೊಂದಿದನು, [ಕಾಣದಂತಾದನು]. ಚ – ಮತ್ತು, ಕಾಲತ:– ಕಾಲಕ್ರಮದಿಂದ ತಮಃ ಪ್ರಾಪ – ತಮಸ್ಸನ್ನು ಹೊಂದಿದನು. ತದರ್ಥಂ ಏವ – ಅದಕ್ಕಾಗಿಯೇ ತಸ್ಯ ಪಾರ್ಶ್ವ:– ಅವನ ಒಂದು ಬದಿಯು, ಪುರಾ –ಹಿಂದೆ, ಹೈರಣ್ಯಃ ಅಭವತ್–ಭಂಗಾರಮಯವಾಗಿತ್ತು. ॥೧೫೪—೧೫೫—೧೫೬॥

ಕೃಷ್ಣಸ್ಯ ಪಾಂಡವಾನಾಂ ಚ ಮಖಾದೇಶ್ಚ ಗುಣಾನ್ ಬಹೂನ್ ।
ವದಂತೋ ಭರ್ತ್ಸಯಾಂಚಕ್ರುಸ್ತನ್ಮತಜ್ಞಾ ಮಧುದ್ವಿಷಃ ॥೧೫೭॥

ಕೃಷ್ಣಸ್ಯ–ಶ್ರೀಕೃಷ್ಣನ, ಚ–ಹಾಗೂ, ಪಾಂಡವಾನಾಂ–ಪಾಂಡವರ,ಮಖಾದೇಃ ಚ–ಅವರೆಲ್ಲರು ಮಾಡಿದ ಯಜ್ಞವೊದಲಾದವುಗಳ, ಬಹೂನ್ ಗುಣಾನ್—ಬಹುಗುಣಗಳನ್ನು, ವದಂತಃ—ವರ್ಣಿಸಿದ, ಮಧುದ್ವಿಷಃ—ಶ್ರೀಹರಿಯ, ಮತಜ್ಞಾಃ — ಅಭಿಪ್ರಾಯವನ್ನು ತಿಳಿದ, ಋಷಿಗಳು. ತಂ—ದೈತ್ಯನನ್ನು, ಭರ್ತ್ಸಯಾಂ ಚಕ್ರುಃ— ನಿಂದಿಸಿದರು. ॥೧೫೭॥

ಅವತಾರಿಕೆ — ಆ ದೈತ್ಯನು ಮುಂಗಸಿ ರೂಪದಿಂದ ಬಂದು ನಿಂದಿಸಲು ಕಾರಣವನ್ನು ತಿಳಿಸುತ್ತಾರೆ —

ಶಾಪ್ರದಾರ್ಥಂ ಹಿ ಪಯಃ ಪೂರ್ವಂ ಜಮದಗ್ನೇರದೂಷಯತ್ ।
ನಾಕುಲೇನೈವರೂಪೇಣ ಕ್ರೋಧಸ್ತಂ ಪಿತರೋಽಶಪನ್ ॥೧೫೮॥

ಭವ ತ್ವಂ ನಕುಲಸ್ತಾವದ್ ಯಾವದ್ಧರ್ಮಾದಿಕಾನ್ ಸುರಾನ್ ।
ಕ್ಷೇಪ್ಸ್ಯಸೀತಿ ತಮೋ ಘೋರಂ ಭೂಯಃ ಪಾಪೇನ ಯಾತ್ವಯಮ್ ।
ಇತ್ಯಭಿಪ್ರೇತ್ಯ ತೈಃ ಶಪ್ತಸ್ತಥಾ ಕೃತ್ವಾ ತಮೋಽಭ್ಯಯಾತ್ ॥೧೫೯॥

ಪೂರ್ವಂ—ಹಿಂದೆ, ಯಾವಕಾರಣದಿಂದ, ಕ್ರೋಧಃ—ಕ್ರೋಧಾಭಿಮಾನಿ ದೈತ್ಯನು ಶ್ರಾದ್ಧಾರ್ಥಂ—ಶ್ರಾದ್ಧಕ್ಕಾಗಿ ಇರತಕ್ಕ, ಜಮದಗ್ನೇಃ ಪಯಃ—ಜಮದಗ್ನಿ ಋಷಿಗಳ ಹಾಲನ್ನು, ನಾಕುಲೇನ ರೂಪೇಣ ಏವ—ಮುಂಗಸಿ ರೂಪದಿಂದಲೇ ಅದೂಷಯತ್—ಬಾಯಿಹಾಕಿ ದೂಷಿಸಿದನೋ, ತತಃ—ಆಕಾರಣದಿಂದ ಪಿತರಃ—ಪಿತೃ ದೇವತೆಗಳು ಅಯಂ—ಈ ದೈತ್ಯನು, ಭೂಯಃ ಪಾಪೇನ—ಬಹುಪಾಪದಿಂದ, ಘೋರಂತಮಃ—ಘೋರ ತಮಸ್ಸಿಗೆ, ಯಾತು—ಹೋಗಲಿ, ಇತಿ—ಎಂಬ ಉದ್ದೇಶದಿಂದ, ತಂ—ಆ ದೈತ್ಯನನ್ನು, ತ್ವಂ—ನೀನು, ಯಾವತ್ ಎಲ್ಲಿಯವರೆಗೆ, ಧರ್ಮಾದಿಕಾನ್ಸುರಾನ್—ಧರ್ಮಾದಿ ದೇವಾವತಾರಿಗಳನ್ನು ಕ್ಷೇಪ್ಸ್ಯಸಿ—ನಿಂದಿಸುವೆಯೋ, ತಾವತ್—ಅಲ್ಲಿಯವರೆಗೆ, ನಕುಲಃ ಭವ—ಮುಂಗಲಿ ರೂಪನಾಗಿರು, ಇತಿ—ಎಂದು, ಅಶಪನ್—ಶಪಿಸಿದರು, ತೈಃ—ಆ ದೇವತೆಗಳಿಂದ, ಇತಿ - ಅಭಿಪ್ರೇತ್ಯ ಶಪ್ತಃ—ಈ ರೀತಿ ಅಭಿಪ್ರಾಯಪಟ್ಟು ಶಪಿಸಲ್ಪಟ್ಟ ಆ ದೈತ್ಯನು, ತಥಾಕೃತ್ವಾ—ಹಾಗೇಮಾಡಿ, ತಮಃ ಅಭ್ಯಯಾತ್—ತಮಸ್ಸಿಗೆ ಹೋದನು. ॥೧೫೮॥ ॥೧೫೯॥

ಯದ್ಯಪ್ಯಲ್ಪಧನತ್ಯಕ್ತಂ ವಿತ್ತಂ ಬಹುಫಲಂ ಭವೇತ್ ।
ತಥಾಽಪ್ಯನಂತಫಲದಾಃ ಕರ್ತುರೇವ ಮಹಾಗುಣಾಃ ॥೧೬೦॥

ಯದ್ಯಪಿ—ಸಾಮಾನ್ಯವಾಗಿ, ಅಲ್ಪಧನತ್ಯಕ್ತಂ—ಅಲ್ಪಧನವುಳ್ಳವ (ದರಿದ್ರ) ನಿಂದ ದಾನ ಮಾಡಲ್ಪಟ್ಟ, ವಿತ್ತಂ—ಧನವು, ಬಹುಫಲಂ—ಬಹುಫಲಪ್ರದವು, ಭವೇತ್—ಆಗುವದು. ತಥಾಪಿ—ಆದರೂ ಕೂಡ, ಅನಂತಫಲದಾಃ—ಅಕ್ಷಯಫಲವನ್ನು ಕೊಡತಕ್ಕವುಗಳು, ಕರ್ತುಃ ಮಹಾಗುಣಾಃ ಏವ—ಕರ್ತೃಪುರುಷನ ಶ್ರೇಷ್ಠ ಸದ್ಗುಣಗಳೇ ಹೊರತು (ದಾರಿದ್ರ್ಯವಲ್ಲ.) ॥೧೬೦॥

ಸತಾಂ ಪ್ರೀತಿಶ್ಚ ತತ್ರಾಪಿ ಸದ್ವರೋ ಹರಿರೇವ ಹಿ ।
ಪಾರ್ಥೇಭ್ಯೋಽಧ್ಯಧಿಕಃ ಕರ್ತಾ ಸಮೋ ವಾ ಕೋ ಗುಣೈರ್ಭವೇತ್ ॥೧೬೧॥

ತತ್ರಅಪಿ—ಆ ಸದ್ಗುಣಗಳ ಪೈಕಿ, ಸತಾಂ ಪ್ರೀತಿ :— ಸಜ್ಜನರನ್ನು ಸಂತೋಷಪಡಿಸೋಣ ಎಂಬ ಗುಣವು, ಚ—ವಿಶೇಷವಾಗಿ ಅಕ್ಷಯ ಫಲಪ್ರದವು, ಸದ್ವರಃ—ಸಕಲ ಸಜ್ಜನರಲ್ಲಿ ಶ್ರೇಷ್ಠನಾದವನು, ಹರಿಃ ಏವ—ಶ್ರೀಹರಿಯೇ, ಹಿ—ಯಾವ ಕಾರಣದಿಂದ ಆಗಿರುವನೋ, ಆದ್ದರಿಂದ ಅವನಿಗೆ ಪ್ರಿಯವಾದ ಈ ಯಜ್ಞವೇ ವಿಶೇಷ ಫಲಪ್ರದವಾಗಿದೆ. ಅಷ್ಟೇಅಲ್ಲ—ಪಾರ್ಥೇಭ್ಯಃ — ಪಾಂಡವರಿಗಿಂತ, ಗುಣೈಃ ಅಧಿಕಃ —ಗುಣಗಳಿಂದ ಹೆಚ್ಚಿನವನಾಗಲೀ, ಸಮಃ ವಾ—ಸಮಾನನಾದವನಾಗಲೀ, ಕರ್ತಾ—ಕರ್ತೃಪುರುಷನು, ಕಃ ಭವೇತ್—ಯಾವನಿರಲು ಸಾಧ್ಯ ? (ಯಾವನೂ ಇಲ್ಲವೆಂದು ಭಾವ) ॥೧೬೧॥

ಸತಾಂ ಚ ಪ್ರವರೋ ವಿಷ್ಣುಃ ಸದ್ಭಿರ್ಮುನಿವರೈರ್ಯತಃ ।
ಪ್ರತ್ಯಕ್ಷತಃ ಕಾರಯತಿ ಪಾರ್ಥೈಃ ಪ್ರಿಯತಮೈಶ್ಚ ತೈಃ ।
ಯಂ ಮುಖಪ್ರವರಂ ತಸ್ಯ ಸಮಂ ಕಿಂ ಶುಭಸಾಧನಮ್ ॥೧೬೨॥

ಸತಾಂ ಪ್ರವರಃ— ಸಜ್ಜನರೆಲ್ಲರಿಗಿಂತ ಉತ್ತಮೋತ್ತಮನಾದ, ವಿಷ್ಣುಃ-ಶ್ರೀ ಹರಿಯು, ಸದ್ಭಿಃ ಮುನಿವರೈಃ ಯುತಃ ಸನ್—ಸಜ್ಜನರಾದ ಮುನಿಶ್ರೇಷ್ಠರಿಂದ ಕೂಡಿದವನಾಗಿ, ಪ್ರಿಯತಮೈಃ —ತನಗೆ ಅತಿ ಪ್ರಿಯರಾದ, ತೈಃ ಪಾರ್ಥೈಃ— ಆ ಪಾಂಡವರಿಂದ, ಯಂ ಮಖಪ್ರವರಂ—ಯಾವ ಶ್ರೇಷ್ಠ ಯಾಗವನ್ನು, ಪ್ರತ್ಯಕ್ಷತಃ ಕಾರಯತಿ, -ಸಮಕ್ಷವಾಗಿ ಮಾಡಿಸುತ್ತಿದ್ದಾನೋ, ತಸ್ಯ ಅದಕ್ಕೆ, ಸಮಂ—ಸಮವಾದ ಶುಭಸಾಧನಂ—ಪುಣ್ಯಸಾಧಕವಾದ ಕರ್ಮವು, ಕಿಂ (ಅಸ್ತಿ)—ಯಾವುದು (ಇದೆ) ? ಯಾವುದೂ ಇಲ್ಲ ಎಂದು ಅಭಿಪ್ರಾಯ. ॥೧೬೨॥

ಪಠಂತಿ ಪೈಂಗಿನಶ್ಚೈತಾನ್ ಮಂತ್ರಾನನ್ವರ್ಥಕಾನಿಹ ।
ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ ।
ಅನಂತಂ ವೈಷ್ಣವಕೃತಂ ತತ್ರ ವರ್ಣಕ್ರಮಾತ್ ಪರಮ್ ॥೧೬೩॥

ವೈಷ್ಣವೇಷ್ವಪಿ ಮರ್ತ್ಯೈರ್ಯತ್ ಕೃತಂ ಶತಗುಣಂ ತತಃ ।
ಗಾಂಧರ್ವಂ ಕರ್ಮ ತಸ್ಮಾಚ್ಚ ಮುನಿಭಿಃ ಪಿತೃಭಿಸ್ತತಃ ॥೧೬೪॥

ದೇವಶಕ್ರಶಿವಬ್ರಹ್ಮಕೃತಂ ತಸ್ಮಾತ್ ಕ್ರಮೇಣ ಚ ।
ಶತೋತ್ತರಮಿತಿ ಜ್ಞೇಯಂ ನಾನ್ಯದ್ ಬ್ರಹ್ಮಕೃತೋಪಕಮ್ ॥೧೬೫॥

ವೈಷ್ಣವತ್ವಂ ಕ್ರಮಾದ್ವೃದ್ಧಂ ಬ್ರಹ್ಮಾಂತಂ ಜೀವರಾಶಿಷು ।
ಫಲಾಧಿಕ್ಯಂ ಕರ್ಮಣಾಂ ಹಿ ವಿಷ್ಣೋಃ ಪ್ರೀತ್ಯೈವ ನಾನ್ಯಥಾ ॥೧೬೬॥

ಇತಿ ತೇನ ನ ಪಾರ್ಥಾನಾಂ ಕರ್ಮಣಾಽನ್ಯತ್ ಸಮಂ ಕ್ವಚಿತ್ ।
ಗುಣೈರ್ಜ್ಞಾನಾದಿಭಿರ್ವಾऽಪಿ ತಸ್ಮಾತ್ ಕ್ರೋಧಃ ಸ ತಾಮಸಃ ।
ವಿನಿಂದ್ಯ ತಾನ್ ಸುಸತ್ವಸ್ಥಾಂಸ್ತಮೋಽಂಧಮುಪಜಗ್ಮಿವಾನ್ ॥೧೬೭॥

ಪೈಂಗಿನಃ ಚ —ಪೈಂಗಿಶಾಖಾದವರೂಕೂಡ, ಇಹ – ನಾವು ಹೇಳಿದ ವಿಷಯದ ಬಗ್ಗೆ, ಅನ್ವರ್ಥಕಾನ್ – ಅನುಕೂಲವಾದ, ಏತಾನ್ ಮಂತ್ರಾನ್ – ಈ ಮುಂದೆ ಹೇಳುವ ಮಂತ್ರಗಳನ್ನು, ಪಠಂತಿ – ಹೇಳುತ್ತಾರೆ ಅವತಾರಿಕೆ —ಆ ಮಂತ್ರಗಳನ್ನೇ "ಅವೈಷ್ಣವ ಕೃತಂ" ಎಂಬುದರಿಂದ ಹಿಡಿದು "ವಿಷ್ಣೋಃ ಪ್ರೀತ್ಯೈವ" ಎಂಬುದರ ಪರ್ಯಂತ ಉದಾಹರಿಸುತ್ತಾರೆ. – ಅವೈಷ್ಣವಕೃತಂ— ವೈಷ್ಣವ (ವಿಷ್ಣುಭಕ್ತ) ರಲ್ಲದವರಿಂದ ಮಾಡಲ್ಪಟ್ಟ, ಸರ್ವಂ ಕರ್ಮಂ—ಎಲ್ಲ ಕರ್ಮವು, ಅಂತವತ್ – ಅನಿತ್ಯ ಫಲಕವಾಗಿ ನಾಶವುಳ್ಳದ್ದಾಗಿ ಉಚ್ಯತೇ– ಹೇಳಲ್ಪಡುತ್ತದೆ. ವೈಷ್ಣವಕೃತಂ –ವಿಷ್ಣು ಭಕ್ತರಿಂದ ಮಾಡಲ್ಪಟ್ಟದ್ದು, ಅನಂತಂ– ಅನಂತ ಫಲವುಳ್ಳದ್ದು. ತತ್ರ – ಆ ವಿಷ್ಣುಭಕ್ತರು ಮಾಡಿದ ಕರ್ಮಗಳ ಮಧ್ಯದಲ್ಲಿಯೂ, ವರ್ಣಕ್ರಮಾತ್ – ವರ್ಣತಾರತಮ್ಯಕ್ಕೆ ಅನುಸಾರವಾಗಿ, ಪರಂ – ಶ್ರೇಷ್ಠವು. (ಅಂದರೆ ಶೂದ್ರ ವೈಷ್ಣವನು (ವಿಷ್ಣುಭಕ್ತನು) ಮಾಡಿದಕರ್ಮಕ್ಕಿಂತಲೂ, ವೈಶ್ಯ ವೈಷ್ಣವನು ಮಾಡಿದ ಕರ್ಮವು ಶ್ರೇಷ್ಠ, ಅದಕ್ಕಿಂತ ಕ್ಷತ್ರಿಯವೈಷ್ಣವಕೃತಕರ್ಮವು ಅದಕ್ಕಿಂತಲೂ ಬ್ರಾಹ್ಮಣ ವೈಷ್ಣವ ಕೃತಕರ್ಮವು

ಶ್ರೇಷ್ಠ ಎಂದು ಅರ್ಥ.) ವೈಷ್ಣವೇಷು ಅಪಿ–ವಿಷ್ಣು ಭಕ್ತರಲ್ಲಿಯೂ ಕೂಡ, ಯತ್–ಯಾವುದು, ಮರ್ತ್ಯೈಃ–ಮನುಷ್ಯರಿಂದ, ಕೃತಂ—ಮಾಡಲ್ಪಟ್ಟದ್ದೋ, ತತಃ — ಅದಕ್ಕಿಂತ, ಶತಗುಣಂ—ನೂರುಪಟ್ಟು ಹೆಚ್ಚು ಫಲವುಳ್ಳದ್ದು, ಗಾಂಧರ್ವಂ ಕರ್ಮ—ಗಂಧರ್ವಕೃತ ಕರ್ಮವು. ತಸ್ಮಾತ್—ಆ ಗಂಧರ್ವಕರ್ಮಕ್ಕಿಂತ, ಮುನಿಭಿಃ —ಋಷಿಗಳಿಂದ, ಕೃತಂ ಕರ್ಮ—ಮಾಡಲ್ಪಟ್ಟ ಕರ್ಮವು, ತತಃ —ಅದಕ್ಕಿಂತಲೂ, ಪಿತೃಭಿಃ ಕೃತಂ ಕರ್ಮ—ಪಿತೃದೇವತೆಗಳು ಮಾಡಿದ ಕರ್ಮವು, ತಸ್ಮಾತ್—ಅದಕ್ಕಿಂತಲೂ, ದೇವಶಕ್ರಶಿವಬ್ರಹ್ಮಕೃತಂ ಕರ್ಮ—ದೇವತೆಗಳು ಮಾಡಿದ ಕರ್ಮವು, ಅದಕ್ಕಿಂತ ಶಕ್ರನ(ಇಂದ್ರನ) ಕರ್ಮವು ಅದಕ್ಕಿಂತ ರುದ್ರಕೃತ ಕರ್ಮವು, ಅದಕ್ಕಿಂತ ಬ್ರಹ್ಮದೇವರಿಂದ ಮಾಡಲ್ಪಟ್ಟ ಕರ್ಮವು, ಕ್ರಮೇಣ—ಕ್ರಮವಾಗಿ, ಶತಗುಣೋತ್ತರಂ—ನೂರುಪಟ್ಟು ಜಾಸ್ತಿಫಲವುಳ್ಳವುಗಳು, ಬ್ರಹ್ಮಕೃತೋಪಮಂ—ಬ್ರಹ್ಮದೇವರು ಮಾಡಿದ ಕರ್ಮಸದೃಶವಾದದ್ದು, ಅನ್ಯತ್ ನ–ಬೇರೆಯಾವದೂ ಇಲ್ಲ. ಇತಿ–ಎಂದು, ಜ್ಞೇಯಂ—ತಿಳಿಯಲ್ಪಡಬೇಕು. ಅವತಾರಿಕೆ—ಬ್ರಹ್ಮದೇವರು ಮಾಡಿದ ಕರ್ಮಕ್ಕೆ ಸದೃಶವಾದದ್ದಿಲ್ಲ ಎಂಬುದಕ್ಕೆ ವಿವರಣೆಗಳನ್ನು ವೈಷ್ಣವತ್ವಂ ಕ್ರಮಾತ್—ಎಂಬ ಮಂತ್ರದಿಂದ ಕೊಡುತ್ತಾ ಇದ್ದಾರೆ. ವೈಷ್ಣವತ್ವಂ–ವಿಷ್ಣುಭಕ್ತಿಯು, ಜೀವರಾಶಿಷು–ಜೀವಸಮೂಹಗಳಲ್ಲಿ, ಬ್ರಹ್ಮಾಂತಂ—ಬ್ರಹ್ಮದೇವರ ಪರ್ಯಂತವಾಗಿ, ಕ್ರಮಾತ್ ವೃದ್ಧಂ—ಕ್ರಮವಾಗಿ ಹೆಚ್ಚು ಹೆಚ್ಚು ಇರುವದು. ಕರ್ಮಣಾಂ ಫಲಾಧಿಕ್ಯಂ—ಮಾಡಿದ ಕರ್ಮಗಳಿಗೆ ಅಧಿಕಫಲಬರುವುದು. ವಿಷ್ಣೋಃ ಪ್ರೀತ್ಯಾಏವ—ಶ್ರೀಹರಿಯು ಹೆಚ್ಚುಹೆಚ್ಚು ಪ್ರೀತಿಯಿಂದಲೇ. ಅನ್ಯಥಾ ನ—ಇಲ್ಲದಿದ್ದರೆ ಇಲ್ಲ. ಇತಿ—ಈ ರೀತಿಯಾದ ಮಂತ್ರಗಳನ್ನು ಪೈಂಗಿಶಾಖಾದವರು ಹೇಳುತ್ತಾರೆ. ತೇನ–ಹೀಗೆ ಪ್ರಮಾಣ ಮಂತ್ರಗಳು ಹೇಳುತ್ತಿದ್ದದ್ದರಿಂದ, ಪಾರ್ಥಾನಾಂ–ಪಾಂಡವರಿಗೆ, ಕರ್ಮಣಾ–ಕರ್ಮದ ದೃಷ್ಟಿಯಿಂದಾಗಲಿ, ಜ್ಞಾನಾದಿಭಿಃ ಗುಣೈಃ ವಾ – ಜ್ಞಾನವೇ ಮೊದಲಾದ ಗುಣಗಳ ದೃಷ್ಟಿಯಿಂದಾಗಲಿ, ಸಮಂ—ಸಮವಾದ ವಸ್ತುವು ಕ್ವಚಿತ್–ಎಲ್ಲೂ, ನ–ಇಲ್ಲ, ತಸ್ಮಾತ್—ಹೀಗೆ ಪಾಂಡವರು ಅತ್ಯುತ್ತಮರಾದ್ದರಿಂದ ತಾನ್ ಸುತ್ವಸ್ಥಾನ್—ಅಂಥ ಪರಮಸಾತ್ವಿಕರಾದ ಜ್ಞಾನಬಲಗುಣಪೂರ್ಣರಾದ ಶ್ರೀಹರಿಯಲ್ಲಿಯೇ ಸದಾ ಮಗ್ನರಾದ ಅವರನ್ನು, ವಿನಿಂದ್ಯ—ನಿಂದಿಸಿ, ತಾಮಸಃ ಕ್ರೋಧಃ ಸಃ—ತಾಮಸಿಯಾದ, ಕ್ರೋಧಾಭಿಮಾನಿ ದೈತ್ಯನು ಅಂಧಂ ತಮಃ ಉಪಜಗ್ಮಿವಾನ್—ಅಂಧಂತಮಸ್ಸಿಗೆ ಹೋದನು. ॥೧೬೩॥ ॥೧೬೪॥ ॥೧೬೫॥ ॥೧೬೬॥ ॥೧೬೭॥

ಅಥ ಪ್ರಷ್ಟೋ ವಾಸುದೇವಃ ಸುರವಿಪ್ರಾದಿ ಸಂಸದಿ ।
ಯುಧಿಷ್ಠಿರೇಣ ಸಂಹೃಷ್ಟೋ ಜಗಾದಾಶೇಷತಃ ಪ್ರಭುಃ ॥೧೬೮॥

ಅಥ—ಆ ಮಂಗಸಿಯ ಘಟನೆಯನಂತರ, ಸುರವಿಪ್ರಾದಿಸಂಸದಿ – ದೇವ ಬ್ರಾಹ್ಮಣರಿಂದ ಕೂಡಿದ ಆ ಸಭೆಯಲ್ಲಿ ಯುಧಿಷ್ಠಿರೇಣ—ಧರ್ಮರಾಜನಿಂದ, ಪ್ರಷ್ಟಃ—ಕೇಳಲ್ಪಟ್ಟ, ಪ್ರಭುಃ ವಾಸುದೇವಃ—ಸರ್ವಶ್ರೇಷ್ಠನಾದ, ಸ್ವಾಮಿಯಾದ ಶ್ರೀಕೃಷ್ಣಪರಮಾತ್ಮನು, ಸಂಹೃಷ್ಟಃ ಸನ್ ಸಂತುಷ್ಟನಾಗಿ ಅಶೇಷತಃ— ಎಲ್ಲ ಧರ್ಮಗಳ ಬಗ್ಗೆ, ಜಗಾದ—ಹೇಳಿದನು. ॥ ೧೬೮ ॥

ತೇ ಚ ಶ್ರುತ್ವಾಽಖಿಲಾನ್ ಧರ್ಮಾನ್ ಭಕ್ತ್ಯಾ ಪರಮಯಾ ಯುತಾಃ ।
ಪೂಜಯಂತೋ ಜಗನ್ನಾಥಮಾಪುಶ್ಚ ಪರಮಾಂ ಮುದಮ್ ॥೧೬೯॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀ ಮಹಾಭಾರತತಾತ್ಪರ್ಯನಿರ್ಣಯೇ
ಯೋಗಸಮಾಪ್ತಿರ್ನಾಮ
ತ್ರಿಂಶೋಽಧ್ಯಾಯಃ

ತೇ ಚ – ಪಾಂಡವರಾದರೂ, ಪರಮಯಾ ಭಕ್ತ್ಯಾ ಯುತಾಃ ಸಂತಃ – ಬಹುಭಕ್ತಿಯಿಂದ ಕೂಡಿದವರಾಗಿ, ಚ–ಮತ್ತು ಅಖಿಲಾನ್ ಧರ್ಮಾನ್–ಎಲ್ಲ ಧರ್ಮಗಳನ್ನು, ಶ್ರುತ್ವಾ–ಕೇಳಿಕೊಂಡು, ಜಗನ್ನಾಥಂ ಪೂಜ್ಯ ಯಂತಃ ಸಂತಃ–ಜಗದೊಡೆಯನಾದ ಶ್ರೀಕೃಷ್ಣಪರಮಾತ್ಮನನ್ನು ಪೂಜಿಸತಕ್ಕವರಾಗಿ, ಪರಮಾಂ ಮುದಂ– ಬಹು ಸಂತೋಷವನ್ನು, ಆಪುಃ– ಹೊಂದಿದರು. ॥೧೬೯॥

ಇಲ್ಲಿಗೆ ಶ್ರೀ ಮಹಾಭಾರತತಾತ್ಪರ್ಯನಿರ್ಣಯದಮೂವತ್ತನೆಯ ಅಧ್ಯಾಯದ ಪ್ರತಿಪದಾನುವಾದವು ಮುಗಿಯಿತು.

ಭಾವಾನುವಾದ ೧೫೦—೧೬೯

ಹೀಗೆ ವೈಭವದ ಆ ಯಜ್ಞವು ಮುಗಿದ ಮೇಲೆ ಪಾಂಡವರು ಶ್ರೀಕೃಷ್ಣನಿಂದ ಕೂಡಿಕೊಂಡು ಅವಭೃಥ ಸ್ನಾನ ಮಾಡಿದರು. ಐದು ಮಂದಿ ಇಂದ್ರರಂತೆ ಶೋಭಿಸುತ್ತಿದ್ದರು. ಋಷಿಗಳೆಲ್ಲ ಪಾಂಡವರನ್ನು ಅವರ ಆ ಯಜ್ಞವನ್ನು ಬಹುವಾಗಿ ಪ್ರಶಂಸಿಸುತ್ತಿದ್ದರು. ಆಗ ಕ್ರೋಧದೋಷಕ್ಕೆ ಅಭಿಮಾನಿಯಾದ ದೈತ್ಯನು ನಕುಲ ರೂಪವನ್ನು (ಮುಂಗಸಿರೂಪವನ್ನು) ಹೊಂದಿ, ಘೋರವಾಗಿ ಒದರುತ್ತಾ ಆ ಯಜ್ಞವನ್ನು, ಆ ಪಾಂಡವರನ್ನು ನಿಂದಿಸುತ್ತಾ "ಉಂಛವೃತ್ತಿಯಲ್ಲಿರುವ ಬ್ರಾಹ್ಮಣನು ಬ್ರಾಹ್ಮಣವೇಷದಲ್ಲಿ ಬಂದಿರುವ ಯಮಧರ್ಮನಿಗೆ ಒಂದು ಮುಷ್ಟಿ ಧಾನ್ಯದ ದಾನವನ್ನು ಮಾಡುವದಕ್ಕಾಗಿ ಆ ಬ್ರಾಹ್ಮಣನ ಪಾದಪ್ರಕ್ಷಾಲನವನ್ನು ಪತ್ನೀಪುತ್ರ ಸಮೇತನಾಗಿ ಭಕ್ತಿಯಿಂದ ಮಾಡಿ, ದಾನವನ್ನು ಮಾಡಿದನು. ಆ ಕಾರ್ಯದ ಪದಿನಾರನೆಯ ಅಂಶಕ್ಕೂ ಕೂಡ ಇದು (ನೀವು ಮಾಡಿದ ಅಶ್ವಮೇಧವು) ಸಮವಲ್ಲ." ಎಂದು ಹೇಳಿದನು. ಆಗ ಬ್ರಾಹ್ಮಣರು ಹಾಗೇಕೆ ಹೇಳುವಿ ಎಂದು ಕಾರಣವನ್ನು ಕೇಳಿದಾಗ ಆ ಬ್ರಾಹ್ಮಣಪಾದಪ್ರಕ್ಷಾಲನದ ನೀರಿನಲ್ಲಿ ನಾನು ಹೊರಳಿದಾಗ ನನ್ನ ಈ ಒಂದು ಬದಿಯು ಭಂಗಾರಮಯವಾಯಿತು. ಇನ್ನೊಂದು ಬದಿಯು ಹಾಗೆ ಆಗಲಿ ಎಂದು ನಾನು ಎಲ್ಲ ತೀರ್ಥಗಳಲ್ಲಿ, ಬೇರೆ ಬೇರೆ ಯಜ್ಞಗಳ ಅವಭೃಥದಲ್ಲಿ ಸ್ನಾನಮಾಡಿ ಬಂದೆ. ಅಲ್ಲಿ ಎಲ್ಲೂ ಆಗಲಿಲ್ಲ. ಈ ಯಜ್ಞದ ಅವಭೃಥದಲ್ಲಿ ಸ್ನಾನ ಮಾಡಿದರೆ ಆದೀತೋ ಎಂದು ಇಲ್ಲಿಯೂ ಆದರದಿಂದ ಮಾಡಿದೆ. ಆದರೆ ಆಗಲಿಲ್ಲ. ಅದ್ದರಿಂದ ಇದು ಆ ದಾನದ 16 ನೆಯ ಅಂಶಕ್ಕೂ ಕೂಡ ಸಮವಲ್ಲ ಎಂದು ಹೇಳಿದನು. ಎಂದು ಹೇಳಿತು. ಆಗ ಅಲ್ಲಿರುವ ಮುನಿಗಳು ಹಾಗೂ ಶ್ರೀ ಕೃಷ್ಣಪರಮಾತ್ಮನು ಆ ದೈತ್ಯನು ತಮಸ್ಸಿಗೆ ಹೋಗಲಿ ಎಂಬ ಇಚ್ಛೆಯಿಂದ ಮುಗುಳುನಗೆ ನಕ್ಕರು. ಆ ಮುಂಗಸಿಯು ಕೂಡಲೇ ಕಾಣದಂತಾಯಿತು. ಮುಂದೆ ತಮಸ್ಸಿಗೂ ಹೋಯಿತು. ಆ ಮುಂಗಲಿರೂಪೀದೈತ್ಯನು ತಮಸ್ಸಿಗೆ ಹೋಗುವಂತಾಗುವದಕ್ಕಾಗಿಯೇ ಹಿಂದೆ ಅದರ ಒಂದು ಬದಿಯು ಭಂಗಾರವರ್ಣವಾಗಿತ್ತು. ಇದನ್ನೆಲ್ಲ ತಿಳಿದ ಮುನಿಗಳು ಅದರ ಎದುರು ಮುಗುಳನಗೆ ನಕ್ಕವರು ಅದು ಹೋದ ಮೇಲೆ ಅದನ್ನು ಚೆನ್ನಾಗಿ ನಿಂದಿಸಿದರು. ಯಜ್ಞದ ಹಾಗು ಪಾಂಡವರ ಶ್ರೀಕೃಷ್ಣನ ಬಹುಸ್ತೋತ್ರವನ್ನು ಮಾಡಿದರು. ಹಿಂದೆ ಆ ಕ್ರೋಧ ದೈತ್ಯನು ಜಮದಗ್ನಿಋಷಿಗಳ ಆಶ್ರಮಕ್ಕೆ ಮುಂಗಲಿರೂಪದಲ್ಲಿ ಹೋಗಿ ಅಲ್ಲಿ ಶ್ರಾದ್ಧಕ್ಕಾಗಿ ಇಟ್ಟ ಹಾಲನ್ನು ಬಾಯಿಹಚ್ಚಿ ಎಂಜಲು ಮಾಡಿದನು. ಅದನ್ನು ಕಂಡ ಪಿತೃದೇವತೆಗಳು ಇವನು ಉತ್ತಮರನಿಂದಾದಿಂದ ತಮಸ್ಸಿಗೆ ಹೋಗುವಂತಾಗಲಿ ಎಂಬ ಉದ್ದೇಶದಿಂದ "ನೀನು ಧರ್ಮಾದಿದೇವತೆಗಳನ್ನು ನಿಂದಿಸುವ ತನಕ ಮುಂಗಸಿ ರೂಪದಲ್ಲಿರು" ಎಂದು ಶಪಿಸಿದರು .ಹೀಗಾಗಿ ಅವನು ಅವರಂತೆ ಮಾಡಿ ತಮಸ್ಸಿಗೆ ಹೋದನು.

ಬಡವರಾದವರು ಮಾಡಿದ ದಾನವು ಶ್ರೀಮಂತರಾದವರು ಮಾಡಿದ ಯಜ್ಞಕ್ಕಿಂತ ಬಹುಫಲಪ್ರದವಲ್ಲವೇ? ಎಂಬ ಸಂಶಯವು ಬರುವದು. ಅದನ್ನು ಆಚಾರ್ಯರು ಇಲ್ಲಿ ಪರಿಹರಿಸಿದ್ದಾರೆ. — ದರಿದ್ರನಾದವನು ಮಾಡಿದ ದಾನವು ಬಹುಫಲಪ್ರದ ಎಂಬುದೇನೋ ನಿಜ. ಆದರೆ ಕೇವಲ ಅಷ್ಟು ಮಾತ್ರದಿಂದ ಫಲ ಬರುವದಲ್ಲ. ಕರ್ತೃವಿನಲ್ಲಿ ಜ್ಞಾನಭಕ್ತಿ ಮೊದಲಾದ ಸದ್ಗುಣಗಳು ಇರಬೇಕು. ಅವು ಹೆಚ್ಚು ಇದ್ದ ಹಾಗೆ ಫಲವು ಹೆಚ್ಚು ಬರುವದು. ಪಾಂಡವರಂಥ

ಗುಣಸಂಪನ್ನಕರ್ತೃಗಳು ಯಾರಿರುವರು? ಅವರ ಎದುರು ಈ ಬಡ ಬ್ರಾಹ್ಮಣನು ಯಾವಗಿಡದತೊಪ್ಪಲು. ಮಹಾ ಗುಣ ಇರುವಲ್ಲಿಯೇ ಸಜ್ಜನಪ್ರೀತಿ ಇರುವದು. ಸಜ್ಜನರು ಎಂಬ ಶಬ್ದವಾಚ್ಯರಲ್ಲಿ ಉತ್ತಮನು ಶ್ರೀಹರಿಯು. ಅವನಿಗೆ ಪ್ರಿಯರಾದವರು ಪಾಂಡವರು, ಅವನಿಗೆ ಪ್ರಿಯವಾದದ್ದು ಈ ಯಜ್ಞ. ಸರ್ವೋತ್ತಮನಾದ ತಾನು ಇತರ ಸಜ್ಜನರಿಂದ ಕೂಡಿಕೊಂಡು ಸ್ವತಃ ಈ ಯಜ್ಞವನ್ನು ನಡೆಸಿರುವಾಗ ಆ ಯಜ್ಞದಂಥ ಪುಣ್ಯ ಕಾರ್ಯವು ಬೇರೆ ಯಾವದಿದೆ ? ಯಾವದೂ ಇಲ್ಲವೇ ಇಲ್ಲ. ಕರ್ತೃ ಗುಣಗಳಿಗೆ ಅನುಸಾರವಾಗಿ ಧರ್ಮಫಲವು ಎಂಬುದನ್ನು ಪೈಂಗಿಶ್ರುತಿಯೂ ಕೂಡಾ ಹೇಳುತ್ತಾ ಇದೆ. ವಿಷ್ಣುದ್ವೇಷಿಗಳು ಮಾಡಿದ ಕರ್ಮವು ಶಾಶ್ವತ ಫಲಪ್ರದವಾಗುವದಿಲ್ಲ. ಅನಿತ್ಯ ಫಲವನ್ನು ಕೊಡುವದು. ವಿಷ್ಣುಭಕ್ತರು ಮಾಡಿದ ಧರ್ಮವು ಅನಂತಫಲಪ್ರದ. ಅದರಲ್ಲಿಯೂ ವರ್ಣೀಯರು ಮಾಡಿದ್ದು. ಅದರಲ್ಲಿ ಚತುರ್ವರ್ಣತಾರತಮ್ಯದಿಂದ ಫಲತಾರತಮ್ಯವು. ಅದರಂತೆ ಮನುಷ್ಯ, ಗಂಧರ್ವ, ಮುನಿ, ಪಿತೃದೇವತೆಗಳು, ದೇವತೆಗಳು ಇಂದ್ರ, ಶಿವ, ಬ್ರಹ್ಮ ಈ ತಾರತಮ್ಯಕ್ಕನುಸಾರವಾಗಿ ಅವರವರು ಮಾಡಿದ ಧರ್ಮವೂ ತಾರತಮ್ಯದಿಂದ ಫಲವನ್ನು ಕೊಡುವದು. ಬ್ರಹ್ಮದೇವರು ಮಾಡಿದ ಧರ್ಮಕ್ಕೆ ಸದೃಶವಾದದ್ದು ಯಾವದೂ ಇಲ್ಲ. ಏಕೆಂದರೆ ಅವರಂತೆ ಜ್ಞಾನಭಕ್ತ್ಯಾದಿಗಳುಳ್ಳವರು ಯಾರೂ ಇಲ್ಲ, ವಿಷ್ಣುಭಕ್ತಿ, ಜ್ಞಾನಾದಿ ಗುಣಗಳು ಜೀವರಲ್ಲಿ ತಾರತಮ್ಯದಿಂದ ಇರುವದರಿಂದ ಅವರು ಮಾಡಿದ ಧರ್ಮವೂ ಹಾಗೆಯೇ ಫಲತಾರತಮ್ಯವುಳ್ಳದ್ದಾಗಿರುವದು. ಈ ರೀತಿ ಪೈಂಗಿಶ್ರುತಿಯಲ್ಲಿ ಹೇಳಿದ್ದರಿಂದಲೂ ಈ ವಿಷಯವು ಸಿದ್ಧ. ಹೀಗಿರುವಾಗ ಅಂಥ ಉತ್ತಮಗುಣಿಗಳಾದ ಪಾಂಡವರನ್ನು, ಬಹುಫಲಪ್ರದವಾದ ಅವರ ಯಜ್ಞವನ್ನು ನಿಂದಿಸಿ ಅಂಧತಮಸ್ಸಿಗೆ ಆ ದೈತ್ಯನು ಹೋದನು.

ವಿಶೇಷ ವಿಚಾರ :- ದರಿದ್ರರು ಮಾಡಿದ ದಾನವು ಬಹುಫಲಪ್ರದ ಎಂಬುದಕ್ಕೆ ಅರ್ಥವೇನೆಂದರೆ ಸಮಾನ ಜ್ಞಾನಾದಿ ಗುಣಗಳುಳ್ಳವರು ಇಬ್ಬರು ಇರುವಾಗ ಅವರಲ್ಲಿ ಬಬ್ಬನು ದರಿದ್ರನು, ಇನ್ನೊಬ್ಬ ಶ್ರೀಮಂತನು ಇದ್ದರೆ ಆಗ ದರಿದ್ರನಾದವನು ಮಾಡಿದ ಧರ್ಮವು ಬಹುಫಲಪ್ರದ ಎಂದು ಅಭಿಪ್ರಾಯ. ಕೇವಲ ದಾರಿದ್ರ್ಯವೊಂದೇ ಫಲ ನಿರ್ಣಾಯಕವಾಗಲಾರದು.

ಆ ಮುಂಗಸಿಯು ಹೋದಮೇಲೆ ಆ ಸಭೆಯಲ್ಲಿಯೇ, ಧರ್ಮರಾಜನು ಶ್ರೀಕೃಷ್ಣಪರಮಾತ್ಮನನ್ನು ಧರ್ಮಗಳ ಬಗ್ಗೆ ಹೇಳಲು ಕೇಳಿದನು. ಆಗ ಶ್ರೀಕೃಷ್ಣಪರಮಾತ್ಮನು ಸಂತೋಷದಿಂದ ವಿವರವಾಗಿ ಅದರ ಬಗ್ಗೆ ತಿಳಿಹೇಳಿದನು. ಅದನ್ನು ಕೇಳಿದ ಧರ್ಮಜನು ಇತರ ಪಾಂಡವರೂ ಶ್ರೀಕೃಷ್ಣನಲ್ಲಿ ವಿಶೇಷಭಕ್ತಿಯನ್ನು ಹೊಂದಿ, ಅವನನ್ನು ಪೂಜಿಸಿ ಬಹು ಸಂತೋಷವನ್ನು ಹೊಂದಿದರು.

ಇಲ್ಲಿಗೆ ಶ್ರೀ ಮಹಾಭಾರತತಾತ್ಪರ್ಯನಿರ್ಣಯದ ಮೂವತ್ತನೇಯ ಅಧ್ಯಾಯದ ಭಾವಾನುವಾದವು ಮುಗಿಯಿತು.

॥ ಶ್ರೀ ಮಧ್ವೇಶಾರ್ಪಣಮಸ್ತು ॥

॥ ಶ್ರೀ ॥

॥ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ ॥

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

॥ ೩೧ ನೆಯ ಅಧ್ಯಾಯವು ॥

ಓಂ ಯಜ್ಞೇಶ್ವರೇಣಾಭಿಯುತೇಷು ಭಕ್ತ್ಯಾ ಮಹೀಂ ಪ್ರಶಾಸತ್ಸು ಪೃಥಾಸುತೇಷು ।
ಯಿಯಕ್ಷುರಾಗಾನ್ನಿಶಿ ವಿಪ್ರವರ್ಯೋ ಯುಧಿಷ್ಠಿರಂ ವಿತ್ತಮಭೀಪ್ಸಮಾನಃ ॥೧॥

ಯಜ್ಞೇಶ್ವರೇಣ ಅಭಿಯುತೇಷು:—ಯಜ್ಞಸ್ವಾಮಿಯಾದ ಶ್ರೀಕೃಷ್ಣಪರಮಾತ್ಮನಿಂದ ಕೂಡಿದ, ಭಕ್ತ್ಯಾ ಅಭಿಯುತೇಷು—ಭಕ್ತಿಯುತರಾದ, ಪೃಥಾಸುತೇಷು—ಕುಂತಿಯಪುತ್ರರಾದ ಪಾಂಡವರು, ಮಹೀಂ ಪ್ರಶಾಸತ್ಸು (ಸತ್ಸು)–ಭೂಮಿಯನ್ನು ಆಳುತ್ತಿರಲು,ಯಿಯಕ್ಷುಃ—ಯಜ್ಞ ಮಾಡುವ ಅಪೇಕ್ಷೆಯುಳ್ಳ, ವಿಪ್ರವರ್ಯಃ–ಶ್ರೇಷ್ಠಬ್ರಾಹ್ಮಣನೊಬ್ಬನು, ವಿತ್ತಂ ಅಭೀಪ್ಸಮಾನಃ ಸನ್—ಧನವನ್ನು ಅಪೇಕ್ಷಿಸುವವನಾಗಿ, ನಿಶಿ—ರಾತ್ರಿಸಮಯದಲ್ಲಿ, ಯುಧಿಷ್ಠಿರಂ—ಧರ್ಮರಾಜನನ್ನು ಕುರಿತು, ಅಗಾತ್—ಬಂದನು. ॥೧॥

ಪ್ರಾತರ್ದದಾನೀತಿ ನೃಪಸ್ಯ ವಾಕ್ಯಂ ನಿಶಮ್ಯ ವಿಪ್ರಸ್ತ್ವರಿತೋ ಮುಹೂರ್ತೇ ।
ಭೀಮಂ ಯಯಾಚೇ ಸ ನೃಪೋಕ್ತಮಾಶು ನಿಶಮ್ಯ ಚಾದಾನ್ನಿಜಹಸ್ತಭೂಷಣಮ್ ॥೨॥

ವಿಪ್ರಃ—ಬ್ರಾಹ್ಮಣನು, (ತಾನು ಯಜ್ಞಕ್ಕೆ ದುಡ್ಡನ್ನು ಕೇಳಿದಾಗ) ಪ್ರಾತ:ದದಾನಿ ಇತಿ—ಬೆಳಿಗ್ಗೆ ಕೊಡುವೆನು ಎಂಬ, ನೃಪಸ್ಯ—ಧರ್ಮರಾಜನ, ವಾಕ್ಯಂ—ಮಾತನ್ನು, ನಿಶಮ್ಯ—ಕೇಳಿ, ಮುಹೂರ್ತೇ ತ್ವರಿತಃ ಸನ್—ಯಜ್ಞದ ಮುಹೂರ್ತ ಮೀರುವದೋ ಎಂಬ ಕಾರಣದಿಂದ ಗಡಿಬಿಡಿವುಳ್ಳವನಾಗಿ, ಭೀಮಂ—ಭೀಮಸೇನದೇವರನ್ನು, ಯಯಾಚೇ—ಪ್ರಾರ್ಥಿಸಿದನು. (ರಾಜನು ಹೇಳಿದ ವಿಷಯವನ್ನು ಹೇಳಿ ಧನವನ್ನು ಯಾಚಿಸಿದನು.) ಸಃ—ಆ ಭೀಮಸೇನದೇವರು, ನೃಪೋಕ್ತಂ—ಧರ್ಮರಾಜನು ಹೇಳಿದ ಮಾತನ್ನು, ನಿಶಮ್ಯ—(ಬ್ರಾಹ್ಮಣನ ಮೂಲಕ) ಕೇಳಿ, ಆಶು—ಕೂಡಲೇ, ನಿಜಹಸ್ತಭೂಷಣಂ ಚ—ತನ್ನ ಕರಾಭರಣವನ್ನೇ, ಅದಾತ್—ಕೊಟ್ಟರು. ॥೨॥

ಅನರ್ಘ್ಯಮುಗ್ನಿಪ್ರತಿಮಂ ವಿಚಿತ್ರರತ್ನಾಂಚಿತಂ ವಿಪ್ರವರಸ್ತದಾಪ್ಯ ।
ಯಯೌ ಕೃತಾರ್ಥೋಽಥ ಚ ನಂದಿ ಘೋಷಮುಕಾರಯದ್ವಾಯುಸುತಸ್ತದೈವ ॥೩॥

ಅನರ್ಘ್ಯಂ—ಅಮೂಲ್ಯವಾದ, ಅಗ್ನಿಪ್ರತಿಮಂ—ಅಗ್ನಿಯಂತೆ ಹೊಳಿವ, ವಿಚಿತ್ರರತ್ನಾಂಚಿತಂ—ಅದ್ಭುತ ರತ್ನಗಳಿಂದ ಕೂಡಿದ, ತತ್— ಆ ಆಭರಣವನ್ನು, ಆಪ್ಯ—ಹೊಂದಿ. ಕೃತಾರ್ಥಃವಿಪ್ರವರ:—ತಾನು ಬಂದ ಉದ್ದೇಶವನ್ನು ಈಡೇರಿಸಿಕೊಂಡ ಆ ಬ್ರಾಹ್ಮಣನು, ಯಯೌ—ಹೋದನು. ಅಥ—ನಂತರ. ವಾಯವಿಸುತಃ—ವಾಯುಪುತ್ರರಾದ ಭೀಮಸೇನದೇವರು, ತದಾ ಏವ—ಆ ಕೂಡಲೇ, ನಂದಿಘೋಷಂ—ಆನಂದದ ಸಮಾಚಾರವಿರುವಾಗ ಸೂಚಕವಾಗಿಮಾಡುವ(ನಗಾರಿ,ಘಂಟಾ ಇತ್ಯಾದಿಯಾವದೋವಾದ್ಯದ) ಧ್ವನಿಯನ್ನು, ಅಕಾರಯತ್—ಮಾಡಿಸಿದರು. ॥೩॥

ಅಕಾಲಜಂ ತಂತು ನಿಶಮ್ಯ ರಾಜಾ ಪಪ್ರಚ್ಛ ದೂತೈಸ್ತಮುವಾಚ ಭೀಮಃ ।
ಯನ್ಮರ್ತ್ಯದೇಹೋಽಪಿ ವಿನಿಶ್ಚಿತಾಯುರಭೂನ್ನೃಪಸ್ತೇನ ಮಮಾಸ ಹರ್ಷಃ ॥೪॥

ರಾಜಾ—ಧರ್ಮರಾಜನು, ಅಕಾಲಜಂ—ಅನಿರೀಕ್ಷಿತ ಸಮಯದಲ್ಲಿ ಉಂಟಾದ, ತಂ—ಆ ವಾದ್ಯಧ್ವನಿಯನ್ನು, ನಿಶಮ್ಯ—ಕೇಳಿ, ದೂತೈ:—ಸೇವಕರ ಮೂಲಕ, ಪಪ್ರಚ್ಛ—ಅದರಂದದ ಹೇತುವಿನ ಬಗ್ಗೆ ಕೇಳಿದನು. ಭೀಮಃ—ಭೀಮಸೇನದೇವರು, ತಂ—ಆ ಧರ್ಮರಾಜನನ್ನು ಕುರಿತು, ಯತ್—ಯಾವ ಕಾರಣದಿಂದ, ನೃಪಃ—ರಾಜನು, ಮರ್ತ್ಯದೇಹ:ಸನ್ ಅಪಿ—ಮನುಷ್ಯದೇಹವುಳ್ಳವನಾದರೂ ಕೂಡ, ವಿನಿಶ್ಚಿತಾಯುಃ ಅಭೂತ್—ನಾಳಿನ ವರೆಗೂ ಬದುಕಿ ಇರುವೆ ಎಂಬ ಆಯುಷ್ಯದ ನಿಶ್ಚಯವುಳ್ಳವನು ಆಗಿರುವನೋ, ತೇನ—ಆ ಕಾರಣದಿಂದ, ಮಮ—ನನಗೆ, ಹರ್ಷಃಆಸ—ಆನಂದವಾಯಿತು, ಇತಿ—ಎಂದು ಉವಾಚ—ದೂತರ ಮೂಲಕವೇ ಹೇಳಿದರು. ॥೪॥

ಇತೀರಿತೋಽಸೌ ನೃಪತಿ ಸ್ತ್ವರೇತ ಧರ್ಮಾರ್ಥಮಿತ್ಯಸ್ಯ ಮತಂ ಪ್ರಪೂಜಯನ್ ।
ಜಗಾದ ಸಾಧ್ವಿತ್ಯಥ ಭೂಯಏವ ಧರ್ಮೇ ತ್ವರಾವಾನಪಿ ಸಂಬಭೂವ ॥೫॥

ಇತಿ—ಹೀಗೆ. ಈರಿತಃ ಅಸೌ—ಹೇಳಿಸಿಕೊಳ್ಳಲ್ಪಟ್ಟ ಧರ್ಮರಾಜನು. ಧರ್ಮಾರ್ಥಂ! ತ್ವರೇತ—ಧರ್ಮಾಚರಣೆಯ ಬಗ್ಗೆ ತ್ವರಾ ಇರಬೇಕು (ಕೂತಲೇ ಆಚರಿಸುವ ಬುದ್ಧಿ ಇರಬೇಕು) ಇತಿ ಅಸ್ಯಮತಂ—ಎಂಬ ಶ್ರೀಭೀಮರ ಅಭಿಪ್ರಾಯವನ್ನು, ಪ್ರಪೂಜಯನ್ ಸನ್-ಹೃತ್ಪೂರ್ವಕವಾಗಿ ಸಮ್ಮತಿಸಿದವರಾಗಿ, ಭೂಯಃ-ಪುನಃ, ಸಾಧು ಇತಿ—ಭೀಮನು ಸರಿಯಾಗಿ ಹೇಳಿರುವನು ಎಂಬ ಮಾತನ್ನು, ಜಗಾದ—ಹೇಳಿದನು. ಅಥ—ಆಮೇಲೆ, ಧರ್ಮೇ—ಧರ್ಮಾಚರಣೆಯ ಬಗ್ಗೆ. ತ್ವರಾವಾನ್ ಅಪಿ—ಶೀಘ್ರದಲ್ಲಿ ಆಚರಿಸುವ ಬುದ್ಧಿಯುಳ್ಳವನು, ಸಂಬಭೂವ—ಆದನು. ॥೫॥

ಭಾವಾನುವಾದ ೧—೫

ಪಾಂಡವರು ಶ್ರೀಕೃಷ್ಣಪರಮಾತ್ಮನ ಭಕ್ತಿ ಅನುಗ್ರಹಗಳಿಂದ ಕೂಡಿಕೊಂಡು ಭೂಮಿಯನ್ನು ಧರ್ಮದಿಂದ ಆಳುತ್ತಿರುವಾಗ, ಒಂದುದಿನ ಒಬ್ಬ ಬ್ರಾಹ್ಮಣನು ತಾನು ಮಾಡುವ ಯಜ್ಞಕ್ಕೆ ಧನವನ್ನು ಇಚ್ಛಿಸಿ ಧರ್ಮರಾಜನನ್ನು ಕೇಳಲೆಂದು ರಾತ್ರಿ ಸಮಯದಲ್ಲಿ ಬಂದನು; ಕೇಳಿದನು. ಆಗ ಧರ್ಮರಾಜನು ಬೆಳಿಗ್ಗೆ ಕೊಡುವೆನೆಂದು ಹೇಳಿದನು. ಅದನ್ನು ಕೇಳಿದ ಬ್ರಾಹ್ಮಣನು ತನಗೆ ಕೂಡಲೇ ಬೇಕಾಗಿದ್ದರಿಂದ ಭೀಮಸೇನದೇವರ ಹತ್ತಿರ ಬಂದು ಆ ವಿಷಯವನ್ನು ತಿಳಿಸಿ ಅವರ ಹತ್ತಿರ ಹಣವನ್ನು ಕೇಳಿದನು. ಆಗ ಶ್ರೀ ಭೀಮರು ಕೂಡಲೇ ಅನರ್ಘ್ಯವಾದ, ರತ್ನಖಚಿತವಾದ, ಬಹು ಹೊಳೆಯುವ ತನ್ನ ಹಸ್ತಾಭರಣವನ್ನು ಕೊಟ್ಟರು. ಅದನ್ನು ಪಡೆದ ಆ ಬ್ರಾಹ್ಮಣನು ತನ್ನ ಕೆಲಸವಾಯಿತು ಎಂದು ಹೊರಟು ಹೋದನು. ಈ ಕಡೆಗೆ ಭೀಮಸೇನದೇವರು ಆನಂದ ಸೂಚಕವಾದ ವಾದ್ಯ ಧ್ವನಿಯನ್ನು ಮಾಡಿಸಿದರು. ಅಕಾಲದಲ್ಲಿ ಆದ ಈ ಧ್ವನಿಯನ್ನು ಕೇಳಿದ ಧರ್ಮರಾಜನು ದೂತರನ್ನು ಭೀಮಸೇನರ ಹತ್ತಿರ ಕೇಳಲು ಕಳಿಸಿದನು. ಅವರು ಬಂದು ಕೇಳಿದಾಗ ನಮ್ಮ ರಾಜನು ಮನುಷ್ಯನಾಗಿಯೂಕೂಡ

ನಾಳಿನ ವರೆಗೆ ಬದುಕಿರುವೆ ಎಂದು ತನ್ನ ಆಯುಷ್ಯನಿಶ್ಚಯವುಳ್ಳವನಾಗಿದ್ದದ್ದನ್ನು ಕಂಡು ನನಗೆ ಹರ್ಷವಾಯಿತು ಎಂದು ಹೇಳಿದರು. ದೂತರು ಆ ವಿಷಯವನ್ನು ಧರ್ಮರಾಜನ ಹತ್ತಿರ ಹೇಳಿದರು. ಅದನ್ನು ಕೇಳಿದ ಧರ್ಮರಾಜನು ಧರ್ಮವನ್ನಾಚರಿಸುವದರಬಗ್ಗೆ ವಿಳಂಬ ಮಾಡಬಾರದು ಎಂದು ಭೀಮನ ಅಭಿಪ್ರಾಯವು. ಅದು ಸರಿಯಾದದ್ದೇ, ನಾನು ತಪ್ಪು ಮಾಡಿದೆ ಎಂದು ಅವರ ಅಭಿಪ್ರಾಯವನ್ನು ಗೌರವಿಸಿ ತಾನು ತಿದ್ದಿಕೊಂಡು ಮುಂದೆಲ್ಲ ಧರ್ಮಕಾರ್ಯದ ಬಗ್ಗೆ ತ್ವರೆಯುಳ್ಳವನೇ (ಬೇಗ ಬೇಗ ಮಾಡುವ ಬುದ್ಧಿಯುಳ್ಳವನೇ) ಆದನು.

ಅಥಾಂಬಿಕೇಯಂ ವಿಷಯೇಷು ಸಕ್ತಂ ದುಸ್ಸಂಗದುಷ್ಟಂ ಕೃತಭೂರಿದೋಷಮ್ ।
ಸಮಸ್ತರಾಜಾಪ್ಯಹೇತುಭೂತಂ ನಿಚಾಯ್ಯ ತಂ ಮಾರುತಿರನ್ವಕಂಪತ ॥೬॥

ಅಥ—ಈ ಘಟನೆಯಸಂತರ, ಮಾರುತಿಃ—ಭೀಮಸೇನದೇವರು, ದುಸ್ಸಂಗದುಷ್ಟಂ—(ಸ್ವಭಾವತಃ ದುಷ್ಟನಲ್ಲದಿದ್ದರೂ),ದುಷ್ಟರಾದ ದುರ್ಯೋಧನಾದಿ ಮಕ್ಕಳಸಂಗದಿಂದ ದುಷ್ಟನಾದ,ಕೃತಭೂರಿದೋಷಂ—ಬಹುದೋಷಗಳನ್ನು ಮಾಡಿದ, ಸಮಸ್ತರಾಜಾಪ್ಯಹೇತುಭೂತಂ—ಮಹಾಭಾರತದ ಯುದ್ಧದಲ್ಲಿ ಎಲ್ಲ ರಾಜರ ಮರಣಕ್ಕೆ ಕಾರಣೀಭೂತನಾದ, ಆಂಬಿಕೇಯಂ—ಆ ಧೃತರಾಷ್ಟ್ರನನ್ನು. ವಿಷಯೇಷು ಸಕ್ತಂ ನಿಚಾಯ್ಯ—ವಿಷಯಾಸಕ್ತನಾಗಿದ್ದದ್ದನ್ನು ನೋಡಿ, ತಂ ಅನ್ವಕಂಪತ—ಅವನ ಬಗ್ಗೆ ಅನುಕಂಪವುಳ್ಳವರಾದರು. ॥೬॥

ಅಕುರ್ವತಸ್ತೀಕ್ಷ್ಣತಪಃಕುತಶ್ಚಿನ್ನೈವಸ್ವಲೋಕಾಪ್ತಿರಮುಷ್ಯ ಭೂಯಾತ್ ।
ರಾಗಾಧಿಕೋಽಯಂ ನ ತಪಶ್ಚ ಕುರ್ಯಾದಿತ್ಯಸ್ಯ ವೈರಾಗ್ಯಕರಾಣಿ ಚಕ್ರೇ ॥೭॥

ತೀಕ್ಷ್ಣತಪಃ —ತೀಕ್ಷ್ಣ (ಕಠೋರ) ವಾದ ತಪಸ್ಸನ್ನು, ಅಕುರ್ವತಃ—ಮಾಡದ, ಅಮುಷ್ಯ ಈ ಧೃತರಾಷ್ಟ್ರನಿಗೆ, ಸ್ವಲೋಕಾಪ್ತಿಃ —ತನ್ನ ಲೋಕಪ್ರಾಪ್ತಿಯು (ತನ್ನ ಮೂಲರೂಪ ಗಂಧರ್ವಪದ ಪ್ರಾಪ್ತಿಯು) ಕುತಶ್ಚಿತ್—ಯಾವದೇಕಾರಣದಿಂದ, ನ ಭೂಯಾತ್ ಏವ—ಆಗಲಾರದು, ರಾಗಾಧಿಕಃ ಅಯಂ—ವಿಷಯಗಳಲ್ಲಿ ಬಹು ರಾಗವುಳ್ಳ ಇವನು, ತಪಃ ಚ ನ ಕುರ್ಯಾತ್—ತಪಸ್ಸನ್ನು ಮಾಡಲಾರನು, ಇತಿ—ಎಂಬ ಕಾರಣದಿಂದ, ಅಸ್ಯ ವೈರಾಗ್ಯಕರಾಣಿ—ಇವನಿಗೆ ವೈರಾಗ್ಯ ಸಂಪಾದಕವಾದ ಕಾರ್ಯಗಳನ್ನು, ಚಕ್ರೇ—ಮಾಡಿದನು. ॥೭॥

ಅವತಾರಿಕೆ— ಭೀಮಸೇನದೇವರು ಮಾಡಿದ ಕಾರ್ಯಗಳನ್ನೇ ವಿವರಿಸುತ್ತಾರೆ—

ಆಜ್ಞಾಂ ಪರೈರಸ್ಯ ನಿಹಂತಿ ಸೋದರೈರ್ವಧೂಜನೈರಪ್ಯತಿಪೂಜಿತೇಽಸ್ಮಿನ್ ।
ಸ ನಿಷ್ಪನತ್ಯೇವಮಪೀತರೈಃ ಸ ಸುಪೂಜಿತೋನಾಽಸ ತದಾ ವಿರಾಗಃ ॥೮॥

ಅಸ್ಮಿನ್—ಈ ಧೃತರಾಷ್ಟ್ರನು, ಸೋದರೈಃ ವರ್ಧೂಜನೈಃ —ಸಹೋದರರಿಂದ, ಸ್ತ್ರೀಯರಿಂದ, ಅತಿ ಪೂಜಿತೇ ಸತಿ ಅಪಿ—ಬಹುವಾಗಿ ಪೂಜಿಸಲ್ಪಟ್ಟರೂ ಕೂಡ. ಸಃ—ಆ ಭೀಮರು, ಅಸ್ಯ ಆಜ್ಞಾಂ—ಇವನ ಅಪ್ಪಣೆಯನ್ನು; ಪರೈಃ —ಬೇರೆಯವರಿಂದ, ನಿಹಂತಿ—ಉಲ್ಲಂಘನೆ ಮಾಡಿಸುತ್ತಿದ್ದರು, ನಿಷ್ಪನತಿ—ಸ್ವತಃ ತಾವು ಅವಜ್ಞಾ ಪ್ರದರ್ಶಕ ಮಾತನ್ನಾಡುತ್ತಿದ್ದರು. ಏವಂ ಅಪಿ—ಹೀಗೆ ಇದ್ದರೂ ಕೂಡ, ತದಾ—ಆಗ, ಇತರೈಃ — ಬೇರೆಯವರಿಂದ, ಸುಪೂಜಿತ ಃ—ಬಹುಗೌರವಿಸಲ್ಪಟ್ಟ, ಸಃ —ಆ ಧೃತರಾಷ್ಟ್ರನು, ವಿರಾಗಃ —ವೈರಾಗ್ಯವುಳ್ಳವನು, ನ ಆಸ—ಆಗಲಿಲ್ಲ. ॥೮॥

ಅವತಾರಿಕೆ—ಇತರ ಪಾಂಡವರು, ದ್ರೌಪದಿಯು ಇವನ ಬಗ್ಗೆ ನಡೆದದ್ದನ್ನು ಹೇಳುತ್ತಾರೆ—

ಸರ್ವೇ ಹಿ ಪಾರ್ಥಾಸ್ತನ್ಮಯೇ ಸಭಾರ್ಯಾ ವೈಚಿತ್ರವೀರ್ಯಂ ಪರಮಾದರೇಣ ।
ಪರ್ಯೇವ ಚಕ್ರುಃ ಸತತಂ ಸಭಾರ್ಯಂ ಕೃಷ್ಣಾ ಚ ನಸ್ಯಾತ್ ತನಯಾರ್ತಿಮಾನಿತಿ ॥೯॥

ತಂ ಋತೇ—ಆ ಭೀಮಸೇನರೊಬ್ಬರನ್ನು ಬಿಟ್ಟು, ಸಭಾರ್ಯಾಃ —ಪತ್ನೀಸಮೇತರಾದ, ಸರ್ವೆ ಪಾಂಡವಾಃ—ಎಲ್ಲ ಪಾಂಡವರು, ಸಭಾರ್ಯಂ—ಪತ್ನೀಸಮೇತನಾದ, ವೈಚಿತ್ರವೀರ್ಯಂ—ಧೃತರಾಷ್ಟ್ರನನ್ನು, ಸತತಂ—ಯಾವಾಗಲೂ, ಪರಿಚಕ್ರುಃ ಏವ—ಸೇವಿಸಿದರು. ಕೃಷ್ಣಾ ಚ—ದ್ರೌಪದೀದೇವಿಯೂ ಕೂಡ, ತನಯಾರ್ತಿಮಾನ್ ನ ಸ್ಯಾತ್ ಇತಿ—ಮಕ್ಕಳ ಮರಣ ದುಃಖವು ಇರುವಾಗ ಬೇರೆ ಹೆಚ್ಚಿನ ದುಃಖವು ಬಾರದಿರಲಿ ಎಂಬ ಉದ್ದೇಶದಿಂದ ಸೇವಿಸಿದಳು. ॥೯॥

ಸ ಪ್ರೀಯಮಾಣೋ ನಿತರಾಂ ಚ ತೇಷು ನೈವಾಧಿಕಂ ಪ್ರೀಯತೇ ಭೀಮಸೇನೇ ।
ಸ್ಮರನ್ ಸುತಾಂಸ್ತೇನ ಹತಾನ್ ಸಮಸ್ತಾನಪಿ ಪ್ರಭಾವಂ ಪರಮಸ್ಯ ಜಾನನ್ ॥೧೦॥

ಸಃ —ಆ ಧೃತರಾಷ್ಟ್ರನು, ತೇಷು—ಭೀಮನನ್ನು ಬಿಟ್ಟು ಉಳಿದ ಪಾಂಡವರ ಬಗ್ಗೆ ಹಾಗು ದ್ರೌಪದಿಯ ಬಗ್ಗೆ, ನಿತರಾಂ ಪ್ರೀಯಮಾಣಃ ಅಪಿ—ವಿಶೇಷ ಪ್ರೀತಿವುಳ್ಳವನಾದರೂ ಕೂಡ; ಭೀಮಸೇನೇ—ಭೀಮಸೇನ ದೇವರಲ್ಲಿ ಮಾತ್ರ, ತೇನ—ಅವರಿಂದ, ಸಮಸ್ತಾನ್ ಅಪಿ ಸುತಾನ್—ತನ್ನ ಎಲ್ಲ ಮಕ್ಕಳನ್ನು, ಹತಾನ್—ಸಂಹರಿಸಲ್ಪಟ್ಟವರನ್ನಾಗಿ, ಸ್ಮರನ್ ಸನ್—ಸ್ಮರಿಸುವವನಾಗಿ, ಪರಮಸ್ಯ ಪ್ರಭಾವಂ—ಸರ್ವೋತ್ತಮನಾದ ಶ್ರೀ ಹರಿಯ ಸಾಮರ್ಥ್ಯವನ್ನು, ಅಸ್ಯ—ಈ ಭೀಮರ, ಪರಂ ಪ್ರಭಾವಂ—ವಿಶಿಷ್ಟವಾದ ಸಾಮರ್ಥ್ಯವನ್ನು, ಜಾನನ್ ಅಪಿ—ತಿಳಿದವನಾದರೂ ಕೂಡ, ಅಧಿಕಂ ನೈವ ಪ್ರೀಯತೇ—ಹೆಚ್ಚು ಪ್ರೀತಿಯುಳ್ಳವನಾಗಿದ್ದಿಲ್ಲ. ॥೧೦॥

ತಸ್ಯಾಪನೇತುಂ ವಿಷಯೇಷು ಸಕ್ತಿಂ ದ್ವೇಷಂ ತಥೈವಾತ್ಮನಿ ಭೀಮಸೇನಃ ।
ಜಗಾದ ಮಾದ್ರೀಸುತಯೋಃ ಸಮಕ್ಷಮಾಸ್ಫೋಟ್ಯ ಸಂಶೃಣ್ವತ ಏವ ತಸ್ಯ ॥೧೧॥

ತಸ್ಯ—ಅಂಥ ಆ ಧೃತರಾಷ್ಟ್ರನಿಗೆ, ವಿಷಯೇಷು—ವಿಷಯಗಳಲ್ಲಿ, ಸಕ್ತಿಂ—ಆಸಕ್ತಿಯನ್ನು, ತಥಾ—ಹಾಗು, ಆತ್ಮನಿ—ತನ್ನ ಬಗ್ಗೆ, ದ್ವೇಷಂ—ಇರುವದ್ವೇಷವನ್ನು ತನ್ನಲ್ಲಿ ಇತರರಿಗಿಂತ ಕಡಿಮೆ ಪ್ರೀತಿಯನ್ನು ಮಾಡುವ ದೋಷವನ್ನು, ಅಪನೇತುಂ—ಪರಿಹರಿಸುವದಕ್ಕಾಗಿ, ಭೀಮಸೇನಃ—ಶ್ರೀ ಭೀಮಸೇನದೇವರು, ತಸ್ಯ ಸಂಶೃಣ್ವತಃ ಸತಃ ಏವ—ಆ ಧೃತರಾಷ್ಟ್ರನು ಕೇಳುತ್ತಿರುವಂತೆಯೇ, ತಸ್ಯ ಸಮಕ್ಷಂ ಏವ—ಆ ಧೃತರಾಷ್ಟ್ರನ ಎದುರಿಗೇ, ಆಸ್ಫೋಟ್ಯ—ತನ್ನ ಭುಜಗಳನ್ನು ಬಡಿದುಕೊಂಡು, ಮಾದ್ರೀಸುತಯೋಃ—ನಕುಲಸಹದೇವರಿಗೆ, ಜಗಾದ—ಹೇಳಿದರು. ॥೧೧॥

ತಾವಿಮೌ ಮೇ ಭುಜೌ ವೃತ್ತೌ ಪೀನೌ ಚಂದನರೂಷಿತೌ ।
ಯಯೋರಂತರಮಾಸಾದ್ಯ ಜರಠಸ್ಯ ಸುತಾ ಹತಾಃ ॥೧೨॥

ಯಯೋಃ ಅಂತರಂ—ಯಾವ ಎರಡು ಬಾಹುಗಳ, ಅಂತರಂ—ಮಧ್ಯ ಪ್ರದೇಶವನ್ನು, ಆಸಾದ್ಯ—ಹೊಂದಿ, (ಯಾವ ಎರಡು ಕೈಗಳಲ್ಲಿ ಸಿಕ್ಕ) ಅದರ ಸಮೀಪಕ್ಕೆ ಬಂದು, ಜರಠಸ್ಯ—ಈ ಮುದುಕನ, ಸುತಾಃ —ಮಕ್ಕಳು, ಹತಾಃ —ಸಂಹರಿಸಲ್ಪಟ್ಟರೋ, ತೌ—ಆ ಬಾಹುಗಳು, ವೃತ್ತೌ—ದುಂಡಗಾದ, ಚಂದನರೂಷಿತೌ—ಗಂಧದಿಂದ ಲೇಪಿಸಲ್ಪಟ್ಟ, ಇಮೌ ಮೇ ಭುಜೌ—ಈ ನನ್ನ ಭುಜಗಳೇ ಆಗಿವೆ. ॥೧೨॥

ಯಮೌ ತದನ್ವಮೋದೇತಾಂ ತತ್ಸ್ನೇಹಾದ್ ಗೌರವಾದಪಿ ।
ನೈವ ತತ್ ಕೃಷ್ಣಯಾ ಜ್ಞಾತಂ ಪೃಥಯಾ ಚ ಸಪುತ್ರಯಾ ॥೧೩॥

ಯಮೌ—ಯಮಳರಾದ ನಕುಲಸಹದೇವರು, ತತ್—ಆ ಮಾತನ್ನು, ತತ್ಸ್ನೇಹಾತ್—ಆ ಭೀಮರಲ್ಲಿ ಪ್ರೀತಿಯಿಂದ, ಗೌರವಾತ್ ಅಪಿ—ಗೌರವದಿಂದಲೂ ಕೂಡ, ಅನ್ವಮೋದೇತಾಂ—ಅನುಮೋದಿಸಿದರು, ಚ—ಆದರೆ, ತತ್—ಆ ಎಲ್ಲ ವಿಷಯವು, ಕೃಷ್ಣಯಾ—ದ್ರೌಪದೀದೇವಿಯಿಂದ, ಸಪುತ್ರಯಾ ಪೃಥಯಾ ಚ—ಮಕ್ಕಳಿಂದ ಸಹಿತಳಾದ ಕುಂತೀದೇವಿಯಿಂದಾಗಲಿ, ನ ಜ್ಞಾತಂ—ತಿಳಿಯಲ್ಪಟ್ಟಿರಲಿಲ್ಲ. (ಭೀಮರು ಕುಂತೀ ದ್ರೌಪದಿಯರಿಗೆ ಗೊತ್ತಾಗುವಂತೆ ಧೃತರಾಷ್ಟ್ರನಿಗೆ ಹೇಳುತ್ತಿರಲಿಲ್ಲ.) ॥೧೩॥

ತಚ್ಛ್ರುತ್ವೋತ್ಪನ್ನ ನಿರ್ವೇದಂ ಕ್ಷತ್ತಾ ಜ್ಯೇಷ್ಠಸ್ಯ ವರ್ಧಯನ್ ।
ಉವಾಚ ಜೀವಿತಾಶಾ ತೇ ನನು ರಾಜನ್ ಮಹೀಯಸೀ ।
ಭೀಮಾಪವರ್ಜಿತಂ ಪಿಂಡಮಾದತ್ಸೇ ಗೃಹಪಾಲವತ್ ॥೧೪॥

ತತ್—ಆ ರೀತಿಯಾದ ಶ್ರೀಭೀಮವಾಕ್ಯವನ್ನು, ಶ್ರುತ್ವಾ—ಕೇಳಿ, ಜಾತನಿರ್ವೇದಂ—ಹುಟ್ಟಿದವೈರಾಗವನ್ನು ಕ್ಷತ್ತಾ—ವಿದುರರು, ಜ್ಯೇಷ್ಠಸ್ಯ—ತನ್ನ ಅಣ್ಣನಾದ ಧೃತರಾಷ್ಟ್ರನಿಗೆ, ವರ್ಧಯನ್—ಹೆಚ್ಚಿಸುವವರಾಗಿ, (ಧೃತರಾಷ್ಟ್ರನನ್ನು ಕುರಿತು,)ರಾಜನ್—ಎಲೋ ಧೃತರಾಷ್ಟ್ರರಾಜನೇ,ತೇ—ನಿನಗೆ, ಜೀವಿತಾಶಾ—ಒದುಕುವ ಇಚ್ಛೆಯಂ, ಮಹೀಯಸೀ—ಬಹಳೇ ಇದೆ, ನನು—ನಿಶ್ಚಯವು. (ಏಕೆಂದರೆ), ಭೀಮಾಪವರ್ಜಿತಂ ಪಿಂಡಂ—ಭೀಮನಿಂದ ಎಡಗೈಯಿಂದ ಎಸೆಯಲ್ಪಟ್ಟ (ಅನಾದರದಿಂದ ಕೊಡಲ್ಪಡತಕ್ಕ) ಶ್ರಾದ್ಧಪಿಂಡದಂತಿರುವ ಅನ್ನದ ಉಂಡೆಯನ್ನು, ಗೃಹಪಾಲವತ್—ನಾಯಿಯಂತೆ, ಆದತ್ಸೇ—ಸ್ವೀಕರಿಸುತ್ತಲೇ ಇರುವಿ. ॥೧೪॥

ನಚಾಪರಾಧೋ ಭೀಮಸ್ಯ ಬ್ರುವತಸ್ತ್ವಾಮಿದಂ ವಚಃ ।
ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ ।
ಹೃತಂ ಕ್ಷೇತ್ರಂ ಧನಂ ಯಸ್ಯ ಕಿಂ ಭೀಮೇನ ಕೃತಂ ತ್ವಯಿ ॥೧೫॥

ತ್ವಾಂ—ನಿನ್ನನ್ನು ಕುರಿತು, ಇದಂ ವಚಃ—ಈ ಮಾತನ್ನು, (ಅನಾದರದ ಮಾತನ್ನು), ಬ್ರುವತಃ—ಹೇಳತಕ್ಕ, ಭೀಮಸ್ಯ—ಭೀಮನದು, ಅಪರಾಧಃ ನಚ—ಯಾವ ಅಪರಾಧವೂ ಇಲ್ಲ. ಯಸ್ಯ—ಯಾವ ಭೀಮನಿಗೆ, ತ್ವಯಾ—ನಿನ್ನಿಂದ, ಅಗ್ನಿಃ ನಿಸೃಷ್ಟಃ—ಬೆಂಕಿಯು ಕೊಡಲ್ಪಟ್ಟಿತೋ, ಚ—ಮತ್ತು, ಗರಃ—ವಿಷವು, ದತ್ತಃ—ಕೊಡಲ್ಪಟ್ಟಿತೋ, ಯಸ್ಯದಾರಾಃ ಚ—ಯಾವ ಭೀಮನ ಹೆಂಡತಿಯಾದ ದ್ರೌಪದಿಯೂಕೂಡ, ದೂಷಿತಾಃ—ಅವಮಾನಿಸಲ್ಪಟ್ಟಳೋ, ಯಸ್ಯಕ್ಷೇತ್ರಂ—ಯಾವ ಭೀಮನ ರಾಜ್ಯವು ಹತಂ—ನಿನ್ನಿಂದ ಅಪಹರಿಸಲ್ಪಟ್ಟಿತೋ, ಯಸ್ಯ ಧನಂ—ಯಾವ ಭೀಮನ ಸಂಪತ್ತು, ಹೃತಂ—ನಿನ್ನಿಂದ ಅಪಹರಿಸಲ್ಪಟ್ಟಿತೋ, ತೇನ ಭೀಮೇನ—ಆ ಭೀಮನಿಂದ, ತ್ವಯಿ—ನಿನ್ನ ಬಗ್ಗೆ, ಕಿಂಕೃತಂ—ಏನು ಕೆಡಕು ಮಾಡಲ್ಪಟ್ಟಿದೆ?(ಇಷ್ಟೆಲ್ಲ ಉಪದ್ರವವನ್ನು ನೀನು ಆ ಭೀಮನಿಗೆ ಮಾಡಿದರೂ, ಅವನು ಮಾತ್ರ ನಿನಗೇನು ಕೆಡಕನ್ನು ಮಾಡಿರುವನು? ಏನೂ ಮಾಡಿಲ್ಲ ಎಂದು ಅಭಿಪ್ರಾಯ.) ॥೧೫॥

ಅಲಮಾಸಜ್ಜತಸ್ತೇಽದ್ಯ ನಿರ್ವೇದಕರಮೀರಿತಮ್ ।
ಉಪಕಾರಾಯ ಭೀಮೇನ ತವ ದ್ವೇಷಂ ತ್ಯಜಾತ್ರ ತತ್ ॥೧೬॥

ಅದ್ಯ (ಅಪಿ)—ಇಂದೂ ಕೂಡ, ಅಲಂ ಆಸಜ್ಜತಃ—ಬಹು ವಿಷಯಾಸಕ್ತನಾದ, ತೇ—ನಿನಗೆ, ನಿರ್ವೇದಕರಂ (ವಾಕ್ಯಂ)—ವೈರಾಗ್ಯವನ್ನು ಹುಟ್ಟಿಸುವಂಥ ಮಾತು, ತವ ಉಪಕಾರಾಯ—ನಿನಗೆ ಉಪಕಾರಮಾಡುವದಕ್ಕಾಗಿ, ಭೀಮೇನ—ಭೀಮಸೇನನಿಂದ, ಈರಿತಂ—ಹೇಳಲ್ಪಟ್ಟಿದೆ, ತತ್—ಆದ್ದರಿಂದ, ಅತ್ರ—ಈ ಭೀಮನ ಬಗ್ಗೆ, ದ್ವೇಷಂ—ದ್ವೇಷವನ್ನು, ತ್ಯಜ—ಬಿಡು, ॥೧೬॥

ವಿಮುಚ್ಯ ದ್ವೇಷಕಾಮೌ ತ್ವಂ ವನೇ ತೀರ್ಥನಿಷೇವಕಃ ।
ತಪಸಾ ऽऽರಾಧಯ ಹರಿಂ ತತಃ ಪೂತೋ ಭವಿಷ್ಯಸಿ ॥೧೭॥

ತ್ವಂ—ನೀನು, ದ್ವೇಷಕಾಮೌ—ದ್ವೇಷ, ಕಾಮುಗಳನ್ನು, ವಿಮುಚ್ಯ—ಬಿಟ್ಟು, ತೀರ್ಥನಿಷೇವಕಃ ಸನ್—ತೀರ್ಥಸ್ನಾನಮಾಡುವವನಾಗಿ, ವನೇ—ವನದಲ್ಲಿ, ಏಕಾಂತದಲ್ಲಿ, ಸಜ್ಜನ ಸಹವಾಸದಲ್ಲಿ, ತಪಸಾ—ತಪಸ್ಸನ್ನು ಮಾಡುವದರಿಂದ, ಹರಿಂ ಆರಾಧಯ—ಶ್ರೀಹರಿಯನ್ನು ಆರಾಧಿಸು, ತತಃ—ಅದರಿಂದ, ಪೂತಃಭವಿಷ್ಯಸಿ—ಪರಿಶುದ್ಧನಾಗುವಿ. ॥೧೭॥

ಇತ್ಯುಕ್ತೋ ದ್ವೇಷಮುತ್ಸೃಜ್ಯ ಭೀಮೇ ನಿರ್ವೇದಮಾಗತಃ ।
ಅನುಜ್ಞಾಂ ತಪಸೇ ಪ್ರಾಪ್ತುಮುಪವಾಸಪರೋऽಭವತ್ ॥೧೮॥

ಇತಿ ಉಕ್ತಃ—ಹೀಗೆ ಹೇಳಿಸಿಕೊಳ್ಳಲ್ಪಟ್ಟ ಧೃತರಾಷ್ಟ್ರನು, ಭೀಮೇ—ಭೀಮಸೇನದೇವರ ಬಗೆ, ದ್ವೇಷಂ ಉತ್ಸೃಜ್ಯ—ದ್ವೇಷವನ್ನು ಬಿಟ್ಟು, ನಿರ್ವೇದಂ ಆಗತಃ ಸನ್—ವಿಷಯವೈರಾಗ್ಯವನ್ನು ಹೊಂದಿದವನಾಗಿ, ತಪಸೇ—ತಪಸ್ಸನ್ನಾಚರಿಸುವದಕ್ಕಾಗಿ (ವನಕ್ಕೆ ಹೋಗಲು), ಅನುಜ್ಞಾಂ ಪ್ರಾಪ್ತುಂ—ಧರ್ಮರಾಜನ ಅಪ್ಪಣೆಯನ್ನು ಪಡೆಯಲು, ಉಪವಾಸಪರಃ —ಉಪವಾಸಮಾಡುವದರಲ್ಲಿ ಪ್ರವೃತ್ತನು, (ಮೊದಲು ಅಪ್ಪಣೆಯನ್ನು ಕೇಳಿದನು: ಧರ್ಮರಾಜನು ಕೊಡಲಿಲ್ಲ; ಎಷ್ಟು ಸಲ ಕೇಳಿದರೂ ಕೊಡದಿರುವಾಗ ಉಪವಾಸದಲ್ಲಿ ಪ್ರವೃತ್ತನು) ಅಭವತ್—ಆದನು. ॥೧೮॥

ಅನಶ್ನಂತಂ ಚತುರ್ಥೇऽಹ್ನಿ ಧೃತರಾಷ್ಟ್ರಂ ಯುಧಿಷ್ಠಿರಃ ।
ಜ್ಞಾತ್ವಾ ಸಂಪ್ರಾರ್ಥಯಾಮಾಸ ಭೋಜನಾರ್ಥಂ ಪುನಃ ಪುನಃ ॥೧೯॥

ಚತುರ್ಥೇ ಅಹ್ನಿ—ನಾಲ್ಕನೆಯ ದಿವಸ, ಯುಧಿಷ್ಠಿರಃ —ಧರ್ಮರಾಜನು, ಧೃತರಾಷ್ಟ್ರಂ—ಧರ್ಮರಾಜನನ್ನು, ಅನಶ್ನಂತಂ—ಊಟ ಮಾಡದಿದ್ದವನನ್ನಾಗಿ, ಜ್ಞಾತ್ವಾ—ತಿಳಿದು, ಭೋಜನಾರ್ಥಂ—ಊಟ ಮಾಡುವದಕ್ಕಾಗಿ, ಪುನಃ ಪುನಃ —ಮೇಲಿಂದ ಮೇಲೆ, ಸಂಪ್ರಾರ್ಥಯಾಮಾಸ—ಪ್ರಾರ್ಥಿಸಿದನು. ॥೧೯॥

ಅನುಜ್ಞಾಂ ವನವಾಸಾಯ ತ್ವತ್ತಃ ಪ್ರಾಪ್ಯೈವ ಸರ್ವಥಾ ।
ಭೋಕ್ಷ್ಯೇऽನ್ಯಥಾ ನೇತಿ ವದನ್ ಧೃತರಾಷ್ಟ್ರಃ ಶ್ರವಾನ್ವಿತಃ ।
ಉಪವಾಸಕೃಶೋ ಭಾರ್ಯಾಂ ಶಿಶ್ರಿಯೇ ಮೂರ್ಛಿತಃ ಕ್ಷಣಾತ್ ॥೨೦॥

ವನವಾಸಾಯ—ವನದಲ್ಲಿ ವಾಸಕ್ಕಾಗಿ, ತ್ವತ್ತಃ—ನಿನ್ನಿಂದ, ಅನುಜ್ಞಾಂ—ಅಪ್ಪಣೆಯನ್ನು, ಪ್ರಾಪ್ಯ ಏವ—ಹೊಂದಿದ ಮೇಲೆಯೇ, ಸರ್ವಥಾ ಭೋಕ್ಷ್ಯೇ—ಅವಶ್ಯವಾಗಿ ಊಟಮಾಡುವೆನು, ಅನ್ಯಥಾ—

ಅಪ್ಪಣೆಯನ್ನು ಕೊಡದಿದ್ದರೆ, ನ—ಊಟ ಮಾಡುವುದಿಲ್ಲ, ಇತಿ—ಎಂದು, ವದನ್—ಹೇಳತಕ್ಕ. ಶ್ರಮಾನ್ವಿತಃ—ಬಳಲಿದ, ಉಪವಾಸಕೃಶಃ—ಉಪವಾಸದಿಂದ ಕೊರಗಿದ, ಧೃತರಾಷ್ಟ್ರಃ —ಧೃತರಾಷ್ಟ್ರರಾಜನು. ಭಾರ್ಯಾಂ ಶಶ್ರಿಯೇ—ಅಶಕ್ತಿಯಿಂದ ಕೂಡಲಿಕ್ಕೂ ಕೂಡ ಆಗದೇ ಹೆಂಡತಿಯ ಮೇಲೆ ಒರಗಿದನು, ಕ್ಷಣಾತ್—ಕೂಡಲೇ ಮೂರ್ಛಿತಃ—ಮೂರ್ಛೆಯನ್ನು ಹೊಂದಿದನು. ॥೨೦॥

ಶಂತಮೇನ ಕರೇಣಾಥ ಧರ್ಮರಾಜಸ್ತಂ ಮೃದು ಸ್ಪೃಶನ್ ।
ಶನೈಃ ಸಂಜ್ಞಾಮಗಮಯದಬ್ರವೀಚ್ಚ ಸುದುಃಖಿತಃ ॥೨೧॥

ಅಥ—ಹೀಗೆ ಧೃತರಾಷ್ಟ್ರನು ಮೂರ್ಛೆಯನ್ನು ಹೊಂದಿದ ನಂತರ, ಸುದುಃಖಿತಃ ಧರ್ಮರಾಜಃ—ಅತ್ಯಂತ ದುಃಖಿತನಾದ ಧರ್ಮರಾಜನು. ಶಂತಮೇನ—ಅತ್ಯಂತ ಸುಖಕರವಾದ, ಕರೇಣ—ತನ್ನ ಕೈಯಿಂದ ತಂ—ಆ ಧೃತರಾಷ್ಟ್ರನನ್ನು, ಶನೈಃ —ಮೆಲ್ಲನೇ, ಮೃದುಸ್ಪೃಶನ್ ಸನ್—ಮೃದುವಾಗಿ ಮುಟ್ಟುವವನಾಗಿ, (ಮೆತ್ತಗಾದ ಕೈಯನ್ನು ಅವನ ಮೇಲೆ ಆಡಿಸುವವನಾಗಿ), ಸಂಜ್ಞಾಂ ಅಗಮಯತ್—ಎಚ್ಚರಿಕೆಯನ್ನು ಹೊಂದಿಸಿದನು, (ಎಚ್ಚರವಾಗುವಂತೆ ಮಾಡಿದನು.) ॥೨೧॥

ಪುರಸ್ಕೃತ್ಯ ಯುಯುತ್ಸುಂ ತ್ವಂ ಕುರು ರಾಜ್ಯಮಕಂಟಕಮ್ ।
ವಯಮೇವ ತ್ವದರ್ಥಾಯ ಕುರ್ಮಃ ಸರ್ವೇ ತಪೋವನೇ ॥೨೨॥

ತ್ವಂ—ನೀನು, ಯುಯುತ್ಸುಂ—ಯುಯುತ್ಸುವನ್ನು, ಪುರಸ್ಕೃತ್ಯ—ಮುಂದಿಟ್ಟು ಕೊಟ್ಟು, ಅಕಂಟಕಂ ರಾಜ್ಯಂ ಕುರು—ನಿಷ್ಕಂಟಕವಾದ ಈ ರಾಜ್ಯವನ್ನಾಳು, ವಯಂ ಸರ್ವೇ ಏವ—ನಾವೇ ಎಲ್ಲರೂ, ತ್ವದರ್ಥಾಯ—ನಿನಗಾಗಿ, (ನಿನಗೆ ಉತ್ತಮ ಲೋಕಕ್ಕಾಗಿ) ವನೇ—ಅಡವಿಯಲ್ಲಿ, ತಪಃ ಕುರ್ಮಃ—ತಪಸ್ಸನ್ನು ಮಾಡುವೆವು. (ಈ ರೀತಿ ಧೃತರಾಷ್ಟ್ರನಿಗೆ ಧರ್ಮರಾಜನು ಹೇಳಿದನು ಎಂದು ಹಿಂದಿನ ಶ್ಲೋಕಕ್ಕೆ ಅನ್ವಯಮಾಡಿಕೊಳ್ಳಬೇಕು) ॥೨೨॥

ನೇತ್ಯಾಹ ಧೃತರಾಷ್ಟ್ರಸ್ತಂ ಕುಲಧರ್ಮೋಽಹಿ ನೋ ವನೇ ।
ಅಂತೇ ದೇಹಪರಿತ್ಯಾಗಸ್ತನ್ಮಾಽನುಜ್ಞಾತುಮರ್ಹಸಿ ॥೨೩॥

ತಂ—ಹಾಗೆ ಹೇಳಿದ ಧರ್ಮರಾಜನನ್ನು ಕುರಿತು, ಧೃತರಾಷ್ಟ್ರಃ —ಧೃತರಾಷ್ಟ್ರನು, ನ ಇತಿ—ಆಗದು, ಅದು ಯೋಗ್ಯವಲ್ಲ ಎಂದು, (ಚ–ಮತ್ತು) ಅಂತೇ—ಜೀವನದ ಕೊನೆಯ ಭಾಗದಲ್ಲಿ, ವನೇ—ಅಡವಿಯಲ್ಲಿ (ವಾಸಿಸುತ್ತಾ), ದೇಹ ಪರಿತ್ಯಾಗಃ —ದೇಹವನ್ನು ತ್ಯಜಿಸುವದು, ಹಿ—ಯಾವ ಕಾರಣದಿಂದ, ನಃ ಕುಲಧರ್ಮಃ—ನಮ್ಮ ಕುಲಧರ್ಮ (ಹಿಂದಿನವರೆಲ್ಲ ಆಚರಿಸುತ್ತಾ ಬಂದ ಧರ್ಮ) ವಾಗಿದೆಯೋ, ತತ್—ಆ ಕಾರಣದಿಂದ, ಮಾ—ನನಗೆ, ಅನುಜ್ಞಾತುಂ ಅರ್ಹಸಿ—ಅಪ್ಪಣೆಯನ್ನು ಕೊಡಲು ಅರ್ಹನಿರುವಿ, (ನಮಗೆ ಅಪ್ಪಣೆಯನ್ನು ಕೊಡುವದು ವಿಹಿತವು,) ಇತಿ–ಎಂದೂ, ಆಹ—ಹೇಳಿದನು. ॥೨೩॥

ತಯೋರ್ವಿವದತೋರೇವಂ ಕೃಷ್ಣದ್ವೈಪಾಯನಃ ಪ್ರಭುಃ ।
ಸರ್ವಜ್ಞಃ ಸರ್ವಕರ್ತೇಶ ಆವಿಭೂತೋಽಬ್ರವೀನ್ನೃಪಮ್ ॥೨೪॥

ತಯೋಃ —ಅವರಿಬ್ಬರೂ. ಏವಂ—ಈ ರೀತಿ, ವಿವದತೋಃ ಸತೋಃ —ವಿವಾದ ಮಾಡುತ್ತಿರಲು, ಪ್ರಭುಃ —ಸರ್ವಸಮರ್ಥನಾದ, ಸರ್ವಜ್ಞಃ —ಸರ್ವಜ್ಞನಾದ, ಸರ್ವಕರ್ತಾ—ಸರ್ವ ಜಗತ್ಕರ್ತನಾದ. ಈಶಃ—ಸರ್ವನಿಯಾಮಕನಾದ, ಕೃಷ್ಣದ್ವೈಪಾಯನಃ —ಶ್ರೀ ವೇದವ್ಯಾಸದೇವರು, ಆವಿರ್ಭೂತಃ ಸನ್—ಪ್ರಕಟರಾಗಿ ನೃಪಂ—ಧರ್ಮರಾಜನನ್ನು ಕುರಿತು. ಅಬ್ರವೀತ್—ಮಾತನಾಡಿದರು. ॥೨೪॥

ತಪಸಾऽಶೇಷದೋಷಾಣಾಂ ಕ್ಷಯಕಾಮಮಿಮಂ ನೃಪಮ್ ।
ಅನುಜಾನೀಹಿ ನೈವಾಸ್ಯ ಧರ್ಮವಿಘ್ನಕರೋ ಭವ ॥೨೫॥

ತಪಸಾ—ತಪಸ್ಸಿನಿಂದ, ಅಶೇಷದೋಷಾಣಾಂ ಕ್ಷಯಕಾಮಂ—ಎಲ್ಲ ದೋಷಗಳನಾಶಮಾಡಿಕೊಳ್ಳುವ ಇಚ್ಛೆಯುಳ್ಳ, ಇಮಂ ನೃಪಂ—ಈ ಧೃತರಾಷ್ಟ್ರರಾಜನಿಗೆ, ಅನುಜಾನೀಹಿ—ಅಪಣೆಯನ್ನು ಕೊಡು, ಅಸ್ಯ ಧರ್ಮ ವಿಘ್ನಕರಃ—ಇವನ ಧರ್ಮಕಾರ್ಯಕ್ಕೆ ವಿಘ್ನವನ್ನು-ಮಾಡುವವನು ನೈವ ಭವ—ಆಗಬೇಡ ॥೨೫॥

ಕಾಲೇ ನಿರ್ವೇದಮಾಪನ್ನಸ್ತಪಸಾ ದಗ್ಧಕಿಲ್ಬಿಷಃ ।
ಶುಭಾಂ ಗತಿಮಯಂ ಯಾಯಾದನ್ಯಥಾ ನ ಕಥಂಚನ ॥೨೬॥

ಕಾಲೇ—ಅತಿ ಅವಶ್ಯ (ಯೋಗ್ಯ) ಸಮಯದಲ್ಲಿ, ನಿರ್ವೇದಂ ಆಪನ್ನಃ—ವೈರಾಗ್ಯವನ್ನು ಹೊಂದಿರುತ್ತಾನೆ. ತಪಸಾ ದಗ್ಧಕಿಲ್ಬಿಷಃ—ತಪಸ್ಸಿನಿಂದ ತನ್ನ ಹಿಂದಿನ ದೋಷಗಳನ್ನು ಪರಿಹರಿಸಿಕೊಂಡ, ಅಯಂ—ಈ ಧೃತರಾಷ್ಟ್ರನು, ಶುಭಾಂ ಗತಿಂ—ಶುಭಗತಿಯನ್ನು, ಯಾಯಾತ್—ಹೊಂದಬಹುದು, ಅನ್ಯಥಾ—ಇಲ್ಲದಿದ್ದರೆ, (ತಪಸ್ಸನ್ನು ಆಚರಿಸದಿದ್ದರೆ, ಹಿಂದಿನ ದೋಷಗಳು ಹಾಗೇ ಉಳಿಯುವದರಿಂದ) ಕಥಂಚನ ನ ಯಾಯಾತ್—(ಶುಭ ಗತಿಯನ್ನು) ಯಾವರೀತಿಯಿಂದಲೂ ಹೊಂದಲಾರನು, (ಎಂದು ವೇದವ್ಯಾಸದೇವರು ಮಾತನಾಡಿದರು, ಎಂದು ಮುಂದಿನ ಶ್ಲೋಕಕ್ಕೆ ಅನ್ವಯ.) ॥೨೬॥

ಇತ್ಯುಕ್ತೋ ಧರ್ಮರಾಜಸ್ತಮನುಜಜ್ಞೇ ಸ ಚಾಶಿತಃ ।
ಶಿಕ್ಷಯಾಮಾಸ ಸದ್ಧರ್ಮಾನ್ ನೀತಿಂ ಚ ವಿದುಷೇऽಖಿಲಮ್ ।
ಕೇವಲಸ್ನೇಹತೋ ರಾಜ್ಞೇ ಶುಶ್ರಾವ ವಿನಯಾಯ ಸಃ ॥೨೭॥

ಇತಿಉಕ್ತಃ—ಈ ರೀತಿ ಹೇಳಿಸಿಕೊಳ್ಳಲ್ಪಟ್ಟ, ಧರ್ಮರಾಜಃ—ಧರ್ಮರಾಜನು, ತಂ—ಆ ಧೃತರಾಷ್ಟ್ರನನ್ನೂ, ಅನುಜಜ್ಞೇ—ಅನುಮತಿಸಿದನು. ಸಃ ಚ—ಆ ಧೃತರಾಷ್ಟ್ರನಾದರೂ, ಅಶಿತಃ—ಊಟಮಾಡಿದನು. ಚ—ಹಾಗು, ಸದ್ಧರ್ಮಾನ್, ನೀತಿಂ—ಶ್ರೇಷ್ಠಧರ್ಮಗಳ, ನೀತಿಯ ಬಗ್ಗೆ, ಅಲಂ ವಿದುಷೇ ಅಪಿ ರಾಜ್ಞೇ—ಚೆನ್ನಾಗಿ ತಿಳಿದಿರುವ ಧರ್ಮರಾಜನಿಗೆ. (ಧರ್ಮರಾಜನು ಚೆನ್ನಾಗಿ ತಿಳಿದಿದ್ದರೂ ಕೂಡ, ಅವನಿಗೆ) ಕೇವಲಸ್ನೇಹತಃ—ಕೇವಲ ಪ್ರೀತಿಯಿಂದ, ಶಿಕ್ಷಯಾಮಾಸ—ಬೋಧಿಸಿದನು. ಸಃ—ಆ ಧರ್ಮರಾಜನು, ವಿನಯಾಯ ವಿನಯ ಗುಣಕ್ಕಾಗಿ, ಶುಶ್ರಾವ ಹೇಳಿದ್ದನೆಲ್ಲವನ್ನು (ತನಗೆ ಗೊತ್ತಿದ್ದರೂ ಕೂಡ) ಹೇಳಿದನು. ॥೨೭॥

ಭಾವಾನುವಾದ ೬—೨೭

ಧೃತರಾಷ್ಟ್ರನು ತನ್ನ ಮಕ್ಕಳಿರುವಾಗ ಅವರ ಸಂಗ ಮೋಹಗಳಿಂದ ಬಹು ಅಕಾರ್ಯಗಳನ್ನು ಮಾಡಿದನು. ಅವನ ಅಕಾರ್ಯ ಇಷ್ಟು ಎಂದು ಹೇಳುವದೇ ಕಷ್ಟ. ಒಂದೇ ಮಾತಿನಲ್ಲಿ ಹೇಳುವದಾದರೆ ಎಲ್ಲ ರಾಜರ

ಮರಣಕ್ಕೂ ಇವನೇ ಕಾರಣನಾದನು ಎಂದು ಹೇಳಬಹುದು, ಅಷ್ಟು ಅಕಾರ್ಯಗಳನ್ನು ಮಾಡಿ, ಈಗ ಮಕ್ಕಳು ಸತ್ತ ಮೇಲೂ ಕೂಡ ಇನ್ನೂ ತನ್ನ ಉದ್ಧಾರದ ದಾರಿಯನ್ನು ಕಾಣದೆ, ಇನ್ನು ವಿಷಯಗಳಲ್ಲಿಯೇ ಆಸಕ್ತನಾಗಿರುವದನ್ನು ನೋಡಿ ಭೀಮಸೇನದೇವರು ಅವನ ಬಗ್ಗೆ ಅನುಕಂಪದಿಂದ ಘೋರತಪಸ್ಸನ್ನು ಮಾಡದೇ ಇವನ ದೋಷ ಪರಿಹಾರವಾಗದು; ಸ್ವಲೋಕ ಪ್ರಾಪ್ತಿಯಾಗದು. ವೈರಾಗ್ಯಬಾರದೇ ತಪಸ್ಸನ್ನು ಮಾಡಲಾರನು ಎಂಬ ಉದ್ದೇಶದಿಂದ ಅವನಿಗೆ ವೈರಾಗ್ಯಕರವಾದ ಕಾರ್ಯಗಳನ್ನು ಮಾಡಿದರು. ಆ ಧೃತರಾಷ್ಟ್ರನ ಮಾತನ್ನು ಯಾರೂ ಕೇಳದಂತೆ ಮಾಡುತ್ತಿದ್ದರು. ಅವಜ್ಞಾ ಮಾತನ್ನಾಡುತ್ತಿದ್ದರು. ಆದರೂ ಸ್ತ್ರೀಯರು ಇತರರು ಆದರಿಸುತ್ತಿದ್ದರು. ಭೀಮರೊಬ್ಬರನ್ನು ಬಿಟ್ಟು ಇತರ ಪಾಂಡವರು ತಮ್ಮ ಪತ್ನೀಸಮೇತರಾಗಿ ಧೃತರಾಷ್ಟ್ರನನ್ನು ಸೇವಿಸುತ್ತಲೇ ಇದ್ದರು. ದ್ರೌಪದೀದೇವಿಯೂ ಮಕ್ಕಳು ಸತ್ತ ದುಃಖವಿದ್ದಾಗ ಹೊಸದುಃಖವಾಗುವದು ಬೇಡ ಎಂದು ಸೇವಿಸುತ್ತಿದ್ದಳು. ಹೀಗಾಗಿ ಆ ಧೃತರಾಷ್ಟ್ರನಿಗೆ ವೈರಾಗ್ಯ ಬರಲಿಲ್ಲ ಅಷ್ಟೇ ಅಲ್ಲ; ಇತರ ಎಲ್ಲರಲ್ಲಿ ಯುಂತೆ ಭೀಮರಲ್ಲಿ ಮಾತ್ರ ಪ್ರೀತಿ ಯುಂಟಾಗಲಿಲ್ಲ. ಅವನೇ ತನ್ನ ಮಕ್ಕಳನ್ನು ಕೊಂದ ಎಂದು ತಿಳಿದುಕೊಂಡು ಅವನ (ಭೀಮರ) ಬಗ್ಗೆ ದ್ವೇಷವನ್ನು ಬೆಳೆಸಿಕೊಳ್ಳುತ್ತಿದ್ದನು. ಹೀಗೆ ವಿಷಯಾಸಕ್ತಿಯನ್ನು, ತನ್ನ ಬಗ್ಗೆ ದ್ವೇಷವನ್ನು ಬೆಳೆಸಿಕೊಂಡದ್ದನ್ನು ನೋಡಿ ಶ್ರೀಭೀಮಸೇನದೇವರು ಧೃತರಾಷ್ಟ್ರನು ಇರುವಾಗ ಅವನಿಗೆ ಕೇಳುವಂತೆ ನಕುಲಸಹದೇವರನ್ನು ಕುರಿತು ತನ್ನ ಬಾಹುಗಳನ್ನು ಆಸ್ಫೋಟಿಸಿ ಎಲೋ ತಮ್ಮಂದಿರೇ, ನೋಡಿ, ಗಂಧಾಲಂಕೃತವಾದ, ವೃತ್ತವಾದ, ಪುಷ್ಟವಾದ ನನ್ನ ಭುಜಗಳನ್ನು ನೋಡಿ, ಇವೇ ಭುಜಗಳಲ್ಲಿ ಸಿಕ್ಕು ಈ ಗೊಡ್ಡುಮುದುಕನ ಮಕ್ಕಳು ಸತ್ತು ಹೋದರು ಎಂದು ಹೇಳುತ್ತಿದ್ದರು. ಈ ರೀತಿಯಾಗಿ ಶ್ರೀಭೀಮರು ಪಡಾಡುವದು ದ್ರೌಪದಿಗೆ, ಕುಂತಿಗೆ ಮಾತ್ರ ಗೊತ್ತಾಗುತ್ತಿರಲಿಲ್ಲ. ಈ ರೀತಿಯಾದ ಕಟುನುಡಿಗಳನ್ನು ಕೇಳಿ ಧೃತರಾಷ್ಟ್ರನಿಗೆ ಹುಟ್ಟಿದ ಸ್ವಲ್ಪ ವೈರಾಗ್ಯವನ್ನು ಬೆಳಿಸುವದಕ್ಕೋಸ್ಕರ ವಿದುರರು ಧೃತರಾಷ್ಟ್ರರಾಜನನ್ನು ಕುರಿತು "ಅಣ್ಣ ,ರಾಜನೇ ಅಂತೂ ನಿನಗೂ ಬದಕುವ ಇಚ್ಛೆ ಬಹಳ ಇದೆ. ಭೀಮನು ಅಗೌರವಪೂರ್ವಕ, ತಿರಸ್ಕಾರದಿಂದ ಶ್ವಾನಾದಿ ಪಶುಗಳಿಗೆ ಕೊಡುವಂತೆ ಅನ್ನವನ್ನು ಕೊಟ್ಟರೂ ಅದನ್ನೇ ತಿನ್ನುತ್ತಾ ಇನ್ನೂ ಬದುಕಿ ಇಲ್ಲಿಯೇ ಇರಬೇಕೆಂದು ಹಂಬಲಿಸುತ್ತಿರುವೆಯಲ್ಲ. ಎಂಥ ದುರಾಶೆ ಇದು ? ಭೀಮನು ಹಾಗೆ ಮಾಡುತ್ತಿದ್ದಾನೆ ಎಂದು ಅವನ ತಪ್ಪೇನೂ ಇಲ್ಲ. ನೀನು ಅವನಿಗೆ ಮಾಡದ ದ್ರೋಹವೇನಿದೆ ? ಹೇಳು ಅವನಿಗೆ ವಿಷವನ್ನು ಕೊಟ್ಟೆ, ಅಗ್ನಿಯಿಂದ ಸುಡಲುಪಯತ್ನಿಸಿದಿ, ಅವನ ಹೆಂಡತಿಯನ್ನು ದೊಚಿಸಲು ಅವಮಾನಿಸಲು ಯತ್ನಿಸಿದಿ ? ದುಡ್ಡು—ರಾಜ್ಯ ಎಲ್ಲಾ ಸಂಪತ್ತನ್ನು ಕಸಿದಿ, ಆದರೂ ಭೀಮನು ನೀನಗೇನು ಮಾಡಿದ ಹೇಳು ? ಇಷ್ಟೆಲ್ಲ ಕೆಟ್ಟಕೆಲಸವನ್ನು ಮಾಡಿ,ನೀನಾದರೂ ಉದ್ಧಾರದ ಮಾರ್ಗವನ್ನು ಹಿಡಿಯದೆ ವಿಷಯಗಳಲ್ಲಿಯೇ ರತನಾಗಿರುವ ನಿನ್ನನ್ನು ನೋಡಿ ನಿನಗೆ ವೈರಾಗ್ಯ ಬಂದು ಉದ್ಧಾರ ಮಾರ್ಗ ಹಿಡಿಯಲಿ ಎಂದು ಆ ರೀತಿ ನಿನಗೆ ಹೇಳುತ್ತಿದ್ದಾನೆ ಅಷ್ಟೇ. ಅವನದೇನು ತಪ್ಪು ? ತಪ್ಪಿಲ್ಲ ಅಷ್ಟೇ ಅಲ್ಲ; ನಿನಗೆ ಉಪಕಾರವನ್ನೇ ಮಾಡುತ್ತಿದ್ದಾನೆ. ಆದ್ದರಿಂದ ಅವನಲ್ಲಿ ದ್ವೇಷವನ್ನು, ವಿಷಯಕಾಮನೆಯನ್ನು ಬಿಡು; ವನಕ್ಕೆ ಹೊರಡು, ತೀರ್ಥಸ್ನಾನಮಾಡು, ತಪಸ್ಸಿನಿಂದ ಶ್ರೀಹರಿಯನ್ನು ಆರಾಧಿಸು. ಆಗ ಶುದ್ಧನಾಗುವಿ ಎಂದು ಹೇಳಿದನು. ಹೀಗೆ ಹೇಳಿದಾಗ ದ್ವೇಷವನ್ನು ತ್ಯಜಿಸಿ ವೈರಾಗ್ಯವನ್ನು ಹೊಂದಿದನು. ವನಕ್ಕೆ ಹೋಗಿ ತಪಸ್ಸು ಮಾಡಬೇಕೆಂದು ಬುದ್ಧಿ ಬಂದಿತು. ಅದಕ್ಕಾಗಿ ಧರ್ಮರಾಜನ ಅನುಜ್ಞೆಯನ್ನು ಕೇಳಿದನು. ಅದನ್ನು ಕೊಡದಿರುವಾಗ ಅದನ್ನು ಪಡೆಯಲು ಉಪವಾಸ ಕುಳಿತನು. ನಾಲ್ಕು ದಿನವಾದರೂ ಊಟ ಮಾಡದಿರುವದನ್ನು ತಿಳಿದ ಧರ್ಮರಾಜನು ಉಣ್ಣಲು ಪ್ರಾರ್ಥಿಸಿದನು. ವನಕ್ಕೆ ಹೋಗಲು ಅಪ್ಪಣೆಯನ್ನು ಕೊಟ್ಟರೇ ಊಟಮಾಡುವೆನು; ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾ ಉಪವಾಸದಿಂದ ಅಶಕ್ತನಾದ. ಆ ಧೃತರಾಷ್ಟ್ರನು ಮೂರ್ಛಿತನಾದನು. ಮೂರ್ಛೆಯಿಂದ ಬೀಳುವವನು ಹತ್ತಿರದಲ್ಲಿದ್ದ ಗಾಂಧಾರಿಯ ತೊಡೆಯಲ್ಲಿಯೇ ಉರುಳಿದನು. ಆಗ ಧರ್ಮರಾಜನು ಹತ್ತಿರ ಬಂದು ಅತಿಕೋಮಲವಾದ ಅತಿಹಿತಕರವಾದ ತನ್ನ ಕೈಯನ್ನು ಅವನ ಮೇಲೆ ಆಡಿಸಿ ಎಚ್ಚರಗೊಳಿಸಿದನು. ಬಹು ದುಃಖದಿಂದ ಧೃತರಾಷ್ಟ್ರನನ್ನು ಕುರಿತು—'ನಿನ್ನ ಮಗ (ವೈಶ್ಯಪತ್ನಿಯಲ್ಲಿ ಹುಟ್ಟಿದ ಮಗ) ಯುಯುತ್ಸುನನ್ನು ಮುಂದಿಟ್ಟುಕೊಂಡು ನೀನೇ ಈ ನಿಷ್ಕಂಟಕರಾಜ್ಯವನ್ನು ಆಳು, ನಿನ್ನಸಲುವಾಗಿ ಬೇಕಾದರೆ ನಾವೇ ವನಕ್ಕೆ ಹೋಗುವೆವು. ತಪಸ್ಸನ್ನಾಚರಿಸುವೆವು.'

ಎಂದು ಹೇಳಿದನು. ಅದಕ್ಕೆ ಧೃತರಾಷ್ಟ್ರರಾಜನು 'ಆದುಕೂಡದು; ವೃದ್ಧಾಪ್ಯದಲ್ಲಿ ವನಕ್ಕೆ ಹೋಗಿ ತಪಸ್ಸನ್ನು ಮಾಡುವದು ನಮ್ಮ ಕುಲಧರ್ಮವಾಗಿದೆ. ವೃದ್ಧನಾದ ನಾನು ವನಕ್ಕೆ ಹೋಗುವದೇ ಯುಕ್ತವು.' ಎಂದು ಹೇಳಿದನು. ಹೀಗೆ ಪರಸ್ಪರರು ವಿವಾದಿಸುತ್ತಿರುವಾಗ ಸರ್ವಜ್ಞರಾದ, ಸರ್ವಕರ್ತರಾದ ಶ್ರೀವೇದವ್ಯಾಸದೇವರು ಪ್ರಕಟರಾಗಿ ಧರ್ಮರಾಜನನ್ನು ಕುರಿತು—ತನ್ನ ಪೂರ್ವದೋಷಗಳನ್ನು ತಪಸ್ಸಿನಿಂದ ಪರಿಹರಿಸಿಕೊಳ್ಳುವ ಇಚ್ಛೆಯುಳ್ಳ ಈ ರಾಜನನ್ನು ಅನುಮತಿಸು; ನೀಷೇಧಿಸಬೇಡ. ಅವನ ಪುಣ್ಯಕಾರ್ಯಕ್ಕೆ ವಿಘ್ನವನ್ನು ಮಾಡಬೇಡ. ಸರಿಯಾದ ಸಮಯದಲ್ಲಿ ಅವನಿಗೆ ವೈರಾಗ್ಯ ಬಂದಿದೆ. ಈಗ ತಪಸ್ಸನ್ನು ಮಾಡಿದರೆ ದೋಷರಹಿತನಾಗಿ ತನಗೆ ಯೋಗ್ಯವಾದ ಶುಭಗತಿಯನ್ನು ಹೊಂದಿಯಾನು. ಇಲ್ಲದಿದ್ದರೆ ಇಲ್ಲ.' ಎಂದು ಹೇಳಿದರು. ಆಗ ಧರ್ಮರಾಜನು ಅನುಮತಿಯನ್ನಿತ್ತನು. ಧೃತರಾಷ್ಟ್ರನು ಊಟಮಾಡಿದನು. ಹಾಗೂ ಧರ್ಮರಾಜನ ಮೇಲಿನ ಸ್ನೇಹದಿಂದ ಅವನಿಗೆ ರಾಜನೀತಿ ಧರ್ಮಗಳನ್ನು ತಿಳಿಸಬೇಕು ಎಂಬ ಸದುದ್ದೇಶದಿಂದ ಹೇಳಲಾರಂಭಿಸಿದನು. ಧರ್ಮರಾಜನು ತನಗೆ ಗೊತ್ತಿದ್ದರೂ ಕೂಡ ದೊಡ್ಡವರ ಎದುರು ನನಗೆ ಗೊತ್ತಿದೆ ನೀನೇನು ಹೇಳುವದು ಬೇಡ ಎಂದು ಹೇಳುವ ಔದ್ಧಟ್ಯವು ಸರಿಯಲ್ಲ, ದೊಡ್ಡವರೆದುರು ಗೊತ್ತಿದ್ದರೂ ಗೊತ್ತಿಲ್ಲದಂತಿರುವ ವಿನಯವೇ ಭೂಷಣ ಎಂಬ ಭಾವದಿಂದ ಹೇಳಿದ್ದನ್ನೆಲ್ಲವನ್ನು ಕೇಳಿದನು.

ಅನುಜ್ಞಾಯ ಗೃಹಂ ಪ್ರಾಪ್ತೇ ಧರ್ಮಜೇ ವಿದುರಂ ಪುನಃ ।
ಶ್ರಾದ್ಧಾಯ ವಿತ್ತಮಾಕಾಂಕ್ಷನ್ ಪ್ರೇಷಯಾಮಾಸ ತದ್ವಚಃ ॥೨೮॥

ಶ್ರುತ್ವಾ ಯುಧಿಷ್ಠಿರೋ ಭೀಮಮಾಹ ದಾತವ್ಯಮದ್ಯ ನಃ ।
ಪುತ್ರ ಪೌತ್ರಾಪ್ತ ಬಂಧೂನಾಂ ಶ್ರಾದ್ಧೇಚ್ಛೋರ್ವಿತ್ತಮಂಜಸಾ ॥೨೯॥

ಧರ್ಮಜೇ—ಧರ್ಮರಾಜನು, ಅನುಜ್ಞಾಯ—ಧೃತರಾಷ್ಟ್ರನಿಗೆ ವನವಾಸದ ಅನುಮತಿಯನ್ನಿತ್ತು, ಗೃಹಂ ಪ್ರಾಪ್ತೇ ಸತಿ—ಮನೆಗೆ ಬರುತ್ತಿರಲು, (ಧೃತರಾಷ್ಟ್ರನು) ಶ್ರಾದ್ಧಾಯ—ಶ್ರಾದ್ಧ ಮಾಡುವದಕ್ಕಾಗಿ, ವಿತ್ತಂ ಆಕಾಂಕ್ಷನ್ ಸನ್—ದುಡ್ಡನ್ನು ಅಪೇಕ್ಷಿಸುವವನಾಗಿ, ಪುನಃ—ಮತ್ತೆ, ವಿದುರಂ ಪ್ರೇಷಯಾಮಾಸ—ವಿದುರನನ್ನು ಕಳಿಸಿದನು. ತದ್ವಚಃ—ಆ ವಿದುರರ ಮಾತನ್ನು, ಶ್ರುತ್ವಾ—ಕೇಳಿ, ಯುಧಿಷ್ಠಿರ—ಧರ್ಮರಾಜನು, ಭೀಮಂ—ಭೀಮಸೇನದೇವರನ್ನು ಕುರಿತು, ಪುತ್ರಪೌತ್ರಾಪ್ತಬಂಧೂನಾಂ—ತನ್ನ ಪುತ್ರ ಪೌತ್ರಾದಿ ಆಪ್ತ ಬಂಧುಗಳ, ಶ್ರಾದ್ಧೇಚ್ಛೋಃ—ಶ್ರಾದ್ಧ ಮಾಡಬೇಕೆಂಬ ಇಚ್ಛೆಯುಳ್ಳ ಧೃತರಾಷ್ಟ್ರನಿಗೆ, ವಿತ್ತಂ—ಧನವು, ಅದ್ಯ—ಈಗ, ನಃ—ನಮ್ಮಿಂದ, ಅಂಜಸಾ—ಅವಶ್ಯವಾಗಿ, ದಾತವ್ಯಂ—ಕೊಡಲ್ಪಡಬೇಕು, ಇತಿ—ಎಂದು, ಆಹ—ಹೇಳಿದನು. ॥೨೮-೨೯॥

ತಮಾಹ ಭೀಮಃ ಪಾಪಾನಾಂ ವಿಮುಖಾನಾಂ ಮಧುದ್ವಿಷಃ ।
ಪಾರಲೌಕಿಕಸಾಹಾಯ್ಯಂ ನ ಕಾರ್ಯಮಿತರಾರ್ಥತಃ ।
ದತ್ತೇನಾಪಿ ಹಿ ವಿತ್ತೇನ ಪುತ್ರಶ್ರಾದ್ಧಂ ಕರಿಷ್ಯತಿ ॥೩೦॥

ತಜ್ಜ್ಞಾತ್ವಾ ದದತಾಂ ದೋಷೋ ಭವೇದಿತಿ ವಿಚಿಂತಯನ್ ।
ಕಷ್ಟಾತ್ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ॥೩೧॥

ಭೀಷ್ಮಾದೀನಾಂ ವಯಂ ಶ್ರಾದ್ಧಕರ್ತಾರಸ್ತೇನ ಕಿಂ ತತಃ ।
ಕಾನೀನತ್ವಾತ್ತು ಕರ್ಣಸ್ಯ ಸಹಾಸ್ಮಾಭಿಃ ಪೃಥ್ವೈವ ಹಿ ।
ಶ್ರಾದ್ಧಕರ್ಮಣ್ಯಧಿಕೃತಾ ಕಿಂ ತಸ್ಮೈ ದೀಯತೇ ಧನಂ ॥೩೨॥

ಭೀಮಃ—ಶ್ರೀಭೀಮಸೇನದೇವರು, ತಂ—ಆ ಯುಧಿಷ್ಠಿರನನ್ನು ಕುರಿತು, ಮಧುದ್ವಿಷಃ ವಿಮುಖಾನಾಂ—ಭಗವಂತನಿಗೆ ವಿಮುಖರಾದ, ಪಾಪಾನಾಂ—ಪಾಪಿಗಳಿಗೆ, ಪಾರಲೌಕಿಕ ಸಾಹಾಯ್ಯಂ—ಪರಲೋಕಕ್ಕೆ ಉತ್ತಮಗತಿಗೆ ಸಹಾಯವು, ನ ಕಾರ್ಯಂ—ಮಾಡಲ್ಪಡಬಾರದು. ಇತರಾರ್ಥತಃ—ದುಷ್ಟದುರ್ಯೋಧನಾದಿಗಳನ್ನು ಬಿಟ್ಟು ಭೀಷ್ಮಾದಿ ಬಂಧುಗಳ ಶ್ರಾದ್ಧದ ಉದ್ದೇಶದಿಂದ, ದತ್ತೇನ—ಕೊಡಲ್ಪಟ್ಟ, ವಿತ್ತೇನ ಅಪಿ—ಹಣದಿಂದ ಕೂಡ, ಪುತ್ರಶ್ರಾದ್ಧಂ—ದುಷ್ಟಮಕ್ಕಳ ಶ್ರಾದ್ಧವನ್ನು, ಕರಿಷ್ಯತಿ—ಮಾಡುತ್ತಾನೆ. ತತ್—ಅದನ್ನು, ಜ್ಞಾತ್ವಾ—ತಿಳಿದು, ದದತಾಂ—ಕೊಡತಕ್ಕ ನಮಗೆ, ದೋಷಃ ಭವೇತ್—ದೋಷಕರ-ವಾದೀತು, ದುರ್ಯೋಧನಾದಯಃ ಸರ್ವೇ—ದುರ್ಯೋಧನನೇ ಮೊದಲಾದವರೆಲ್ಲರು, ಕಷ್ಟಾತ್ ಕಷ್ಟತರಂ ಯಾಂತು—ಅತ್ಯಂತ ದುಃಖಕರವಾದ ಲೋಕಕ್ಕೆ ಹೋಗಲಿ, ಇತಿ ವಿಚಿಂತಯನ್ ಭೀಮಃ—ಎಂದು ವಿಚಾರಿಸಿದ ಭೀಮಸೇನರು (ಪಾರಲೌಕಿಕ ಸಾಹಾಯ್ಯವನ್ನು ಅವರಿಗೆ ಮಾಡುವದು ಬೇಡ ಎಂದು ಹೇಳಿದರು.) ಭೀಷ್ಮಾದೀನಾಂ ಶ್ರಾದ್ಧ ಕರ್ತಾರಃ—ಭೀಷ್ಮಾದಿಗಳ ಶ್ರಾದ್ಧಮಾಡುವವರು, ವಯಂ—ನಾವು. ತತಃ—ಆದ್ದರಿಂದ, ತೇನ—ಧೃತರಾಷ್ಟ್ರನಿಂದಾಗಲಿ, ಧೃತರಾಷ್ಟ್ರನಿಗೆ ಕೊಡಬೇಕೆನ್ನುವ ದುಡ್ಡಿನಿಂದಾಗಲಿ, ಕಿಂ—ಏನು ಪ್ರಯೋಜನ ? ಕರ್ಣಸ್ಯ ಕಾನೀನತ್ವಾತ್—ಕರ್ಣನು ನಮ್ಮ ತಾಯಿಯ ಕನ್ಯಾವಸ್ಥೆಯಲ್ಲಿ ಹುಟ್ಟಿದವನಾದ್ದರಿಂದ, ಕರ್ಣಸ್ಯ ಶ್ರಾದ್ಧಕರ್ಮಣಿ—ಕರ್ಣನ ಶ್ರಾದ್ಧಕಾರ್ಯದಲ್ಲಿ, ಪೃಥಾ ಏವ—ಕುಂತೀದೇವಿಯೇ, ಅಸ್ಮಾಭಿಃ ಸಹ—ನಮ್ಮಿಂದ ಕೂಡಿಕೊಂಡು, ಅಧಿಕೃತಾ—ಅಧಿಕಾರವುಳ್ಳವಳು, ಆದ್ದರಿಂದ ತಸ್ಮೈ—ಆ ಧೃತರಾಷ್ಟ್ರನಿಗೆ, ಧನಂ—ಹಣವು, ಕಿಂ ದೀಯತೇ-ಏಕೆ ಕೊಡಲ್ಪಡುತ್ತದೆ ? ॥೩೦-೩೧-೩೨॥

ಇತ್ಯುಕ್ತವಂತಂ ನೃಪತಿರರ್ಜುನಶ್ಚೋಚತುಃ ಪುನಃ ।
ಯಿಯಾಸೋರ್ಯಾಚಮಾ(ನಸ್ಯ)ನಾಯ ನಿಜಬಾಹುಬಲಾರ್ಜಿತಮ್ ।
ದೇಹಿ ವಿತ್ತಂ ಪರಮತಃ ಕಿಂ ತ್ವಾಮೇಷೋಽಭಿಯಾಚತೇ ॥೩೩॥

ಇತಿ ಉಕ್ತವಂತಂ— ಈ ರೀತಿ ಹೇಳಿದಂತಹ ಶ್ರೀಭೀಮರನ್ನು ಕುರಿತು, ನೃಪತಿಃ ಅರ್ಜುನಃ ಚ —

ಧರ್ಮರಾಜನು ಮತ್ತು ಅರ್ಜುನನು, ಯಿಯಾಸೋಃ—ವನಕ್ಕೆ ಹೊರಟಿರುವ, ಯಾಚಮಾ(ನಸ್ಯ)ನಾಯ—ಬೇಡತಕ್ಕ ಧೃತರಾಷ್ಟ್ರನಿಗೆ, ನಿಜಬಾಹುಬಲಾರ್ಜಿತಂ—ಸ್ವಂತ ಬಾಹುಬಲದಿಂದ ಸಂಪಾದಿಸಿದ್ದನ್ನು, ದೇಹಿ—ಕೊಡು, ಅತಃಪರಂ—ಇದರ ನಂತರ, ಏಷಃ—ಈ ಧೃತರಾಷ್ಟ್ರನು, ತ್ವಾಂ— ನಿನ್ನ ಹತ್ತಿರ, ಕಿಂ ಅಭಿಯಾಚತೇ—ಏನನ್ನು ಬೇಡುತ್ತಾನೆ? (ಇನ್ನು ಬೇಡುವ ಪ್ರಸಂಗವೇ ಇಲ್ಲ) ಇತಿ—ಎಂದು, ಪುನಃ ಊಚತುಃ—ಮತ್ತೆ ಹೇಳಿದರು. ॥೩೩॥

ಇತ್ಯುಕ್ತಮಪಿ ನೇತ್ಯೇವ ಬ್ರುವಾಣಂ ಶುದ್ಧಧಾರ್ಮಿಕಮ್ ।
ಅಪ್ರೀತ್ಯಾ ಜೋಷಮಾಸ್ಸ್ವೇತಿ ಪ್ರೋಚ್ಯೋವಾಚ ಯುಧಿಷ್ಠಿರಃ ॥೩೪॥

ಕೋಶತೋ ಯದ್ ಬಹಿರ್ವಿತ್ತಂ ದಾನಭೋಗಾದಿಕಾರಣಮ್ ।
ಮಮ ಸನ್ನಿಹಿತಂ ಸರ್ವಂ ತತ್ ಪಿತ್ರ್ಯೇಽದ್ಯಾರ್ಪಿತಂ ಮಯಾ ॥೩೫॥

ಇತಿ ಉಕ್ತಂ—ಹೀಗೆ ಹೇಳಿಸಿಕೊಳಲ್ಪಟ್ಟ, ಅಪಿ—ಆದರೂ ಕೂಡ, ನ ಇತಿ ಏವ ಬ್ರುವಾಣಂ—ಹಾಗೆ ಮಾಡಕೂಡದು ಎಂದೇ ಹೇಳತಕ್ಕ, ಶುದ್ಧಧಾರ್ಮಿಕಮ್—ಶುದ್ಧಧರ್ಮರತರಾದ, ಶ್ರೀಭೀಮರನ್ನು ಕುರಿತು, ಅಪ್ರೀತ್ಯಾ—ಅಸಮಾಧಾನದಿಂದ, ಯುಧಿಷ್ಠಿರಃ—ಧರ್ಮರಾಜನು, ಜೋಷಂ ಆಸ್ವ—ಸುಮ್ಮನೆಕುಳಿತುಕೋ ಇತಿ—ಎಂದು ಪ್ರೋಚ್ಯ—ಹೇಳಿ, ಕೋಶತಃ—ರಾಜ್ಯಕೋಶಕ್ಕಿಂತ, ಬಹಿಃ—ಹೊರಗೆ, ಯತ್—ಯಾವ, ದಾನ ಭೋಗಾದಿಕಾರಣಂ ವಿತ್ತಂ—ದಾನಧರ್ಮಗಳಿಗೆ ಸ್ವಂತಖರ್ಚಿಗೆ ಬೇಕಾಗುವಹಣವು, ಮಮ ಸನ್ನಿಹಿತಂ—ನನ್ನ ಹತ್ತಿರ

ಇರುವದೋ, ತತ್ ಸರ್ವಂ—ಅದೆಲ್ಲವೂ ಕೂಡ, ಅದ್ಯ—ಇಂದು, ಮಯಾ—ನನ್ನಿಂದ, ಸ್ವಪಿತ್ರೇ—ದೊಡ್ಡಪ್ಪ ಧೃತರಾಷ್ಟ್ರನಿಗೇ, ಅರ್ಪಿತಂ—ಕೊಡಲ್ಪಟ್ಟಿದೆ. ಇತಿ—ಎಂದು ಉವಾಚ—ಹೇಳಿದನು. ॥೩೪-೩೫॥

ಏವಮೇವಾರ್ಜುನೋಽಪ್ಯಾಹ ವಿದುರಂ ಪುನರೂಚತುಃ ।
ಮುಖ್ಯಧರ್ಮರತೇ ಭೀಮೇ ನ ಪಿತಾ ಕ್ರೋದ್ಧುಮರ್ಹತಿ ।
ಇತ್ಯುಕ್ತೋ ವಿತ್ತಮಾದಾಯ ಗತ್ವಾ ಕ್ಷತ್ತಾಽಗ್ರಜೇಽಬ್ರವೀತ್ ॥೩೬॥

ಏವಂ ಏವ—ಶ್ರೀಧರ್ಮರಾಜನು ಹೇಳಿದಂತೆಯೇ, ಅರ್ಜುನಃಅಪಿ—ಅರ್ಜುನನೂ ಕೂಡ, ಆಹ—ಹೇಳಿದನು, ಪುನಃ—ಮತ್ತೆ, ವಿದುರಂ—ವಿದುರರನ್ನು ಕುರಿತು, ಮುಖ್ಯಧರ್ಮರತೇ—ಶ್ರೇಷ್ಠ ಶುದ್ಧ ಭಾಗವತ ಧರ್ಮರತರಾದ, (ಆದ್ದರಿಂದಲೇ ದೊಡ್ಡನ್ನ ದೊಡ್ಡಪ್ಪನಿಗೆ ಕೊಡದಿರುವ) ಭೀಮೇ—ಭೀಮಸೇನರ ಬಗ್ಗೆ ಪಿತಾ—ದೊಡ್ಡಪ್ಪನು, ಕ್ರೋಧ್ದುಂ—ಸಿಟ್ಟುಮಾಡಲು, ನ ಅರ್ಹತಿ—ಯೋಗ್ಯವಲ್ಲ. ಇತಿ—ಎಂದು, ಊಚತುಃ—ಧರ್ಮಾರ್ಜುನರು ಹೇಳಿದರು. ಇತಿ ಉಕ್ತಃ—ಈ ರೀತಿ ಹೇಳಿಸಿಕೊಳ್ಳಲ್ಪಟ್ಟ, ಕ್ಷತ್ತಾ—ವಿದುರರು, ವಿತ್ತಂ ಆದಾಯ—ದುಡ ಮ್ನು ತೆಗೆದುಕೊಂಡು, ಗತ್ವಾ—ಅಣ್ಣನ ಹತ್ತಿರ ಹೋಗಿ, ಅಗ್ರಜೇ—ಅಣ್ಣನ ಹತ್ತಿರ, ಅಬ್ರವೀತ್—ಹೇಳಿದರು. ॥೩೬॥

ಯುಧಿಷ್ಠಿರಾರ್ಜುನೌ ಭಕ್ತಿಂ ನಿತರಾಂ ತ್ವಯಿ ಚಕ್ರತುಃ ।
ನಾತಿಹೃಷ್ಟಸ್ತ್ವದಾಜ್ಞಾಯಾಂ ಭೀಮಸ್ತನ್ಮಾ ಕ್ರುಧೋಽತ್ರಚ ॥೩೭॥
ಶುದ್ಧೇಕ್ಷತ್ರಿಯಧರ್ಮೇ ಹಿ ನಿರತೋಽಯಂ ವೃಕೋದರಃ
ನೃಪಾರ್ಜುನೌ ಧರ್ಮರತಾವಪಿ ಲೋಕಕೃಪಾಪರೌ ॥೩೮॥

(ಎಲೋ ಅಣ್ಣ ಧೃತರಾಷ್ಟ್ರನೇ,) ಯುಧಿಷ್ಠಿರಾರ್ಜುನೌ — ಧರ್ಮಾರ್ಜುನರಿಬ್ಬರೂ, ತ್ವಯಿ—ನಿನ್ನಲ್ಲಿ, ಭಕ್ತಿಂ— ಭಕ್ತಿಯನ್ನು, ನಿತರಾಂ ಚಕ್ರತುಃ — ಬಹುವಾಗಿ ಮಾಡಿದರು. ಭೀಮಃ ಚ — ಭೀಮಸೇನನು ಮಾತ್ರ, ತ್ವದಾಜ್ಞಾಯಾಂ - ನಿನ್ನ ಅಪ್ಪಣೆಯ (ಧನವನ್ನು ತರಹೇಳಿದ ಸುದ್ದಿಯ) ಬಗ್ಗೆ, ನ ಅತಿಹೃಷ್ಟಃ— ಅಷ್ಟೊಂದು ಸಂತುಷ್ಟನಾಗಿಲ್ಲ; ಹಿ - ಯಾವ ಕಾರಣದಿಂದ, ಅಯಂ ವೃಕೋದರಃ— ಈ ಭೀಮಸೇನನು, ಶುದ್ಧೇಕ್ಷತ್ರಿಯಧರ್ಮೇ ನಿರತಃ— ಶುದ್ಧ ಕ್ಷತ್ರಿಯ ಧರ್ಮದಲ್ಲಿ ತೊಡಗಿದವನೋ, ತತ್— ಆ ಕಾರಣದಿಂದ, ಅತ್ರ–ಅಂಥ ಈ ಭೀಮಸೇನನಲ್ಲಿ, ಮಾ ಕ್ರುಧಃ —ಸಿಟ್ಟು ಮಾಡಿಕೊಳ್ಳಬೇಡ, ನೃಪಾರ್ಜುನೌ ಅಪಿ— ಧರ್ಮರಾಜ-ಅರ್ಜುನರೂ ಕೂಡ, ಧರ್ಮರತೌ ಅಪಿ—ಕ್ಷತ್ರಿಯ ಧರ್ಮದಲ್ಲಿ ಆಸಕ್ತರಾದರೂ ಕೂಡ, ಲೋಕಕೃಪಾಪರೌ—ಲೋಕದಯಾಪರರಾದವರು (ಎಂದು ವಿದುರರು ಧೃತರಾಷ್ಟ್ರನಿಗೆ ಹೇಳಿದರು. ಎಂದು ಅನ್ವಯ.) ॥೩೭-೩೮॥

ಅಜಾತಕೋಪಸ್ತಚ್ಛ್ರುತ್ವಾ ಧೃತರಾಷ್ಟ್ರಃ ಪ್ರಶಾಂತಧೀಃ ।
ಕೃತ್ವಾ ಶ್ರಾದ್ಧಾನಿ ಸರ್ವೇಷಾಂ ಮಹಾದಾನಾನ್ಯನಾರತಮ್।
ದಶರಾತ್ರಂ ದದೌ ಶುದ್ಧಮನಸಾ ನಿರ್ಋಣತ್ವಧೀಃ ॥೩೯॥

ಧೃತರಾಷ್ಟ್ರಃ—ಧೃತರಾಷ್ಟ್ರನು, ತತ್ ಶ್ರುತ್ವಾ—ವಿದುರರು ಹೇಳಿದ ಆ ಮಾತನ್ನು ಕೇಳಿ, ಅಜಾತಕೋಪಃ ಸನ್—ಸಿಟ್ಟನ್ನು ಮಾಡದವನಾಗಿ, ಪ್ರಶಾಂತಧೀಃ ಸನ್—ಶಾಂತಮನಸ್ಕನಾಗಿ, ಸರ್ವೇಷಾಂ—ಮೃತರಾದ ತನ್ನ ಬಂಧುಗಳೆಲ್ಲರ, ನಿರ್ಋಣತ್ವಧೀಃ ಸನ್—ಋಣಪರಿಹಾರಮಾಡಿಕೊಳ್ಳುವ ಇಚ್ಛೆಯುಳ್ಳವನಾಗಿ, ಅನಾರತಂ—ದಶರಾತ್ರಂ—ಹತ್ತುದಿನಗಳಲ್ಲಿ, ನಿರಂತರವಾಗಿ, ಶುದ್ಧಮನಸಾ—ಶುದ್ಧ ಮನಸ್ಸಿನಿಂದ; ಶ್ರಾದ್ಧಾನಿ ಕೃತ್ವಾ—ಶ್ರಾದ್ಧ ಮಾಡಿ, ಮಹಾದಾನಾನಿ ದದೌ—ಬಹುದಾನಗಳನ್ನು ಕೊಟ್ಟನು. ॥೩೯॥

ಸರ್ವಂ ಸಮುಪ್ಯ ಗೋವಿಂದೇ ಪಾರ್ಥೇಭ್ಯೋಽನ್ಯೇಭ್ಯ ಏವ ಚ ।
ಸ್ವಜನೇಭ್ಯಃ ಸಮಾದಾಯ ಸ್ರವನ್ನೇತ್ರೇಭ್ಯ ಉಚ್ಚಧೀಃ ।
ಅನುಜ್ಞಾಂ ನಿರ್ಗತಃ ಪ್ರಾಹ ಪೌರಜಾನಪದಾನ್ ನೃಪಃ ॥೪೦॥

ಉಚ್ಚಧೀಃ—ಶುದ್ಧ ಬುದ್ಧಿಯುಳ್ಳವನಾದ, ನೃಪಃ—(ಧೃತರಾಷ್ಟ್ರನು), ಸರ್ವಂ—ತಾನು ಶುದ್ಧ ಮನಸ್ಸಿನಿಂದ ಮಾಡಿದ ಎಲ್ಲ ಕರ್ಮಗಳನ್ನು, ಗೋವಿಂದೇ—ಶ್ರೀಕೃಷ್ಣನಿಗೆ, ಸಮರ್ಪ್ಯ—ಸಮರ್ಪಿಸಿ, ಸ್ರವನ್ನೇತ್ರೇಭ್ಯ:—ಕಣ್ಣೀರು ಸುರಿಸುತ್ತಿರುವ ಪಾರ್ಥೇಭ್ಯ: ಏವ—ಪಾಂಡವರ ದೆಶೆಯಿಂದಲೇ ಅನ್ಯೇಭ್ಯ: ಸ್ವಜನೇಭ್ಯ:ಚ—ಬೇರೆಬಂಧುಜನರಿಂದಲೂ ಕೂಡ, ಅನುಜ್ಞಾಂ—ಅಪ್ಪಣೆಯನ್ನು, ಸಮಾದಾಯ—ತೆಗೆದುಕೊಂಡು, ನಿರ್ಗತ:ಸನ್—ಹೊರಟವನಾಗಿ, ಪೌರಜಾನಪದಾನ್—ಊರ ರಾಷ್ಟ್ರಜನರನ್ನು ಕುರಿತು, ಪ್ರಾಹ—ಹೇಳಿದನು. ॥೪೦॥

ಧರ್ಮತೋ ರಕ್ಷಿತಾ ಯೂಯಮಸ್ಮತ್ಪೂರ್ವೈರ್ಮಹಾತ್ಮಭಿಃ ।
ನಚಾಹಂ ಪರಮಸ್ನೇಹಾದ್ ಯುಷ್ಮಾಭಿಃ ಸುಕೃಪಾಲುಭಿಃ ।
ಅರಕ್ಷಿತೇತಿ ಕಥಿತಃ ಪ್ರಮಾದಾದಪಿ ಸಜ್ಜನಾಃ ॥೪೧॥

ಹೇ ಸಜ್ಜನಾ:—ಎಲೋಸತ್ಪ್ರಜೆಗಳೇ, ಅಸ್ಮತ್ಪೂರ್ವೈ:ಮಹಾತ್ಮಭಿ:—ನಮ್ಮ ಪೂರ್ವಜರಾದ ಮಹಾತ್ಮರಾದ ರಾಜರಿಂದ, ಯೂಯಂ—ನೀವು, ಧರ್ಮತಃರಕ್ಷಿತಾ:—ಧರ್ಮದಿಂದ ರಕ್ಷಿಸಲ್ಪಟ್ಟಿರುವಿರಿ, ಅಹಂ ನಚ—ನಾನು ಮಾತ್ರ ಹಾಗೆ ರಕ್ಷಿಸಲಿಲ್ಲ. (ಆದರೆ) ಪರಮಸ್ನೇಹಾತ್—ನಿಮಗೆ ನನ್ನಲ್ಲಿ ಪರಮಸ್ನೇಹವಿದ್ದದ್ದರಿಂದ, ಸುಕೃಪಾಲುಭಿಃ—ಅತ್ಯಂತ ದಯಾಳುಗಳಾದ, ಯುಷ್ಮಾಭಿಃ—ನಿಮ್ಮಿಂದ, ಪ್ರಮಾದಾತ್ಅಪಿ—ವಿಸ್ಮರಣೆಯಿಂದಲೂ ಅಜ್ಞಾನದಿಂದಲೂ, ಅರಕ್ಷಿತಾ ಇತಿ—(ಧೃತರಾಷ್ಟ್ರನು ರಕ್ಷಿಸಲಿಲ್ಲ ಎಂದು) ನೀನು ರಕ್ಷಕನಾಗಲಿಲ್ಲ ಎಂದು, ನ ಕಥಿತ:—ಹೇಳಲ್ಪಡಲಿಲ್ಲ. ॥೪೧॥

ಇಷ್ಟಂ ಚ ಯಜ್ಞೈಃ ಪೂರ್ತೈಶ್ಚ ಚರಿತಂ ಯುಷ್ಮದಾಶ್ರಯಾತ್ ।
ಪುತ್ರಸ್ತು ಮಮ ಪಾಪಾತ್ಮಾ ಸರ್ವಕ್ಷತ್ರವಿನಾಶಕಃ ।
ಸರ್ವಾತಿಶಂಕೀ ಮೂಢಶ್ಚ ವೃದ್ಧಾನಾಂ ಶಾಸನಾತಿಗಃ ॥೪೨॥

ಯುಷ್ಮದಾಶ್ರಯಾತ್—ನಿಮ್ಮ ಸಹಕಾರದಿಂದ, ಯಜ್ಞೈಃಇಷ್ಟಂ—ಯಜ್ಞಗಳಿಂದ ಭಗವದಾರಾಧನೆಯು ಮಾಡಲ್ಪಟ್ಟಿತು. ಚ—ಹಾಗು, ಪೂರ್ತೈ:ಚರಿತಂ—ಭಾವಿ, ಕೆರೆ ನಿರ್ಮಾಣ, ಅನ್ನಛತ್ರಾದಿಕಾರ್ಯಗಳು ಮಾಡಲ್ಪಟ್ಟವು. ಮಮ ಪುತ್ರಃ ತು—ನನ್ನ ಮಗನಾದ ದುರ್ಯೋಧನನು ತು:ಮಾತ್ರ, ಪಾಪಾತ್ಮಾ—ಮಹಾಪಾಪಿಯು, ಸರ್ವಕ್ಷತ್ರವಿನಾಶಕಃ—ಎಲ್ಲಕ್ಷತ್ರನಾಶಕ್ಕೆಕಾರಣನು, ಸರ್ವಾತಿಶಂಕೀ—ಎಲ್ಲರ ಬಗ್ಗೆಯೂ ಸಂಶಯಮಾಡುವವನು, ಮೂಢ:—ಮೂರ್ಖನು, ವೃದ್ಧಾನಾಂ—ಶಾಸನಾತಿಗ:—ಹಿರಿಯರ ಮಾತನ್ನು ಮೀರಿನಡೆದವನು. ॥೪೨॥

ಸೌಭ್ರಾತ್ರಂ ಯೇನ ಸಂತ್ಯಜ್ಯ ಪಾಂಡವೇಷು ಮಹಾತ್ಮಸು ।
ಕೃತಂ ವಿರೂಪಂ ಸುಮಹತ್ ಕುರ್ಯಾದ್ ಯನ್ನಾಪರಃ ಕ್ವಚಿತ್ ॥೪೩॥

ಯೇನ—ಯಾವನನ್ನಮಗನಿಂದ, ಸೌಭ್ರಾತ್ರಂ—ಭ್ರಾತೃಸ್ನೇಹವನ್ನು, ಸಂತ್ಯಜ್ಯ — ಬಿಟ್ಟು, ಯತ್—ಯಾವವನ್ನು, ಅಪರ:—ಬೇರೆಯಾವನೂ, ಕ್ವಚಿತ್—ಎಂದೂ, ನ ಕುರ್ಯಾತ್—ಮಾಡಲಾರನೊ, ತತ್—

ಅಂಥ, ಸುಮಹತ್ ವಿರೂಪಂ—ಬಹಳವಾದ ವಿರೋಧವು, ಮಹಾತ್ಮಸು ಪಾಂಡವೇಷು—ಮಹಾತ್ಮರಾದಪಾಂಡವರ ಬಗೆ, ಕೃತಂ—ಮಾಡಲ್ಪಟ್ಟಿತಂ. ॥ ೪೩ ॥

ಅಪ್ರಿಯಾಣಿ ಚ ಕೃಷ್ಣಸ್ಯ ಸುಬಹೂನ್ಯಾಚರತ್ ಕುಧೀಃ ।
ಸ್ಯಾಯುಸ್ತೇನಾಪಿ ಮಂದೇನ ನ ಯುಷ್ಮಾಸುಶಿವಂ ಕೃತವ್ ೪೪॥

ಚ—ಮತ್ತು, ಕುಧೀಃ—ಕುಬುದ್ಧಿಯಾದ, ಆ ದುರ್ಯೋಧನನು, ಕೃಷ್ಣಸ್ಯ ಚ—ಕೃಷ್ಣನಿಗೂಕೂಡ, ಸುಬಹೂನಿ ಅಪ್ರಿಯಾಣಿ—ಬಹಳವಾದ ಅಪ್ರಿಯಕಾರ್ಯಗಳನ್ನು, ಆಚರತ್—ಮಾಡಿದನು. ತೇನ ಮಂದೇನ—ಮೂರ್ಖನಾದ ಆ ನನ್ನ ಮಗನಿಂದ, ಪ್ರಾಯಃ—ಬಹುಶಃ, ಯುಷ್ಮಾಸು—ನಿಮ್ಮಬಗ್ಗೆಯೂಕೂಡ, ಶಿವಂ ನ ಕೃತಂ—ಒಳ್ಳೆಯದು ಮಾಡಲ್ಪಟ್ಟಿಲ್ಲ. ॥ ೪೪ ॥

ಭ್ರಾತರೋಽಸ್ಯ ಚ ಸರ್ವೇಽಪಿ ತಚ್ಛೀಲಮನುವರ್ತಿನಃ ।
ಹತಾಶ್ಚ ಸ್ವೇನ ಪಾಪೇನ ಸಸುತಾಮಾತ್ಯಬಾಂಧವಾಃ ॥೪೫॥

ತಚ್ಛೀಲಂ ಅನುವರ್ತಿನಃ—ಅವನ ನಡತೆಯನ್ನೇ ಅನುಸರಿಸಿಕೊಂಡುನಡೆದ, ಅಸ್ಯಸರ್ವೇ ಭ್ರಾತರಃ ಅಪಿ—ಈ ದುರ್ಯೋಧನನ ಎಲ್ಲ ಸಹೋದರರೂ ಕೂಡಾ, ಸ್ವೇನ ಪಾಪೇನ ಚ—ತಮ್ಮ ಪಾಪದಿಂದಲೇ, ಸಸುತಾಮಾತ್ಯ ಬಾಂಧವಾಃಸಂತಃ—ಮಕ್ಕಳುಮಂತ್ರಿಬಾಂಧವರಿಂದಸಹಿತರಾಗಿ, ಹತಾಃ—ಸಂಹೃತರಾದರು. ॥ ೪೫ ॥

ಸೋಽಹಂ ವಯೋಗತಶ್ಚೈವ ಪುತ್ರಾದಿಭಿರಭಿಪ್ಲುತಃ ।
ತತ್ಸಂಬಂಧಕೃತಂ ಪಾಪಂ ಸ್ವಕೃತಂ ಚಾತ್ಯಪೇಶಲಮ್ ।
ಪಾಂಡವೇಷು ಸಕೃಷ್ಣೇಷು ತಪಸಾ ಮಾಷ್ಟುಮುದ್ಯತಃ ॥೪೬॥

ಸಃ ಅಹಂ—ಅಂಥನಾನು, ಪುತ್ರಾದಿಭಿಃ ಅಭಿಪ್ಲುತಃ—ಮಕ್ಕಳುಮೊದಲಾದ ಬಂಧುಗಳಿಂದ ಅವರ ಸಂಪರ್ಕದಿಂದ ಅನ್ಯಾಯಮಾರ್ಗದಲ್ಲಿ ಬಿದ್ದೆನು, ವಯೋಗತಃ ಚ—ವಯಸ್ಸಾದವನೂ ಆಗಿರುವೆನು. (ಆದ್ದರಿಂದ) ತತ್ಸಂಬಂಧಕೃತಂ—ಆ ದುಷ್ಟಪರಿವಾರಸಂಬಂಧದಿಂದ ಮಾಡಲ್ಪಟ್ಟ, ಚ—ಮತ್ತು, ಸ್ವಕೃತಂ—ಸ್ವತಃ ಮಾಡಿದ, ಸಕೃಷ್ಣೇಷು ಪಾಂಡವೇಷ—ಶ್ರೀಕೃಷ್ಣನಿಂದಸಹಿತರಾದ ಪಾಂಡವರಬಗ್ಗೆ, ಅತ್ಯಪೇಶಲಂ—ಅತಿಕ್ರೂರ ನೀಚಕಾರ್ಯವನ್ನು. ಅದರಪ್ರಯುಕ್ತ ಬಂದ ಪಾಪವನ್ನು ತಪಸಾ ಮಾಷ್ಟುಂ ಏವ—ತಪಸ್ಸಿನಿಂದ, ತೊಳೆದುಕೊಳ್ಳುವದಕ್ಕಾಗಿಯೇ, ಉದ್ಯತಃ—ತೊಡಗಿರುವೆನು. ॥ ೪೬ ॥

ತತ್ರ ಮಾಮನುಜಾನೀಧ್ವಂ ಕೃಪಯಾ ಮಿತ್ರವತ್ಸಲಾಃ ।
ಮತ್ಪ್ರಿಯಾರ್ಥಮಪಿ ಸ್ನೇಹಃ ಪಾಂಡವೇಷು ಮಹಾತ್ಮಸು ॥೪೭॥

ಕ್ರಿಯಮಾಣೋಽಪಿ ಕರ್ತವ್ಯೋ ಭೂಯ ಏವ ಸದಾಽಚಲಃ ।
ತೇ ಹಿ ನೋ ಪುತ್ರಕಾಃ ಸಂತ ಇಹಾಮುತ್ರ ಚ ಸೌಖ್ಯದಾಃ ॥೪೮॥

ಮಿತ್ರವತ್ಸಲಾಃ—ಮಿತ್ರನಂತೆಸ್ನೇಹಮಾಡುವಪ್ರಜೆಗಳೇ, ತತ್ರ—ಆ ತಪಃಕಾರ್ಯದಲ್ಲಿ, ಕೃಪಯಾ—ದಯಮಾಡಿ, ಮಾಂ ಅನುಜಾನೀಧ್ವಂ—ನನ್ನನ್ನು ಅನುಮತಿಸಿರಿ. ಮಹಾತ್ಮಸು ಪಾಂಡವೇಷು—ಮಹಾತ್ಮರಾದ

ಪಾಂಡವರಬಗ್ಗೆ, ಕ್ರಿಯಮಾಣಃ—ನಿಮ್ಮಿಂದ ಸ್ವಾಭಾವಿಕವಾಗಿ ಮಾಡಲ್ಪಡುತ್ತಲೇಇರುವ, ಸ್ನೇಹಃ—ಪ್ರೇಮವು, ಮತ್‌ಪ್ರಿಯಾರ್ಥಂಅಪಿ–ನನ್ನ ಸಂತೋಷಕ್ಕಾಗಿಕೂಡ,ಭೂಯಃ:–ಇನ್ನುಹೆಚ್ಚಾಗಿ, ಅಚಲಃಸ್ನೇಹ;–ದೃಢವಾದ ಸ್ನೇಹವು, ಸದಾಅಪಿ—ಯಾವಾಗಲೂ ಕೂಡ, ಕರ್ತವ್ಯಃ—ಮಾಡಲ್ಪಡಬೇಕು, ಹಿ—ಏಕೆಂದರೆ, ತೇ—ಆ ಪಾಂಡವರೇ, ಮೇ—ನನಗೆ, ಸಂತಃ ಪುತ್ರಕಾಃ—ಸತ್ಪುತ್ರರು, ಇಹ ಅಮುತ್ರ ಚ ಸೌಖ್ಯದಾಃ—ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಸೌಖ್ಯವನ್ನುಂಟುಮಾಡುವವರು. ॥ ೪೭—೪೮ ॥

ಇತ್ಯುಕ್ತೈಃ ಸ್ವಗುಣಾನುಚ್ಚೈಃ ಕೀರ್ತಯದ್ಭಿಃ ಸುದುಃಖಿತೈಃ ।
ಪರ್ಯಶ್ರುನಯನೈಃ ಕೃಚ್ಛ್ರಾತ್ ಪೌರಜಾನಪದೈಶ್ಚಿರಾತ್ ।
ಅನುಜ್ಞಾತೋ ಯಯೌ ಪಾರ್ಥೈರನುಯಾತಃ ಸುದೂರತಃ ॥೪೯॥

ಇತಿ ಉಕ್ತೈಃ:—ಈ ರೀತಿ ಹೇಳಲ್ಪಟ್ಟ, ಸ್ವಗುಣಾನ್—ತನ್ನಲ್ಲಿರುವ (ಧೃತರಾಷ್ಟ್ರನಲ್ಲಿರುವ) ಗುಣಗಳನ್ನು, ಉಚ್ಚೈಃ:—ಗಟ್ಟಿಯಾಗಿ, ಕೀರ್ತಯದ್ಭಿಃ:—ಪ್ರಶಂಸಿಸತಕ್ಕ, ಸುದುಃಖಿತೈಃ —(ಧೃತರಾಷ್ಟ್ರನವನಗಮನದಿಂದ) ಬಹು ದುಃಖವನ್ನು ಹೊಂದಿದ, ಪರ್ಯಶ್ರುನಯನೈಃ:—ಬಹುಕಣ್ಣೀರು ಸುರಿಸುತ್ತಿರುವ, ಪೌರಜಾನಪದೈಃ:—ಊರರಾಷ್ಟ್ರಪ್ರಜೆಗಳಿಂದ, ಕೃಚ್ಛ್ರಾತ್–ಕಷ್ಟದಿಂದ; ಚಿರಾತ್–ಬಹುಹೊತ್ತಿನ ಮೇಲೆ, ಅನುಜ್ಞಾತಃ:–ಅನುಮತಿಸಲ್ಪಟ್ಟ ಧೃತರಾಷ್ಟ್ರನು, ಪಾರ್ಥೈಃ:—ಪಾಂಡವರಿಂದ, ಸುದೂರತಃ ಅನುಯಾತಃ ಸನ್–ಬಹುದೂರದವರೆಗೆ ಅನುಸರಿಸಲ್ಪಟ್ಟವನಾಗಿ, ಯಯೌ—ಹೋದನು. ॥೪೯॥

ಭಾವಾನುವಾದ ೨೮—೪೯

ಧೃತರಾಷ್ಟ್ರನಿಗೆ ಸಮ್ಮತಿಯನ್ನಿತ್ತು ಧರ್ಮರಾಜನು ಮನೆಗೆ ಹೋದನು. ಆಗ ಧೃತರಾಷ್ಟ್ರನು ತನ್ನ ಪುತ್ರಾದಿಗಳ ಶ್ರಾದ್ಧಾದಿಕಾರ್ಯಗಳನ್ನು ಮಾಡಲು ಧನಬೇಕೆಂದು ವಿಚಾರಿಸಿ ಅದನ್ನು ಕೇಳಲೆಂದು ವಿದುರನನ್ನು ಕಳಿಸಿದನು. ವಿದುರರು ಬಂದು ಧರ್ಮರಾಜನ ಹತ್ತಿರ ಕೇಳಿದರು. ಆ ಮಾತನ್ನು ಕೇಳಿದ ಧರ್ಮರಾಜನು ಭೀಮಸೇನರಿಗೆ "ಪುತ್ರಪೌತ್ರಾದಿ ಬಾಂಧವರ ಶ್ರಾದ್ಧ ಮಾಡಲಿಚ್ಛಿಸುವ ದೊಡ್ಡಪ್ಪನಿಗೆ ದುಡ್ಡನ್ನು ಅವಶ್ಯವಾಗಿ ಕೊಡಬೇಕಲ್ಲವೇ ? ಕೊಡು" ಎಂದು ಹೇಳಿದರು ಆಗ ಭೀಮರು ಶ್ರೀಕೃಷ್ಣವಿಮುಖರಾದ, ಆ ಪಾಪಿ ದುರ್ಯೋಧನಾದಿಗಳಿಗೆ ಪರಲೋಕ. ಸುಖವು ಸಿಗುವಂತೆ ಅದಕ್ಕೆ ಅನುಕೂಲ,ಸಹಾಯಗಳನ್ನು ನಾವು ಮಾಡಕೂಡದು.ಇನ್ನು ಬೇರೆಯವರ ಶ್ರಾದ್ಧ ಮಾಡಲು ಕೊಡಬೇಕು ಎಂದು ನಿನ್ನ ಅಭಿಪ್ರಾಯವಾದರೂ ಬೇರೆಯವರಿಗೆ ಎಂದು ನಾವು ದುಡ್ಡು ಕೊಟ್ಟರೂ ಅವನು ಅದರಿಂದ ಮಕ್ಕಳ ಶ್ರಾದ್ಧವನ್ನು ಮಾಡುವನು. ಅದು ಗೊತ್ತಿದ್ದೂ ನಾವು ದುಡ್ಡನ್ನು ಕೊಟ್ಟರೆ ನಮಗೆ ದೋಷವಾಗುತ್ತದೆ. ಆ ನೀಚ ದುರ್ಯೋಧನಾದಿಗಳು ಅತಿನೀಚವಾದ ಲೋಕಗಳಿಗೇ ಹೋಗುವಂತಾಗಲಿ. ಭೀಷ್ಮಾದಿಗಳ ಶ್ರಾದ್ಧವನ್ನು ಮಾಡಲು ನಾವಿದ್ದೇವೆ. ಆ ಧೃತರಾಷ್ಟ್ರನಿಂದಾಗಬೇಕಾದದ್ದೇನು ? ಕರ್ಣನಾದರೋ ನಮ್ಮ ತಾಯಿ ಕನ್ಯೆಯಾಗಿದ್ದಾಗ ಹುಟ್ಟಿದವನಾದ್ದರಿಂದ ಅವನ ಶ್ರಾದ್ಧವನ್ನು ಮಾಡಲು ನಾವು ಮತ್ತು ನಮ್ಮತಾಯಿಯು ಅಧಿಕೃತರು, ಆದ್ದರಿಂದ ಆ ಧೃತರಾಷ್ಟ್ರನಿಗೇಕೆ ದುಡ್ಡನ್ನು ಕೊಡಬೇಕು ? ಎಂದು ಹೇಳಿದರು. ಆಗ ಧರ್ಮರಾಜ ಹಾಗು ಅರ್ಜುನರಿಬ್ಬರೂ 'ರಾಜ್ಯ ಕೋಶಧನವನ್ನು ಕೊಡುವದು ಬೇಡ, ಸ್ವಂತ ಬಾಹುಬಲದಿಂದ ಸಂಪಾದಿಸಿದ್ದನ್ನಾದರೂ ಕೊಡು; ಈಗ ವನಕ್ಕೆ ಹೋದ ಮೇಲೆ ಇನ್ನೆಂದು ಕೇಳುವನು ? ಕೇಳುವಂತಿಲ್ಲವೇ ಇಲ್ಲ. ಆದ್ದರಿಂದ ವನಕ್ಕೆ ಹೊರಟಿರುವ, ಕೇಳುತ್ತಿರುವ ಅವನಿಗೆ ಕೊಡು " ಎಂದು ಹೇಳಿದರು. ಆದರೆ ಅದಕ್ಕೂ ಭೀಮರು ಸಮ್ಮತಿಸದೇ ಇರುವಾಗ ಶುದ್ಧ ಧರ್ಮರತರಾದ ಭೀಮರ ಬಗ್ಗೆ ಧರ್ಮರಾಜನು ಅಸಮಾಧಾನದಿಂದ 'ಸುಮ್ಮನೇ ಕೂತುಕೋ'ಎಂದು ಹೇಳಿ ಕೋಶವ ಹೊರಗಿರುವ, ದಾನ ಧರ್ಮಾದಿಗಳನ್ನು ಮಾಡಲು ಎಂದು ನನ್ನ ಹತ್ತಿರವಿರುವ ಧನವೇನಿದೆಯೋ ಅದೆಲ್ಲವನ್ನು ನಾನು ದೊಡ್ಡಪ್ಪನಿಗೆ ಕೊಟ್ಟಿದ್ದೇನೆ ಎಂದು ಹೇಳಿದನು. ಅರ್ಜುನನೂಕೂಡ ಹಾಗೆ ಹೇಳಿದನು. ಅವರಿಬ್ಬರೂ ಅಷ್ಟು ಹೇಳಿ ವಿದುರರನ್ನು

ಕುರಿತು " ಶುದ್ಧ ಧಾರ್ಮಿಕನಾದ ನಮ್ಮ ಭೀಮಸೇನದೇವರ ಬಗ್ಗೆ ದೊಡ್ಡಪ್ಪನು ಅನ್ಯಥಾ ಭಾವಿಸುವದು, ಸಿಟ್ಟು ಮಾಡುವದು ಬೇಡ ಎಂದು ಹೇಳಿದರು. ಆಗ ವಿದುರರು ಅವರು ಕೊಟ್ಟ ಧನವನ್ನು ತೆಗೆದುಕೊಂಡು ಧೃತರಾಷ್ಟ್ರ ರಾಜನ ಹತ್ತಿರ ಹೋಗಿ ಕೊಟ್ಟು "ಧರ್ಮರಾಜ ಅರ್ಜುನರಿಬ್ಬರೂ ನಿನ್ನಲ್ಲಿ ಬಹಳ ವಿಶ್ವಾಸ ಗೌರವವನ್ನು ಮಾಡಿದರು: ಭೀಮನು ಮಾತ್ರ ನಿನ್ನ ಮಾತಿನ ಬಗ್ಗೆ ಗೌರವವನ್ನು ತೋರಲಿಲ್ಲ. ಹಾಗಂದ ಮಾತ್ರಕ್ಕೆ ಅವನ ಮೇಲೆ ಸಿಟ್ಟಿಗೇಳ ಬೇಡ ಏಕೆಂದರೆ ಅವನು ಶುದ್ಧ ಧರ್ಮಾಚರಣೆಯುಳ್ಳವನು. ಚಾಚೂ ತಪ್ಪದೇ ಭಾಗವತ ಧರ್ಮವನ್ನು ನಡಿಸಿಕೊಂಡು ಬಂದವನು. ಧರ್ಮರಾಜ ಅರ್ಜುನರೂ ಧರ್ಮರತರಾದರೂ ಲೌಕಿಕ ದಯಾದಿಗಳಿಗೆ ಒಳಗಾಗಿ ಒಪ್ಪೊಮ್ಮೆ ತಮ್ಮ ಧರ್ಮವನ್ನು ಕಟ್ಟು ನಿಟ್ಟಾಗಿ ಆಚರಿಸಲಾರದೇ ಸಡಿಲು ಮಾಡಿಕೊಳ್ಳುವರು," ಎಂದು ಹೇಳಿದರು. ಅದನ್ನು ಕೇಳಿದ ಧೃತರಾಷ್ಟ್ರರಾಜನು ಕೋಪಮಾಡದೇ,ಶಾಂತಮನಸ್ಕನಾಗಿಯೇ ಎಲ್ಲ ಮೃತ ಬಂಧುಗಳ ಋಣ ಪರಿಹರಿಸಿಕೊಳ್ಳಬೇಕೆಂಬ ಇಚ್ಛೆಯಿಂದ ಅವರೆಲ್ಲರ ಶ್ರಾದ್ಧಗಳನ್ನು, ಅವರಗತಿಗಾಗಿ ಬಹುದಾನಗಳನ್ನು ಹತ್ತು ದಿನಗಳವರೆಗೆ ನಿರಂತರವಾಗಿ ಮಾಡಿದನು. ಅಷ್ಟು ಮಾಡಿದ್ದನ್ನೆಲ್ಲ ಶ್ರೀ ಹರಿಗೆ ಸಮರ್ಪಿಸಿದನು ಕಣ್ಣೀರಿಡತಕ್ಕ ಪಾಂಡವರು ಹಾಗು ಇತರ ಬಾಂಧವರಿಂದ ವನಗಮನಕ್ಕೆ ಅನುಜ್ಞೆಯನ್ನು ಪಡೆದು ಹೊರಡಲುದ್ಯುಕ್ತನಾಗಿ, ಪ್ರಜೆಗಳನ್ನು ಕುರಿತು ಪ್ರಜೆಗಳೇ ನಮ್ಮ ಹಿಂದಿನವರು ನಿಮ್ಮನ್ನು ಧರ್ಮದಿಂದ ರಕ್ಷಿಸಿರುತ್ತಾರೆ, ನಾನು ಮಾತ್ರ ಹಾಗೆ ರಕ್ಷಿಸಲಿಲ್ಲ. ಆದರೆ ದಯಾಳು ಗಳಾದ ನೀವು ನನಗೆ ಹಾಗೆಂದೂ (ನೀನು ಚೆನ್ನಾಗಿ ರಕ್ಷಿಸಲಿಲ್ಲ ಎಂದು) ಎಂದೂ ಹೇಳಲಿಲ್ಲ. ಯಜ್ಞ, ಯಾಗಾದಿ ಗಳನ್ನು, ಅನ್ನ ದಾನಾದಿಗಳನ್ನು, ಯಾವದೇ ಧರ್ಮಕಾರ್ಯಗಳನ್ನು ನಿಮ್ಮೆಲ್ಲರ ಸಹಕಾರಗಳಿಂದ ಮಾಡಿದೆನು. ನನ್ನ ದುಷ್ಟ ಪುತ್ರ ದುರ್ಯೋಧನನು ಮಾತ್ರ ಮಹಾನೀಚನು, ಎಲ್ಲರ ಬಗ್ಗೆ ಸಂಶಯವುಳ್ಳವನು, ಎಲ್ಲ ಹಿರಿಯರನ್ನು ಅಗೌರ ವಿಸಿದವನು. ಎಲ್ಲ ಕ್ಷತ್ರಿಯರ ನಾಶಕ್ಕೂ ಕಾರಣನವನೇ, ಸಹೋದರ ಸ್ನೇಹವನ್ನೂ ಕೂಡ ಬಿಟ್ಟು ಸಹೋದರರಾದ, ಮಹಾತ್ಮರಾದ ಪಾಂಡವರಿಗೆ ಅನ್ಯಾಯವನ್ನೆಸಗಿದನು. ಅಂಥ ಅನ್ಯಾಯವನ್ನು ಬೇರೆ ಯಾರೂ ಮಾಡಲಾರರು; ಅಷ್ಟು ಮಾಡಿದ. ಶ್ರೀಕೃಷ್ಣನಿಗೆ ಅಪ್ರಿಯಕರವಾದ ಬಹು ಕಾರ್ಯಗಳನ್ನು ಮಾಡಿದ ಅಷ್ಟೇಅಲ್ಲ ಪ್ರಾಯ: ಆ ನೀಚನು ನಿಮಗಾದರೂ ಏನೂ ಒಳ್ಳೆಯದನ್ನು ಮಾಡಿಲ್ಲ, ಅವನ ತಮ್ಮಂದಿರಾದರೂ ಅವನ ಸ್ವಭಾವ ನಡತೆಗಳನ್ನೇ ಅನುಸರಿಸಿ ಅವನಂತೇ ನಡೆದು ತಮ್ಮದೇ ಅಪರಾಧದಿಂದ ಪತ್ನೀ ಪುತ್ರ ಬಾಂಧವಸಮೇತರಾಗಿ ಸತ್ತು ಹೋದರು. ನಾನಾದರೂ

ವಯಸ್ಸಾದವನು, ನನ್ನ ಮೋಹ, ಅಜ್ಞಾನಗಳಿಂದ, ಆ ದುಷ್ಟಮಕ್ಕಳ ಸಂಗದಿಂದ ಹಿಂದೆ ಪಾಂಡವರ ಬಗ್ಗೆ, ಶ್ರೀಕೃಷ್ಣಪರಮಾತ್ಮನ ಬಗ್ಗೆ ನಾನುಮಾಡಿದ ಅತ್ಯನ್ಯಾಯಗಳನ್ನು ಅತಿಪಾಪಗಳನ್ನು ತಪಸ್ಸಿನಿಂದ ಪರಿಹರಿಸಿಕೊಳ್ಳಲು ಪ್ರವೃತ್ತನಾಗಿರುವೆನು. ನೀವು ದಯಮಾಡಿ ಅನುಮತಿಯನ್ನೀಯಬೇಕು. ಪಾಂಡವರಲ್ಲಿ ಸ್ವಾಭಾವಿಕವಾಗಿಯೇ ಸ್ನೇಹವನ್ನು ನೀವು ಮಾಡುತ್ತಲೇ ಇರುವಿರಿ, ಅವರೇ ನಿಜವಾಗಿ ನನಗೆ ಸತ್ಪುತ್ರರು, ಇಲ್ಲಿ ಅಲ್ಲಿ (ಪರಲೋಕದಲ್ಲಿ), ಎರಡೂ ಕಡೆಗೂ ಸುಖದಾಯಕರೂ ಆದ್ದರಿಂದ ನನ್ನ ಸಂತೋಷಕ್ಕಾಗಿಯೂ ನೀವು ಅವರಲ್ಲಿ ದೃಢವಾದ ಪ್ರೇಮವನ್ನು ಇನ್ನೂಹೆಚ್ಚು ಹೆಚ್ಚು ಮಾಡಬೇಕೆಂದು ನನ್ನ ಇಚ್ಛೆ ಎಂದು ಹೇಳಿದನು. ಆಗ ಕಣ್ಣೀರಿಡತಕ್ಕ, ಧೃತರಾಷ್ಟ್ರನ ಈಗಿನ ಸದ್ಭಾವವನ್ನು ಹಿಂದಿನ ಕಿಂಚಿದ್ಗುಣಗಳನ್ನು ಪ್ರಶಂಸಿಸುತ್ತಿರುವ ಪ್ರಜೆಗಳಿಂದ ಹಾಗೂ ಪಾಂಡವರಿಂದ ಅಪ್ಪಣೆಗಳನ್ನು ಪಡೆದು ವನಕ್ಕೆ ಹೊರಟನು. ಅವನನ್ನು ಕಳಿಸಲು ಎಲ್ಲರೂ ಬಹುದೂರದ ವರೆಗೆ ಅವನ ಬೆನ್ನ ಹಿಂದೆ ಹೋಗಿದ್ದರು.

ಸಂಜಯೋ ವಿದುರಶ್ಚೈನಂ ಸಭಾರ್ಯಮನು ಜಗ್ಮತುಃ ।
ಅನುವವ್ರಾಜ ತಂ ಕುಂತೀ ವನಾಯ ಕೃತನಿಶ್ಚಯಾ ॥೫೦॥

ಸಭಾರ್ಯಂ ಏನಂ–ಪತ್ನಿಗಾಂಧಾರೀದೇವಿಯಿಂದ ಸಹಿತನಾಗಿ ಹೊರಟಿರುವ ಈ ಧೃತರಾಷ್ಟ್ರನನ್ನು, ಸಂಜಯ:–ಸಂಜಯನು, ಚ—ಮತ್ತು, ವಿದುರ:–ವಿದುರನು, ಅನುಜಗ್ಮತು:—ಅನುಸರಿಸಿ ಹೊರಟರು. ವನಾಯ–ವನಕ್ಕೆ ಹೋಗಲು, ಕೃತನಿಶ್ಚಯಾ–ನಿಶ್ಚಯ ಮಾಡಿದ ಕುಂತೀದೇವಿಯು, ತಂ–ಆ ಧೃತರಾಷ್ಟ್ರರಾಜನನ್ನು, ಅನುವವ್ರಾಜ–ಅನುಸರಿಸಿ ಹೋದಳು. ॥೫೦॥

ವಾರ್ಯಮಾಣಾಽಪಿ ತನಯೈಃ ಸಭಾರ್ಯೈರ್ಭೃಶದುಃಖಿತೈಃ ।
ಸಂಸ್ಥಾಪ್ಯ ತಾನ್ ಸುಕೃಚ್ಛ್ರೇಣ ಯಯೌ ಸಾಽನ್ವೇವ ತಂ ನೃಪವತ್ ॥೫೧॥

ಸಾ–ಆ ಕುಂತೀದೇವಿಯು, ಭೃಶದುಃಖಿತೈಃ–ತಾಯಿಯು ವನಕ್ಕೆ ಹೋಗುವಳಿಂದು ಬಹುದುಃಖಿಗಳಾದ, ಸಭಾರ್ಯೈಃ—ಪತ್ನೀಸಹಿತರಾದ, ತನಯೈಃ–ಮಕ್ಕಳಿಂದ, (ಪಾಂಡವರಿಂದ), ವಾರ್ಯಮಾಣಾ ಅಪಿ–ವನಕ್ಕೆ ಹೋಗುವದು ಬೇಡ ಎಂದು ನಿಷೇಧಿಸಲ್ಪಟ್ಟರೂ ಕೂಡ, ತಾನ್–ಆ ಪಾಂಡವರನ್ನು, ಸುಕೃಚ್ಛ್ರೇಣ–ಬಹುಕಷ್ಟದಿಂದ, ಸಂಸ್ಥಾಪ್ಯ—ಸಮಾಧಾನಮಾಡಿ, ನಿಲ್ಲಿಸಿ, ತಂ ನೃಪಂ–ಆ ಧೃತರಾಷ್ಟ್ರರಾಜನನ್ನು, ಅನುಯಯೌ ಏವ—ಅನುಸರಿಸಿ ಹೋಗಿಯೇ ಬಿಟ್ಟಳು. ॥೫೧॥

ಸಂದರ್ಶಿತಪಥೋ ರಾಜಾ ಕುಂತೀವಿದುರಸಂಜಯೈಃ ।
ಗಾಂಧಾರೀಸಹಿತಃ ಪ್ರಾಪ ಕುರುಕ್ಷೇತ್ರಂ ಜಗದ್ಗುರೋಃ ।
ಕ್ರಮೇಣೈವಾಽಶ್ರಮಂ ವ್ಯಾಸದೇವಸ್ಯ ಸುರಪೂಜಿತಮ್ ॥೫೨॥

ಕುಂತೀವಿದುರಸಂಜಯೈಃ – ಕುಂತೀದೇವಿ, ವಿದುರ, ಸಂಜಯರಿಂದ, ಸಂದರ್ಶಿತಪಥಃ – ತೋರಿಸಲ್ಪಟ್ಟ ದಾರಿಯುಳ್ಳ ರಾಜಾ—ಧೃತರಾಷ್ಟ್ರರಾಜನು, ಗಾಂಧಾರೀಸಹಿತಃ ಸನ್—ಗಾಂಧಾರೀಯಿಂದಸಹಿತನಾಗಿ, ಕುರುಕ್ಷೇತ್ರಂ–ಕುರುಕ್ಷೇತ್ರವನ್ನು, ಸುರಪೂಜಿತಂ—ದೇವತೆಗಳಿಂದ ಗೌರವಿಸಲ್ಪಟ್ಟ, ಜಗದ್ಗುರೋಃ ವ್ಯಾಸದೇವಸ್ಯ—ಜಗದ್ಗುರುಗಳಾದ ಶ್ರೀವೇದವ್ಯಾಸದೇವರ, ಆಶ್ರಮಂ—ಆಶ್ರಮವನ್ನು ಕುರಿತು, ಕ್ರಮೇಣ ಏವ—ಅನೇಕಕ್ಷೇತ್ರಗಳಿಗೆ ಹೋಗುತ್ತಾ—ಕ್ರಮದಿಂದಲೇ, ಪ್ರಾಪ—ಬಂದರು. ॥ ೫೨

ತ್ರಿವತ್ಸರಾದಸ್ಯ ನಿಜಸ್ಯ ಲೋಕಸ್ಯಾಽಪ್ತಿಂ ಸಭಾರ್ಯಸ್ಯ ಜಗಾದ ತತ್ರ ।
ಬ್ರಹ್ಮಾಂಕಜಸ್ತೇನ ಭೃಶಂ ಪ್ರತೀತೋ ವ್ಯಾಸೋಪದಿಷ್ಟಂ ವ್ಯಚರತ್ ತಪೋಽಗ್ರ್ಯಮ್ ॥೫೩॥

ತತ್ರ–ಆ ಬದರಿಕಾಶ್ರಮದಲ್ಲಿ, ತೇನ – ಆ ಧೃತರಾಷ್ಟ್ರನಿಂದ, ಭೃಶಂಪ್ರತೀತಃ—ಬಹುವಾಗಿ ಆದರಿಸಲ್ಪಟ್ಟ, ಬ್ರಹ್ಮಾಂಕಜಃ –ಬ್ರಹ್ಮದೇವರ ತೊಡೆಯಿಂದ ಹುಟ್ಟಿದ ನಾರದಮಹರ್ಷಿಗಳು, ಸಭಾರ್ಯಸ್ಯ ಅಸ್ಯ–ಪತ್ನೀಸಮೇತನಾದ ಈ ಧೃತರಾಷ್ಟ್ರನಿಗೆ, ತ್ರಿವತ್ಸರಾತ್–ಮೂರುವರ್ಷಗಳ ಒಳಗಾಗಿ, ನಿಜಸ್ಯ ಲೋಕಸ್ಯ ಆಪ್ತಿಂ–ತನ್ನಲೋಕಪ್ರಾಪ್ತಿಯನ್ನು, ಜಗಾದ – ಹೇಳಿದರು, ತೇನ ಭೃಶಂ ಪ್ರತೀತಃ–ಅವರಿಂದ ಬಹು ಉಪದಿಷ್ಟನಾದ ಧೃತರಾಷ್ಟ್ರನು, ವ್ಯಾಸೋಪದಿಷ್ಟಂ–ಶ್ರೀವೇದವ್ಯಾಸದೇವರಿಂದ ಉಪದೇಶಿಸಲ್ಪಟ್ಟ, ಅಗ್ರ್ಯಂ ತಪಃ – ಬಹುಶ್ರೇಷ್ಠವಾದ ತಪಸ್ಸನ್ನು, ವ್ಯಚರತ್ – ಮಾಡಿಸಿದನು. ॥ ೫೩ ॥

ಸಕ್ಷತ್ತೃಗಾಂಧಾರಿಪೃಥೇ ಸಸಂಜಯೇ ತಪೋಭಿರಾರಾಧಯತಿ ಪ್ರಭುಂ ಹರಿಮ್ ।
ವೈಚಿತ್ರವೀರ್ಯೇಽತ್ರ ಸದಾರಬಂಧುಭೃತ್ಯಾಸ್ತು ಪಾರ್ಥಾ ದೃಶಯೇ ಸಮಾಯಯುಃ ॥೫೪॥

ಸಕ್ಷತ್ತೃಗಾಂಧಾರಿಪೃಥೇ – ವಿದುರ ಗಾಂಧಾರಿಕುಂತಿಯರಿಂದ ಸಹಿತನಾದ, ಸಸಂಜಯೇ – ಸಂಜಯನಿಂದ ಸಹಿತನಾದ, ವೈಚಿತ್ರವೀರ್ಯೇ – ಧೃತರಾಷ್ಟ್ರನು, ತಪೋಭಿಃ – ತಪಸ್ಸಿನಿಂದ, ಪ್ರಭುಂ ಹರಿಂ ಆರಾಧಯತಿ ಸತಿ – ಸ್ವಾಮಿಯಾದ ಶ್ರೀಹರಿಯನ್ನು ಆರಾಧಿಸುತ್ತಿರಲು; ಅತ್ರ – ಇಲ್ಲಿಗೆ, ಸದಾರಬಂಧುಭೃತ್ಯಾಃ – ಪತ್ನಿಬಂಧುಸೇವಕರಿಂದ ಸಹಿತರಾದ, ಪಾರ್ಥಾಃ ತು – ಪಾಂಡವರಾದರೂ, ದೃಶಯೇ – ಧೃತರಾಷ್ಟ್ರಾದಿಗಳನ್ನು ನೋಡುವದಕ್ಕಾಗಿ, ಸಮಾಯಯುಃ – ಬಂದರು. ॥ ೫೪ ॥

ಕ್ಷತ್ತೈಕತಾಮತ್ರ ಯುಧಿಷ್ಠಿರೇಣ ಪ್ರಾಪ್ತೋಽಥ ಭಾರ್ಯಾಸಹಿತಂ ಸಸಂಜಯಮ್ ।
ಉಪಾಸಮಾನೇಷು ವಿಚಿತ್ರವೀರ್ಯಪುತ್ರಂ ಪೃಥಾಂ ಚೈವ ಪೃಥಾಸುತೇಷು ॥೫೫॥

ಪ್ರಾದುರ್ಬಭೂವಾಮಿತಶಕ್ತಿತೇಜೋಜ್ಞಾನಾದ್ಭುತೈಶ್ವರ್ಯಸುಖಾದಿರೂಪಃ ।
ವ್ಯಾಸೋ ಹರಿಸ್ತತ್ರಸಮೀಕ್ಷ್ಯ ಸರ್ವೇ ಸಂಪೂಜಯಾಮಾಸುರುದಗ್ರಭಕ್ತ್ಯಾ ॥೫೬॥

ಅತ್ರ—ಇಲ್ಲಿ (ಈ ಸಮಯದಲ್ಲಿ) ಕ್ಷತ್ತಾ—ವಿದುರನು, (ವಿದುರನೊಳಗಿರುವ ಯಮಾಂಶವು) ಯುಧಿಷ್ಠಿರೇಣ—ಧರ್ಮರಾಜನಿಂದ (ಧರ್ಮರಾಜನೊಳಗಿರುವ ಯಮಾಂಶದಿಂದ), ಏಕತಾಂ ಪ್ರಾಪ್ತಃ—ಏಕ್ಯವನ್ನು ಹೊಂದಿದನು (ಹೊಂದಿತು). ಅಥ—ನಂತರ, ಪೃಥಾಸುತೇಷು—ಕುಂತೀಪುತ್ರರಾದ ಪಾಂಡವರು, ಸಸಂಜಯಂ—ಸಂಜಯನಿಂದ ಸಹಿತನಾದ, ಭಾರ್ಯಾಸಹಿತಂ—ಪತ್ನಿಗಾಂಧಾರಿಯಿಂದ ಸಹಿತನಾದ, ವಿಚಿತ್ರವೀರ್ಯಪುತ್ರಂ—ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನನ್ನು, ಚ—ಮತ್ತು, ಪೃಥಾಂ—ಕುಂತೀದೇವಿಯನ್ನೂ ಕೂಡ, ಉಪಾಸಮಾನೇಷು ಸತ್ಸು—ಸೇವಿಸುತ್ತಿರಲು, ಅಮಿತಶಕ್ತಿತೇಜೋಜ್ಞಾನಾದ್ಭುತೈಶ್ವರ್ಯಸುಖಾದಿರೂಪಃ—ಅಪರಿಮಿತವಾದ ಅದ್ಭುತವಾದ, ಶಕ್ತಿ, ತೇಜಸ್ಸು, ಜ್ಞಾನ, ಐಶ್ವರ್ಯ, ಸುಖ ಮೊದಲಾದ ಗುಣಸ್ವರೂಪರಾದ, ಹರಿಃ ವ್ಯಾಸಃ—ಶ್ರೀಹರಿಯ ಅವತಾರರಾದ ಶ್ರೀವೇದವ್ಯಾಸದೇವರು, ತತ್ರ—ಆಗ, ಪ್ರಾದುರ್ಬಭೂವ—ಪ್ರಕಟರಾದರು. ಸರ್ವೇ—ಎಲ್ಲರೂ, ಸಮೀಕ್ಷ್ಯ—ಆ ವೇದವ್ಯಾಸದೇವರನ್ನು ನೋಡಿ, ಉದಗ್ರಭಕ್ತ್ಯಾ—ಶ್ರೇಷ್ಠಭಕ್ತಿಯಿಂದ, ಸಂಪೂಜಯಾಮಾಸುಃ— ಪೂಜಿಸಿದರು. ॥ ೫೫—೫೬ ॥

ತೈಃ ಪೂಜಿತಸ್ತತ್ರ ನಿಷಣ್ಣ ಆಹ ಯದ್ಯದ್ ಯದಿಷ್ಟಂ ಪ್ರವದಂತು ತತ್ತತ್ ।
ದಾಸ್ಯಾಮಿ ತಸ್ಯಾದ್ಯ ತದಿತ್ಯಮುಷ್ಮಿನ್ ಭಕ್ತ್ಯಾಭ್ಯಯಃಪಾಂಡುಸುತೈಃಸದಾರೈಃ ।
ವೃತೋಽತ್ರ ಕುಂತೀ ರವಿಸೂನುಜನ್ಮಮೃತ್ಯ್ವರ್ಥದೋಷಾಪಗಮಂ ಯಯಾಚೇ ॥೫೭॥

ತೈಃ—ಅವರೆಲ್ಲರಿಂದ, ಪೂಜಿತಃ—ಪೂಜಿಸಲ್ಪಟ್ಟ, ನಿಷಣ್ಣಃ—ಆಸೀನರಾದ ಶ್ರೀವೇದವ್ಯಾಸದೇವರು, ಯತ್ ಯತ್—ಯಾವದು ಯಾವದು, ಯದಿಷ್ಟಂ—ಯಾವನಿಗೆ ಇಷ್ಟವೋ, ತತ್ ತತ್—ಅದನ್ನು, ಪ್ರವದಂತು—ಹೇಳಲಿ, ತಸ್ಯ—ಆ ವ್ಯಕ್ತಿಗೆ, ತತ್—ಅವನು ಅಪೇಕ್ಷಿಸಿದ್ದನ್ನು, ಅದ್ಯ—ಇಂದು, ದಾಸ್ಯಾಮಿ ಕೊಡುತ್ತೇನೆ, ಇತಿ—ಎಂದು ಆಹ—ಹೇಳಿದರು. (ಆಗ) ಸದಾರೈಃ—ಪತ್ನೀಸಹಿತರಾದ, ಪಾಂಡುಸುತೈಃ—ಪಾಂಡವರಿಂದ, ಅಮುಷ್ಮಿನ್—ಆ ವೇದವ್ಯಾಸದೇವರಲ್ಲಿ, ಭಕ್ತ್ಯಭ್ಯಯಃ—ಭಕ್ತಿಯ ಅಭಿವೃದ್ಧಿಯು. ವೃತಃ—ವರಿಸ(ಕೇಳ)ಲ್ಪಟ್ಟಿತು. ಅತ್ರ – ಈ ಸಂದರ್ಭದಲ್ಲಿ, ಕುಂತೀ – ಕುಂತೀದೇವಿಯು, ರವಿಸೂನುಜನ್ಮಮೃತ್ಯ್ವರ್ಥದೋಷಾಪಗಮಂ – ಸೂರ್ಯಪುತ್ರನಾದಕರ್ಣನ ಜನನ ಮರಣಗಳಪ್ರಯುಕ್ತವಾದ ದೋಷದ ಪರಿಹಾರವನ್ನು, ಯಯಾಚೇ—ಪ್ರಾರ್ಥಿಸಿದಳು.ಕನ್ಯಾವಸ್ಥೆಯಲ್ಲಿಕರ್ಣನನ್ನು ಪಡೆದದ್ದರಿಂದ ಜನನಪ್ರಯುಕ್ತದೋಷ,ಇವನು ನಿಮ್ಮ ಅಣ್ಣ ಎಂದು ಪಾಂಡವರಿಗೆ ಹೇಳದೇ ಬಚ್ಚಿಟ್ಟದ್ದರಿಂದ ಅರ್ಜುನನು ಅಣ್ಣನಾದ ಆ ಕರ್ಣನನ್ನು ಕೊಲ್ಲುವಂತಾಯಿತು. ಅದಕ್ಕೆ ತಾನು ಕಾರಣಳಾದಂತಾದ್ದರಿಂದ ಮರಣಪ್ರಯುಕ್ತದೋಷ ಇವುಗಳ ಪರಿಹಾರವನ್ನು ಕೇಳಿದಳು. ॥ ೫೭॥

ತೇಷಾಂ ಪ್ರದತ್ತೇಷ್ವಭಿವಾಂಛಿತೇಷು ವೈಚಿತ್ರವೀರ್ಯಃ ಸಹ ಭಾರ್ಯಯೈವ ।
ಸಮ್ಮಂತ್ರ್ಯ ನಿಃಶೇಷರಣೇ ಹತಾನಾಂ ಸಂದರ್ಶನಂ ಪ್ರಾರ್ಥಿತವಾಂಸ್ತಮೀಶಮ್ ॥೫೮॥

ತೇಷಾಂ ಅವರಿಗೆಲ್ಲ, ಅಭಿವಾಂಛಿತೇಷು—ಅವರವರ ಅಭೀಷ್ಟಗಳು, ಪ್ರದತ್ತೇಷು—ಶ್ರೀವ್ಯಾಸದೇವರಿಂದ ಕೊಡಲ್ಪಡುತ್ತಿರಲು, ವೈಚಿತ್ರವೀರ್ಯಃ—ಧೃತರಾಷ್ಟ್ರರಾಜನು, ಭಾರ್ಯಯಾ ಸಹ—ಪತ್ನಿ ಗಾಂಧಾರಿಯೊಡನೆ

ಸಮ್ಮಂತ್ರ್ಯ ಏವ—ವಿಚಾರ ಮಾಡಿಯೇ, ನಿಶ್ಶೇಷರಣೇ—ಯಾರೂ ಉಳಿಯದಂತಾದ ಮಹಾಭಾರತಯುದ್ಧದಲ್ಲಿ ಹತಾನಾಂ—ಸತ್ತ ತನ್ನ ಮಕ್ಕಳ, ಸಂದರ್ಶನಂ—ದರ್ಶನವನ್ನು, ತಂ ಈಶಂ—ಸಮರ್ಥರಾದ ಆ ವೇದವ್ಯಾಸರ ಹತ್ತಿರ, ಪ್ರಾರ್ಥಿತವಾನ್—(ಕೊಡುವಂತೆ) ಪ್ರಾರ್ಥಿಸಿದನು. ॥೫೮॥

ತತಸ್ತು ತೇ ಸತ್ಯವತೀಸುತಸ್ಯ ಸರ್ವೇಶ್ವರಸ್ಯಾಜ್ಞಯಾ ಸರ್ವ ಏವ ।
ಸಮಾಗತಾಃ ಸ್ವರ್ಗಲೋಕಾತ್ ಕ್ಷಣೇನ ದತ್ತಾ ಚ ದಿವ್ಯಾ ದೃಗಮುಷ್ಯ ರಾಜ್ಞಃ ॥೫೯॥

ತತಃ—ಆ ರೀತಿ ಪ್ರಾರ್ಥಿಸಿದನಂತರ, ಸರ್ವೇಶ್ವರಸ್ಯ ಸತ್ಯವತೀಸುತಸ್ಯ—ಸರ್ವನಿಯಾಮಕನಾದ, ಸತ್ಯವತೀ ಕುಮಾರನಾದ ಶ್ರೀವೇದವ್ಯಾಸದೇವರ, ಆಜ್ಞಯಾ—ಅಪ್ಪಣೆಯಂತೆಯೇ, ಸರ್ವೇ—ದುರ್ಯೋಧನಾದಿಗಳೆಲ್ಲರೂ, ಸ್ವರ್ಗಲೋಕಾತ್—ಸ್ವರ್ಗಲೋಕದಿಂದ, ಕ್ಷಣೇನ ತು—ಕ್ಷಣ ಸಮಯದಲ್ಲಿಯೇ, ಸಮಾಗತಾಃ ಏವ—ಬಂದೇ ಬಿಟ್ಟರು. ಅಮುಷ್ಯರಾಜ್ಞಃ— ಆ ಧೃತರಾಷ್ಟ್ರನಿಗೆ, ದಿವ್ಯಾ ದೃಕ್ ಚ—ಬಂದ ಅವರನ್ನು ನೋಡುವ ದಿವ್ಯ ಶಕ್ತಿಯೂ ಕೂಡ, ದತ್ತಾ—ಕೊಡಲ್ಪಟ್ಟಿತು. ॥೫೯॥

ಊಷುಶ್ಚ ರಾತ್ರಿಂ ಪರಮಾಜ್ಞಯೈವ ಸರ್ವೇ ಸ್ವಭಾರ್ಯಾಸಹಿತಾ ಯಥಾಪುರಾ ।
ತೃಪ್ತಃ ಸದಾರೋ ನೃಪತಿಶ್ಚ ತತ್ರ ಸರ್ವೇಽಪಿ ದೃಷ್ಟ್ವಾ ತದುಹದದ್ಭುತಂ ತತ್ ॥೬೦॥

ಸರ್ವೇ—ಬಂದವರೆಲ್ಲರೂ, ಪರಮಾಜ್ಞಯಾ ಏವ—ಸರ್ವೋತ್ತಮರಾದ ಶ್ರೀವ್ಯಾಸದೇವರ ಅಪ್ಪಣೆಯಂತೆಯೇ, ಪುರಾ ಯಥಾ—ಮರಣಕ್ಕಿಂತ ಪೂರ್ವದಲ್ಲಿ ಹೇಗೋ, ತಥಾ—ಹಾಗೆ, ಸ್ವಭಾರ್ಯಾಸಹಿತಾಃ ಸಂತಃ—ತಮ್ಮ ಪತ್ನಿಯರಿಂದ ಸಹಿತರಾಗಿ, ರಾತ್ರಿಂ—ಆ ರಾತ್ರಿಯಲ್ಲಿ, ಊಷುಃ—ವಾಸಿಸಿದರು. ಸದಾರಃ ನೃಪತಿಃ ಚ — ಪತ್ನೀಗಾಂಧಾರೀಸಮೇತನಾದ ಧೃತರಾಷ್ಟ್ರನು, ತೃಪ್ತಃ—ಸಂತುಷ್ಟನಾದನು. ಸರ್ವೇ ಅಪಿ—ಎಲ್ಲರೂ ಕೂಡ ತತ್ರ—ಆ ಸಮಯದಲ್ಲಿ, ತತ್ ಮಹತ್ ಅದ್ಭುತಂ—ಆ ಬಹು ಆಶ್ಚರ್ಯಕರವಾದ ದೃಶ್ಯವನ್ನು, ದೃಷ್ಟ್ವಾ—ನೋಡಿ (ತೃಪ್ತಾಃ—ಸಂತುಷ್ಟರಾದರು). ॥೬೦॥

ಅಥಾಽಜ್ಞಯೈವಾಸ್ಯ ಪರಸ್ಯ ಸರ್ವಾಃ ಸ್ತ್ರಿಯೋ ನಿಜೇಶೈಃ ಸಹಿತಾ ಯಯುಃ ಸ್ವಮ್ ।
ವಿನೋತ್ತರಾಂ ತಾಂ ತು ಕಥಾಂ ನಿಶಮ್ಯ ಪಾರೀಕ್ಷಿತೋಽಯಾಚತ ತಾತದೃಷ್ಟಿಂ ॥೬೧॥

ಅಥ—ಅನಂತರ, ಪರಸ್ಯ ಅಸ್ಯ—ಸರ್ವೋತ್ತಮರಾದ ಈ ವೇದವ್ಯಾಸದೇವರ ಆಜ್ಞಯಾ ಏವ—ಆಜ್ಞೆಯಿಂದಲೇ, ಉತ್ತರಾಂ ವಿನಾ ಸರ್ವಾಃಸ್ತ್ರಿಯಃ—ಉತ್ತರೆಯನ್ನು ಬಿಟ್ಟು ಉಳಿದ ಎಲ್ಲ ಸ್ತ್ರೀಯರು, ನಿಜೇಶೈಃಸಹಿತಾಃಸತ್ಯಃ—ತಮ್ಮ ಪತಿಗಳಿಂದ ಕೂಡಿದವರಾಗಿ, ಸ್ವಂ—ಪತಿಗಳು ಹೋದಂಥ (ಯುದ್ಧದಲ್ಲಿ ಮಡಿದ ವೀರರು ಹೋಗತಕ್ಕ) ಸ್ವರ್ಗಕ್ಕೆ, ಯಯುಃ—ಹೋದರು. ತಾಂ ಕಥಾಂ—ಮಡಿದವರನ್ನು ವೇದವ್ಯಾಸರ ಅನುಗ್ರಹದಿಂದ ಧೃತರಾಷ್ಟ್ರಾದಿಗಳು ನೋಡಿದರು ಎಂಬ ಕಥಾವನ್ನು, ನಿಶಮ್ಯ—ಕೇಳಿ ಪಾರೀಕ್ಷಿತಃ—ಪರೀಕ್ಷಿತ್ ರಾಜನ ಮಗನಾದ ಜನಮೇಜಯರಾಜನು, ತಾತದೃಷ್ಟಿಂ—ತನ್ನ ಅಜ್ಜನಾದ ಅಭಿಮನ್ಯುವಿನ ದರ್ಶನವನ್ನು, ಅಯಾಚತ—ಬೇಡಿದನು. ॥೬೧॥

ತಂ ಚಾಽನಯಾವಾಸ ತದೈವ ಕೃಷ್ಣೋ ಹ್ಯಚಿಂತ್ಯಶಕ್ತಿಃ ಸ ವಿಕುಂಠಲೋಕಾತ್ ।
ದೃಷ್ಟ್ವಾ ಚ ಸ ಪಾರೀಕ್ಷಿತ ಆಪ ತುಷ್ಟಿಂ ಸ್ವತಾತವೀಶೇನಸಮಾಹೃತಂ ಪುನಃ ॥೬೨॥

ಅಚಿಂತ್ಯಶಕ್ತಿಃಸಃಕೃಷ್ಣಃ—ಅಚಿಂತ್ಯಶಕ್ತಿಯುಳ್ಳ ಆ ವೇದವ್ಯಾಸದೇವರು, ತದಾ ಏವ—ಆ ಕೂಡಲೇ, ತಂ ಚ— ಅವನನ್ನೂ (ಅಭಿಮನ್ಯುವನ್ನೂ) ಕೂಡ, ವಿಕುಂಠಲೋಕಾತ್—ವೈಕುಂಠಲೋಕದಿಂದ, ಆನಯಾವಾಸ—

ಕರಿಸಿದರು. ಪಾರೀಕ್ಷಿತಃ ಸಃ —ಪರೀಕ್ಷಿತ್ ರಾಜನ ಪುತ್ರನಾದ ಆ ಜನಮೇಜಯರಾಜನು, ಈಶೇನ ಪುನಃ ಸಮಾಹೃತಂ—ಶ್ರೀವೇದವ್ಯಾಸರಿಂದ ಪುನಃ ಕರಿಸಲ್ಪಟ್ಟ, ಸ್ವತಾತಂ—ತನ್ನ ತಂದೆಯ ತಂದೆಯಾದ ಅಭಿಮನ್ಯುವನ್ನು, ದೃಷ್ಟ್ವಾ—ನೋಡಿ, ತುಷ್ಟಿಂ ಆಪ—ಸಂತೋಷವನ್ನು ಹೊಂದಿದನು. ೬೨॥

ಸಂಪೂಜ್ಯತಂ ಕೃಷ್ಣಮಥೀಶವಂದ್ಯಂ ಕ್ಷವಮಾಪಯಾಮಾಸ ಪರೀಕ್ಷಿದಾತ್ಮಜಃ ॥
ಚಕ್ರೇ ಚ ವಿಸ್ರಂಭಮತೀವಭಾರತೇ ಪುನಶ್ಚ ತತ್ರತ್ಯಜನೈಃ ಸಮೇತಃ ॥೬೩॥

ಪರೀಕ್ಷಿದಾತ್ಮಜಃ —ಪರೀಕ್ಷಿತ್‌ರಾಜನ ಮಗನಾದ ಜನಮೇಜಯನು. ತಂ—ಆ ಅಭಿಮನ್ಯುವನ್ನು, ಸಂಪೂಜ್ಯ—ಪೂಜಿಸಿ, ಅಥ—ಹಾಗು, ಈಶವಂದ್ಯಂ. ಕೃಷ್ಣಂ—ರುದ್ರದೇವರಿಂದ ವಂದ್ಯನಾದ ಶ್ರೀವೇದವ್ಯಾಸ ದೇವರನ್ನೂ ಕೂಡ, ಸಂಪೂಜ್ಯ—ಪೂಜಿಸಿ, ಕ್ಷವಮಾಪಯಾಮಾಸ—ಕ್ಷಮೆಯನ್ನು ಕೇಳಿದನು. ಚ—ಮತ್ತು, ಪುನಶ್ಚ—ಆಮೇಲಿಂದ, ತತ್ರತ್ಯಜನೈಃ ಸಮೇತಃ ಸನ್—ಅಲ್ಲಿರುವ ಜನರಿಂದ ಸಹಿತನಾಗಿ, ಭಾರತೇ—ಭಾರತದ ಬಗ್ಗೆ, ಅತೀವ ವಿಸ್ರಂಭಂ ಚ—ಬಹುವಿಶ್ವಾಸವನ್ನೂ ಕೂಡ, ಚಕ್ರೇ—ಮಾಡಿದನು. ॥೬೩॥

ಭಾವಾನುವಾದ ೫೦—೬೩

ಗಾಂಧಾರೀಸಹಿತಧೃತರಾಷ್ಟ್ರನು ವನಕ್ಕೆ ಹೊರಟಾಗ ಸಂಜಯ, ವಿದುರರು ಹಾಗೂ ಕುಂತೀದೇವಿಯೂ ಅವನನ್ನನುಸರಿಸಿಹೋದರು. ಕುಂತೀದೇವಿಯನ್ನು ಮಕ್ಕಳಾದ ಪಾಂಡವರು ಹಾಗೂ ಸೊಸೆಯಂದಿರೂ ಎಷ್ಟು ತಡೆದರೂಕೂಡ ಕೇಳದೆ ಅವರನ್ನೆಲ್ಲ ಸಮಾಧಾನ ಮಾಡಿ ನಿಲ್ಲಿಸಿ ಹೋಗಿಯೇ ಬಿಟ್ಟಳು. ವಿದುರನು ಉಪದೇಶಮಾಡಿ ವೈರಾಗ್ಯ ಬರುವಂತೆ ಮಾಡಿ ವನಕ್ಕೆ ಹೋಗುವಂತೆ ಮಾಡಿದ್ದರಿಂದ ವಿದುರನುವನದದಾರಿ ತೋರಿಸಿದನು ಎಂದು ಹೇಳುವದು. ಸಂಜಯನು ವಿದುರರು ಹೇಳಿದ ನೀತಿಮಾರ್ಗವನ್ನು ನಿಷೇಧಿಸಿಲ್ಲವಾದ್ದರಿಂದ ಸಂಜಯನಿಗೂ ಅನುಮತವಾದ್ದರಿಂದ ಸಂಜಯನು ವನದದಾರಿತೋರಿದ ಎಂದು ಹೇಳಿದ್ದು. ವನಕ್ಕೆ ಹೊರಟಾಗ ದಾರಿತೋರಿಸುತ್ತಾ ಕರೆದುಕೊಂಡು ಹೋದವಳು ಮಾತ್ರ ಕುಂತೀದೇವಿಯೇ. ಸಂಚರಿಸುತ್ತಾ ಕುರುಕ್ಷೇತ್ರದಿಂದ ಶ್ರೀವ್ಯಾಸರ ಆಶ್ರಮಕ್ಕೆ ಬಂದನು. ಆಗ ನಾರದಮಹರ್ಷಿಗಳು ಗಾಂಧಾರೀಸಹಿತ ಧೃತರಾಷ್ಟ್ರನಿಗೆ ಮೂರುವರ್ಷಗಳೊಳಗಾಗಿ ಅವನ ಲೋಕಪ್ರಾಪ್ತಿಯು ಆಗುವದಾಗಿ ಹೇಳಿದರು. ಅವರಿಂದ ಸಂತುಷ್ಟನಾದ ಧೃತರಾಷ್ಟ್ರನು ಶ್ರೀವ್ಯಾಸರ ಉಪದೇಶದಂತೆ ಶ್ರೇಷ್ಠ ತಪಸ್ಸನ್ನಾಚರಿಸಿದನು. ಹೀಗೆ ಧೃತರಾಷ್ಟ್ರ ಗಾಂಧಾರಿ, ಕುಂತೀದೇವಿ ಸಂಜಯ ಹಾಗೂ ವಿದುರರು ಇಲ್ಲಿಯೇ ತಪಸ್ಸನ್ನಾಚರಿಸುತ್ತಿರುವ ಸಮಯದಲ್ಲಿ, ಪಾಂಡವರು ಇವರನ್ನೆಲ್ಲ ನೋಡಿಕೊಂಡು ಹೋಗಲೆಂದು ಬಂದರು. ಈ ಸಮಯದಲ್ಲಿಯೇ ವಿದುರರಲ್ಲಿರುವ ಯಮಾಂಶವು ಧರ್ಮರಾಜನಲ್ಲಿರುವ ಯಮಾಂಶದಿಂದ ಐಕ್ಯವನ್ನು ಹೊಂದಿತು. ಪಾಂಡವರು ಧೃತರಾಷ್ಟ್ರ ಗಾಂಧಾರೀಕುಂತೀ ಹಾಗೂಸಂಜಯರ ಜೊತೆಗೆ ಇರುತ್ತಾ ಸೇವೆಮಾಡುತ್ತಾ ಇರುವಾಗ ಶ್ರೀವ್ಯಾಸದೇವರು ಪ್ರಕಟರಾದರು. ಆಗ ಎಲ್ಲರೂ ಅವರನ್ನು ಬಹುಭಕ್ತಿಯಿಂದ ಪೂಜಿಸಿದರು. ಆಗ ಶ್ರೀವೇದವ್ಯಾಸರು ಎಲ್ಲರನ್ನು ಕರಿತು ಯಾರ್ಯಾರಿಗೆ ಏನೇನು ಬೇಕೋ ಕೇಳಿರಿ ಅದನ್ನೆಲ್ಲಕೊಡುವೆನೆಂದು ಹೇಳಿದರು. ಪಾಂಡವರು, ದ್ರೌಪದೀಮೊದಲಾದ ಪತ್ನಿಯರು ತಮಗೆ ಭಕ್ತಿಯು ಹೆಚ್ಚಾಗುವಂತೆ ಅನುಗ್ರಹಿಸಲು ಕೇಳಿದರು. ಕುಂತೀದೇವಿಯು ಕರ್ಣನನ್ನು ತಾನು ಕನ್ಯಾವಸ್ಥೆಯಲ್ಲಿ ಹಡೆದದೋಷಪರಿಹಾರ, ಹಾಗು ಅವನು ತನ್ನ ಮಗ ಎಂದು ಪಾಂಡವರಿಗೆ ಹೇಳದೇ ಬಚ್ಚಿಟ್ಟರಿಂದ ಅರ್ಜುನನು ಅವನನ್ನು ಕೊಂದನು; ಹೀಗಾಗಿ ತಮ್ಮನು ಅಣ್ಣನನ್ನು ಕೊಂದಂತಾಯಿತು; ಅದಕ್ಕೆ ತಾನು ಕಾರಣಳಾದಂತಾಗಿದ್ದರಿಂದ ತತ್ಪ್ರಯುಕ್ತ ಬಂದ ದೋಷದ ಪರಿಹಾರಗಳನ್ನು ಕೇಳಿದಳು. ಅವರೆಲ್ಲರಿಗೂ ಅದೆಲ್ಲವನ್ನು ಅನುಗ್ರಹಿಸಿದರು. ಧೃತರಾಷ್ಟ್ರನು ತನ್ನ ಪತ್ನಿಯನ್ನು ವಿಚಾರಿಸಿ ಮಹಾಭಾರತಯುದ್ಧದಲ್ಲಿ ಸತ್ತಂಥ ತನ್ನ ಎಲ್ಲ ಮಕ್ಕಳ ಸಂದರ್ಶನ ಮಾಡಿಸಿಕೊಡಲು ಕೇಳಿದನು. ಆಗ ಶ್ರೀ ವ್ಯಾಸರು ಸ್ವರ್ಗಲೋಕದಿಂದ ಬರಲು ಅವರಿಗೆಲ್ಲಾ ಆಜ್ಞಾಪಿಸಿದರು. ಅವರು ಬಂದರು. ಅವರನ್ನು ನೋಡ

ಧೃತರಾಷ್ಟ್ರನಿಗೆ ದೃಷ್ಟಿಯನ್ನು ಕೊಟ್ಟರು. ಅವರಮ್ಮ ನೋಡಿದನು.; ಸಂತುಷ್ಟನಾದನು. ಬಂದವರೆಲ್ಲರೂ ಆ ಒಂದು ರಾತ್ರಿಯಲ್ಲಿ ತಮ್ಮ ತಮ್ಮ ಪತ್ನಿಯರ ಜೊತೆಗಿದ್ದರು. ಈ ಅದ್ಭುತವನ್ನು ನೋಡಿ ಎಲ್ಲರೂಸಂತೋಷಪಟ್ಟರು. ಆಮೇಲೆ ಶ್ರೀ ವ್ಯಾಸರ ಅಪ್ಪಣೆಯಂತೆಯೇ ಎಲ್ಲ ಸ್ತ್ರೀಯರು ತಮ್ಮ ತಮ್ಮ ಪತಿಗಳ ಜೊತೆಗೆ ಸ್ವರ್ಗಕ್ಕೆ ಹೋದರು. ಉತ್ತರಾದೇವಿಯು ಮಾತ್ರ ತನ್ನ ಪತಿಯಾದ ಅಭಿಮನ್ಯುವಿನ ಜೊತೆಗೆ ಹೋಗಲಿಲ್ಲ. ಮಗನಾದ ಪರೀಕ್ಷಿತ್‌ನ ರಕ್ಷಣೆಗಾಗಿ ಬೇಕೆಂದು ಅಭಿಮನ್ಯುವೇ ಬೇಡ ಎಂದು ಹೇಳಿದ್ದರಿಂದಾಲ್ಲಿಯೇ ಉಳಿದಳು. ಈ ಕಥಾವನ್ನು ಮುಂದೆ ಜನಮೇಜಯನು ಕೇಳಿದಾಗ ಈ ಕಥಾವು ಸತ್ಯವಾದದ್ದಾದರೆ ನನಗೆ ಈಗ ನನ್ನ ಅಜ್ಜ ಅಭಿಮನ್ಯುವಿನ ದರ್ಶನವಾಗಲಿ ಎಂದು ಆಕ್ಷೇಪಿಸಿದನು.ವ್ಯಾಸರು ಆಗ ಕೂಡಲೇ ಪುನಃಅಭಿಮನ್ಯುವನ್ನು ವೈಕುಂಠಲೋಕದಿಂದ ಕರೆತರಿಸಿದರು. ಅವನನ್ನು ನೋಡಿದ ಜನಮೇಜಯರಾಜನು ತುಂಬಾ ಸಂತೋಷದಿಂದ ಅವನನ್ನು ಪೂಜಿಸಿದನು. ಇಂಥ ಅದ್ಭುತವನ್ನು ಅನುಗ್ರಹಿಸಿದ ಶ್ರೀವೇದವ್ಯಾಸದೇವರನ್ನು ಪೂಜಿಸಿ, ತಾನು ಶ್ರೀಮಹಾಭಾರತಕಥೆಯ ಸತ್ಯತೆಯ ಬಗ್ಗೆ ಆಕ್ಷೇಪಿಸಿದ್ದಕ್ಕಾಗಿ ಕ್ಷಮೆಯನ್ನು ಕೇಳಿದನು. ಅವನು ಹಾಗೂ ಇತರ ಎಲ್ಲರೂ ಶ್ರೀಮಹಾಭಾರತದಲ್ಲಿ ಬಹು ವಿಶ್ವಾಸವನ್ನು ಮಾಡಿದರು.

ಪಾರ್ಥಾಃ ಪುನಃ ಪ್ರಾಪ್ಯ ಪುರಂ ಸ್ವಕೀಯಂ ಧರ್ಮೇಣ ಪೃಥ್ವೀಂ ಪರಿಪಾಲಯಂತಃ ।
ಭೋಗಾನರಾಗಾ ಅಜುಷಂತ ಯೋಗ್ಯಾನ್ ಯುಕ್ತಾ ಜಗದ್ಧಾತರಿ ವಾಸುದೇವೇ ॥೬೪॥

ಪಾರ್ಥಾಃ—ಪಾಂಡವರು, ಪುನಃ—ಮತ್ತೆ, ಸ್ವಕೀಯಂ ಪುರಂ–ತಮ್ಮಹಸ್ತಿನಾವತಿ ಪಟ್ಟಣಕ್ಕೆ, ಪ್ರಾಪ್ಯ–ಬಂದು, ಪೃಥ್ವೀಂ—ರಾಜ್ಯವನ್ನು, ಧರ್ಮೇಣ ಪರಿಪಾಲಯಂತಃ ಸಂತಃ—ಧರ್ಮದಿಂದ ರಕ್ಷಿಸುವವರಾಗಿ, ಜಗದ್ಧಾತರಿ ವಾಸುದೇವೇಯುಕ್ತಾಃ ಸಂತಃ—ಜಗದ್ರಕ್ಷಕನಾದ ವಾಸುದೇವನಲ್ಲಿ ಕೂಡಿದವರಾಗಿ, ಮನಸ್ಸಿಟ್ಟವರಾಗಿ, ಅರಾಗಾಃ ಸಂತಃ—ಅಯೋಗ್ಯವಿಷಯರಾಗವಿಲ್ಲದವರಾಗಿ, ಯೋಗ್ಯಾನ್‌ಭೋಗಾನ್—ಯೋಗ್ಯ[ವಿಹಿತ]ವಾದ ವಿಷಯಗಳನ್ನು, ಅಜುಷಂತ—ಸೇವಿಸಿದರು. ॥ ೬೪ ॥

ವರ್ಷತ್ರಯಾಂತೇ ತ್ಯಸಮಾಹಿತಾಗ್ನಿಂ ತ್ಯಕ್ತಾಗ್ನಿಭಿಸ್ತ್ವೇವನಮಾಲಿಹದ್ಭಿಃ ।
ತೇ ಶುಶ್ರುವುರ್ಧೃತರಾಷ್ಟ್ರಂ ಸಭಾರ್ಯಂ ಸಹೈವ ಕುಂತ್ಯಾ ಪರಿದಗ್ಧದೇಹಮ್ ॥೬೫॥

ವರ್ಷತ್ರಯಾಂತೇ—ಮೂರುವರ್ಷಗಳ ಕೊನೆಯಲ್ಲಿ, ತ್ಯಸಮಾಹಿತಾಗ್ನಿಂ–ತನ್ನಲ್ಲಿ ಔಪಾಸನಾಗ್ನಿಯುಳ್ಳ, ಸಭಾರ್ಯಂ—ಪತ್ನೀಗಾಂಧಾರೀಸಮೇತನಾದ, ಧೃತರಾಷ್ಟ್ರಂ—ಧೃತರಾಷ್ಟ್ರನನ್ನು, ಕುಂತ್ಯಾ ಸಹ ಏವ—ಕುಂತೀದೇವಿಯಿಂದಸಹಿತವಾಗಿಯೇ, ವನಂ ಅಲಿಹದ್ಭಿಃ—ವನವನ್ನೇಆವರಿಸತಕ್ಕ ತೈಃ ತ್ಯಕ್ತಾಗ್ನಿಭಿಃ—ಆ ಬಿಡಲ್ಪಟ್ಟ ಅಗ್ನಿಗಳಿಂದ, ಪರಿದಗ್ಧದೇಹಂ—ಸುಡಲ್ಪಟ್ಟದೇಹವುಳ್ಳವನನ್ನಾಗಿ, ತೇ – ಆ ಪಾಂಡವರು, ಶುಶ್ರುವುಃ – ಕೇಳಿದರು. (ಅಗ್ನಿಯಿಂದ ಪಾರಾಗಿಬಂದ ಸಂಜಯನ ಮುಖದಿಂದ ಕೇಳಿದರು.) ॥ ೬೫ ॥

ವ್ರೀಳಾಮುಖಾ ಧ್ಯಾನಪರಾ ನಿಶಮ್ಯ ಸ್ವರ್ಯಾತಮಾತ್ಮೀಯ ಪಿತೃವ್ಯಮಾಶು ।
ಸಮೇತ್ಯ ಭರ್ತ್ರಾ ಪ್ರತಿಪೂಜ್ಯಮಾನಾಂ ಕುಂತೀಂ ಚ ತಪ್ತಾ ವಿದಧುಃ ಕ್ರಿಯಾಶ್ಚ ॥೬೬॥

ಆತ್ಮೀಯಪಿತೃವ್ಯಂ—ತಮ್ಮ ದೊಡ್ಡಪ್ಪನನ್ನು, ಸ್ವರ್ಯಾತಂ—ಸ್ವರ್ಗವಾಸಿಯಾದವನನ್ನಾಗಿ, ಭರ್ತ್ರಾ ಸಮೇತ್ಯ—ಗಂಡನಿಂದ ಸಹಿತವಾಗಿ, ಪ್ರತಿಪೂಜ್ಯಮಾನಾಂ—ಪೂಜಿಸಲ್ಪಡತಕ್ಕ ಗಾಂಧಾರಿಯನ್ನು ಕುಂತೀಂ ಚ—ಕುಂತಿಯನ್ನೂಕೂಡ, [ಸ್ವರ್ಗವಾಸಿಗಳಾದವರನ್ನಾಗಿ ಕೇಳಿ,] ಆಶು – ಕೂಡಲೇ, ತಪ್ತಾಃ ವ್ರೀಳಾಮುಖಾಃ – ತಾಪವನ್ನುಹೊಂದಿದ, ಕೆಳಮುಖಮಾಡಿದ, ಧ್ಯಾನಪರಾಃ—ಧ್ಯಾನಾಸಕ್ತರಾದ ಪಾಂಡವರು, ಕ್ರಿಯಾಃ ಚ – ಅವರ ಶ್ರಾದ್ಧತರ್ಪಣಾದಿಕಾರ್ಯಗಳನ್ನು, ವಿದಧುಃ – ಮಾಡಿದರು. ॥ ೬೬ ॥

ತೇ ವಿಷ್ಣುಭಕ್ತ್ಯಾ ಪರಿಪೂತಕರ್ಮಭಿರ್ಜ್ಞಾನೇನ ಚಾಂತೇ ತಮನುಸ್ಮರಂತಃ ।
ಪಾರ್ಥೈಃ ಸ್ಸುಪುತ್ರೈಃ ಸುಕೃತೋರ್ಧ್ವ ಕರ್ಮಭಿರ್ವೃದ್ಧಿಂ ಸುಖಸ್ಯಾऽಪುರನಪ್ಯಯಾಂ ಶುಭಾಮ್ ॥೬೭॥

ತೇ—ಧೃತರಾಷ್ಟ್ರಾದಿ ಮೂವರೂ, ಅಂತೇ—ಕೊನೆಯಲ್ಲಿ, ವಿಷ್ಣುಭಕ್ತ್ಯಾ—ತಾವುಮಾಡಿದ ವಿಷ್ಣು ಭಕ್ತಿಯಿಂದ, ಪರಿಪೂರಿತಕರ್ಮಭಿಃ—ಪಾಂಡವರ ಬಗ್ಗೆ ದ್ವೇಷವನ್ನು ಬಿಟ್ಟದ್ದರಿಂದ ಶುದ್ಧರಾಗಿ ಮಾಡಿದ ತಪಃ ಕರ್ಮಗಳಿಂದ. ಜ್ಞಾನೇನ—ತಮಗಿರುವ ಜ್ಞಾನದಿಂದ, (ಇವೆಲ್ಲದರ ಫಲವಾಗಿ) ಅಂತೇ ತಂ ಅನುಸ್ಮರಂತಃ ಸಂತ;—ಕೊನೆಯಲ್ಲಿ ಆ ಶ್ರೀಹರಿಯನ್ನೇ ಸ್ಮರಿಸತಕ್ಕವರಾಗಿ, ಸುಪುತ್ರೈಃ ಪಾರ್ಥೈಃ—ಸುಪುತ್ರರಾದ ಪಾಂಡವರಿಂದ, ಸುಕೃತೋರ್ಧ್ವಕರ್ಮಭಿಃ—ಚೆನ್ನಾಗಿ ಮಾಡಲ್ಪಟ್ಟ ಔರ್ಧ್ವದೈಹಿಕ ಕರ್ಮಗಳಿಂದ, ಅನಪ್ಯಯಾಂ—ನಾಶರಹಿತವಾದ—ಶುಭಾಂ—ನಿರ್ದುಷ್ಟವಾದ, ಸುಖಸ್ಯ ವೃದ್ಧಿಂ—ಪರಲೋಕ ಸುಖದ ಅಭಿವೃದ್ಧಿಯನ್ನು, ಆಪುಃ—ಹೊಂದಿದರು. ॥೬೭॥

ಗಾವದ್ಗಣೇರ್ವ್ಯಾಸಸಕಾಶಮೇತ್ಯ ಶುಶ್ರೂಷಯಾ ತಸ್ಯ ಪುನರ್ನಿಜಾಂ ಗತಿಮ್ ।
ಪ್ರಪೇದಿವಾನ್ ಪಾಂಡುಸುತಾಶ್ಚ ಕೃಷ್ಣಂ ಪ್ರತೀಕ್ಷಮಾಣಾಃ ಪೃಥಿವೀಮಶಾಸನ್ ॥೬೮॥

ಗಾವದ್ಗಣಿ:—ಗವದ್ಗಣನ ಮಗನಾದ ಸಂಜಯನು, ವ್ಯಾಸಸಕಾಶಂ – ವೇದವ್ಯಾಸದೇವರ ಸಮೀಪಕ್ಕೆ, ಏತ್ಯ—ಬಂದು, ತಸ್ಯ—ಆ ವ್ಯಾಸದೇವರ, ಶುಶ್ರೂಷಯಾ – ಸೇವೆಯಿಂದ, ಪುನ: – ಮತ್ತೆ, ನಿಜಾಂ ಗತಿಂ – ತನಗೆ ಯೋಗ್ಯವಾದ ಲೋಕವನ್ನು. ತನ್ನ ಮೂಲರೂಪ (ತುಂಬುರು ಗಂಧರ್ವರೂಪ)ವನ್ನು, ಪ್ರಪೇದಿವಾನ್—ಹೊಂದಿದನು. ಪಾಂಡುಸುತಾಃ ಚ – ಪಾಂಡವರಾದರೂ, ಕೃಷ್ಣಂ—ಶ್ರೀಕೃಷ್ಣ ಶ್ರೀವ್ಯಾಸದೇವರನ್ನು, ಪ್ರತೀಕ್ಷಮಾಣಾಃ ಸಂತ: – ನೋಡುವವ (ಸೇವಿಸುವವ) ರಾಗಿ, ಪೃಥಿವೀಂ ಅಶಾಸನ್ – ಭೂಮಿಯನ್ನು ಆಳಿದರು. ॥೬೮॥

ಅಷ್ಟಾದಶಾಬ್ದಾಃ ಪೃಥಿವೀಂ ಸಮಸ್ತಾಂ ಪ್ರಶಾಸತಾಮೇವಮಗುರ್ಮಹಾತ್ಮನಾಮ್ ।
ಅರಿಕ್ತಧರ್ಮಾರ್ಥಸುಖೋತ್ತಮಾನಾಮನನ್ಯಜಿತಾನಂತಪದಸ್ಮೃತೀನಾಮ್ ॥೬೯॥

ಇತಿ ಶ್ರೀಮನ್ಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಹಾಭಾರತತಾತ್ಪರ್ಯನಿರ್ಣಯೇ

ಧೃತರಾಷ್ಟ್ರಾದಿಸ್ವರ್ಗಪ್ರಾಪ್ತಿರ್ನಾಮ ಏಕತ್ರಿಂಶೋಧ್ಯಾಯಃ ॥೩೧॥

ಏವಂ – ಈ ರೀತಿಯಾಗಿ. ಸಮಸ್ತಾಂ ಪೃಥಿವೀಂ – ಅಖಂಡ ಭೂಮಿಯನ್ನು, ಪ್ರಶಾಸತಾಂ – ಆಳತಕ್ಕ, ಅರಿಕ್ತಧರ್ಮಾರ್ಥಸುಖೋತ್ತಮಾನಾಂ — ಪೂರ್ಣವಾದ ಧರ್ಮ, ಸುಖವುಳ್ಳವರಾದ, ಅನನ್ಯಜಿತಾನಂತಪದಸ್ಮೃತೀನಾಂ – ಅನಂತನಾಮಕನಾದ ಶ್ರೀಹರಿಯ ಪಾದಸ್ಮರಣೆಯನ್ನು ಎಂದೂ ಬಿಡದಿರುವ, ಮಹಾತ್ಮನಾಂ – ಮಹಾತ್ಮರಾದ ಆ ಪಾಂಡವರಿಗೆ, ಅಷ್ಟಾದಶ ಅಬ್ದಾಃ—ಹದಿನೆಂಟುವರ್ಷಗಳು, ಅಗುಃ—ಕಳೆದವು (ರಾಜ್ಯವನ್ನಾಳುತ್ತಾ ೧೮ ವರ್ಷಗಳನ್ನು ಕಳೆದರು.) ॥೬೯॥

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ಶ್ರೀಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಈ ರೀತಿ ಧೃತರಾಷ್ಟ್ರಾದಿಗಳ ಸ್ವರ್ಗಪ್ರಾಪ್ತಿಯನ್ನು ನಿರೂಪಿಸುವ ೩೧ ನೆಯ ಅಧ್ಯಾಯದ ಪದಾನುವಾದವು ಮುಗಿಯಿತು.

ಭಾವಾನುವಾದ ೬೪—೬೯

ಪಾಂಡವರು ಧೃತರಾಷ್ಟ್ರಾದಿಗಳನ್ನು ಕಂಡು ಪುನಃ ಊರಿಗೆ ಬಂದು ಧರ್ಮದಿಂದ ರಾಜ್ಯವನ್ನಾಳುತ್ತಾ

ವಿಷಯಗಳ ಅತಿಸೇವನೆಯಿಲ್ಲದೇ ಯೋಗ್ಯವಿಹಿತ ವಿಷಯಗಳನ್ನು ಭೋಗಿಸುತ್ತಾ ಶ್ರೀಹರಿಯನ್ನೇ ಸದಾ ನೆನೆಸುತ್ತ ಇದ್ದರು. ಧೃತರಾಷ್ಟ್ರಾದಿಗಳು ವನಕ್ಕೆ ಹೋಗಿ ಮೂರು ವರ್ಷಗಳ ಕೊನೆಯಲ್ಲಿ ಅವರಿನ್ನೂ ತಪಸ್ಸಿನಲ್ಲಿರುವಾಗಲೇ ತಮ್ಮ ಒಳಗಿರುವ ಅಗ್ನಿಯನ್ನೂ ಕೂಡ ಹೊರಗೆ ಬಿಟ್ಟು ಇಡೀ ವನವನ್ನೇ ಆವರಿಸಿರುವ ಅಗ್ನಿಗಳ ಮಧ್ಯದಲ್ಲಿ ಸಿಕ್ಕುಕೊಂಡು ದೇಹಗಳನ್ನು ಸುಟ್ಟುಕೊಂಡು ಈ ಲೋಕದ ವಾಸವನ್ನು ಮುಗಿಸಿದರು. ಧೃತರಾಷ್ಟ್ರ ಗಾಂಧಾರಿ ಕುಂತಿಯರು ದೇಹವನ್ನು ತ್ಯಜಿಸಿ ಪರಲೋಕಕ್ಕೆ ಹೋದರು ಎಂಬ ಸುದ್ದಿಯನ್ನು ಸಂಜಯನ ಮೂಲಕ ಕೇಳಿದ ಪಾಂಡವರು ಅವರ ಉತ್ತರಕ್ರಿಯೆಗಳನ್ನು ಮಾಡಿದರು. ಧೃತರಾಷ್ಟ್ರನು ಮೊದಲೆಲ್ಲ ಅನ್ಯಾಯಗಳನ್ನು ಮಾಡಿದವನಾದರೂ ಈಗ ಪಶ್ಚಾತ್ತಾಪಪೂರ್ವಕವಾಗಿ ಮಾಡಿದ ತಪಸ್ಸಿನಿಂದ ಹಾಗೂ ಮೂವರ ಸ್ವರೂಪದಲ್ಲಿರುವ ವಿಷ್ಣುಭಕ್ತಿ, ಜ್ಞಾನ ಮೊದಲಾದ ಗುಣಗಳಿಂದ, ಸತ್ಪುತ್ರರಾದ ಪಾಂಡವರು ಮಾಡಿದ ಉತ್ತರಕ್ರಿಯೆಗಳಿಂದ ಪರಲೋಕದಲ್ಲಿ ಸುಖಾಭಿವೃದ್ಧಿಯನ್ನು ಹೊಂದಿದರು. ಸಂಜಯನು ಶ್ರೀವೇದವ್ಯಾಸದೇವರ ಹತ್ತಿರಕ್ಕೆ ಬಂದು ಅವರ ಸೇವೆಮಾಡಿ ತನ್ನ ಗತಿಯನ್ನು ಹೊಂದಿದನು. ಪಾಂಡವರು ನಿತ್ಯದಲ್ಲಿ ಶ್ರೀಕೃಷ್ಣ ಶ್ರೀವ್ಯಾಸದೇವರನ್ನು ನೋಡುತ್ತಾ ಸೇವಿಸುತ್ತಾ, ಸ್ಮರಿಸುತ್ತಾ, ಪರಿಪೂರ್ಣ ಧರ್ಮ, ಅರ್ಥ, ಮೋಕ್ಷ ಮೊದಲಾದ ಪುರುಷಾರ್ಥಗಳುಳ್ಳವರಾಗಿ ಧರ್ಮದಿಂದ ರಾಜ್ಯವನ್ನಾಳುತ್ತಾ ಹದಿನೆಂಟು ವರ್ಷಗಳನ್ನು ಕಳೆದರು.

ಇಲ್ಲಿಗೆ ಮೂವತ್ತೊಂದನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು.

॥ ಶ್ರೀ ಮಧ್ವೇಶಾರ್ಪಣಮಸ್ತು ॥

-ಃ ಶ್ರೀಹರಿ ಮಧ್ವ ಸ್ತೋತ್ರ ಃ-

ಆನಂದತೀರ್ಥಪುಂಸಿಂಹೋ ಮಾಯಾವಾದಿದಿತೇಃ ಸುತಾನ್ ।
ವಿದಾರ್ಯಯುಕ್ತಿನಖರೈರಪ್ರತೀಪೋಽಭಿಭಾಸತೇ ॥೧॥

ಪಲಾಯಧ್ವಂ ಪಲಾಯಧ್ವಂ ತ್ವರಯಾ ಮಾಯಿದಾನವಾಃ ।
ಸರ್ವಜ್ಞಹರಿರಾಯಾತಿ ತರ್ಕಾಗಮದರಾದಿಭೃತ್ ॥೨॥

ದ್ರವತದ್ರವತಾಶುಮಾಯಿನಃ ಪ್ರವಿಶಧ್ವಮತಂದ್ರಿತಾ ಗುಹಾಃ ।
ಕಮಲಾರಮಣಾಂಬರಾಶ್ರಯಃ ಸಮುದೇತ್ಯಖಿಲಜ್ಞಭಾಸ್ಕರಃ ॥೩॥

ನೃಹರಿಃಸಕಲಜ್ಞನಾಮಕಃ ಸಮುಪೈತಿ ಹಿ ಮಾಯಿದಾನವಾನ್ ।
ಪ್ರಪಲಾಯನಮತ್ರ ತತ್ಕ್ಷಮಂ ತ್ವರಯಾ ವಸತಿರ್ಗುಹಾಸು ಚ ॥೪॥

ಜಯತ್ಯಾನಂದತೀರ್ಥೇಷ್ಟದೇಪತಾನರಕೇಸರೀ ।
ವಿಪಾಟಿತಾಜ್ಞಾನತಮಃಕಪಾಟಾತ್ಯುರುಹುಂಕೃತಃ ॥೫॥

ಜಯತ್ಯಮಿತಪೌರುಷಃ ಸ್ವಜನತೇಷ್ಟಚಿಂತಾಮಣಿಃ ।
ಅಜೇಶಮುಖವಂದಿತೋ ಗುಣಗಣಾರ್ಣವಃಶ್ರೀಪತಿಃ ॥೬॥

ಸರ್ವಜ್ಞಸನ್ಮನೀಂದ್ರೋಚ್ಚಸನ್ಮನಃಪಂಕಜಾಲಯಃ ।
ಅಜಿತೋಜಯತಿ ಶ್ರೀಶಃ ರಮಾಬಾಹುಲತಾಶ್ರಯಃ ॥೭॥

॥ಶ್ರೀಃ॥

॥ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ ॥

ಶ್ರೀಮದ್ಭನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

॥ ೩೨ ನೆಯ ಅಧ್ಯಾಯವು ॥

ಓಂ ॥ ತತಃ ಕುರುಕ್ಷೇತ್ರಮವಾಪ್ಯ ಕೃಷ್ಣೋ ದೀಕ್ಷಾಂ ಪ್ರಪೇದೇ ದ್ವಿಷಡಬ್ದಸತ್ರೇ ।
ಸ ಏವ ಚ ವ್ಯಾಸಭೃಗೂದ್ವಹಾತ್ಮಾ ಚಕ್ರೇಽತ್ರ ಸಾದಸ್ಯಮಜೋಽಪ್ರಮೇಯಃ ॥೧॥

ತತಃ—ಪಾಂಡವರು ೧೦ ವರ್ಷಗಳವರೆಗೆ ರಾಜ್ಯಪಾಲನ ಮಾಡಿದ ನಂತರ, ಕೃಷ್ಣಃ—ಶ್ರೀಕೃಷ್ಣ ಪರಮಾತ್ಮನು, ಕುರುಕ್ಷೇತ್ರಂ ಅವಾಪ್ಯ—ಕುರುಕ್ಷೇತ್ರವನ್ನು ಹೊಂದಿ, ದ್ವಿಷಡಬ್ದಸತ್ರೇ—ಹನ್ನೆರಡುವರ್ಷಗಳ ಯಾಗ(ಕ್ಕಾಗಿ)ದ ವಿಷಯದಲ್ಲಿ, ದೀಕ್ಷಾಂ ಪ್ರಪೇದೇ—ದೀಕ್ಷೆಯನ್ನು ಹೊಂದಿದನು. ವ್ಯಾಸಭೃಗೂದ್ವಹಾತ್ಮಾ—ವ್ಯಾಸಪರಶುರಾಮ ರೂಪವಾದ, ಅಜಃ ಅಪ್ರಮೇಯಃ ಸಃ ಏವ—ಉತ್ಪತ್ತಿರಹಿತನಾದ, ಯಾರಿಂದಲೂ ತಿಳಿಯಲು ಅಶಕ್ಯನಾದ ಅದೇ ಶ್ರೀ ಕೃಷ್ಣಭಗವಂತನು, ಅತ್ರ—ಈ ಸತ್ರದಲ್ಲಿ, ಸಾದಸ್ಯಂ ಚಕ್ರೇ—ಆ ಯಜ್ಞದಲ್ಲಿ ಮಾಡ ಬೇಕಾದ ವಿಹಿತಕರ್ಮಗಳ ನೇತೃತ್ವವನ್ನು ವಹಿಸಿದನು. ॥೧॥

ತತ್ರರ್ತ್ವಿಜೋ ದಕ್ಷಭೃಗುಪ್ರಧಾನಾಃ ಪಾರ್ಥಾ ಯದೂನಾಂ ಪ್ರವರೈಃ ಸಮೇತಾಃ ।
ಬ್ರಹ್ಮೇಶಶಕ್ರಪ್ರಮುಖಾಃ ಸುರಾಶ್ಚ ಚಕ್ರುಃ ಸುಸಾಚಿವ್ಯಮನಂತದಾಸಾಃ ॥೨॥

ತತ್ರ—ಆ ಸತ್ರದಲ್ಲಿ, ದಕ್ಷಭೃಗುಪ್ರಧಾನಾಃ—ದಕ್ಷ, ಭೃಗು ಮೊದಲಾದ ಪ್ರಜಾಪತಿಗಳು, ಋತ್ವಿಜಃ —ಋತ್ವಿಜರಾಗಿದ್ದರು. ಅನಂತದಾಸಾಃ —ಶ್ರೀಹರಿಯ ಸೇವಕರಾದ, ಯದೂನಾಂ ಪ್ರವರೈಃ —ಯಾದವರಲ್ಲಿ ಶ್ರೇಷ್ಠರಾದವರಿಂದ, ಸಮೇತಾಃ —ಕೂಡಿದಂಥ, ಪಾರ್ಥಾಃ—ಪಾಂಡವರು, ಬ್ರಹ್ಮೇಶಶಕ್ರಪ್ರಮುಖಾಃ ಸುರಾಃ ಚ—ಬ್ರಹ್ಮರುದ್ರ ಇಂದ್ರ ಮೊದಲಾದ ದೇವತೆಗಳೊಕೂಡ, ಸುಸಾಚಿವ್ಯಂ—ಪೂರ್ಣ ಸಹಕಾರವನ್ನು ಸೇವೆಯನ್ನು, ಚಕ್ರುಃ —ಮಾಡಿದರು. ॥೨॥

ಸರ್ವೇ ಚ ಜೀವಾ ವಸುಧಾತಲಸ್ಥಾ ಯೇಽನ್ಯೇಽಂತರಿಕ್ಷದ್ಯುಮುಖೋತ್ತರೇಷು ।
ವಸಂತಿ ನಾರಾಯಣಪಾದಸಂಶ್ರಯಾಸ್ತೇ ಚಾತ್ರ ಸರ್ವೇ ಮುಮುದುಃ ಸನಾಗಾಃ ॥೩॥

ವಸುಧಾತಲಸ್ಥಾಃ —ಭೂಮಿಯಲ್ಲಿರುವ, ಸರ್ವೇ ಜೀವಾಃ —ಎಲ್ಲ ಜೀವರು. ಚ—ಹಾಗು, ಅನ್ಯೇ ಯೇ—ಬೇರೆ ಯಾವ ಚೇತನರು, ಅಂತರಿಕ್ಷದ್ಯುಮುಖೋತ್ತರೇಷು—ಭುವರ್ಲೋಕ ಸ್ವರ್ಗಲೋಕ ಮೊದಲಾದ

ಮೇಲಿನ ಲೋಕಗಳಲ್ಲಿ, ವಸಂತಿ—ವಾಸಿಸುವರೋ, ತೇ – ಅಂತಹ, ನಾರಾಯಣಪಾದಸಂಶ್ರಯಾಃ —ನಾರಾಯಣ ಪಾದವನ್ನು ಆಶ್ರಯಿಸಿದ (ಶ್ರೀಹರಿಯ ಭಕ್ತರಾದ) ಸನಾಗಾಃ ತೇ ಸರ್ವೇ—ನಾಗಲೋಕದ ಪ್ರಜೆಗಳಿಂದ ಸಹಿತ ರಾದ ಆ ಎಲ್ಲರೂ, ಅತ್ರ—ಈ ಯಜ್ಞದಲ್ಲಿ (ಬಂದು), ಮುಮುದುಃ —ಸಂತೋಷಪಟ್ಟರು. ॥೩॥

ಸುನಿರ್ಣಯಸ್ತತ್ತ್ವವಿನಿರ್ಣಯಾರ್ಥಿನಾಂ ತತ್ತ್ವಸ್ಯ ಚಾಭೂದಿಹ ವಾದಶೀಲಿನಾಮ್ ।
ಮಿಥೋ ವಿವಾದಾತ್ ಸುರಭೂಸುರಾಣಾಂ ವಾಕ್ಯಾದ್ಧರೇರ್ವ್ಯಾಸಭೃಗೂದ್ವಹಾತ್ಮನಃ ॥೪॥

ತತ್ತ್ವವಿನಿರ್ಣಯಾರ್ಥಿನಾಂ—ತತ್ತ್ವನಿರ್ಣಯದ ಅಪೇಕ್ಷೆಯುಳ್ಳವರಿಗೆ, ಇಹ—ಈ ಸತ್ರ ಸಭೆಯಲ್ಲಿ, ವಾದಶೀಲಿನಾಂ—ವಾದ ಮಾಡುವ ಸ್ವಭಾವವುಳ್ಳ, ಸುರಭೂಸುರಾಣಾಂ—ದೇವತೆಗಳು ವಿಪ್ರರು ಇವರಿಗೆ, ಮಿಥಃ ವಿವಾದಾತ್—ಪರಸ್ಪರ ವಾದವಾಗಿ, ವ್ಯಾಸಭೃಗೂದ್ವಹಾತ್ಮನಃ —ಶ್ರೀವೇದವ್ಯಾಸ ಪರಶುರಾಮ ರೂಪವುಳ್ಳ, ಹರೇಃ—ಶ್ರೀಹರಿಯ, ವಾಕ್ಯಾತ್—ನಿರ್ಣಾಯಕ ವಾಕ್ಯದಿಂದ, ತತ್ತ್ವಸ್ಯ ಸುನಿರ್ಣಯಃ — ತತ್ತ್ವ ನಿಶ್ಚಯವು, ಅಭೂತ್—ಉಂಟಾಯಿತು. ॥೪॥

ಧರ್ಮಾರ್ಥಕಾಮಾನಖಿಲಾನವಾಪುಸ್ತದರ್ಥಿನೋ ಮುಕ್ತಿಮಪೀಹ ಕೃಷ್ಣಾತ್ ।
ಯಥೇಷ್ಟಪಾನಾಶನವಾಸಸೋ ಜನಾ ವಿಚೇರುರತ್ರಾಮರಮಾನವಾದಯಃ ॥೫॥

ಅಖಿಲಾನ್ ಧರ್ಮಾರ್ಥಕಾಮಾನ್—ಎಲ್ಲ ಧರ್ಮಅರ್ಥಕಾಮ - ಪುರುಷಾರ್ಥಗಳನ್ನು, ಮುಕ್ತಿಂ ಅಪಿ—ಮೋಕ್ಷವನ್ನೂ ಕೂಡ, ತದರ್ಥಿನಃ —ಅವುಗಳನ್ನು ಅಪೇಕ್ಷಿಸುವವರು, ಇಹ,—ಈ ಸಭೆಯಲ್ಲಿ, ಕೃಷ್ಣಾತ್—ಶ್ರೀಕೃಷ್ಣಪರಮಾತ್ಮನ ಅನುಗ್ರಹದಿಂದ, ಅವಾಪುಃ —ಹೊಂದಿದರು. ಯಥೇಷ್ಟಪಾನಾಶನ ವಾಸಸಃ —ಬೇಕಾದಷ್ಟು ಪೇಯ ಆಹಾರ ವಸ್ತ್ರಗಳುಳ್ಳ, ಅಮರಮಾನವಾದಯಃ ಜನಾಃ—ದೇವತೆಗಳು ಮನುಷ್ಯರು ಇವರೇ ಮೊದಲಾದ ಜನರು, ಅತ್ರ—ಈ ಯಜ್ಞ ಸಭೆಯಲ್ಲಿ, ವಿಚೇರುಃ—ಅಡ್ಡಾಡುತ್ತಿದ್ದರು. ॥೫॥

ಕ್ಷೇತ್ರಂ ತದಾಸೀದ್ಧರಿಲೋಕಸಮ್ಮಿತಂ ಯದೀಯುರತ್ರಾಖಿಲಸಜ್ಜನಾ ಯುತಿಮ್ ।
ನಾನಾಪ್ತಕಾಮಾಶ್ಚ ಯತೋ ಬಭೂವುರ್ನಿರ್ಯತ್ನದೃಶ್ಯಶ್ಚ ಯತೋಽತ್ರ ಕೇಶವಃ ॥೬॥

ಯತಃ — ಯಾವಕಾರಣದಿಂದ, ಅತ್ರ—ಈ ಯಜ್ಞ ಸಭೆಯಲ್ಲಿ, ಅಖಿಲಸಜ್ಜನಾಃ—ಎಲ್ಲ ತರಹದ (ದೇವಋಷಿಗಂಧರ್ವ ರಾಜ ಮನುಷ್ಯಾದಿ) ಸಾತ್ವಿಕಚೇತನರು, ಯುತಿಂ—ಮಿಶ್ರಣ (ಮೇಲನ)ವನ್ನ, ಈಯುಃ—ಹೊಂದಿದ್ದರೋ, ಯತಃ —ಯಾವಕಾರಣದಿಂದ, ತೇ ಸರ್ವೇ—ಅವರೆಲ್ಲರೂ, ಅನಾಪ್ತಕಾಮಾಃ —ಇಚ್ಛಿಸಿದ್ದನ್ನು ಹೊಂದದವರು, ನ ಬಭೂವುಃ—ಆಗಿರಲಿಲ್ಲವೋ (ಎಲ್ಲರೂ ಅಪೇಕ್ಷಿಸಿದ ಎಲ್ಲವನ್ನು ಹೊಂದೇ ಹೊಂದಿದ್ದರೋ) ಚ—ಮತ್ತು ಯತಃ —ಯಾವಕಾರಣದಿಂದ, ಅತ್ರ—ಇಲ್ಲಿ, ಕೇಶವಃ —ಶ್ರೀಹರಿಯು, ನಿರ್ಯತ್ನದೃಶ್ಯಃ ಪ್ರಯತ್ನವಿಲ್ಲದೇ ಕಾಣಲು ಸಿಗುವಂಥವನು, ಬಭೂವ—ಆಗಿದ್ದನೋ, ತತಃ —ಆ ಕಾರಣದಿಂದ ತತ್ ಕ್ಷೇತ್ರಂ— ಆ ಕುರುಕ್ಷೇತ್ರವು, ಹರಿಲೋಕಸಮ್ಮಿತಂ—ಶ್ರೀಹರಿಯ ವೈಕುಂಠ ಲೋಕಕ್ಕೆ ಸದೃಶವು, ಆಸೀತ್—ಆಗಿತ್ತು. ॥೬॥

ದ್ವಾದಶಾಬ್ದಂ ಮಹಾಸತ್ರಮೇವಮೇತಾದೃಶಂ ಹರಿಃ ।
ಸಮಾಪ್ಯಾವಭೃತಸ್ನಾತಃ ಪೂಜಯಿತ್ವಾಽಖಿಲಾನ್ ಜನಾನ್
ಅನುಜಜ್ಞೇ ಕ್ರಮೇಣೈವ ವತ್ಸರೇಣ ಸಮಾಗತಾನ್ ।
ಸ್ವಕುಲಂ ಸಂಜೀಹಿಷ್ಣುಃ ಸ ವಿಪ್ರಶಾಪಮಜೀಜನತ್ ॥೭-೮॥

ಹರಿಃ—ಶ್ರೀಕೃಷ್ಣ ಪರಮಾತ್ಮನು, ಏವಂ—ಈ ರೀತಿಯಾಗಿ, ದ್ವಾದಶಾಬ್ದಂ—ಹನ್ನೆರಡು ವರ್ಷಗಳವರೆಗೆ ಮಾಡಿದ, ಏತಾದೃಶಂ ಮಹಾಸತ್ರಂ–ಇಂತಹ ಮಹಾಸತ್ರವನ್ನು, ಸಮಾಪ್ಯ—ಮುಗಿಸಿ, ಅವಭೃಥಸ್ನಾತಃ ಸನ್–ಅವಭೃಥಸ್ನಾನವನ್ನು ಮಾಡಿದವನಾಗಿ, ಸಮಾಗತಾನ್–ಸತ್ರಕ್ಕೆ ಬಂದಂಥ, ಅಖಿಲಾನ್ ಜನಾನ್,—ಎಲ್ಲ ಜನರನ್ನು, ಪೂಜಯಿತ್ವಾ—ಪೂಜಿಸಿ, ಕ್ರಮೇಣ ಏವ—ಇಂದು ಕೆಲವರನ್ನು, ಇನ್ನು ಕೆಲವರನ್ನು ಮರುದಿನ ಈ ಕ್ರಮದಿಂದಲೇ, ವತ್ಸರೇಣ—ಒಂದು ವರ್ಷದ ಅವಧಿಯಲ್ಲಿ, ಅನುಜಜ್ಞೇ—ಕಳಿಸಿಕೊಟ್ಟನು. ಸಃ —ಆ ಶ್ರೀಕೃಷ್ಣಪರಮಾತ್ಮನು, ಸ್ವಕುಲಂ—ತನ್ನ ಕುಲವನ್ನು. ಸಂಜಿಹೀರ್ಷುಃ ಸನ್—ಸಂಹರಿಸಲು ಇಚ್ಛೆಯುಳ್ಳವನಾಗಿ, ವಿಪ್ರಶಾಪಂ—ಬ್ರಾಹ್ಮಣ ಶಾಪವನ್ನು, ಅಜೀಜನತ್—ಉಂಟು ಮಾಡಿದನು. ॥ ೭–೮ ॥

ಉಪದಿಶ್ಯ ಪರಂ ಜ್ಞಾನಮುದ್ಧವಾಯಾಮುಮಾಶ್ರಮಮ್ ।
ಬದರ್ಯಾಖ್ಯಂ ಪ್ರಾಪಯಿತ್ವಾ ಸಪ್ತಮಾಬ್ದಂ ಶತೋತ್ತರಮ್ ।
ಪ್ರತೀಕ್ಷನ್ ಪಾಲಯಾಮಾಸ ಪಾರ್ಥೈಃ ಸಹ ಭುವಂ ಪ್ರಭುಃ ॥೯॥

ಪ್ರಭುಃ—ಸ್ವಾಮಿಯಾದ ಶ್ರೀಕೃಷ್ಣನು, ಉದ್ಧವಾಯ—ಉದ್ಧವನಿಗೆ, ಪರಂ ಜ್ಞಾನಂ—ಶ್ರೇಷ್ಠವಾದ ತತ್ವವನ್ನು, ಉಪದಿಶ್ಯ–ಉಪದೇಶಮಾಡಿ, ಮುಂ – ಅವನನ್ನು, ಬದರ್ಯಾಖ್ಯಂ ಆಶ್ರಮಂ – ಬದರಿಕಾಶ್ರಮವನ್ನು ಕುರಿತು, ಪ್ರಾಪಯಿತ್ವಾ—ಕಳಿಸಿ, ಶತೋತ್ತರಂ ಸಪ್ತಮಾಬ್ದಂ—ಒಂದುನೂರು ವರ್ಷಗಳ ನಂತರ ಏಳನೆಯ ವರ್ಷವನ್ನು, ಪ್ರತೀಕ್ಷನ್ ಸನ್—ನಿರೀಕ್ಷಿಸುವವನಾಗಿ, ಭುವಂ—ಭೂಮಿಯನ್ನು, ಪಾರ್ಥೈಃ ಸಹ ಪಾಂಡವರಿಂದ ಕೂಡಿಕೊಂಡು, ಪಾಲಯಾಮಾಸ— ರಕ್ಷಿಸಿದನು. ॥ ೯ ॥

ಭಾವಾನುವಾದ ೧—೯

ಪಾಂಡವರು ೧೮ ವರ್ಷಗಳವರೆಗೆ ರಾಜ್ಯಪಾಲನ ಮಾಡಿದ ನಂತರದಲ್ಲಿ ಶ್ರೀಕೃಷ್ಣಪರಮಾತ್ಮನು ಕುರುಕ್ಷೇತ್ರಕ್ಕೆ ಬಂದು, ಹನ್ನೆರಡು ವರ್ಷಗಳವರೆಗೆ ಮಾಡುವ ಸತ್ರಕ್ಕಾಗಿ ದೀಕ್ಷಾಬದ್ಧನಾದನು. ಶ್ರೀವ್ಯಾಸಪರುಶರಾಮ ದೇವರು ಈ ಯಜ್ಞದಲ್ಲಿ ಸಾದಸ್ಯತ್ವವನ್ನು ನೇತೃತ್ವವನ್ನು ವಹಿಸಿದರು. ದಕ್ಷಪ್ರಜಾಪತಿ, ಭೃಗು ಮೊದಲಾದವರು ಋತ್ವಿಜರಾಗಿದ್ದರು. ಯಾದವರಿಂದ ಸಮೇತರಾದ ಪಾಂಡವರು ಹಾಗೂ ಮೂಲರೂಪದದೇವತೆಗಳು ಈ ಯಜ್ಞದಲ್ಲಿ ಭಗವಂತನ ಸೇವೆಯನ್ನು ಮಾಡಿದರು. ಭೂಲೋಕ, ಅಂತರಿಕ್ಷಲೋಕ ಮೊದಲಾದ ಎಲ್ಲ ಲೋಕಗಳಲ್ಲಿರುವ ಎಲ್ಲ ಭಗವದ್ಭಕ್ತರೂ ಈ ಯಜ್ಞದಲ್ಲಿ ಭಾಗವಹಿಸಿ ಆನಂದಪಟ್ಟರು. ನಾಗಗಳೂ ಕೂಡ ಪಾತಾಲಾದಿಗಳಿಂದ ಬಂದು ಭಾಗವಹಿಸಿದರು. ಈ ಯಜ್ಞಸಭೆಯಲ್ಲಿ ಬ್ರಾಹ್ಮಣರಿಗೆ ದೇವತೆಗಳಿಗೆ ವಾಕ್ಯಾರ್ಥಚರ್ಚೆಗಳಾದವು. ಶ್ರೀವ್ಯಾಸಪರಶುರಾಮರೂಪೀ ಭಗವಂತನು ಇವರ ಚರ್ಚೆಗಳಿಗೆ ಕೊನೆಯ ನಿರ್ಣಯವನ್ನು ಕೊಡುತ್ತಿದ್ದನು. ಹೀಗಾಗಿ ಅನೇಕರಿಗೆ ಇದ್ದ ಸಂಶಯಗಳೆಲ್ಲವೂ ಪರಿಹೃತವಾದವು. ಚತುರ್ವಿಧ ಪುರುಷಾರ್ಥಾಪೇಕ್ಷಿಗಳಾದ ಅಧಿಕಾರಿಗಳು ಅದೆಲ್ಲವನ್ನು ಪಡೆದರು. ಇಲ್ಲಿಗೆ ಬಂದ ದೇವತೆಗಳು ಮನುಷ್ಯರು ಮೊದಲಾದವರೆಲ್ಲರೂ ಯಥೇಷ್ಟ ಪಾನಾಶನವುಳ್ಳವರಾಗಿದ್ದರು. ಈ ಎಲ್ಲ ಭಕ್ತರಿಂದ ಕೂಡಿದ ಈ ಕ್ಷೇತ್ರವು ಶ್ರೀಹರಿಯ ಲೋಕವೈಕುಂಠಕ್ಕೆ ಸದೃಶವಾಗಿತ್ತು. ಏಕೆಂದರೆ ಅಲ್ಲಿ ಎಲ್ಲ ತರಹದ ಭಕ್ತರು ಸೇರಿರುವರು; ಭಗವಂತನ ದರ್ಶನವು ಸರಳವಾಗಿ ಆಗುತ್ತಿರುವದು. ಅದೆಲ್ಲವೂ ಕೂಡ ಇಲ್ಲಿಯೂ ಇತ್ತು. ಅಲ್ಲಿ ಇಚ್ಛಿಸಿದ್ದು ಎಲ್ಲವೂ ಸಿಗುತ್ತದೆ; ಅದರಂತೆ ಇಲ್ಲಿಯೂ ಕೂಡ ಎಲ್ಲರಿಗೂ ಅವರ ಅಭೀಷ್ಟಗಳೆಲ್ಲವೂ ಸಿಗುತ್ತಿದ್ದವು. ಹೀಗಾಗಿ ವೈಕುಂಠಸದೃಶವಾಗಿತ್ತು. ಈ ರೀತಿಯಾಗಿ ನಡೆದ ಆ ಯಜ್ಞವನ್ನು ಮುಗಿಸಿ ಶ್ರೀಹರಿಯು ಅವಭೃಥ ಸ್ನಾನವನ್ನು ಮಾಡಿ, ಬಂದು ಎಲ್ಲರನ್ನು ಪೂಜಿಸಿ ಕ್ರಮವಾಗಿಬೀಳ್ಕೊಟ್ಟನು. ಬಂದ ಎಲ್ಲರನ್ನು ಬೀಳ್ಕೊಡುವದಕ್ಕೆ ಒಂದು ವರ್ಷದ ಅವಧಿ ಹಿಡಿಯಿತು. ಇನ್ನು ಮುಂದೆ ತನ್ನ ಯಾದವ ಕುಲವನ್ನು ಸಂಹರಿಸಲು ಇಚ್ಛಿಸಿ ಅದಕ್ಕೆ ಪೀಠಿಕಾರೂಪವಾಗಿ ಬ್ರಾಹ್ಮಣಶಾಪವನ್ನುಂಟುಮಾಡಿಸಿದನು. ಉದ್ಧವನಿಗೆ ಶ್ರೇಷ್ಠತತ್ವಜ್ಞಾನವನ್ನು ಕೊಟ್ಟು ಬದರೀಕ್ಷೇತ್ರಕ್ಕೆ ಕಳಿಸಿ, ತಾನು ಒಂದುನೂರಾ ಏಳನೆಯ ವರ್ಷವನ್ನು ನಿರೀಕ್ಷಿಸುತ್ತಾ ಪಾಂಡವರಿಂದ ಕೂಡಿಕೊಂಡು ರಾಜ್ಯವನ್ನು ಆಳುತ್ತಿದ್ದನು.

ಸಮಾರಬ್ಧಂ ಕಲಿಯುಗಂ ಯದಾ ದುರ್ಯೋಧನೋಽಪತತ್ ।
ಷಷ್ಟ್ರಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್ ॥೧೦॥

ಯದಾ—ಯಾವ ದಿನ, ದುರ್ಯೋಧನಃ—ದುರ್ಯೋಧನನು, ಅಪತತ್—ಬಿದ್ದನೋ, ತದಾ—ಆ ದಿನವೇ ಕಲಿಯುಗಂ ಸಮಾರಬ್ಧಂ—ಪ್ರಾರಂಭವಾಯಿತು. ಪುನಃ ಅದರ ನಂತರವೂ ಕೂಡ, ಕೃಷ್ಣಃ—ಶ್ರೀಕೃಷ್ಣಪರಮಾತ್ಮನು ಷಷ್ಟ್ರಂಶಾಬ್ದಂ—೬೦ ವರ್ಷಗಳವರೆಗೂ, ಕೃತಂ ಏವ—ಕೃತಯುಗದಂತೆಯೇ, ಅನ್ವವರ್ತಯತ್—ಪ್ರವರ್ತನ ಮಾಡಿಪನು. ॥ ೧೦ ॥

ಕೃತಾದಪಿ ವಿಶೇಷೋಽಯಂ ಯತ್ ಪುಣ್ಯಸ್ಯಾಧಿಕಂ ಫಲಮ್ ।
ಅಲ್ಪಮೇವ ಚ ಪಾಪಸ್ಯ ಕಾಲಾತ್ ಕೃಷ್ಣಾಜ್ಞಯಾ ತಥಾ ॥೧೧॥

ಕಾಲಾತ್—ಕಲಿಯುಗಸ್ವಭಾವದಿಂದ, ತಥಾ—ಹಾಗೂ, ಕೃಷ್ಣಾಜ್ಞಯಾ—ಶ್ರೀಕೃಷ್ಣನ ಅಪ್ಪಣೆಯ ಪ್ರಕಾರ, ಯತ್—ಯಾವಕಾರಣದಿಂದ, ಪುಣ್ಯಸ್ಯ—ಅಲ್ಪ ಪುಣ್ಯಕಾರ್ಯಕ್ಕೆ, ಅಧಿಕಂ ಫಲಂ—ಹೆಚ್ಚು ಫಲವಿತ್ತೋ, ಚ—ಹಾಗೂ, ಪಾಪಸ್ಯ—ಹೆಚ್ಚು ಪಾಪಕ್ಕೂಕಾಡ, ಅಲ್ಪಮೇವ ಫಲಂ—ಅಲ್ಪವೇ ಫಲವಿತ್ತೋ, ತತ್—ಆ ಕಾರಣದಿಂದ, ಕೃತಾತ್ ಅಪಿ—ಕೃತಯುಗಕ್ಕಿಂತಲೂ, ಅಯಂ ವಿಶೇಷಃ—ಇದೊಂದು ಹೆಚ್ಚಿನ ಲಾಭವು (ಕಲೌ—ಕಲಿಯುಗದ ಆ ಸಮಯದಲ್ಲಿ, ಅಸೀತ್—ಇತ್ತು). ॥ ೧೧ ॥

ಏವಂ ಸುಧಾರ್ಮಿಕೇ ಲೋಕೇ ಹರಿಭಕ್ತಿಪರಾಯಣೇ ।
ನಷ್ಟೇಷು ಕಲಿಲಿಂಗೇಷು ಯುಗವೃತ್ತಿಮಭೀಪ್ಸವಃ ॥೧೨॥
ಬ್ರಹ್ಮರುದ್ರಾದಯೋ ದೇವಾಃ ಸ್ತುತ್ವಾ ಕೇಶವಮವ್ಯಯಮ್ ।
ವ್ಯಜ್ಞಾಪಯನ್ ಸ್ವಲೋಕಾಪ್ತಿಮೋಮಿತ್ಯಾಹ ಸ ಚಾಚ್ಯುತಃ ॥೧೩॥

ಏವಂ—ಈ ರೀತಿಯಾಗಿ, ಲೋಕೇ—ಜನತೆಯು, ಸುಧಾರ್ಮಿಕೇ ಸತಿ—ಅಂತ್ಯಂತ ಧಾರ್ಮಿಕವಾಗಿರುತ್ತಿರಲು, ಹರಿ-ಭಕ್ತಿಪರಾಯಣೇ ಸತಿ-ಶ್ರೀಹರಿಭಕ್ತಿರತರಾಗಿರಲು, ಕಲಿಲಿಂಗೇಷು ನಷ್ಟೇಷು ಸತ್ಸು—ಕಲಿಯುಗದ ಚಿಹ್ನಗಳಾದ ಹೆಚ್ಚು ಪಾಪಕಾರ್ಯಗಳು ಅಲ್ಪಪುಣ್ಯಕಾರ್ಯಗಳು ನಡೆಯುವದು ಎಂಬ ಚಿಹ್ನಗಳು ಇಲ್ಲದಾಗುತ್ತಿರಲು, ಯುಗವೃತ್ತಿಂ—ಕಲಿಯುಗದ ಧರ್ಮಪ್ರವೃತ್ತಿಯನ್ನು, ಅಭೀಪ್ಸವಃ—ಇಚ್ಛಿಸತಕ್ಕ, ಬ್ರಹ್ಮರುದ್ರಾದಯಃ ದೇವಾಃ—ಬ್ರಹ್ಮರುದ್ರರೇ ಮೊದಲಾದ ದೇವತೆಗಳು, ಅವ್ಯಯಂ ಕೇಶವಂ—ನಾಶರಹಿತನಾದ ಶ್ರೀಕೃಷ್ಣನ ಹತ್ತಿರ, ಸ್ವಲೋಕಾಪ್ತಿಂ—ತನ್ನ ಲೋಕಕ್ಕೆ ಬರುವ ಬಗ್ಗೆ, ವ್ಯಜ್ಞಾಪಯನ್—ವಿಜ್ಞಾಪಿಸಿದರು, ಸಃ ಅಚ್ಯುತಃ ಚ—ಆ ಶ್ರೀಕೃಷ್ಣಪರಮಾತ್ಮನಾದರೂ ಕೂಡ, ಓಂ ಇತಿ—ಹಾಗೆ ಆಗಲಿ ಬರುವೆ ಎಂದು, ಆಹ—ಹೇಳಿದನು. ॥ ೧೨—೧೩ ॥

ಪ್ರಾಚುರ್ಯೇ ಸಜ್ಜನಸ್ಯ ಸ್ಯಾನ್ನ ಕಲೇರ್ವೃದ್ಧಿರಂಜಸಾ ।
ಇತಿ ಸ್ವಕುಲಸಂಹೃತ್ಯೈ ಪ್ರಭಾಸಮನಯತ್ ಪ್ರಭುಃ ॥೧೪॥

ಸಜ್ಜನಸ್ಯ ಪ್ರಾಚುರ್ಯೇ ಸತಿ—ಸಜ್ಜನರೇ ಬಹಳವಿದ್ದರೆ, ಕಲೇಃ ವೃದ್ಧಿಃ—ಕಲಿ ಧರ್ಮಗಳ ಬೆಳವಣಿಗೆಯು, ಅಂಜಸಾ—ಸರಿಯಾಗಿ, ನ ಸ್ಯಾತ್—ಆಗಲಾರದು, ಇತಿ—ಎಂಬ ಕಾರಣದಿಂದ, ಪ್ರಭುಃ—ಶ್ರೀಕೃಷ್ಣನು, ಸ್ವಕುಲಸಂಹೃತ್ಯೈ—ಸಜ್ಜನರಾದ ತನ್ನ ಕುಲಜನ ಸಂಹಾರಕ್ಕಾಗಿ; (ಸ್ವಕುಲಂ—ತನ್ನ ವಂಶದವರನ್ನು) ಪ್ರಭಾಸಂ ಪ್ರತಿ ಅನಯತ್—ಪ್ರಭಾಸಕ್ಷೇತ್ರವನ್ನು ಕುರಿತು ಕರೆದುಕೊಂಡು ಹೋದನು. ॥೧೪॥

ಅವತಾರಿಕೆ—ಪುಣ್ಯಕ್ಷೇತ್ರವಾದ ದ್ವಾರಕೆಯಲ್ಲಿದ್ದವರನ್ನು ಮರಣಕಾಲಕ್ಕೆ ಅದನ್ನು ಬಿಡಿಸಿ ಬೇರೆಡೆಗೆ ಕರೆದೊಯ್ದ ಶ್ರೀಕೃಷ್ಣನ ಉದ್ದೇಶವನ್ನು ತಿಳಿಸುತ್ತಾರೆ —

ಪುಣ್ಯಕ್ಷೇತ್ರೇಽಪಿ ನ ಮೃತಿಃ ಸ್ವಗೃಹೇ ತ್ವತಿಧರ್ಮದಾ ।
ಗತ್ವೈವಾಲ್ಪಮಪಿ ಕ್ಷೇತ್ರಂ ಸ್ಯಾನ್ಮಹಾಫಲಮಿತ್ಯಜಃ ॥೧೫॥
ಪ್ರಕಾಶಯಿತುಮೇ ವೈನಾನ್ ಪ್ರಭಾಸಾಯ ಕುಶಸ್ಥಲಾತ್ ।
ನೀತ್ವಾ ದಾನಾದಿಸದ್ಧರ್ಮಾಂಸ್ತೈರಕಾರಯದಚ್ಯುತಃ ॥೧೬॥

ಪುಣ್ಯಕ್ಷೇತ್ರೇ—ಪುಣ್ಯಕ್ಷೇತ್ರದಲ್ಲಿಯೇ, ವಿದ್ಯಮಾನೇ ಅಪಿ—ಇದ್ದರೂಕೂಡ, ಸ್ವಗೃಹೇ—ತಮ್ಮ ವಾಸ ಸ್ಥಾನದಲ್ಲಿಯೇ, ಮೃತಿಃ—ಮರಣಹೊಂದುವದು, ಅತಿಧರ್ಮದಾ ನ—ವಿಶೇಷ ಪುಣ್ಯಪ್ರದವಲ್ಲ, ತು—ಆದರೆ ಅಲ್ಪಂ ಅಪಿ ಕ್ಷೇತ್ರಂ—ತಮ್ಮ ವಾಸಕ್ಷೇತ್ರಕ್ಕಿಂತ ಕಡಿಮೆ ಪುಣ್ಯಕ್ಷೇತ್ರವಾದರೂ ಆ ಬೇರೆ ಪುಣ್ಯಕ್ಷೇತ್ರವನ್ನು ಕುರಿತು, ಸ್ವಗೃಹಾತ್(ಗತ್ವಾ)—ತನ್ನ ಮನೆಯಿಂದ ಹೋಗಿ, ಮೃತಸ್ಯ ಏವ—ಮರಣ ಹೊಂದಿದವನಿಗೇನೇ, ಮಹಾಫಲಂ ಸ್ಯಾತ್—ವಿಶೇಷ ಪುಣ್ಯವು ಉಂಟಾಗುವದು, ಇತಿ—ಎಂಬುದನ್ನು, ಪ್ರಕಾಶಯಿತುಂ ಏವ—ಜಗತ್ತಿಗೆ ತಿಳಿಸುವದಕ್ಕಾಗಿಯೇ, ಅಜಃ ಅಚ್ಯುತಃ—ಜನನಾದಿದೋಷದೂರನಾದ ಶ್ರೀಕೃಷ್ಣ ಪ್ರಭುವು, ಏನಾನ್—ತನ್ನ ಈ ಎಲ್ಲ ಯಾದವರನ್ನು, ಕುಶಸ್ಥಲಾತ್—ದ್ವಾರಕೆಯ ದೆಶೆಯಿಂದ, ಪ್ರಭಾಸಾಯ—ಪ್ರಭಾಸಕ್ಷೇತ್ರಕ್ಕೆ ನೀತ್ವಾ—ಕರೆತಂದು, ತೈಃ—ಅವರಿಂದ, ದಾನಾದಿಸದ್ಧರ್ಮಾನ್—ದಾನವೇ ಮೊದಲಾದ ಸದ್ಧರ್ಮಗಳನ್ನು, ಅಕಾರಯತ್—ಮಾಡಿಸಿದನು. ॥೧೫-೧೬॥

ತೇ ತತಃ ಶಾಪದೋಷೇಣ ಕೃಷ್ಣೇನೈವ ವಿಮೋಹಿತಾಃ ।
ಮೈರೇಯಮತ್ತಾ ಅನ್ಯೋನ್ಯಂ ನಿಪಾತ್ಯ ಸ್ವಾಂ ತನುಂ ಗತಾಃ ।
ತದ್ ದೃಷ್ಟ್ವಾ ಬಲದೇವೋಽಪಿ ಯೋಗೇನ ಸ್ವತನುಂ ಯಯೌ ॥೧೭॥

ತತಃ—ದಾನಾದಿ ಧರ್ಮಗಳನ್ನು ಮಾಡಿದನಂತರ, ತೇ—ಆ ಯಾದವರು, ಶಾಪದೋಷೇಣ—ಬ್ರಾಹ್ಮಣ ಶಾಪವೆಂಬ ದೋಷದಿಂದ, ಕೃಷ್ಣೇನ ಏವ—ಶ್ರೀಕೃಷ್ಣಮಾಯೆಯಿಂದಲೇ, ವಿಮೋಹಿತಾಃ ಸಂತಃ—ಮೋಹಿತರಾದವರಾಗಿ, ಮೈರೇಯಮತ್ತಾಃ ಸಂತಃ—ಮಧುಪಾನದಿಂದ ಮತ್ತರಾಗಿ, ಅನ್ಯೋನ್ಯಂ ನಿಪಾತ್ಯ—ಒಬ್ಬರಿಗೊಬ್ಬರು ಹೊಡೆದಾಡಿ, ಕೆಡವಿ, ಸ್ವಾಂ ತನುಂ—ತಮ್ಮ ತಮ್ಮ ಮೂಲರೂಪಕ್ಕೆ, ಗತಾಃ—ಹೋದರು, ತತ್—ಇದನ್ನು, ದೃಷ್ಟ್ವಾ—ನೋಡಿ, ಬಲದೇವಃ ಅಪಿ—ಬಲರಾಮದೇವರೂ ಕೂಡ, ಯೋಗೇನ—ಯೋಗಶಕ್ತಿಯಿಂದ, ಸ್ವಾಂ ತನುಂ—ತನ್ನ ಮೂಲ [ಶೇಷ] ರೂಪವನ್ನು ಕುರಿತು, ಯಯೌ—ಹೋದರು. ॥೧೭॥

ಭಾವಾನುವಾದ ೧೦-೧೭

ದುರ್ಯೋಧನನು ಶ್ರೀ ಭೀಮಸೇನದೇವರ ಗದಾಪ್ರಹಾರದಿಂದ ಕೆಳಗೆ ಬಿದ್ದದಿನವೇ ಕಲಿಯುಗದ ಆರಂಭವಾಯಿತು. ಆದರೂ ಅಂದಿನಿಂದ ಮುಂದೆ ಮೂವತ್ತಾರು ವರ್ಷಗಳವರೆಗೂಕೂಡ ಕೃತಯುಗದಂತೆ ಶ್ರೀಕೃಷ್ಣ ಪರಮಾತ್ಮನು ನಡಿಸಿದನು. ಒಂದು ದೃಷ್ಟಿಯಲ್ಲಿ ವಿಚಾರಿಸಿದರೆ ಕೃತಯುಗಕ್ಕಿಂತಲೂ ಈ ಸಮಯವು ಅಧಿಕವೇ ಆಗಿತ್ತು. ಏಕೆಂದರೆ ಕಾಲಸ್ವಭಾವದಿಂದ ಹಾಗು ಶ್ರೀಕೃಷ್ಣ ಪರಮಾತ್ಮನ ಸಂಕಲ್ಪದ ಪ್ರಕಾರ ಆ ಸಮಯದಲ್ಲಿ ಅಲ್ಪ ಪುಣ್ಯಕಾರ್ಯಕ್ಕೂ ಹೆಚ್ಚಿನ ಫಲ; ದೊಡ್ಡ ಪಾಪಕಾರ್ಯಕ್ಕೂ ಅಲ್ಪ ಫಲಗಳಿದ್ದವು. ಕೃತ-

ಯುಗದಲ್ಲಿ ಮಾತ್ರ ಮಹಾಪುಣ್ಯಕ್ಕೂ ಕೂಡ ಅಲ್ಪ ಫಲ. ಹಾಗೂ ಅಲ್ಪ ಪಾಪಕಾರ್ಯಕ್ಕೂ ಕೂಡ ಹೆಚ್ಚಿನ ಫಲವಿರುವವು. ಆದ್ದರಿಂದ ಕೃತಕ್ಕಿಂತಲೂ ಅಧಿಕವಾಗಿತ್ತು. ಹೀಗೇ ಆ ಸಮಯದಲ್ಲಿ ಎಲ್ಲ ಪ್ರಜೆಗಳು ಪ್ರಾಯಶ: ಧಾರ್ಮಿಕರಾಗಿರುವಾಗ, ಕಲಿಯುಗದ ಚಿಹ್ನಗಳು ಕಾರ್ಯಗಳು ನಡೆಯದಿರುವಾಗ, ಆಯಾ ಯುಗದ ಕಾರ್ಯಗಳು ನಡೆಯುತ್ತಿರಬೇಕೆಂಬುದನ್ನು ಅಪೇಕ್ಷಿಸಿದ ಬ್ರಹ್ಮಾದಿದೇವತೆಗಳು ಭೂಲೋಕಕ್ಕೆ ಶ್ರೀಕೃಷ್ಣ ಸಮೀಪಕ್ಕೆ ಬಂದು, ಅವನನ್ನು ಸ್ತುತಿಸಿ, ನಿನ್ನ ಲೋಕಕ್ಕೆ ನೀನು ತಿರುಗಿ ಬರಬೇಕೆಂದು ವಿಜ್ಞಾಪಿಸಿದರು. ಆಗ ಶ್ರೀಕೃಷ್ಣ ಪರಮಾತ್ಮನು ತನ್ನ ಸಮ್ಮತಿಯನ್ನು ಇತ್ತನು. ಬಹುಸಜ್ಜನರು ಲೋಕದಲ್ಲಿದ್ದರೆ ಕಲಿ ವ್ಯಾಪಾರಗಳು ಸರಿಯಾಗಿ ನಡೆಯಲಾರದ್ದರಿಂದ, ದೇವಾವತಾರಿಗಳಾದ ತನ್ನ ಕುಲದ ಜನ ಸಂಹಾರವಾಗ ಬೇಕೆಂದು ಇಚ್ಛಿಸಿದ ಭಗವಂತನು—ಮನೆಯಲ್ಲಿಯೇ ಮರಣಕ್ಕಿಂತ ಪುಣ್ಯಕ್ಷೇತ್ರದಲ್ಲಿ, ಮನೆಯು ಪುಣ್ಯ ಕ್ಷೇತ್ರದಲ್ಲಿಯೇ ಇದ್ದರೆ ಅಲ್ಪವಾದರೂ ಚಿಂತೆಯಿಲ್ಲ ಬೇರೆ ಪುಣ್ಯಕ್ಷೇತ್ರಕ್ಕೆ ಹೋಗಿ ಅಲ್ಲಿ ಮರಣ ಹೊಂದುವದೇ ಹೆಚ್ಚು ಪುಣ್ಯಕರವಾದ್ದರಿಂದಲೂ, ಈ ನೀತಿಯನ್ನು ತಿಳಿಸುವದಕ್ಕಾಗಿಯೂ ತನ್ನ ಕುಲದ ಜನರನ್ನು ಪ್ರಭಾಸಕ್ಷೇತ್ರಕ್ಕೆ ಕರೆದುಕೊಂಡು ಹೋದನು. ಅಲ್ಲಿ ಅನೇಕ ದಾನಾದಿ ಧರ್ಮಕಾರ್ಯಗಳನ್ನು ಮಾಡಿಸಿದನು. ಅಲ್ಲಿಗೆ ಹೋದನಂತರ ಬಗವನ್ಮಾಯಾಮೋಹಿತರಾದ ಯಾದವರು, ಬ್ರಾಹ್ಮಣಶಾಪನಿಮಿತ್ತದಿಂದ ಮದ್ಯಪಾನಮಾಡಿ ಮತ್ತರಾಗಿ ಹೊಡೆದಾಡಿ ಒಬ್ಬರನ್ನೊಬ್ಬರು ಕೊಂದು ದೇಹವನ್ನು ತ್ಯಜಿಸಿ ತಮ್ಮ ತಮ್ಮ ಮೂಲರೂಪವನ್ನು ಸೇರಿದರು. ಇದನ್ನು ನೋಡಿದ ಬಲರಾಮದೇವರೂ ಕೂಡ ಯೋಗದಿಂದ ದೇಹವನ್ನು ತ್ಯಜಿಸಿ ಮೂಲರೂಪಕ್ಕೆ ಹೋದರು.

ತತಃ ಪರೇಶೋಽಗಣಿತಾನುಭಾವಃ ಸ್ವಸಾರಥಿಂ ಪಾಂಡವಾನಾಂ ಸಕಾಶಮ್ ।
ಸ್ವಲೋಕಯಾನಪ್ರತಿವೇದನಾಯ ಸ್ವಸ್ಯಾನು ಚೈಷಾಂ ತ್ವರಯಾಽಭ್ಯಯಾತಯತ್ ॥೧೮॥

ತತಃ—ಇಷ್ಟಾದನಂತರ, ಅಗಣಿತಾನುಭಾವಃ ಪರೇಶಃ—ಅಪರಿಮಿತಮಹಿಮನಾದ ಶ್ರೀ ಕೃಷ್ಣ ಪರಮಾತ್ಮನು, ಸ್ವಸ್ಯ ಅನು—ತನ್ನ ನಂತರ, ತಾನು ತನ್ನ ಲೋಕಕ್ಕೆ ಹೋದನಂತರ ತನ್ನನ್ನು ಅನುಸರಿಸಿ ಪಾಂಡವಾನಾಂ ಚ—ಪಾಂಡವರಿಗೂ, ಸ್ವಲೋಕಯಾನಪ್ರತಿವೇದನಾಯ—ತಮ್ಮ ಲೋಕಕ್ಕೆ ಹೊರಡಲು ತಿಳಿಸುವದಕ್ಕಾಗಿ, ಏಷಾಂ ಸಕಾಶಂ—ಈ ಪಾಂಡವರ ಹತ್ತಿರಕ್ಕೆ, ಸ್ವಸಾರಥಿಂ—ತನ್ನ ಸಾರಥಿಯಾದ ದಾರುಕನನ್ನು, ತ್ವರಯಾ—ಬೇಗ, ಅಭ್ಯಯಾತಯತ್—ಕಳಿಸಿದನು. ॥೧೮॥

ಅಥಾಽಸತಃ ಪಿಪ್ಪಲಮೂಲ ಈಶಿತುರೂರುಸ್ಥಿತಂ ಪಾದತಳಂ ಸುತಾಮ್ರಮ್ ।
ದೃಷ್ಟ್ವಾ ಜರಾ ನಾಮ ಸಸರ್ಜ ಶಲ್ಯಂ ಭಕ್ತೋಽಪ್ಯಲಂ ರೋಹಿತಂ ಶಂಕಮಾನಃ ॥೧೯॥

ಅಥ—ದಾರುಕನನ್ನು ಕಳಿಸಿದನಂತರ, ಪಿಪ್ಪಲಮೂಲೇ—ಅಶ್ವತ್ಥವೃಕ್ಷದ ಮೂಲದಲ್ಲಿ, ಆಸತಃ—ಕುಳಿತಿರುವ, ಈಶಿತುಃ—ಸರ್ವಸ್ವಾಮಿಯಾದ ಶ್ರೀಕೃಷ್ಣನ, ಊರುಸ್ಥಿತಂ—(ಎಡ)ತೊಡೆಯುಮೇಲಿರುವ, ಸುತಾಮ್ರಂ—ಅತಿ ಕೆಂಪಾದ, ಪಾದತಳಂ—ಪಾದದ ಅಡಿಯನ್ನು ದೃಷ್ಟ್ವಾ—ನೋಡಿ, ರೋಹಿತಂ ಶಂಕಮಾನಃ—ಕೆಂಪುವರ್ಣದ ಒಂದು ವಿಶೇಷಮೃಗವೆಂದು ಭ್ರಮಿಸಿದಂಥ, ಜರಾನಾಮ—ಜರಾ ಎಂಬ ವ್ಯಾಧನು, ಅಲಂ ಭಕ್ತ: ಅಪಿ—ಭಗವಂತನ ವಿಶೇಷ ಭಕ್ತನೇಆಗಿದ್ದರೂಕೂಡ, —ಶಲ್ಯಂ(ಸಾಂಬನಉದರದಿಂದ ಬಂದ ಒನಕೆಯ ತುದಿಯಿಂದ ನಿರ್ಮಿಸಲ್ಪಟ್ಟ) ಬಾಣವನ್ನು, ಸಸರ್ಜ—ಪ್ರಯೋಗಿಸಿದನು. ॥ ೧೯ ॥

ಅಚ್ಛೇದ್ಯಾಭೇದ್ಯದೇಹಸ್ಯ ಶಲ್ಯೇ ಸ್ಥಾದಮುಪಸ್ಥಿತೇ ।
ಸಮೀಪಮಾಗತೋ ವ್ಯಾಧೋ ದೃಷ್ಟ್ವಾ ಭೀತೋಽಪತದ್ ಭುವಿ ॥೨೦॥

ಶಲ್ಯೇ—ಆ ಬಾಣವು, ಅಚ್ಛೇದ್ಯಾಭೇದ್ಯದೇಹಸ್ಯ—ಅಚ್ಛೇದ್ಯವಾದ ಅಭೇದ್ಯವಾದ ಅಪ್ರಾಕೃತದೇಹವುಳ್ಳ ಶ್ರೀಕೃಷ್ಣನ, ಪಾದಂ—ಪಾದಕ್ಕೆ, ಉಪಸ್ಥಿತೇಸತಿ—ಬಂದು ಹತ್ತುತ್ತಿರಲು, ಸಮೀಪಂ—ಶ್ರೀಕೃಷ್ಣಪರಮಾತ್ಮನ ಸಮೀಪಕ್ಕೆ, ಆಗತಃ—ಬಂದಂಥ, —ವ್ಯಾಧಃ—ಆ ಜರಾ ಎಂಬ ಬೇಡನು, ದೃಷ್ಟ್ವಾ—ನೋಡಿ, ಭೀತಃಸನ್—(ತಾನು ಶ್ರೀಕೃಷ್ಣನಿಗೆ ಹೊಡೆದದ್ದು ಎಂಬುದನ್ನು ತಿಳಿದು) ಹೆದರಿದವನಾಗಿ, ಭುವಿ—ನೆಲದಲ್ಲಿ, ಅಪತತ್—ಬಿದ್ದನು. ॥ ೨೦ ॥

ವಿಪ್ರವಾಕ್ಯಂ ಮಾನಯಾನಃ ಕಾರಯಿತ್ವಾಽಮುನಾ ಹರಿಃ ।
ಪಾಪಂ ಮಾಂ ಜಹಿ ದೇವೇತಿ ಯಾಚಂತಮನಯದ್ದಿವಮ್ ॥೨೧॥

ವಿಪ್ರವಾಕ್ಯಂ—ದುರ್ವಾಸಾದಿಬ್ರಾಹ್ಮಣರ ಶಾಪವಾಕ್ಯವನ್ನು, ಮಾನಯಾನಃ—ಗೌರವಿಸಿದ, ಹರಿಃ—ಶ್ರೀಕೃಷ್ಣಪರಮಾತ್ಮನು, ಅಮುನಾ—ಆ ಜರಾವ್ಯಾಧನಿಂದ, ಕಾರಯಿತ್ವಾ ಈ ರೀತಿ ತನ್ನ ಪಾದಕ್ಕೆ ಹೊಡೆಯುವ ಕಾರ್ಯವನ್ನು ಮಾಡಿಸಿ, ಹೇ ದೇವ—ಸರ್ವಸ್ವಾಮಿಯಾದ ಶ್ರೀಕೃಷ್ಣನೇ, ಪಾಪಂ ಮಾಂ—ಪಾಪಿಯಾದ ನನ್ನನ್ನು, ಜಹಿ—ಸಂಹರಿಸು, ಇತಿ ಎಂದು, ಯಾಚಂತಂ—ಪಾರ್ಥಿಸತಕ್ಕ ಆ ವಾಧ್ಯನನ್ನು, ದಿವಂ—ಸ್ವರ್ಗಕ್ಕೆ, ಅನಯತ್—ಕಳಿಸಿದನು. ॥ ೨೧ ॥

ಪಾದಪ್ರಹಾರದೋಷೇಣ ತಂ ಭೃಗುಂ ವ್ಯಾಧತಾಂ ಗತಮ್ ।
ಪಶ್ಚಾತ್ತಾಪೇನ ಭಕ್ತ್ಯಾ ಚ ಸುಪ್ರೀತಸ್ತಚ್ಛರೀರಿಣಮ್ ।
ಸ್ವಾಜ್ಞಾಪ್ರಾಪ್ತವಿಮಾನೇನ ದಿವಂ ನಿನ್ಯೇ ಜನಾರ್ದನ : ॥೨೨॥

ಪಾದಪ್ರಹಾರದೋಷೇಣ—ಮೂಲರೂಪೀಭಗವಂತನಿಗೆ ಎದೆಯಲ್ಲಿ ಪಾದದಿಂದ ಒದೆದ ದೋಷದಿಂದ, ವ್ಯಾಧತಾಂ ಗತಂ—ಜರಾವ್ಯಾಧಜನ್ಮವನ್ನು ಹೊಂದಿದ, ತಂ ಭೃಗುಂ—ಸಪ್ತ ಋಷಿಗಳಲ್ಲಿ ಒಬ್ಬರಾದ ಆ ಭೃಗುಋಷಿಗಳನ್ನು, ~~ಪಶ್ಚಾತ್ತಾಪೇನ—[ಅವರಿಗೆ ತಾವು ಮಾಡಿದ ಕಾರ್ಯದ ಬಗ್ಗೆ ಆದ]~~ ಪಶ್ಚಾತ್ತಾಪದಿಂದ, ಭಕ್ತ್ಯಾ—ಶ್ರೀಹರಿಯ ಬಗ್ಗೆ ಇರುವ ದೃಢ ಭಕ್ತಿಯಿಂದಲೂ, ಸುಪ್ರೀತಃ—ತುಂಬಾ ಸಂತುಷ್ಟನಾದ ಜನಾರ್ದನಃ — ಶ್ರೀಕೃಷ್ಣನು, ತಚ್ಛರೀರಿಣಂ—ಆ ವ್ಯಾಧದೇಹದಲ್ಲಿರುವಾಗಲೇ ಸ್ವಾಜ್ಞಾಪ್ರಾಪ್ತವಿಮಾನೇನ—ತನ್ನ ಆಜ್ಞಾಪ್ರಕಾರ ಬಂದ ವಿಮಾನದಿಂದ, ದಿವಂ ನಿನ್ಯೇ—ಸ್ವರ್ಗಕ್ಕೆ ಕಳಿಸಿದನು. ॥೨೨॥

ಅವತಾರಿಕೆ—ವ್ಯಾಧ ಜನ್ಮಬರಲು, ಶ್ರೀ ಕೃಷ್ಣಪಾದಕ್ಕೆ ತಾಡನ ಮಾಡಲು ಇರುವ ಕಾರಣವನ್ನು ಹಾಗು ದುಷ್ಟಕರ್ಮದಿಂದ ತಮಃ ಪ್ರಾಪ್ತಿ ಆಗದಿರಲು ಕಾರಣವನ್ನು ಹೇಳುತ್ತಾರೆ.

ನೀಚಾ ಯೋನಿರ್ನೀಚನೀಚಂ ಕರ್ಮಾಽಪ್ತಂ ನೀಚಕರ್ಮತಃ ।
ಅದುಷ್ಟತ್ವಾತ್ತು ಮನಸೋ ಭಕ್ತಿಲೋಪೋ ನಚಾಪ್ಯಭೂತ್ ।
ಭೃಗೋರ ತ್ರಾಬುದ್ಧಿಪೂರ್ವಂ ನಾತಿದೋಷಕೃದಪ್ಯಭೂತ್ ॥೨೩॥

ನೀಚಕರ್ಮತಃ—ಶ್ರೀವಿಷ್ಣುವಿನ ಎದೆಗೆ ಪಾದಪ್ರಹಾರವೆಂಬ ನೀಚಕರ್ಮದಿಂದಾಗಿ, ಭೃಗುಣಾ—ಆ ಭೃಗುಋಷಿಯಿಂದ, ನೀಚಾ ಯೋನಿ:—ನಿಂದ್ಯವಾದ ಈ ವ್ಯಾಧ ಜನ್ಮವು, ಆಪ್ತಾ—ಹೊಂದಲ್ಪಟ್ಟಿತ್ತು. ನೀಚನೀಚಂ—ಅತಿ ನಿಂದ್ಯವಾದ, ಕರ್ಮ—ಭಗವಂತನ ಪಾದಕ್ಕೆ ಶರತಾಡನರೂಪವಾದ ಕಾರ್ಯವು, ಆಪ್ತಂ—ಹೊಂದಲ್ಪಟ್ಟಿತು. ಮನಸಃ ಅದುಷ್ಟತ್ವಾತ್—ಪಾದ ಪ್ರಹಾರ ಮಾಡುವಾಗಲೂ, ಮನಸ್ಸಿನಲ್ಲಿ ದೋಷವಿರದಿರುವದರಿಂದ, ತು—ವಿಶೇಷವಾಗಿ [ವ್ಯಾಧ ಜನ್ಮದಲ್ಲಿರುವಾಗಲೂ ಕೂಡ, ಪಾದ ಪ್ರಹಾರಮಾಡುತ್ತಿರುವಾಗಲೂ

ಕೂಡ,] ಭೃಗೋಃ–ಭಗುಗಳಿಗೆ. ಭಕ್ತಿಲೋಪಃಅಪಿ–ಭಕ್ತಿಗುಣದ ಲೋಪವೂ ಕೂಡ, ನ ಚ ಅಭೂತ್–ಆಗಿರಲಿಲ್ಲ, ಅಭುದ್ಧಿಪೂರ್ವಂ–ಅಜ್ಞಾನ ಪೂರ್ವಕವಾಗಿ, ಅತ್ರ ಕೃತಂ ಶರತಾಂಡನಂ–ಈ ಶ್ರೀಕೃಷ್ಣದೇಹದಲ್ಲಿ ಮಾಡಿದ ಶರತಾಡನ ಕಾರ್ಯವು, ಅತಿದೋಷಕೃತ್–ತಮಃಪ್ರಾಪಕವಾಗತಕ್ಕ ಅಂಥಪಾಪಕರವೂ, ನ ಚ ಅಭೂತ್–ಆಗಲಿಲ್ಲ. ॥೨೩॥

ತತೋ ವಿರಿಂಚೇಶಪುರಂದರಾದ್ಯಾಃ ಪುನಃ ಸ್ತುವಂತೋಽಭಿಯಯುಃ ಪ್ರಣಮ್ಯ ।
ಕೃಷ್ಣಂ ಸ ಚಾಽಶ್ವೇವ ಯಯೌ ಸ್ವಲೋಕಂ ಸ್ವತೇಜಸಾ ಸರ್ವಮಿದಂ ಪ್ರಕಾಶಯನ್ ॥೨೪॥

ತತಃ–ಈ ಶರತಾಡನಕಾರ್ಯದ ನಂತರ, ವಿರಿಂಚೇಶಪುರಂದರಾದ್ಯಾಃ–ಬ್ರಹ್ಮರುದ್ರ ಇಂದ್ರ ಮೊದಲಾದ ದೇವತೆಗಳು, ಪುನಃ–ಮತ್ತೆ [ಅವತಾರಕ್ಕಾಗಿ ಅವತಾರಸಮಾಪ್ತಿಗಾಗಿ ಪ್ರಾರ್ಥಿಸಿದ್ದರು, ಈಗ ಮತ್ತೆ], ಕೃಷ್ಣಂ–ಶ್ರೀಕೃಷ್ಣ ಪರಮಾತ್ಮನನ್ನು, ಸ್ತುವಂತಃ ಸಂತಃ–ಸ್ತುತಿಸುವವರಾಗಿ, ಪ್ರಣಮ್ಯ–ನಮಸ್ಕರಿಸಿ, ಅಭಿಯಯುಃ–ಎದುರಿಗೆ ಬಂದರು. ಸಃ ಚ — ಆ ಶ್ರೀಕೃಷ್ಣಪರಮಾತ್ಮನಾದರೂ ಕೂಡ, ಸ್ವತೇಜಸಾ–ತನ್ನ ಪ್ರಕಾಶದಿಂದ, ಇದಂ ಸರ್ವಂ–ಈ ಎಲ್ಲ ಜಗತ್ತನ್ನು, ಪ್ರಕಾಶಯನ್ ಸನ್-ಬೆಳಗಿಸುವವನಾಗಿ, ಆಶು–ಬೇಗನೇ, ಸ್ವಲೋಕಂ–ತನ್ನ ಮೂಲಲೋಕಕ್ಕೆ, ಯಯೌ–ಹೊರಟನು. ॥೨೪॥

ಭಾವಾನುವಾದ ೧೮—೨೪

ಇಷ್ಟು ಘಟನೆಗಳನ್ನು ಮಾಡಿಸಿದನಂತರ ಶ್ರೀಕೃಷ್ಣಪರಮಾತ್ಮನು ಈ ಲೋಕವನ್ನು ಬಿಟ್ಟು ಮೂಲರೂಪಕ್ಕೆ ಹೋಗುತ್ತಿರುವದನ್ನು ಪಾಂಡವರಿಗೆ ತಿಳಿಸಿ ಅವರೂ ಈ ಲೋಕವನ್ನು ತ್ಯಜಿಸಿ ಸ್ವಮೂಲರೂಪಗಳಿಗೆ ಹೋಗಲು ತಿಳಿಸಲು ತನ್ನ ಸಾರಥಿಯನ್ನು ಕಳಿಸಿದನು. ತಾನು ಅಶ್ವತ್ಥವೃಕ್ಷದ ಅಡಿಯಲ್ಲಿ ಧ್ಯಾನಮಾಡುತ್ತಿರುವಂತೆ ಕುಳಿತನು. ಎಡ ತೊಡೆಯಲ್ಲಿ ತನ್ನ ಬಲಪಾದವನ್ನು ಇಟ್ಟು ಕುಳಿತಿದ್ದನು. ಕೆಂಪುವರ್ಣದ ಆ ಪಾದವನ್ನು ದೂರದಿಂದ ನೋಡಿದ ಜರ ಎಂಬ ವ್ಯಾಧನು ಏನೋ ಒಂದು ಕೆಂಪುವರ್ಣದ ಮೃಗವೆಂದು ಭಾವಿಸಿ ಬಾಣವನ್ನು ಬಿಟ್ಟನು. ಅದು ಸಮೀಪಕ್ಕೆ ಬಂದಿತು; ಪಾದಕ್ಕೆ ಬಡಿಯಿತು, ಬೇಡನು ಬಂದನು; ನೋಡಿದನು. ಅವನು ಶ್ರೀಕೃಷ್ಣ ಭಕ್ತನು. ಗಾಬರಿಯಾದನು. ಕೆಳಗೆ ಬಿದ್ದನು. ಬಾಹ್ಮಣಶಾಪವನ್ನು ಗೌರವಿಸಿದ ಶ್ರೀಕೃಷ್ಣನೇ ಈ ರೀತಿ ಆ ಬೇಡನಿಂದ ಮಾಡಿಸಿದ್ದು. ಗಾಬರಿಯಾದ ವ್ಯಾಧನು "ಸ್ವಾಮೀ, ಕೃಷ್ಣದೇವಾ, ನಾನು ಅಪರಾಧ ಮಾಡಿದೆ, ನನ್ನನ್ನು ಕೊಂದು ಬಿಡು" ಎಂದು ಗೋಳಿಟ್ಟನು. ಅವನನ್ನು ಶ್ರೀಹರಿಯು ಸ್ವರ್ಗಲೋಕಕ್ಕೆ ಕಳಿಸಿದನು. ವಿಕೆಂದರೆ—ಆ ವ್ಯಾಧನು ಸ್ವರೂಪದಲ್ಲಿ ಭೃಗುಮುನಿಯು. ಹಿಂದೆ ಶ್ರೀವಿಷ್ಣುಸರ್ವೋತ್ತಮತ್ವದಸ್ಥಾಪನೆಯ ಉದ್ದೇಶದಿಂದ ಲೋಕತ್ರಯಕ್ಕೆ ಬಂದಾಗ ಶ್ರೀವಿಷ್ಣುವಿನ ಎದೆಗೆ ಪಾದದಿಂದ ಪದ್ದ ದೋಷದಿಂದ ಈಗ ವ್ಯಾಧರಾಗಿದ್ದರು. ಆಗ ಮಾಡಿದ ಆ ಅಪರಾಧದ ಬಗ್ಗೆ ಅವರಿಗೆ ಪಶ್ಚಾತ್ತಾಪವೂ ಆಗಿತ್ತು; ಸ್ವರೂಪದಲ್ಲಿ ವಿಶೇಷ ಭಕ್ತಿಯಿತ್ತು. ಅದರಿಂದ ಅವರನ್ನು ತನ್ನ ಅಪ್ಪಣೆಯಂತೆ ಬಂದ ವಿಮಾನದಿಂದ ಸ್ವರ್ಗಕ್ಕೆ ಕಳಿಸಿದನು. ಪದ್ದ ಕಾರ್ಯವು ನೀಚವಾದದ್ದು. ಮನಸ್ಸಿನಲ್ಲಿ ಮಾತ್ರ ದೋಷವಿರಲ್ಲಿಲ್ಲ, ಆ ನೀಚಕಾರ್ಯದಿಂದಾಗಿ ನೀಚವಾದ ವ್ಯಾಧಜನ್ಮವು, ಭಗವಂತನ ಪಾದಕ್ಕೆ ಬಾಣದಿಂದ ಹೊಡೆಯುವಂಥ ನೀಚಕಾರ್ಯವು ಒದಗಿಬಂದವು. ಭಕ್ತಿಲೋಪವಂತೂ ಆಗಿರಲೇ ಇಲ್ಲ. ಈ ವ್ಯಾಧ ಜನ್ಮದಲ್ಲಿ ಮಾಡಿದ ಬಾಣಪ್ರಹಾರಕಾರ್ಯವು ಬುದ್ಧಿಪೂರ್ವಕವಲ್ಲ. ಹೀಗಾಗಿ ಹೆಚ್ಚು ದೋಷಕರವಾಗಲಿಲ್ಲ. ಈ ರೀತಿ ಭಗವಂತನ ಪಾದಕ್ಕೆ ಬಾಣಪ್ರಹಾರವಾದಾಗ, ಬ್ರಹ್ಮರುದ್ರ ಇಂದ್ರಾದಿದೇವತೆಗಳು ಶ್ರೀಕೃಷ್ಣನ ಸಮೀಪಕ್ಕೆ ಪುನಃ ಬಂದು ಸ್ತುತಿಸುತ್ತಾ ನಮಿಸಿದರು. ಶ್ರೀಕೃಷ್ಣನು ತನ್ನ ತೇಜಸ್ಸಿನಿಂದ ಎಲ್ಲ ಜಗವನ್ನು ಪ್ರಕಾಶಗೊಳಿಸುತ್ತಾ ತನ್ನ ಲೋಕಕ್ಕೆ ಹೋದನು.

ಗೋಪಾಲಮಂತ್ರಂ ಭಜತಾಂ ಫಲಪ್ರದ ಏಕೇನ ರೂಪೇಣ ಸ ಭುವ್ಯದೃಶ್ಯಃ ।
ತಸ್ಥೌ ದ್ವಿತೀಯೇನ ಚ ಸೂರ್ಯಮಂಡಲೇ ತೃತೀಯಮಾಸೀಚ್ಛ್ರಿವಪೂಜಿತಂ ವಪುಃ ॥೨೫॥

ಗೋಪಾಲಮಂತ್ರಂ—ಶ್ರೀ ಕೃಷ್ಣಮಂತ್ರವನ್ನು, ಭಜತಾಂ—ಸೇವಿಸು(ಜಪಿಸು)ವವರಿಗೆ, ಫಲಪ್ರದ: ಸನ್—ಫಲಪ್ರದನಾಗುವವನಾಗಿ, ಏಕೇನ ರೂಪೇಣ—ಒಂದು ರೂಪದಿಂದ, ಅದೃಶ್ಯ: ಸನ್—ಅದೃಶ್ಯನಾಗಿ, ಸಃ—ಆ ಶ್ರೀಕೃಷ್ಣನು, ಭುವಿ ತಸ್ಥೌ—ಭೂಮಿಯಲ್ಲಿ ಇದ್ದನು, ದ್ವಿತೀಯೇನ ಚ—ಎರಡನೆಯರೂಪದಿಂದ, ಸೂರ್ಯಮಂಡಲೇ—ಸೂರ್ಯ ಮಂಡಲದಲ್ಲಿ, ತಸ್ಥೌ—ಇದ್ದನು, ತೃತೀಯಂ ವಪು—ಮೂರನೆಯ ಶ್ರೀಕೃಷ್ಣರೂಪವು, ಶಿವಪೂಜಿತಂ—ಕೈಲಾಸದಲ್ಲಿ ಶ್ರೀರುದ್ರದೇವರಿಂದ ಪೂಜಿಸಲ್ಪಡುವಂಥದು, ಆಸೀತ್—ಆಯಿತು. ॥೨೫॥

ಸಂಪೂಜಿತಂಬ್ರಹ್ಮಲೋಕೇ ಚತುರ್ಥಂ ಕಂಜೋದ್ಭವೇನಾಥ ಪರಂ ಸ್ವಧಾಮ ।
ಸಮಾಪ್ನುವಾನಂ ವಪುರಸ್ಯ ಪಂಚಮಂ ಭಕ್ತ್ಯಾऽನ್ವಯುರ್ದೇವವರಾಃ ಸ್ವಶಕ್ತ್ಯಾ ॥೨೬॥

ಚತುರ್ಥಂ—ನಾಲ್ಕನೆಯರೂಪವು. ಬ್ರಹ್ಮಲೋಕೇ—ಸತ್ಯಲೋಕದಲ್ಲಿ, ಕಂಜೋದ್ಭವೇನ—ಬ್ರಹ್ಮದೇವರಿಂದ, ಸಂಪೂಜಿತಂ—ಪೂಜಿಸಲ್ಪಡುವಂಥದು, ಆಸೀತ್—ಆಯಿತು. ಅಥ—ಹಾಗು. ಪರಂ ಸ್ವಧಾಮ—ಶ್ರೇಷ್ಠವಾದ ತನ್ನ ವೈಕುಂಠ ಲೋಕವನ್ನು ಕುರಿತು, ಸಮಾಪ್ನುವಾನಂ—ಹೊರಟಿರುವ, ಅಸ್ಯ—ಶ್ರೀಕೃಷ್ಣನ, ಪಂಚಮಂ ವಪು:—ಐದನೆಯ ರೂಪವನ್ನು, ದೇವವರಾಃ—ಶ್ರೇಷ್ಠ ಬ್ರಹ್ಮಾದಿದೇವತೆಗಳು, ಸ್ವಶಕ್ತ್ಯಾ—ತಮ್ಮ ಸ್ವರೂಪಯೋಗ್ಯತೆಗನುಸಾರವಾಗಿ, ಅನ್ವಯು; —ಬೆನ್ನು ಹತ್ತಿಹೋಕರು. ॥೨೬॥

ತತ್ತೇಜಸಾ ತೇ ಪ್ರತಿಮುಷ್ಟದೃಷ್ಟಯಃ ಪುರುಷ್ಟುತಾದ್ಯಾ ಅಮಿತೋರುದೀಧಿತೇಃ ।
ಯಾವತ್ ಸ್ವಗಮ್ಯಂ ತ್ವನುಗಮ್ಯ ತಸ್ಥುರ್ನಿಮೀಲಿತಾಕ್ಷಾ ವಿಹತೋರ್ಧ್ವಚಾರಾಃ ॥೨೭॥

ಅಮಿತೋರು ದೀಧಿತೇ; —ಅಪರಿಮಿತವಾದ, ಉತ್ಕೃಷ್ಟವಾದ ಪ್ರಕಾಶವುಳ್ಳ ಆ ರೂಪದ, ಆ ಲೋಕದ, ತತ್ತೇಜಸಾ – ಆ ಪ್ರಸಿದ್ಧವಾದ ಕಾಂತಿಯಿಂದ, ಪ್ರತಿಮುಷ್ಟದೃಷ್ಟಯ: —ಮುಚ್ಚಲ್ಪಟ್ಟ ಕಣ್ಣುಗಳುಳ್ಳ, ಪುರುಷ್ಟುತಾದ್ಯಾ; – ಇಂದ್ರಾದಿ ದೇವತೆಗಳು, ಯಾವತ್ ಸ್ವಗಮ್ಯಂ—ಎಲ್ಲಿಯ ವರೆಗೆ ತಮಗೆ ಹೋಗಲು ಶಕ್ಯವೊ ತಾವತ್ತು– ಅಲ್ಲಿಯವರೆಗೆ ಮಾತ್ರ, ಅನುಗಮ್ಯ—ಅನುಸರಿಸಿ ಹೋಗಿ, ವಿಹತೋರ್ಧ್ವಚಾರಾಃ —ಮುಂದೆ ಹೋಗಲು ಅಸಮರ್ಥರಾಗಿ, ತಸ್ಥು; —ನಿಂತರು. ॥೨೭॥

ವೀಂದ್ರೇಶಶೇಷಾನುಗತಃ ಸ್ವಯಂಭೂರ್ಧಾಮ ಪ್ರವಿಷ್ಟಂ ತಮಜಂ ಪ್ರಣಮ್ಯ ।
ವೀಂದ್ರಾದಿಕೈರಪ್ಯಯುತಃ ಸ್ವಪಿತ್ರಾऽಶ್ಲಿಷ್ಟೋ ರಹಶ್ಚಾಕಥಯತ್ ತಥಾऽಸ್ತೌತ್ ॥೨೮॥

ವೀಂದ್ರೇಶಶೇಷಾನುಗತಃ—ಗರುಡ, ರುದ್ರ, ಶೇಷದೇವರಿಂದ, ಅನುಸರಿಸಲ್ಪಟ್ಟ, ಸ್ವಯಂಭೂಃ—ಬ್ರಹ್ಮದೇವರು, ಧಾಮ—ತನ್ನ ಸ್ಥಾನವನ್ನು, ಪ್ರವಿಷ್ಟಂ—ಪ್ರವೇಶಿಸಿದ, ಅಜಂ ತಂ—ಉತ್ಪತ್ಯಾದಿದೋಷದೂರನಾದ ಆ ಶ್ರೀಹರಿಯನ್ನು, ಪ್ರಣಮ್ಯ – ನಮಸ್ಕರಿಸಿ, ವೀಂದ್ರಾದಿಕೈಃಅಪಿ ಅಯುತ:ಸನ್ – ಗರುಡಶೇಷರುದ್ರರಿಂದಲೂ ಕೂಡ ರಹಿತರಾಗಿ, ಸ್ವಪಿತ್ರಾ—ತಮ್ಮ ತಂದೆಯಾದ ಆ ಭಗವಂತನಿಂದ, ಆಶ್ಲಿಷ್ಟಃಸನ್—ಆಲಿಂಗಿತರಾಗಿ, ರಹಃ–ಏಕಾಂತದಲ್ಲಿ, ಅಕಥಯತ್–ಅತಿಗೌಪ್ಯವಾದ ವಿಷಯವನ್ನು, ಅಕಥಯತ್—ಹೇಳಿದರು ತಥಾ—ಹಾಗು, ಅಸ್ತೌತ್—ಸುತ್ತಿಸಿದರು. ॥೨೮॥

ಸ ಪೂರ್ವರೂಪೇಣ ಸಮಾಪ್ಯ ಚೈಕ್ಯಂ ವಿಭಜ್ಯ ಚೇಚ್ಛಾನುಸೃತೋऽಥ ರೇವಮೇ ।
ಹರಿ:ಶ್ರಿಯಾ ಬ್ರಹ್ಮಮುಖೈಶ್ಚ ಮುಕ್ತೈ: ಸಂಪೂಜ್ಯಮಾನೋऽಮಿತಸದ್ಗುಣಾತ್ಮಾ ॥೨೯॥

ಶ್ರಿಯಾ—ಶ್ರೀ ಲಕ್ಷ್ಮೀದೇವಿಯಿಂದ, ಬ್ರಹ್ಮಮುಖೈಃಮುಕ್ತೈಃಚ—ಬ್ರಹ್ಮದೇವರೇ ಮೊದಲಾದ ಮುಕ್ತರಿಂದಲೂ ಕೂಡ, ಸಂಪೂಜ್ಯಮಾನಃ–ಭಕ್ತಿಪೂರ್ವಕ ಪೂಜಿಸಲ್ಪಡುವ, ಅಮಿತಸದ್ಗುಣಾತ್ಮಾ–ಅಪರಿಮಿತ

ಸದ್ಗುಣಸ್ವರೂಪನಾದ ಸ:ಹರಿ: ಆ ಶ್ರೀಕೃಷ್ಣಪರಮಾತ್ಮನು, ಪೂರ್ವರೂಪೇಣ–ತನ್ನ ; ಮೂಲರೂಪದಿಂದ ಐಕ್ಯಂ–ಐಕ್ಯವನ್ನು, ಸಮಾಪ್ಯ—ಹೊಂದಿ, ಚ–ಮತ್ತು ವಿಭಜ್ಯ–ವಿಭಾಗವನ್ನು ಹೊಂದಿ, ಇಚ್ಛಾನುಸೃತಃಸನ್–ತನ್ನ ಇಚ್ಛೆಯನುಸಾರ ನಡೆಯುವವನಾಗಿ, ರೆಮೇ—ವಿಹರಿಸಿದನು. ॥೨೯॥

ಬ್ರಹ್ಮಾsಪಿ ಶರ್ವಾದಿಯುತಃ ಸ್ವಲೋಕಂ ಪ್ರಾಪ್ತ: ಪುನಸ್ತತ್ರ ಗತಂ ಚ ಕೃಷ್ಣಮ್ ।
ರೇಮೇsಭಿಪಶ್ಯನ್ ಪ್ರತಿಪೂಜಯಂಸ್ತಂ ಸುರಾಶ್ಚ ಸರ್ವೇ ರವಿಬಿಂಬಸಂಸ್ಥಮ್ ॥೩೦॥

ಶರ್ವಾದಿಯುತಃಸನ್–ರುದ್ರಾದಿದೇವತೆಗಳಿಂದ ಕೂಡಿದವನಾಗಿ, ಸ್ವಲೋಕಂ–ತನ್ನ ಸತ್ಯಲೋಕಕ್ಕೆ ಪ್ರಾಪ್ತಃ–ಬಂದ, ಬ್ರಹ್ಮಾಪಿ–ಬ್ರಹ್ಮ ದೇವರೂ ಕೂಡ, ಪುನಃ ಚ—ಮತ್ತೂ, ತತ್ರ – ಆ ಲೋಕದಲ್ಲಿ, ಗತಂ–ಇರುವ, ಕೃಷ್ಣಂ – ಶ್ರೀಕೃಷ್ಣರೂಪವನ್ನು, ಅಭಿಪಶ್ಯನ್ ಸನ್ ಪ್ರತಿಪೂಜಯನ್ ಸನ್–ನೋಡುತ್ತಾ ಪೂಜಿಸುತ್ತಾ, ರೇಮೇ—ಸಂತೋಷದಿಂದ ಇದ್ದರು ಸರ್ವೇ ಸುರಾಃ ಚ–ಎಲ್ಲ ದೇವತೆಗಳೂ ಕೂಡ, ರವಿಬಿಂಬ ಸಂಸ್ಥಂ ತಂ—ಸೂರ್ಯ ಮಂಡಲದಲ್ಲಿರುವ ಆ ಶ್ರೀಕೃಷ್ಣನನ್ನು, (ನೋಡುತ್ತಾ ಪೂಜಿಸುತ್ತಾ ಸಂತೋಷದಿಂದ ಇದ್ದರು.) ॥೩೦॥

ಭಾವಾನುವಾದ ೨೫—೩೦

ಶ್ರೀಕೃಷ್ಣಪರಮಾತ್ಮನು ತನ್ನ ಲೋಕಕ್ಕೆ ಹೊರಟಾಗ, ತನ್ನ ಎಲ್ಲ ಭಕ್ತರ ಮೇಲಿನ ಕರುಣೆಯಿಂದ ಒಂದುರೂಪವನ್ನು ಭೂಮಿಯಲ್ಲಿಟ್ಟ, ತನ್ನಮಂತ್ರವನ್ನು ಜಪಿಸುವವಂಗೆ ಆ ರೂಪದಿಂದ ಫಲಪ್ರದನಾಗಿರುವನು.ಎರಡನೆಯ ರೂಪವನ್ನು ಸೂರ್ಯಮಂಡಲದಲ್ಲಿಟ್ಟಿದ್ದು ಮೂರನೆಯದನ್ನು ಕೈಲಾಸಲೊಕದಲ್ಲಿಟ್ಟಿರುವನು, ಅದು ಶ್ರೀರುದ್ರಪೂಜಿತವಾಗಿದ, ನಾಲ್ಕನೆಯರೂಪವು ಸತ್ಯಲೋಕದಲ್ಲಿ ಬ್ರಹ್ಮಪೂಜಿತವಾಗಿದೆ. ಹೀಗೆ ರೂಪವ್ಯವಸ್ಥೆ ಮಾಡಿದ ಭಗವಂತನು ಐದನೆಯ ರೂಪದಿಂದ ತನ್ನ ಮೂಲಸ್ಥಾನವನ್ನು ಕುರಿತು ಹೊರಟಾಗ ಅವನನ್ನು ಬೆನ್ನುಹತ್ತಿದೇವಾದಿ ಶ್ರೇಷ್ಠರೆಲ್ಲ ಹೊರಟರು. ಭಗವಂತನ ಕಾಂತಿಯಿಂದ ಆ ದೇವತೆಗಳೆಲ್ಲರ ಕಣ್ಣು ಕುಕ್ಕಿ ಮುಚ್ಚಿಕೊಂಡವು.ಇಂದ್ರಾದಿದೇವತೆಗಳು ತಮಗೆ ಎಲ್ಲಿಯವರೆಗೆ ಭಗವಂತನ ಹಿಂದೆ ಹೋಗಲು ಶಕ್ಯವೋ ಅಲ್ಲಿಯವರೆಗೆ ಹೋಗಿ ಮುಂದೆ ಹೋಗಲಾರದವರಾಗಿ, ಕಣ್ಣು ಮುಚ್ಚಿ ನಿಂತರು. ಗರುಡಶೇಷರುದ್ರರಿಂದ ಕೂಡಿದ ಬ್ರಹ್ಮದೇವರು, ತನ್ನ ಲೋಕಕ್ಕೆ ಹೋದ ಭಗವಂತನನ್ನು, ನಮಿಸಿ, ಗರುಡಶೇಷರುದ್ರರನೂಕೂಡ ಬಿಟ್ಟು ಭಗವಂತನ ಸಮೀಪಕ್ಕೆ ಹೊದರು. ಭಗವಂತನು ಅವರನ್ನು ಪ್ರೀತಿಯಿಂದ ಆಲಿಂಗಿಸಿಕೊಂಡನು. ಆಗ ಬ್ರಹ್ಮದೇವರು ಏಕಾಂತದಲ್ಲಿ ಅತಿರಹಸ್ಯದ ವಿಷಯಗಳನ್ನು (ಯಾರ್ಯಾರಿಗೆ ಯಾವ ಲೋಕಗಳನ್ನು ಕೊಡುವದು ಇತ್ಯಾದಿ ವಿಷಯಗಳನ್ನು) ಹೇಳಿದರು ಹಾಗೂ ಸ್ತುತಿಸಿದರು. ಶ್ರೀಕೃಷ್ಣಪರಮಾತ್ಮನು ತನ್ನ ಮೂಲರೂಪದಿಂದ ಐಕ್ಯವನ್ನು ಹೊಂದಿ ಮತ್ತೆ ಬೇಕಾದಾಗ ಹೊರಗೆ ಬಂದು ವಿಹರಿಸುತ್ತಾ ಶ್ರೀದೇವಿಯಿಂದ, ಬ್ರಹ್ಮಾದಿಮುಕ್ತರಿಂದ ಪೂಜಿತನಾಗಿ ವಾಸಿಸಿದನು. ಬ್ರಹ್ಮದೇವರು ಮತ್ತೆ ಗರುಡಶೇಷರುದ್ರಾದಿಗಳಿಂದ ಕೂಡಿಕೊಂಡು ಅಲ್ಲಿಂದ ಹೊರಟು, ತನ್ನ ಲೋಕಕ್ಕೆ ಬಂದು ಅಲ್ಲಿರುವ ಶ್ರೀಕೃಷ್ಣರೂಪವನ್ನು ನೋಡುತ್ತಾ, ಪೂಜಿಸುತ್ತಾ ವಾಸಿಸಿದರು. ಇತರದೇವತೆಗಳು, ಸೂರ್ಯಮಂಡಲದಲ್ಲಿರುವ ಶ್ರೀಕೃಷ್ಣರೂಪವನ್ನು ನೋಡುತ್ತಾ ಪೂಜಿಸುತ್ತಾ ಇದ್ದರು.

ಯತೋ ನ ದರ್ಶಿತಾ ಭ್ರಾಂತಿಃ ಪ್ರಾದುರ್ಭಾವೇಷ್ವಪಿ ಕ್ವಚಿತ್ ।
ದೇಹತ್ಯಾಗಾನುಕಾರೇಣ ಹರಿಣಾ ತದಿಹಾಚ್ಯುತಃ ॥೩೧॥

ಮೋಹಯಿತ್ವಾsಸುರಾನಂಧಂ ತಮಃ ಪ್ರಾಪಯಿತುಂ ಪ್ರಭುಃ ।
ಚಿದಾನಂದೈಕದೇಹೋsಪಿ ತ್ಯಕ್ತಂ ದೇಹಮಿವಾಪರಮ್ ।।
ಸೃಷ್ಟ್ವಾ ಸ್ವದೇಹೋಪಮಿತಂ ಶಯಾನಂ ಭುವ್ಯಗಾದ್ ದಿವಮ್ ॥೩೨॥

ಯತ; —ಯಾವಕಾರಣದಿಂದ; ಹರಿಣಾ—ಶ್ರೀಹರಿಯಿಂದ, ಕ್ವಚಿತ್ ಪ್ರಾದುರ್ಭಾವೇಷು ಅಪಿ—ಮತ್ಸ್ಯಾದಿ ಯಾವದೇ ಅವತಾರರೂಪಗಳಲ್ಲಿಯೂ ಕೂಡ, ದೇಹತ್ಯಾಗಾನುಕಾರೇಣ—ದೇಹತ್ಯಾಗ ಕಾರ್ಯದಿಂದ, ಭ್ರಾಂತಿ: —ಶ್ರೀಹರಿಯು ದೇಹವನ್ನು ತ್ಯಜಿಸಿದ ಎಂಬ ತಪ್ಪು ತಿಳಿವಳಿಕೆಯು, ನ ದರ್ಶಿತಾ— (ದುಷ್ಟರಿಗೆ) ತೋರಿಸಲ್ಪಟ್ಟಿಲ್ಲವೋ, ತತ್ – ಆ ಕಾರಣದಿಂದ, ಪ್ರಭುಃ ಅಚ್ಯುತ:—ಸಮರ್ಥನಾದ ನಾಶರಹಿತನಾದ ಶ್ರೀ ಕೃಷ್ಣ ಪರಮಾತ್ಮನು, ಇಹ – ಈ ಅವತಾರದಲ್ಲಿ, ಅಸುರಾನ್—ತಮೋಯೋಗ್ಯರನ್ನು, ಮೋಹಯಿತ್ವಾ—ಮೋಹಗೊಳಿಸಿ, (ಅವರಿಗೆ ಆ ಭ್ರಾಂತಿಯನ್ನು ಹುಟ್ಟಿಸಿ) ಅಂಧಂ ತಮಃ – ಅಂಧಂತಮಸ್ಸನ್ನು, ಪ್ರಾಪಯಿತುಂ—ಹೊಂದಿಸುವ ದಕ್ಕಾಗಿ, ಚಿದಾನಂದೈಕದೇಹಃ ಅಪಿ—ಕೇವಲಜ್ಞಾನಾನಂದಾತ್ಮಕ ದೇಹವುಳ್ಳವನಾದರೂ ಕೂಡ, ಸ್ವದೇಹೋಪಮಿತಂ – ತನ್ನ ಅಪ್ರಾಕೃತ ದೇಹದ ಆಕಾರದಂತಿರುವ, ತ್ಯಕ್ತಂ ದೇಹಂ ಇವ ಭುವಿ ಶಯಾನಂ—ಜೀವರಿಂದ ಬಿಡಲ್ಪಟ್ಟ ದೇಹದಂತೆ ಭೂಮಿಯಲ್ಲಿ ಮಲಗಿರುವ, ಅಪರಂ ದೇಹಂ—ಇನ್ನೊಂದು ಭೌತಿಕದೇಹವನ್ನು, ಸೃಷ್ಟ್ವಾ – ಸೃಷ್ಟಿ ಮಾಡಿ, ದಿವಮ್ – ತನ್ನ ಲೋಕವನ್ನು ಕುರಿತು, ಅಗಾತ್ – ಹೋದನು. ॥೩೧–೩೨॥

ದಾರುಕೋಕ್ತ್ಯಾ ಸಮಾಯಾತಃ ಪಾರ್ಥಸ್ತಮುದಹತ್ ತದಾ ।
ರೌಹಿಣೇಯಾದಿಕಾನಾಂ ಚ ಶರೀರಾಣಿ ಪ್ರಧಾನತಃ ।
ದಾರುಕೋ ವಿಷ್ಣುಲೋಕಂ ತು ಪುನರಾಪ ಯಥಾಗತಮ್ ॥೩೩॥

ದಾರುಕೋಕ್ತ್ಯಾ–ದಾರುಕನು ಹೇಳಿದ (ಶ್ರೀಕೃಷ್ಣಪರಮಾತ್ಮನ) ಮಾತಿನಿಂದ, ತದಾ ಸಮಾಯಾತಃ–ಆಗ ಬಂದಂಥ, ಪಾರ್ಥಃ – ಅರ್ಜುನನು, ತಂ – ಆ ದೇಹವನ್ನು, ಅದಹತ್ – ಸುಟ್ಟನು. ಚ – ಮತ್ತು, ಪ್ರಧಾನತಃ—(ಮುಖ್ಯವಾಗಿ) ಪ್ರಧಾನರಾದ, ರೌಹಿಣೇಯಾದಿಕಾನಾಂ – ಬಲರಾಮದೇವರೇ ಮೊದಲಾದವರ ಶರೀರಗಳನ್ನು, ಅದಹತ್—ಸುಟ್ಟನು. ದಾರುಕ: ತು – ದಾರುಕನಾದರೂ ಕೂಡ, ಯಥಾ ಆಗತಂ – ತನ್ನಿಂದ ಹೇಗೆ ಬರಲ್ಪಟ್ಟಿತೋ, ತಥಾ – ಹಾಗೆ ಅದೇ ಮಾರ್ಗದಿಂದ, ಪುನಃ – ಮತ್ತೆ, ವಿಷ್ಣುಲೋಕಂ ಶ್ರೀವಿಷ್ಣುಲೋಕವನ್ನು, ಆಪ—ಹೊಂದಿದನು. ॥೩೩॥

ತಥೈವ ಜನಮೋಹಾಯ ಪ್ರಾಪ್ಯ ವಹ್ನಾವದೃಶ್ಯತಾಮ್ ।
ರುಗ್ಮಿಣ್ಯಗಾದ್ಧರೇಃ ಪಾರ್ಶ್ವಂ ಸತ್ಯಾ ಕೃತ್ವಾ ತಪಸ್ತಥಾ ॥೩೪॥

ತಥಾ ಏವ–ಶ್ರೀಕೃಷ್ಣನು ತಾಮಸರನ್ನು ಮೋಹಿಸಿದಂತೆಯೇ, ರುಕ್ಮಿಣೀ – ಶ್ರೀರುಕ್ಮಿಣೀದೇವಿಯು ಜನಮೋಹಾಯ – ದುಷ್ಟಜನಮೋಹನಕ್ಕಾಗಿಯೇ, ವಹ್ನೌ – ಅಗ್ನಿಯಲ್ಲಿ, ಅದೃಶ್ಯತಾಂ ಪ್ರಾಪ್ಯ – ಕಾಣದಿರುವಿಕೆಯನ್ನು ಹೊಂದಿ, ಹರೇಃ ಪಾರ್ಶ್ವಂ – ಶ್ರೀಹರಿಯ ಸಮೀಪವನ್ನು ಕುರಿತು, ಅಗಾತ್ – ಹೋದಳು. ಸತ್ಯಾ – ಸತ್ಯಭಾಮಾದೇವಿಯು, ತಪಃ ಕೃತ್ವಾ –ತಪಸ್ಸನ್ನು ಮಾಡಿ, (ಯೋಗದಿಂದ ದೇಹವನ್ನು ತ್ಯಜಿಸಿದವಳಂತೆ ಮಾಡಿ,), ತಥಾ – ರುಕ್ಮಿಣಿಯು ಹಾಗೆ, ಹರೇಃ ಪಾರ್ಶ್ವಂ ಅಗಾತ್ – ಶ್ರೀಹರಿಯ ಸಮೀಪಕ್ಕೆ ಹೋದಳು. ॥೩೪॥

ಚಿದಾನಂದೈಕದೇಹೇ ಹಿ ದ್ವಿರೂಪೇ ಇವ ತೇ ಯತಃ ।
ಏಕೈವಾತಃ ಕೃಷ್ಣವತ್ ತೇ ದುಷ್ಟಾನ್ ಮೋಹಯತಸ್ತಥಾ ॥೩೫॥

ಏಕಾ ಏವ – ಒಬ್ಬಳೇ ಆವ, (ಆದರೆ) ದ್ವಿರೂಪೇ ಇವ (ಸ್ಥಿತೇ)–ಎರಡು ರೂಪಗಳಂತಿರುವಃ ತೇ – ಆ ರುಕ್ಮಿಣೀ ಸತ್ಯಭಾಮೆಯರು, ಯತ: – ಯಾವ ಕಾರಣದಿಂದ, ಚಿದಾನಂದೈಕದೇಹೇ – ಕೇವಲ ಜ್ಞಾನಾನಂದಾತ್ಮಕ ಶರೀರವುಳ್ಳವರೋ, ಅತಃ – ಈ ಕಾರಣದಿಂದ, ತೇ – ಅವರಿಬ್ಬರೂ, ಕೃಷ್ಣವತ್ – ಶ್ರೀ ಕೃಷ್ಣ ಪರಮಾತ್ಮನಂತೆ, ದುಷ್ಟಾನ್—ದುಷ್ಟರನ್ನು, ಮೋಹಯತ: ಸ್ಮ—ಮೋಹಿಸಿದರು. (ಉಳಿದ ತಥಾ ಎಂಬ ಪದವನ್ನು ಮುಂದಿನ ಶ್ಲೋಕವಲ್ಲಿ ಅನ್ವಯಿಸಿಕೊಳ್ಳಬೇಕು.) ॥೩೫॥

ಅನ್ಯಾ ಮಹಾಮಹಿಷ್ಯಸ್ತು ತ್ಯಕ್ತ್ವಾ ದೇಹಂ ಹುತಾಶನೇ ।
ಕಾಶ್ಚಿತ್ ಕಾಶ್ಚಿತ್ತು ತಪಸಾತ್ಯಕ್ತದೇಹಾ ಹರಿಂ ಯಯುಃ ॥೩೬॥

ಅನ್ಯಾಃ —ಇವರಿಬ್ಬರಿಂದ ಬೇರೆಯಾದ, ಕಾಶ್ಚಿತ್ ಮಹಾಮಹಿಷ್ಯಃ — ಷಣ್ಮಹಿಷಿಯರಲ್ಲಿ ಕೆಲವರು, ಹುತಾಶನೇ — ಅಗ್ನಿಯಲ್ಲಿ, ದೇಹಂ ತ್ಯಕ್ತ್ವಾ — ದೇಹವನ್ನು ಬಿಟ್ಟು, ಕಾಶ್ಚಿತ್ — ಕೆಲವರು, ತಪಸಾ — ತಪಸ್ಸಿನಿಂದ, ತ್ಯಕ್ತದೇಹಾಃ ಸತ್ಯಃ — ದೇಹವನ್ನು ಬಿಟ್ಟವರಾಗಿ, ತಥಾ — ಶ್ರೀರುಕ್ಮಿಣೀಸತ್ಯಭಾಮೆಯರಂತೆ, ಹರಿಂ — ಶ್ರೀಹರಿಯ ಸಮೀಪಕ್ಕೆ, ಯಯುಃ — ಹೋದರು. ॥೩೬॥

ರೌಹಿಣೇಯಾದಿಕಾನಾಂ ಚ ಭಾರ್ಯಾ ವಹ್ನಿಮುಖೇ ತನುವ್ ।
ತ್ಯಕ್ತ್ವಾ ಸ್ವಭರ್ತೃನೇವಾಽಪುಃ ಸರ್ವಾ ಏವ ಪತಿವ್ರತಾಃ ॥೩೭॥

ಚ — ಮತ್ತು, ರೌಹಿಣೇಯಾದಿಕಾನಾಂ — ಬಲರಾಮಾದಿಗಳ, ಸರ್ವಾಃ ಭಾರ್ಯಾಃ—ಎಲ್ಲ ಹೆಂಡಂದಿರುಃ ಯತಃ—ಯಾವ ಕಾರಣದಿಂದ, ಪತಿವ್ರತಾಃ ಏವ — ಪತಿವ್ರತೆಯರೇ ಆಗಿದ್ದರೋ, ತತಃ — ಆದ್ದರಿಂದ, ತನುಂ — ತಮ್ಮ ದೇಹವನ್ನು, ವಹ್ನಿಮುಖೇ — ಅಗ್ನಿ ಮುಖದಲ್ಲಿ, ತ್ಯಕ್ತ್ವಾ — ತ್ಯಜಿಸಿ, ಸ್ವಭರ್ತೃನ್ ಏವ — ತಮ್ಮ ಪತಿಗಳನ್ನೇ, ಆಪುಃ—ಹೊಂದಿದರು. ॥೩೭॥

ವಸುದೇವಃ ಪಾರ್ಥಮುಖಾಚ್ಛ್ರುತ್ವೈತದ್ ಯೋಗಮಾಸ್ಥಿತಃ ।
ತ್ಯಕ್ತ್ವಾ ದೇಹಂ ಕಶ್ಯಪತ್ವಂ ಪ್ರಾಪ ಕೃಷ್ಣಾನುರಾಗತಃ ॥೩೮॥

ವಸುದೇವಃ—ದ್ವಾರಕೆಯಲ್ಲಿರುವ ವಸುದೇವನು, ಏತತ್— ಯಾದವಮರಣಾದಿ ಈ ಎಲ್ಲ ಸಂಗತಿಯನ್ನು, ಪಾರ್ಥಮುಖಾತ್—ಅರ್ಜುನನ ಮುಖದಿಂದ, ಶ್ರುತ್ವಾ—ಕೇಳಿ, ಕೃಷ್ಣಸ್ಯ ಅನುರಾಗತಃ—ಶ್ರೀಕೃಷ್ಣನ ಮೇಲಿನ ಪ್ರೇಮದಿಂದಾಗಿ ಯೋಗಂ ಆಸ್ಥಿತಃ ಸನ್—ಧ್ಯಾನಯೋಗವನ್ನು ಹೊಂದಿದವನಾಗಿ, ದೇಹಂ ತ್ಯಕ್ತ್ವಾ — ದೇಹವನ್ನು ಬಿಟ್ಟು, ಕಶ್ಯಪತ್ವಂ—ತನ್ನ ಮೂಲಕಶ್ಯಪರೂಪವನ್ನು, ಆಪ—ಹೊಂದಿದನು. ॥ ೩೮ ॥

ತಸ್ಯಾರ್ಜುನೋಽಶ್ವಮೇಧಾಗ್ನಾವಂತ್ಯಕರ್ಮಾಕರೋತ್ ತದಾ ।
ತ್ಯಕ್ತದೇಹಾಸ್ತಸ್ಯ ಭಾರ್ಯಾ ವಹ್ನೌ ಪ್ರಾಪುಸ್ತಮೇವ ಚ ॥೩೯॥

ಅರ್ಜುನಃ —ಅರ್ಜುನನು, ತದಾ—ಆಗ, ಆಶ್ವಮೇಧಾಗ್ನೌ—ಅಶ್ವಮೇಧಯಾಗವಾಡಿದ ಅಗ್ನಿಯಲ್ಲಿಯೇ, ತಸ್ಯ ಅಂತ್ಯಕರ್ಮ—ಆ ವಸುದೇವನ ದೇಹದ ದಹನಕ್ರಿಯೆಯನ್ನು, ಅಕರೋತ್—ಮಾಡಿದನು. ತಸ್ಯ ಭಾರ್ಯಾಃ ಚ—ಆ ವಸುದೇವನ ಪತಿವ್ರತೆಯರು. ವಹ್ನೌ—ಅದೇ ಅಗ್ನಿಯಲ್ಲಿ, ತ್ಯಕ್ತದೇಹಾಃ ಸತ್ಯಃ—ದೇಹವನ್ನು ಬಿಟ್ಟವರಾಗಿ ತಂ ಏವ—ಆ ಕಶ್ಯಪರನ್ನೇ, ಆಪುಃ—ಹೊಂದಿದರು. ॥ ೩೯ ॥

ಭಾವಾನುವಾದ ೩೧—೩೯

ಭಗವಂತನು ತನ್ನ ಹಿಂದಿನ ಯಾವ ಮತ್ಸ್ಯಾದಿರೂಪಗಳಲ್ಲಿಯೂ ದೇಹತ್ಯಾಗರೂಪವಾದ ವಿಡಂಬನೆಯನ್ನು ಮಾಡಿಲ್ಲವಾದ್ದರಿಂದ ಇದನ್ನು ಈ ಕೃಷ್ಣಾವತಾರದಲ್ಲಿ ಮಾಡಿ ದುಷ್ಟಜನರಿಗೆ ಭ್ರಾಂತಿಹುಟ್ಟಿಸಿ ಅಂಧತಮಸ್ಸಿಗೆ ಅವರನ್ನು ಕಳಿಸುವಡಕ್ಕಾಗಿ, ತಾನು ಜ್ಞಾನಾನಂದಾತ್ಮಕ ಅಪ್ರಾಕೃತ ದೇಹವುಳ್ಳವನಾದರೂ, ತನ್ನ ರೂಪದಂಥ ಒಂದು ಪ್ರಾಕೃತ ದೇಹವನ್ನು ಜರ ವ್ಯಾಧನ ಬಾಣ ಪ್ರಹಾರದ ಕ್ಷಣದಲ್ಲಿ ಸೃಷ್ಟಿಸಿ

ಬಿಟ್ಟಂತೆ ನಟಿಸಿ ಭೂಮಿಯಲ್ಲಿ ಮಲಗಿರುವಂತೆ ಮಾಡಿ, ತಾನು ತನ್ನ ಲೋಕಕ್ಕೆ ಹೋಗಿದ್ದನು. ಶ್ರೀಕೃಷ್ಣ ಪರಮಾತ್ಮನ ಅಪ್ಪಣೆಯಂತೆ ಪಾಂಡವರ ಕಡೆಗೆ ಬಂದ ದಾರುಕನು ಎಲ್ಲ ವಿಷಯಗಳನ್ನು ತಿಳಿಸಿದನು. ಆ ವಿಷಯವನ್ನು ಕೇಳಿ ಅರ್ಜುನನು ಧರ್ಮಜನ ಅಪ್ಪಣೆಯಂತೆ ಹೊರಟುಬಂದು ಶ್ರೀಕೃಷ್ಣಪರಮಾತ್ಮನು ಬಿಟ್ಟಂತೆ ಮಾಡಿದ ಆ ಪ್ರಾಕೃತ ದೇಹವನ್ನು ದಹನಮಾಡಿದನು. ಹಾಗು ಮುಖ್ಯ ಮುಖ್ಯ ವ್ಯಕ್ತಿಗಳಾದ ಬಲರಾಮಾದಿಗಳ ದೇಹಗಳನ್ನೂ ದಹನ ಮಾಡಿದನು. ದಾರುಕನು ಪಾಂಡವರಿಗೆ ಸುದ್ದಿ ಮುಟ್ಟಿಸಿ ಬಂದವನು, ಭೂಲೋಕಕ್ಕೆ ಬಂದ ದಾರಿಯನ್ನು ಹಿಡಿದು ಭಗವಂತನ ಲೋಕವನ್ನು ಸೇರಿದನು. ಶ್ರೀಕೃಷ್ಣಪರಮಾತ್ಮನ ನಟನೆಯನ್ನೇ ಅನುಸರಿಸಿದ, ಅವನ ಪತ್ನಿಯರಾದ ಶ್ರೀಭೂಸ್ವರೂಪರಾದ ರುಕ್ಮಿಣೀಸತ್ಯಭಾಮೆಯರೂ ಕೂಡ ದುಷ್ಟಮೋಹಾರ್ಥವಾಗಿ, ಪ್ರಾಕೃತವಾದ ದೇಹವನ್ನು ಬಿಟ್ಟಂತೆ ತೋರಿಸಿದರು. ರುಕ್ಮಿಣೀ ದೇವಿಯು ಅಗ್ನಿಯಲ್ಲಿ ದೇಹವನ್ನು ಬಿಟ್ಟಂತೆ ಮಾಡಿದರೆ, ಶ್ರೀಸತ್ಯಭಾಮೆಯು ತಪಸ್ಸನ್ನಾಚರಿಸಿ ಯೋಗ ದಿಂದ ದೇಹವನ್ನು ತ್ಯಜಿಸಿದಂತೆ ನಟಿಸಿದಳು. ಇಷ್ಟುಮಾಡಿ ಇಬ್ಬರೂ ಶ್ರೀಹರಿಯ ಸಮೀಪಕ್ಕೆ ಹೋದರು. ಉಳಿದ ಶ್ರೀಕೃಷ್ಣಮಹಿಷಿಯರಲ್ಲಿ ಕೆಲವರು ತಪಸ್ಸಿನಿಂದ, ಕೆಲವರು ಅಗ್ನಿಯಲ್ಲಿ ದೇಹವನ್ನುತ್ಯಜಿಸಿ ಶ್ರೀಹರಿಯ ಸಮೀಪವನ್ನು ಸೇರಿದರು. ಪತಿವ್ರತೆಯರಾದ ಬಲರಾಮಪತ್ನ್ಯಾದಿಗಳು ಅಗ್ನಿಯಲ್ಲಿ ದೇಹವನ್ನು ಬಿಟ್ಟ ತಮ್ಮ ತಮ್ಮ ಪತಿಗಳನ್ನೇ ಸೇರಿದರು. ಅರ್ಜುನನು ಹಿಂದೆ ಹೇಳಿದಂತೆ ದೇಹಸಂಸ್ಕಾರವನ್ನು ಮಾಡಿ, ದ್ವಾರಕೆಗೆ ಹೋಗಿ ವಸುದೇವದೇವಕ್ಯಾದಿಗಳಿಗೆ ಎಲ್ಲ ವಾರ್ತೆಯನ್ನು ಹೇಳಿದನು. ಅದನ್ನು ಕೇಳಿದ ವಸುದೇವನು ಧ್ಯಾನ ಯೋಗವನ್ನು ಆಶ್ರಯಿಸಿ ದೇಹವನ್ನು ತ್ಯಜಿಸಿ ತನ್ನ ಕಶ್ಯಪರೂಪವನ್ನು ಹೊಂದಿದನು. ಅವನ ದೇಹವನ್ನು ಅರ್ಜುನನು ಅಶ್ವಮೇಧದ ಅಗ್ನಿಯಲ್ಲಿ ಸಂಸ್ಕಾರ ಮಾಡಿದನು. ವಸುದೇವ ಪತ್ನಿಯರು ಅಗ್ನಿಯಲ್ಲಿ ದೇಹವನ್ನು ತ್ಯಜಿಸಿ ಅವನ ಸಮೀಪಕ್ಕೇ ಹೋದರು.

ಸ್ತ್ರಿಯೋ ಬಾಲಾಂಸ್ತಥಾಕ್ರಂದಾಯ ಧನಂ ಚೈವ ಧನಂಜಯಃ ।
ವಿನಿರ್ಯಯೌ ದ್ವಾರವತ್ಯಾಸ್ತಾಂ ಜಗ್ರಾಸ ಚ ಸಾಗರಃ ॥೪೦॥

ಧನಂಜಯಃ—ಅರ್ಜುನನು, ಸ್ತ್ರಿಯಃ—ಸ್ತ್ರೀಯರನ್ನು, ತಥಾ—ಹಾಗೂ, ಬಾಲಾನ್—ಬಾಲಕರನ್ನು ಚ—ಮತ್ತು, ಧನಂ—ಅಲ್ಲಿದ್ದ ಸಂಪತ್ತನ್ನು, ಆದಾಯ ಏವ—ತೆಗೆದುಕೊಂಡೇ, ದ್ವಾರವತ್ಯಾ:—ದ್ವಾರಕೆಯಿಂದ ವಿನಿರ್ಯಯೌ—ಹೊರಟನು. ತಾಂ ಚ—ಎಲ್ಲರಿಂದ ರಹಿತವಾದ ಆ ದ್ವಾರಕೆಯನ್ನೂ ಕೂಡ, ಸಾಗರಃ—ಸಮುದ್ರವು ಜಗ್ರಾಸ—ಆವರಿಸಿತು. (ಮುಳುಗಿಸಿತು.) ॥ ೪೦ ॥

ಸ್ತ್ರೀಬಾಲಸಹಿತೇ ಪಾರ್ಥ ಏಕಸ್ಮಿನ್ ಪಥಿ ಗಚ್ಛತಿ ।
ಶಾಪಾತ್ ಸುಪಾಪಾ ಅಭೀರಾಃ ಸ್ತ್ರೀಜನಾನ್ ಜಹ್ರುರುದ್ಧತಾಃ ॥೪೧॥

ಸ್ತ್ರೀಬಾಲಸಹಿತೇ—ಸ್ತ್ರೀಬಾಲಕರಿಂದಸಹಿತನಾದ, ಏಕಸ್ಮಿನ್ ಪಾರ್ಥೇ—ಅರ್ಜುನನೊಬ್ಬನೇ, ಪಥಿ ಗಚ್ಛತಿ ಸತಿ—ದಾರಿಯಲ್ಲಿ ಹೋಗುತ್ತಿರಲು, ಸ್ತ್ರೀಜನಾನ್—ಹೆಂಗಸರನ್ನು, ಶಾಪಾತ್—ಅವರಿಗಿರುವ ಕೃಷ್ಣಶಾಪದಫಲವಾಗಿ, ಸುಪಾಪಾಃ ಉದ್ಧತಾಃ ಅಭೀರಾಃ—ಪಾಪಿಗಳಾದ ಉದ್ಧಟರಾದ, ಅಭೀರರು (ಮ್ಲೇಚ್ಛರು), ಜಹ್ರುಃ — ಅಪಹರಿಸಿದರು. ॥ ೪೧ ॥

ಯಾಸ್ತಾ ಷೋಡಸಸಾಹಸ್ರನನಿತಾಃ ಶತಸಂಯುತಾಃ ।
ಕೃಷ್ಣಶಾಪಾನ್ಮ್ಲೇಚ್ಛವಶಂ ಯಯುರ್ದರ್ಪನಿಮಿತ್ತತಃ ॥೪೨॥

ಶತಸಂಯುತಾಃ—ನೂರರಿಂದ ಸಹಿತರಾದ, ಯಾಃ ಷೋಡಶಸಾಹಸ್ರವನಿತಾಃ—ಯಾವ ಹದಿನಾರು

ಸಾವಿರಸ್ತ್ರೀಯರೋ, ತಾಃ—ಅವರು, ದರ್ಪನಿಮಿತ್ತತ:—ಶ್ರೀಕೃಷ್ಣನ ಸನಿಹದಲ್ಲಿರುವಾಗ ಅಂಹಕಾರ ಪಟ್ಟಿದ ಕಾರಣದಿಂದ, ಕೃಷ್ಣಶಾಪಾತ್—ಶ್ರೀಕೃಷ್ಣನಶಾಪದಿಂದ, ಮ್ಲೇಚ್ಛವಶಂ ಯಯುಃ —ಮ್ಲೇಚ್ಛರ ಅಧೀನತೆಯನ್ನು ಹೊಂದಿದರು. ॥ ೪೨ ॥

ಹ್ರಿಯಮಾಣೇ ಧನೇ ಚೈವ ವನಿತಾಸು ಚ ವಾಸವಿಃ ।
ಯುಯುತ್ಸುರ್ಗಾಂಡಿವಂ ಸಜ್ಯಂ ಕೃಚ್ಛ್ರೇಣೈವ ಚಕಾರಹ ॥೪೩॥

ಧನೇ—ಸಂಪತ್ತು, ಹ್ರಿಯಮಾಣೇ ಸತಿ—(ನಿಷಾದರಿಂದ) ಕಸಿಯಲ್ಪಡುತ್ತಿರಲು, ಚ—ಮತ್ತು ವನಿತಾಸು ಚ—ಸ್ತ್ರೀಯರೂ ಅಪಹರಿಸಲ್ಪಡುತ್ತಿರಲು, ವಾಸವಿ:—ಇಂದ್ರಾವತಾರನಾದ ಅರ್ಜುನನು, ಯುಯುತ್ಸು: ಸನ್—ಯುದ್ಧ ಮಾಡುವ ಇಚ್ಛೆಯುಳ್ಳವನಾಗಿ, ಗಾಂಡಿವಂ—ಗಾಂಡೀವಧನುಸ್ಸನ್ನು, ಕೃಚ್ಛ್ರೇಣ ಏವ—ಕಷ್ಟದಿಂದಲೇ ಸಜ್ಯಂ ಚಕಾರ—ಜ್ಯಾಸಹಿತವನ್ನಾಗಿ ಮಾಡಿದನು. ॥ ೪೩ ॥

ಕ್ಷೀಣಾಸ್ತಸ್ಯ ಶರಾ ದೈವಾನ್ನಾಸ್ತ್ರಾಣಿ ಸ್ಮೃತಿಮಾಯಯುಃ ।
ಸ ತದ್ ದೈವಕೃತಂ ಜ್ಞಾತ್ವಾ ಸಂಸ್ಮರನ್ ಪುರುಷೋತ್ತಮಮ್ ।
ನಿಘ್ನಂಛತ್ರೂನ್ ಗಾಂಡಿವೇನ ಶೇಷಂ ರಕ್ಷನ್ ಕುರೂನಗಾತ್ ॥೪೪॥

ದೈವಾತ್—ದೇವಸಂಕಲ್ಪದಂತೆ,ತಸ್ಯ – ಆ ಅರ್ಜುನನ, ಶರಾಃ – ಬಾಣಗಳು, ಕ್ಷೀಣಾಃ – ತೀರಿದವು, ಅಸ್ತ್ರಾಣಿ – ಮಂತ್ರಗಳು, ಸ್ಮೃತಿಂ – ಸ್ಮರಣೆಗೆ, ನ ಆಯಯುಃ – ಬರಲಿಲ್ಲ, ಸಃ – ಆ ಅರ್ಜುನನು, ತತ್ – ಹಾಗೆ ಆದದ್ದನ್ನು, ದೈವಕೃತಂ – ದೇವಸಂಕಲ್ಪದಂತೆ ನಡೆದದ್ದನಾಗಿ, ಜ್ಞಾತ್ವಾ – ತಿಳಿದು, ಪುರುಷೋತ್ತಮಂ – ಸರ್ವೋತ್ತಮನಾದ ಶ್ರೀಹರಿಯನ್ನು, ಸಂಸ್ಮರನ್ ಸನ್ – ಸ್ಮರಿಸುವವನಾಗಿ, ಗಾಂಡಿವೇನ – ಗಾಂಡೀವಧನುಸ್ಸಿನಿಂದಲೇ, ಶತ್ರೂನ್ – ವೈರಿಗಳನ್ನು (ಕಳ್ಳ ನಿಷಾದರನ್ನು) ನಿಘ್ನನ್ಸನ್—ಹೊಡೆಯುವವನಾಗಿ, ಶೇಷಂ – ಹೋಗಿ ಉಳಿದಸೊತ್ತನ್ನು ಸ್ತ್ರೀ ಸಮೂಹವನ್ನು, ರಕ್ಷನ್ಸನ್ – ರಕ್ಷಿಸುವವನಾಗಿ, ಕುರೂನ್ ಆಗಾತ್ – ಕುರುದೇಶಕ್ಕೆ ಹಸ್ತಿನಾವತಿಗೆ ಬಂದನು. ॥ ೪೪ ॥

ತದಾ ಕುರುಕ್ಷೇತ್ರಗತಂ ಜಗದ್ಗುರುಂ ಸುಪೂರ್ಣ ವಿಜ್ಞಾನಬಲರ್ದ್ಧಿಸತ್ಸುಖಮ್ ।
ತನೋವ ವಾಸಿಷ್ಠಕುಲೋದ್ವಹಂ ಹರಿಂ ನಿರೀಕ್ಷ್ಯದುಃಖೇನ ಪಪಾತ ಪಾದಯೋ : ॥೪೫॥

ತದಾ – ತಾನು ಹಸ್ತಿನಾವತಿಗೆ ಹೊರಟಾಗ, (ಮಾರ್ಗದಲ್ಲಿ) ಕುರುಕ್ಷೇತ್ರಗುತಂ – ಕುರುಕ್ಷೇತ್ರದಲ್ಲಿದ್ದ, ಜಗದ್ಗುರುಂ – ಜಗದ್ಗುರುವಾದಂಥ, ಸುಪೂರ್ಣವಿಜ್ಞಾನಬಲರ್ಧಿಸತ್ಸುಖಂ – ಪರಿಪೂರ್ಣವಾದಜ್ಞಾನ, ಬಲಾಭಿವೃದ್ಧಿ ನಿರ್ದುಷ್ಟಆನಂದಸ್ವರೂಪರಾದ. ತಂ ಏವ – ದೇಹವನ್ನು ಬಿಟ್ಟಂತೆಮಾಡಿ ಈ ಲೋಕವನ್ನು ಬಿಟ್ಟಂತೆ ಮಾಡಿದ್ದ ಶ್ರೀಕೃಷ್ಣಸ್ವರೂಪರೇ ಆದ, ವಾಸಿಷ್ಠಕುಲೋದ್ವಹಂ – ವಸಿಷ್ಠಕುಲದಲ್ಲಿ ಅವತರಿಸಿದ, ಹರಿಂ – ಶ್ರೀಹರಿಯಸ್ವರೂಪರಾದ ಶ್ರೀವೇದವ್ಯಾಸದೇವರನ್ನು, ನಿರೀಕ್ಷ್ಯ — ನೋಡಿ, ದುಃಖೇನ — ದು:ಖದಿಂದ, ಪಾದಯೋಃ — ಶ್ರೀವೇದವ್ಯಾಸದೇವರ ಪಾದಗಳಲ್ಲಿ, ಪಪಾತ – ಬಿದ್ದನು. ॥ ೪೫ ॥

ಸ ತೇನ ಪುಂಸಾಂ ಪ್ರವರೇಣ ಹೇತುಭಿ: ಸಂಬೋಧಿತೋಽಜ್ಞಾನತಮೋಂಶುಮಾಲಿನಾ।
ಸಂಸ್ಥಾಪ್ಯ ಚೇತಃ ಪುನರೇವ ತಸ್ಮಿನ್ ಜಹೌ ಶುಚಃ ಪ್ರಾಯಶಏವಧೈರ್ಯಾತ್ ॥೪೬॥

ಅಜ್ಞಾನತಮೋಽಂಶುಮಾಲಿನಾ—ಅಜ್ಞಾನವೆಂಬ ಕತ್ತಲೆಯನ್ನು ನಾಶ ಮಾಡುವ ಕಿರಣಸಮೂಹವುಳ್ಳ, ಪುಂಸಾಂ ಪ್ರವರೇಣ ತೇನ— ಪುರುಷೋತ್ತಮನಾದ ಆ ವೇದವ್ಯಾಸದೇವರಿಂದ, ಹೇತುಭಿಃ—ದುಃಖಿಸವಶಾಧಾನ ಮಾಡಿಕೊಳ್ಳುವ ಅನೇಕ ನಿಮಿತ್ತಗಳಿಂದ, ಸಂಬೋಧಿತಃ —ತಿಳಿಸಲ್ಪಟ್ಟ, ಸಃ—ಆ ಅರ್ಜುನನು, ಚೇತಃ —

ಮನಸ್ಸನ್ನು, ತಸ್ಮಿನ್ ಏವ ಸಂಸ್ಥಾಪ್ಯ—ಆ ವೇದವ್ಯಾಸದೇವರಲ್ಲಿಯೇ ಇಟ್ಟು ಇವರೂ ಕೃಷ್ಣಸ್ವರೂಪರು ಎಂದು ತಿಳಿದು, ಧೈರ್ಯಾತ್—ಧೈರ್ಯವನ್ನು ತೆಗೆದುಕೊಂಡು, ಪ್ರಾಯಶಃ —ಬಹುಶಃ, ಶುಚಃ ಜಹೌ—ದುಃಖಗಳನ್ನು ತ್ಯಜಿಸಿದನು. ॥೪೬॥

ಸ್ತ್ರಿಯೋ ಮ್ಲೇಚ್ಛಹೃತಾಃ ಕೃಷ್ಣಪ್ರೇಷಿತಾದ್ ದಾಲ್ಭ್ಯತಃ ಪುನಃ ।
ಗೋವಿಂದೈಕಾದಶೀಂ ಶ್ರುತ್ವಾ ಕೃತ್ವಾ ಸಾರಸ್ವತೇ ಜಲೇ ।
ನಿಮಜ್ಯ ವಾಯೋರ್ವಚನಾತ್ ತ್ಯಕ್ತದೇಹಾ ದಿವಂ ಯಯುಃ ॥೪೭॥

ಮ್ಲೇಚ್ಛಹೃತಾಃ ಸ್ತ್ರಿಯಃ —ಮ್ಲೇಚ್ಛರಿಂದ ಅಪಹರಿಸಲ್ಪಟ್ಟ ಸ್ತ್ರೀಯರು, ಪುನಃ — ನಂತರ, ಕೃಷ್ಣ ಪ್ರೇಷಿತಾತ್—ಶ್ರೀಕೃಷ್ಣನಿಂದ ಕಳಿಸಲ್ಪಟ್ಟ, ದಾಲ್ಭ್ಯತಃ—ದಾಲ್ಭ್ಯ ಋಷಿಗಳಿಂದ, ಗೋವಿಂದೈಕಾದಶೀಂ—ಗೋವಿಂದ ಏಕಾದಶಿಯ (ಆಷಾಢ ಶುಕ್ಲ ಏಕಾದಶಿಯ) ಬಗ್ಗೆ ಅದರ ಮಹತ್ವದ ಬಗ್ಗೆ, ಶ್ರುತ್ವಾ—ಕೇಳಿ ತಿಳಿದ ಕೃತ್ವಾ—ಆಚರಿಸಿ, ತಾವು ಹಿಂದೆ ಮಾಡಿದ ದರ್ಪದೋಷಪರಿಹಾರಕ್ಕಾಗಿ, (ಆಗ ಶಪಿಸಿದ ಶ್ರೀಕೃಷ್ಣನ ಅನುಗ್ರಹವನ್ನೂ ಸಂಪಾದಿಸಿ), ವಾಯೋಃ ವಚನಾತ್—ಅದೃಶ್ಯರಾಗಿ ವಾಯುದೇವರು ಹೇಳಿದ ಮಾತಿನಂತೆ, ಸಾರಸ್ವತೇ ಜಲೇ—ಸರಸ್ವತೀನದಿಯ ನೀರಿನಲ್ಲಿ, ತ್ಯಕ್ತದೇಹಾ: ಸತ್ಯಃ—ದೇಹವನ್ನು ಬಿಟ್ಟವರಾಗಿ, ದಿವಂ ಯಯುಃ—ಸ್ವರ್ಗಕ್ಕೆ ಹೋದರು. ॥೪೭॥

ಅರ್ಜುನಸ್ತು ಕುರುಕ್ಷೇತ್ರೇ ಹಾರ್ದಿಕ್ಯಯುಯುಧಾನಯೋಃ ।
ಸುತೌ ಸಾರಸ್ವತೇ ಚೈವ ದೇಶೇ ರಾಜ್ಯೇಽಭ್ಯಷೇಚಯತ್ ॥೪೮॥

ಅರ್ಜುನಃ ತು—ಅರ್ಜುನನಾದರೂ, ಹಾರ್ದಿಕ್ಯಯುಯುಧಾನಯೋಃ ಸುತೌ—ಕೃತವರ್ಮ ಹಾಗೂ ಸಾತ್ಯಕಿಯರ ಮಕ್ಕಳನ್ನು, (ಕ್ರಮವಾಗಿ,) ಕುರುಕ್ಷೇತ್ರೇ ಚ ಸಾರಸ್ವತೇ ದೇಶೇ—ಕುರುಕ್ಷೇತ್ರ ಹಾಗು ಸರಸ್ವತೀ ತೀರ ಪ್ರದೇಶಗಳಲ್ಲಿ, ರಾಜ್ಯೇ—ರಾಜ್ಯಪದವಿಯಲ್ಲಿ, ಅಭ್ಯಷೇಚಯತ್—ಅಭಿಷೇಕ ಮಾಡಿದನು. ॥೪೮॥

ಅನಿರುದ್ಧಸುತಂ ವಜ್ರಂ ಪ್ರಿಯಂ ಕೃಷ್ಣಸ್ಯ ಸದ್ಗುಣಮ್ ।
ಸಶೂರಸೇನೇಂದ್ರಪ್ರಸ್ಥರಾಜಾನಾಮಕರೋದ್ ವಶೀ ॥೪೯॥

ವಶೀ ಸಃ—ಇಂದ್ರಿಯಗಳನ್ನು ಹಾಗು ರಾಜ್ಯವನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ಅರ್ಜುನನು, ಸದ್ಗುಣಂ—ಸದ್ಗುಣಿಯಾವ, (ಆದ್ದರಿಂದಲೇ) ಕೃಷ್ಣಸ್ಯ ಪ್ರಿಯಂ—ಶ್ರೀಕೃಷ್ಣನಿಗೆ ಪ್ರಿಯನಾದ, ಅನಿರುದ್ಧಸುತಂ—ಅನಿರುದ್ಧನ ಮಗನಾದ, ವಜ್ರಂ—ವಜ್ರನನ್ನು, ಶೂರಸೇನೇಂದ್ರಪ್ರಸ್ಥರಾಜಾನಂ—ಶೂರಸೇನರಾಜನ ದೇಶ ಹಾಗು ಇಂದ್ರಪ್ರಸ ದೇಶಗಳ ರಾಜನನ್ನಾಗಿ, ಅಕರೋತ್—ಮಾಡಿದನು. ॥೪೯॥

ಸ್ತ್ರೀಬಾಲಾಂಶ್ಚ ಧನಂ ಚೈವ ತಸ್ಮಿನ್ ಸಂಸ್ಥಾಪ್ಯ ಫಲ್ಗುನಃ ।
ಯಯೌ ಭ್ರಾತೃನಶೇಷಂ ಚ ವೃತ್ತಂ ತೇಷಾಮುವರ್ಣಯತ್ ॥೫೦॥

ಫಲ್ಗುನಃ —ಅರ್ಜುನನು, ಸ್ತ್ರೀಬಾಲಾನ್—ತಾನು ತಂದ ಸ್ತ್ರೀ ಬಾಲಕರನ್ನು, ಚ—ಮತ್ತು, ಧನಂ—ಸಂಪತ್ತನ್ನು, ತಸ್ಮಿನ್—ಆ ವಜ್ರನವಶದಲ್ಲಿ, ಸಂಸ್ಥಾಪ್ಯ—ಒಪ್ಪಿಸಿ, ಭ್ರಾತೃನ್—ತನ್ನ ಸಹೋದರರ ಹತ್ತಿರ, ಯಯೌ—ಹೋದನು, ಚ—ಮತ್ತು, ತೇಷಾಂ—ಅವರಿಗೆ, ಅಶೇಷಂ ವೃತ್ತಂ—ಎಲ್ಲ ವೃತ್ತಾಂತವನ್ನು, ಅವರ್ಣಯತ್—ಹೇಳಿದನು. ॥೫೦॥

ತೇ ಚಾವಿಯೋಗಸಮಯಂ ಸ್ಮರಂತೋ ಮುರವೈರಿಣಾ ।
ಅಭ್ಯಷಿಂಚನ್ ಭಾಗವತಂ ಮಹಾರಾಜ್ಯೇ ಪರೀಕ್ಷಿತವ್ ॥ ೫೧ ॥

ತೇ ಚ—ಆ ಪಾಂಡವರಾದರೂ, ಮುರವೈರಿಣಾ—ಮುರನಾಮಕದೈತ್ಯಸಂಹಾರಕನಾದ ಶ್ರೀಕೃಷ್ಣ ಪರಮಾತ್ಮನಿಂದ (ಕೃತಂ—ಮಾಡಲ್ಪಟ್ಟಂಥ) ಮುರವೈರಿಣಾ ಅವಿಯೋಗಸಮಯಂ—ಶ್ರೀಕೃಷ್ಣನ ವಿಯೋಗ ಬಾರದಿರುವಂತೆ ಅವನು ಭೂಮಿಯನ್ನು ಬಿಟ್ಟಾಗ ತಾವೂ ಭೂಮಿಯನ್ನು ಬಿಡಬೇಕೆಂಬ ಸೂಚನೆಯನ್ನು, ಸ್ಮರಂತಃ ಸಂತಃ—ನೆನಪಿಸಿಕೊಳ್ಳುವವರಾಗಿ, ಭಾಗವತಂ ಪರೀಕ್ಷಿತಂ—ಭಗವದ್ಭಕ್ತನಾದ ಪರೀಕ್ಷಿತ ರಾಜನನ್ನು, ಮಹಾರಾಜ್ಯೇ—ಮಹಾರಾಜ್ಯ ಸಿಂಹಾಸನದಲ್ಲಿ, ಅಭ್ಯಷಿಂಚನ್—ಅಭಿಷೇಕ ಮಾಡಿದರು. ॥ ೫೧ ॥

ಸ್ತ್ರೀಹಾರಿಣಾಂ ಚ ಮ್ಲೇಂಛಾನಾಂ ವಧಾಯೈನಮಯೋಜಯನ್ ।
ಕೃತಂ ಚ ತೇನ ತತ್ ಕರ್ಮ ವೋಢ್ರಾ ಪೈತಾಮಹಂ ಧುರವ್ ।
ಸಮಯಂ ಪರಿರಕ್ಷದ್ಭಿರ್ನ ಪಾರ್ಥೈರೇವ ಯತ್ ಕೃತವ್ ॥ ೫೨ ॥

ಸ್ತ್ರೀ ಹಾರಿಣಾಂ ಮ್ಲೇಂಛಾನಾಂ –ಯಾದವ ಸ್ತ್ರೀ ಧನಾಧಿಗಳನ್ನು ದಾರಿಯಲ್ಲಿ ಅಪಹರಿಸಿದ ಮ್ಲೇಂಛಜನರ, ವಧಾಯ ಚ—ಸಂಹಾರಕ್ಕಾಗಿಯೂಕೂಡಾ, ಏನಂ—ಈ ಪರೀಕ್ಷಿತರಾಜನನ್ನು ಅಯೋಜಯನ್—ತೊಡಗಿಸಿದರು. (ಆ ಕಾರ್ಯವನ್ನು ಮಾಡಲು ಹೇಳಿದರು.) ಪೈತಾಮಹಂ ಧುರಂ—ಅಜ್ಜಂದಿರ ಜವಾಬದಾರಿಯನ್ನು (ಅವರ ಆದೇಶವನ್ನು) ವೋಢ್ರಾ—ಹೊತ್ತಂಥ, ತೇನ—ಆ ಪರೀಕ್ಷಿತ್ ರಾಜನಿಂದ, ಯತ್—ಯಾವ ಆ ಕಾರ್ಯವು, ಸಮಯಂ ಪರಿರಕ್ಷದ್ಭಿಃ ಪಾರ್ಥೈಃ ಏವ—ಶ್ರೀಕೃಷ್ಣಪರಮಾತ್ಮನ ಸಂಕೇತವನ್ನು ನಡೆಸುವ ಕಾರಣದಿಂದ ಪಾಂಡವರಿಂದಲೇ ಮಾಡಲ್ಪಡಲಿಲ್ಲವೋ: ತತ್ ಕರ್ಮ—ಆ ಕಾರ್ಯವು, ಕೃತಂ—ಮಾಡಲ್ಪಟ್ಟಿತು. ॥ ೫೨ ॥

ಅವತಾರಿಕೆ—ಪಾಂಡವರಿಗೆ ಶ್ರೀಕೃಷ್ಣಪರಮಾತ್ಮನ ಸೂಚನೆ ಏನಿತ್ತು ಎಂಬುವದನ್ನು ಹೇಳುತ್ತಾರೆ—

ವಾಸುದೇವಪದಾಸ್ಪೃಷ್ಟಭೂಕಂಟಕಸಮುದ್ಧೃತಿಃ ।
ಸಮಯಃ ಪಾಂಡವಾನಾಂ ಹಿ ತಸ್ಯೈವಾನುಗತಿಃ ಪರವ್ । ॥ ೫೩ ॥

ವಾಸುದೇವಪದಾ ಸ್ಪೃಷ್ಟಭೂಕಂಟಕಸಮುದ್ಧೃತಿಃ—ಶ್ರೀಕೃಷ್ಣಪರಮಾತ್ಮನ ಪಾದ ಸ್ಪರ್ಶವಿರುವಾಗ ಭೂಮಿಯಲ್ಲಿರುವ ಕಂಟಕರಾದ ದೈತ್ಯರ ಸಂಹಾರಕಾರ್ಯವು ಪಾಂಡವರಿಂದ ಮಾಡಲ್ಪಡಬೇಕು, ಪರಂ—ಶ್ರೀಕೃಷ್ಣ ಪರಮಾತ್ಮನು ಭೂಮಿಯಲ್ಲಿ ತನ್ನ ಪಾದಸ್ಪರ್ಶವಿಲ್ಲದಂತೆ ಅಲ್ಲಿಂದ ಹೊರಟನಂತರ, ತಸ್ಯ ಅನುಗತಿಃ ಏವ—ಅವನನ್ನನುಸರಿಸಿ ಗಮನವೇ ಮಾಡಲ್ಪಡಬೇಕೆಂಬುದೇ, ಪಾಂಡವಾನಾಂ—ಪಾಂಡವರಿಗೆ, ಸಮಯಃ ಹಿ—ಶ್ರೀಕೃಷ್ಣಪರಮಾತ್ಮನ ಸಂಕೇತವಾಗಿತ್ತು. ॥ ೫೩ ॥

ಅನುವ್ರಜದ್ಭಿರ್ವಿಶ್ವೇಶಂ ನಾಸ್ಮಾಭಿರ್ಭೂಸ್ತದುಜ್ಝಿತಾ ।
ಭೋಜ್ಯಾರಕ್ಷ್ಯಾಕಪಿ ವಾ ತೇಷಾಮಿತ್ಯೇವ ಸಮಯಃ ಪುರಾ ॥ ೫೪ ॥

ವಿಶ್ವೇಶಂ—ಜಗದೊಡೆಯನಾದ ಶ್ರೀಕೃಷ್ಣನನ್ನು, ಅನುವ್ರಜದ್ಭಿಃಅಸ್ಮಾಭಿಃ—ಅನುಸರಿಸಿಕೊಂಡಿರಬೇಕಾದ ನಮ್ಮಿಂದ, ತದುಜ್ಝಿತಾ—ಆ ಶ್ರೀಕೃಷ್ಣನಿಂದ ರಹಿತವಾದ, ಭೂಃ—ಭೂಮಿಯು, ನ ಭೋಜ್ಯಾ—

ಭೋಗಿಸಲ್ಪಡಬಾರದು, ನವಾ ರಕ್ಷ್ಯಾ—ಅಥವಾ ರಕ್ಷಿಸಲ್ಪಡಬಾರದು, ಇತಿ ಏವ—ಎಂಬುದಾಗಿಯೇ, ತೇಷಾಂ — ಆ ಪಾಂಡವರ, ಸಮಯಃ—ಶ್ರೀಕೃಷ್ಣಾದೇಶಾನುಸಾರ ಇಚ್ಛೆಯು, ಪುರಾ—ಹಿಂದೆಯೇ ಮಾಡಲ್ಪಟ್ಟಾಗಿತ್ತೋ (ಆದ್ದರಿಂದ ಅವರು ಆ ವ್ಲೇಂಛಹನನ ಕಾರ್ಯವನ್ನು ಮಾಡಲಿಲ್ಲ.) ॥ ೫೪ ॥

ತತ್ರ ಕಾಳೀ ಭೀಮಭಾರ್ಯಾ ವೈಷ್ಣವಂ ಯೋಗಮಾಸ್ಥಿತಾ ।
ಕೃಷ್ಣಯೈಕತ್ವ ಮಾಪನ್ನಾ ತ್ಯಕ್ತ್ವಾ ದೇಹಂ ತು ಮಾನುಷಮ್ ॥ ೫೫ ॥

ತತ್ರ—ಪಾಂಡವರ ಪತ್ನಿಗಳ ಮಧ್ಯದಲ್ಲಿ, ಭೀಮಭಾರ್ಯಾ ಕಾಳೀ—ಭೀಮಸೇನದೇವರ ಪತ್ನಿಯಾದ ಕಾಳೀದೇವಿಯು, ವೈಷ್ಣವಂ ಯೋಗಂ—ಶ್ರೀಹರಿಧ್ಯಾನರೂಪಯೋಗವನ್ನು, ಆಸ್ಥಿತಾ ಸತೀ— ಹೊಂದಿದವಳಾಗಿ ಮಾನುಷಂ ದೇಹಂ ತು ತ್ಯಕ್ತ್ವಾ—ಮನುಷ್ಯ ದೇಹವನ್ನು ಬಿಟ್ಟು, ಕೃಷ್ಣಯಾ—ಶ್ರೀದ್ರೌಪದೀದೇವಿಯಿಂದ, ಏಕತ್ವಂ - ಐಕ್ಯವನ್ನು, ಆಪನ್ನಾ—ಹೊಂದಿದಳು. ॥ ೫೫ ॥

ಸುಭದ್ರಾದ್ಯಾಸ್ತು ಯಾ ಭಾರ್ಯಾಃ ಪಾರ್ಥಾನಾಂ ತು ತದಾಜ್ಞಯಾ ।
ಯುಯುತ್ಸುಶ್ಚಾತ್ರ ಶಿಕ್ಷಾರ್ಥಂ ಪೌತ್ರಾಸ್ಯೈವಾವಸನ್ ಪುರೇ ॥ ೫೬ ॥

ತು—ಆದರೆ, ಸುಭದ್ರಾದ್ಯಾಃ—ಸುಭದ್ರಾದೇವಿಯೇ ಮೊದಲಾದ, ಯಾಃ ಪಾರ್ಥಾನಾಂ ಭಾರ್ಯಾಃ—ಪಾಂಡವರ ಯಾವ ಹೆಂಡಂದಿರೋ, ತಾಃ—ಅವರು, ಚ—ಮತ್ತು, ಯುಯುತ್ಸುಃ—ಯುಯುತ್ಸುವು (ಧೃತರಾಷ್ಟ್ರನ ವೈಶ್ಯ ಹೆಂಡತಿಯ ಮಗನು) ಪೌತ್ರಸ್ಯ—ಪರೀಕ್ಷಿತ್‌ರಾಜನಿಗೆ, ಶಿಕ್ಷಾರ್ಥಂ—ರಾಜಧರ್ಮ, ಕುಲಧರ್ಮಗಳ ತಿಳಿವಳಿಕೆ ಮಾಡಿಕೊಡುವದಕ್ಕಾಗಿ, ಪುರೇ ಏವ—ಹಸ್ತಿನಾವತಿಯಲ್ಲಿಯೇ, ಅವಸನ್—ವಾಸಮಾಡಿದರು. ॥ ೫೬॥

~~ಸಂತ್ಯಜ್ಯ ರಾಜಚಿಹ್ನಾನಿ ವೈಷ್ಣವಂ ಯೋಗಮಾಸ್ಥಿತಾಃ ।~~
ವೀರಾಧ್ವಾನಂ ಯಯುಃ ಸರ್ವೇ ಕೃಷ್ಣಯಾ ಸಹ ಪಾಂಡವಾಃ ॥ ೫೭ ॥

ಸರ್ವೇ—ಪಾಂಡವಾಃ —ಎಲ್ಲ ಪಾಂಡವರು, ಕೃಷ್ಣಯಾ ಸಹ—ದ್ರೌಪದೀದೇವಿಯಿಂದ ಕೂಡಿಕೊಂಡು, ರಾಜಚಿಹ್ನಾನಿ—ರಾಜಪೋಷಾಕುಗಳನ್ನು, ಸಂತ್ಯಜ್ಯ—ತೆಗೆದು, ವೈಷ್ಣವಂ ಯೋಗಂ—ಶ್ರೀಹರಿಧ್ಯಾನಮಾರ್ಗವನ್ನು, ಆಸ್ಥಿತಾಃ ಸಂತಃ—ಹೊಂದಿದವರಾಗಿ, ವೀರಾಧ್ವಾನಂ—ವೀರಾಧ್ವಾನಂ—ವೀರರು ಹೋಗುವ ಸ್ವರ್ಗದ ಮಾರ್ಗಕ್ಕೆ, ಯಯುಃ—ಹೋದರು. ॥ ೫೭ ॥

ಭಾವಾನುವಾದ ೪೦—೫೭

ಅರ್ಜುನನು ವಸುದೇವಾದಿಗಳ ದೇಹಸಂಸ್ಕಾರವನ್ನು ಮಾಡಿ, ಅಳಿದುಳಿದ ಸ್ತ್ರೀಬಾಲಕರನ್ನು, ಧನವನ್ನು ತೆಗೆದುಕೊಂಡು, ದ್ವಾರಕೆಯಿಂದ ಹೊರಟನು. ಆ ದ್ವಾರಕೆಯನ್ನು, ಸಮುದ್ರವು ಮುಣುಗಿಸಿತು. ಅರ್ಜುನನು ದಾರಿಯಲ್ಲಿ ಬರುತ್ತಿರುವಾಗ, ಆಭೀರ ನಿಷಾದಜನರು ಸ್ತ್ರೀಯರನ್ನು ಅಪಹರಿಸಿದರು. ಅವರು(ಸ್ತ್ರೀಯರು) ಶ್ರೀಕೃಷ್ಣನ ಹತ್ತಿರ ದರ್ಪವನ್ನು ತೋರಿಸಿದ್ದರಿಂದ ಅವನಿಂದಲೇ ಆ ರೀತಿ ಆಗುವ ಶಾಪಪಡೆದಿದ್ದರು. ಆಗ ಅವರನ್ನು ಸಂಹರಿಸುವದಕ್ಕಾಗಿ ಅರ್ಜುನನು ಗಾಂಡಿವ ಧನುಸ್ಸನ್ನು ತೆಗೆದು ಜ್ಯಾವನ್ನು ಕಟ್ಟಲು ಪ್ರವೃತ್ತನಾದನು.

ಸರಳವಾಗಿ ಮೊದಲಿನಂತೆ ಕಟ್ಟಲಾಗಲಿಲ್ಲ. ಬಹಳ ಕಷ್ಟದಿಂದ ಕಟ್ಟಿದನು. ಎಂದೂ ತೀರದಿದ್ದ ಬಾಣಗಳು ಅವನ ಬತ್ತಳಿಕೆಯಲ್ಲಿ ತೀರಿದವು. ಅಸ್ತ್ರಗಳು ನೆನಪಿಗೆ ಬರಲಿಲ್ಲ. ಇದೆಲ್ಲವು ಶ್ರೀಕೃಷ್ಣಪರಮಾತ್ಮನ ಇಚ್ಛಾನುಸಾರವೇ ಆಗಿದೆ ಎಂದು ತಿಳಿದು ಅವನನ್ನೇಸ್ಮರಿಸುತ್ತಾ, ಅಭೀರಜನರನ್ನು ಗಾಂಡಿವ ಧನುಸ್ಸಿನಿಂದಲೇ ಸಂಹರಿಸುತ್ತಾ, ಹೋಗಿಉಳಿದ ಸೊತ್ತು ಸ್ತ್ರೀಯರನ್ನು ರಕ್ಷಿಸಿಕೊಂಡು ಕುರುಕ್ಷೇತ್ರಕ್ಕೆ ಬಂದನು. ಅಲ್ಲಿಗೆ ಬಂದಂಥ ಶ್ರೀವೇದವ್ಯಾಸದೇವರನ್ನು ಕಂಡು, ಬಹುದುಃಖದಿಂದ ಅವರ ಪಾದಗಳಿಗೆ ನಮಸ್ಕರಿಸಿದನು. ಭಗವದವತಾರಿಗಳಾದ ಶ್ರೀವೇದವ್ಯಾಸದೇವರು ಅವನನ್ನು ಎಬ್ಬಿಸಿ ಅನೇಕ ರೀತಿ ಸಮಾಧಾನ ಮಾತುಗಳನ್ನು ಹೇಳಿ ಸಮಾಧಾನ ಮಾಡಿದರು. ಮ್ಲೇಂಛರಿಂದ ಅಪಹೃತರಾದ ಸ್ತ್ರೀಯರ ಹತ್ತಿರ ದಾಲ್ಭ್ಯಋಷಿಗಳನ್ನು ಶ್ರೀಕೃಷ್ಣಪರಮಾತ್ಮನು ಕಳಿಸಿದ್ದನು. ಅವರ ಮುಖದಿಂದ ತಮ್ಮ ಉದ್ಧಾರಕ್ಕಾಗಿ ಮಾರ್ಗವನ್ನು ಕೇಳಿಕೊಂಡು, ಆ ಪ್ರಕಾರ ಗೋವಿಂದ ಏಕಾದಶೀಯನ್ನು (ಆಷಾಢ ಶುದ್ಧ ಏಕಾದಶಿಯನ್ನು) ಆಚರಿಸಿ ಸರಸ್ವತೀಜಲದಲ್ಲಿ ದೇಹವನ್ನು ಬಿಡಿರಿ ಎಂಬ ವಾಯುದೇವರ ಮಾತಿನ ಪ್ರಕಾರ ಅಲ್ಲಿ ದೇಹವನ್ನು ತ್ಯಜಿಸಿ ಸ್ವರ್ಗಲೋಕಕ್ಕೆ ಹೋದರು. ಅರ್ಜುನನು ಕೃತವರ್ಮ ಹಾಗು ಸ್ಯಾತಕಿಯರ ಮಕ್ಕಳನ್ನು ಕುರುಕ್ಷೇತ್ರ ಹಾಗು ಸರಸ್ವತೀತೀರದ ರಾಜ್ಯಗಳಲ್ಲಿ ರಾಜರನ್ನಾಗಿ ಕ್ರಮವಾಗಿ ಮಾಡಿ, ಅನಿರುದ್ಧ ಪುತ್ರನಾದ ವಜ್ರನನ್ನು. ಶೂರಸೇನದೇಶ ಹಾಗು ಇಂದ್ರಪ್ರಸ್ಥ ಎರಡರ ರಾಜನನ್ನಾಗಿ ಮಾಡಿದನು. ಅವನ ವಶಕ್ಕೆ ತಾನು ತಂದ ಸ್ತ್ರೀ ಹಾಗು ಸೊತ್ತುಗಳನ್ನು ಒಪ್ಪಿಸಿ ಹಸ್ತಿನಾವತಿಗೆ ಬಂದು ಸಹೋದರರ ಹತ್ತಿರ ಎಲ್ಲ ವಿಷಯಗಳನ್ನು ತಿಳಿಸಿದನು. ಈಗ ಪಾಂಡವರು 'ಭೂಮಿಯಲ್ಲಿ ನಾನಿರುವರೆಗೆ ನೀವೂಕೂಡ ದುಷ್ಟ ಸಂಹರಣಕಾರ್ಯವನ್ನು ಮಾಡುತ್ತಾ ಭೂಮಿಯಲ್ಲಿರಬೇಕು. ನಾನು ಭೂಮಿಯನ್ನು ಬಿಟ್ಟು ಪರಂಧಾಮಕ್ಕೆ ಹೊರಟನಂತರ ನೀವೂಕೂಡಾ ಭೂಮಿಯಲ್ಲಿರಬಾರದು, ನನ್ನನ್ನು ಅನುಸರಿಸಿ ಹೊರಟು ನಿಮ್ಮ ನಿಮ್ಮ ಲೋಕಗಳಿಗೆ ಹೋಗಬೇಕು' ಎಂದು ಹಿಂದೆಯೇ ಹೇಳಿದ ಶ್ರೀಕೃಷ್ಣದೇಶವನ್ನು ನೆನಪಿಸಿಕೊಂಡು ತಮ್ಮ ಮೊಮ್ಮಗನಾದ, ಭಗವದ್ಭಕ್ತನಾದ ಪರೀಕ್ಷಿತನನ್ನು ಸಾವಭ್ರಾಜ್ಯಾಧಿಪತಿಯನ್ನಾಗಿ ಅಭಿಷೇಕಿಸಿ ಆ ದುಷ್ಟರಾದ ಆಭೀರಜನರನ್ನು ಸಂಹರಿಸಲು ಆದೇಶಿಸಿದರು. ತಾವು ಹೊರಡಬೇಕು ಹಾಗೂ ಶ್ರೀಕೃಷ್ಣ ಗಮನಾನಂತರದ ಭೂಭಾರ ದೈತ್ಯರ ಸಂಹಾರ ಕಾರ್ಯವನ್ನು ತಾವುಮಾಡಬಾರದೆಂಬ ಸಂಕೇತದ ಪ್ರಕಾರ ಪರೀಕ್ಷಿತ್ ರಾಜನಿಗೆ ಆದೇಶಿಸಿದರು. ಪರೀಕ್ಷಿತ್ ರಾಜನಾದರೂ ಆ ಕಾರ್ಯವನ್ನು ಮಾಡಿದನು. ಪಾಂಡವರ ಪತ್ನಿಯರಪೈಕಿ ಭೀಮರಪತ್ನಿಯಾದ. ~~ಕಾಳೀದೇವಿಯು~~ ಶ್ರೀಹರಿಧ್ಯಾನಯೋಗವನ್ನು ಮಾಡುತ್ತಾ, ಮನುಷ್ಯದೇಹವನ್ನು ಬಿಟ್ಟು, ದ್ರೌಪದೀದೇವಿಯೊಂದಿಗೆ ಒಂದಾದಳು. ಸುಭದ್ರಾದಿ ಪತ್ನಿಯರು, ಹಾಗೂ ಧೃತರಾಷ್ಟ್ರನಿಗೆ ವೈಶ್ಯಪತ್ನಿಯಲ್ಲಿ ಹುಟ್ಟಿದ, ಕೊನೆಯ ಮಗನಾದ ಯುಯುತ್ಸು ಇವರು ಪರೀಕ್ಷಿತ್‌ರಾಜನಿಗೆ ರಾಜಧರ್ಮಕುಲಧರ್ಮಗಳನ್ನು ತಿಳಿಸಿಕೊಡುವದಕ್ಕಾಗಿ ಅವನ ಜೊತೆಗೇ ಹಸ್ತಿನಾವತಿಯಲ್ಲಿಯೇ ವಾಸಿಸಿದರು, ದ್ರೌಪದೀಸಹಿತರಾದ ಪಾಂಡವರು ರಾಜವೇಷಗಳನ್ನು ಬಿಟ್ಟು, ತಪಸ್ವಿವೇಷವನ್ನು ಹೊಂದಿ, ಶ್ರೀಹರಿಧ್ಯಾನವನ್ನು ಮಾಡುತ್ತಾ ವೀರರು ಹೋಗತಕ್ಕ ಸ್ವರ್ಗಕ್ಕೆ ಹೋಗುವ ದಾರಿಯನ್ನು ಕುರಿತು ಹೊರಟರು.

ಪ್ರಾಗುದೀಚೀಂ ದಿಶಂ ಪೂರ್ವಂ ಯಯುಸ್ತತ್ರಾರ್ಜುನೋ ಧನುಃ ।
ನಾತ್ಯಜಲ್ಲೋಭತಸ್ತಂ ತು ಸಮುದ್ರಮುಪ ಪಾವಕಃ ।
ದೃಷ್ಟ್ವಾ ಯಯಾಚೇ ರಾಜಾನಂ ತದುಕ್ತಃಪ್ರಾಸ್ಯದಂಬುಧೌ ॥೫೮॥

(ಪಾಂಡವರು) ಪೂರ್ವಂ-ಮೊದಲು,ಪ್ರಾಗುದೀಚೀಂ-ಈಶಾನ್ಯ ದಿಕ್ಕನ್ನು ಕುರಿತು, ಯಯುಃ-ಹೋದರು ತತ್ರ—ಆ ಸಂದರ್ಭದಲ್ಲಿ, ಅರ್ಜುನಃ—ಅರ್ಜುನನು, ಲೋಭತಃ—ಲೋಭಬುದ್ಧಿಯಿಂದ, ಧನುಃ—ಗಾಂಡೀವ ಧನುಸ್ಸನ್ನು, ನ ಅತ್ಯಜತ್—ಬಿಡಲಿಲ್ಲ, ಪಾವಕ:—ಅಗ್ನಿದೇವರು, ಸಮುದ್ರಂ ಉಪ—ಸಮುದ್ರದ ಸಮೀಪದಲ್ಲಿ, ತಂ ತು—ಗಾಂಡೀವಸಹಿತನಾದ ಅರ್ಜುನನನ್ನು, ದೃಷ್ಟ್ವಾ—ನೋಡಿ, ರಾಜಾನಂ—ಧರ್ಮರಾಜನನ್ನು, ಯಯಾಚೇ—(ಆ ಧನುಸ್ಸನ್ನು ಕೊಡಲು ಹೇಳಲು) ಪ್ರಾರ್ಥಿಸಿದನು. ತದುಕ್ತ:-ಧರ್ಮರಾಜನಿಂದ ಹೇಳಲ್ಪಟ್ಟ ಅರ್ಜುನನು, ಅಂಬುಧೌ-ಸಮುದ್ರದಲ್ಲಿ, ಪ್ರಾಸ್ಯತ್—ಒಗೆದನು. ॥೫೮॥

ಪ್ರಾತಿಭಾವ್ಯಂ ತು ವರುಣೇ ನಿಸ್ತೀರ್ಯಾಗ್ನಿರದೃಶ್ಯತಾಮ್ ।
ಯಯೌ ತೇಽಪಿ ಯಯುಃ ಕ್ಷಿಪ್ರಂ ಪ್ಲವಂತಃಸಪ್ತವಾರಿಧೀನ್ ॥೫೯॥

ಅಗ್ನಿಃ—ಅಗ್ನಿದೇವನು, ವರುಣೇ—ವರುಣದೇವನಲ್ಲಿ, ಪ್ರಾತಿಭಾವ್ಯಂ ತು—ತನ್ನ ಬಗ್ಗೆ ಇದ್ದ ವಿಪರೀತ ಭಾವನೆಯನ್ನು, ನಿಸ್ತೀರ್ಯ—ಪರಿಹರಿಸಿಕೊಂಡು, (ಅಗ್ನಿದೇವನು ವರುಣದೇವರಲ್ಲಿದ್ದ ಗಾಂಡೀವಧನುಸ್ಸನ್ನು ತಂದು ಅರ್ಜುನನಿಗೆ ಕೊಟ್ಟಿದ್ದನು. ಅದು ವಾಪಸ್ ವರುಣದೇವನಿಗೆ ಸೇರದಿದ್ದಿದ್ದರಿಂದ ವರುಣದೇವರಿಗೆ ಸ್ವಲ್ಪ ವಿಪರೀತ ಭಾವವು ಅಗ್ನಿಯ ಬಗ್ಗೆ ಬಂದಿತ್ತು. ಅದನ್ನು ಹೀಗೆ ಪರಿಹರಿಸಿಕೊಂಡು) ಅದೃಶ್ಯತಾಂ ಯಯೌ—ಕಾಣದಿರುವಿಕೆಯನ್ನು ಹೊಂದಿದನು. ತೇ ಅಪಿ—ಆ ಪಾಂಡವರಾದರೂ, ಸಪ್ತವಾರಿಧೀನ್—ಏಳು ಸಮುದ್ರಗಳನ್ನು, ಪ್ಲವಂತಃ ಸಂತಃ—ದಾಟುವವರಾಗಿ, ಕ್ಷಿಪ್ರಂ—ಬೇಗನೇ, ಯಯುಃ—ಹೋದರು. ॥೫೯॥

ಅಹೋಭಿಃ ಸಪ್ತಭಿರ್ಯೋಗಂ ಸಮಾರೂಢಾಃಪ್ರದಕ್ಷಿಣಮ್ ।
ಕೃತ್ವಾ ಕ್ವಚಿದಸಜ್ಜಂತ ಆಸೇದುರ್ಗಂಧಮಾದನಮ್ ।
ಅತ್ರ ನಾರಾಯಣಕ್ಷೇತ್ರೇ ತೇಷಾಂ ತನ್ವೋಽಪತನ್ ಕ್ರಮಾತ್ ॥೬೦॥

ಯೋಗಂ ಸಮಾರೂಢಾಃಸಂತಃ—ಯೋಗಮಾರ್ಗವನ್ನು ಹೊಂದಿದವರಾಗಿ, (ನಾರದಾದಿಗಳಂತೆ ಗಗನದಲ್ಲಿಯೂ ಕೂಡ ಹೋಗುವ ಶಕ್ತಿಯುಳ್ಳವರಾಗಿ), ಪ್ರದಕ್ಷಿಣಂ ಕೃತ್ವಾ—ಗಂಧಮಾದನದ ಪ್ರದಕ್ಷಿಣೆಯನ್ನು ಮಾಡಿ, ಕ್ವಚಿತ್—ಯಾವದೇ ವಿಷಯದಲ್ಲಿ, ಅಸಜ್ಜಂತಃಸಂತಃ—ಆಸಕ್ತರಾಗದೇ, ಗಂಧಮಾದನಂ—ಗಂಧಮಾದನ ಪರ್ವತಕ್ಕೆ ಸಪ್ತಭಿಃಅಹೋಭಿಃ—ಏಳುದಿನಗಳಲ್ಲಿ, ಆಸೇದುಃ—ಬಂದರು. ಅತ್ರ—ಈ ಪರ್ವತದಲ್ಲಿ ನಾರಾಯಣ ಕ್ಷೇತ್ರೇ—ನಾರಾಯಣಾಶ್ರಮದಲ್ಲಿ, ತೇಷಾಂ—ಆ ಪಾಂಡವರ, ತನ್ವಃ—ಶರೀರಗಳು ಕ್ರಮಾತ್ ಅಪತನ್—ಕ್ರಮವಾಗಿ ಬಿದ್ದವು ॥೬೦॥

ದ್ರೌಪದೀಸಹದೇವಾದಿಪಂಚಾನಾಂ ತತ್ರ ಮಾರುತಿಃ ।
ಸದೇಹನಾಕಾನಿಚ್ಛುತ್ವಾದ್ ದೇಹಪ್ರಪತನಂ ಹಿ ತತ್ ॥೬೧॥

ತೇಷಾ ಮಿಹೇತಿ ಯಾಥಾರ್ಥ್ಯಂ ಜಾನನ್ ಪಪ್ರಚ್ಛ ಧರ್ಮಜಮ್ ।
ಕೇನಕೇನಾಪತದ್ ದೇಹೋ ದೋಷೇಣ ನ ಇತಿ ಕ್ರಮಾತ್ ॥೬೨॥

ತತ್ರ—ಪಾಂಡವರ ದೇಹಗಳು ಕ್ರಮವಾಗಿ ಬೀಳುತ್ತಿರುವಾಗ, ಮಾರುತಿಃ—ಶ್ರೀಭೀಮಸೇನದೇವರು ದ್ರೌಪದೀಸಹದೇವಾದಿ ಪಂಚಾನಾಂ—ದ್ರೌಪದೀ ಸಹದೇವ ಮೊದಲಾಗಿ ಐದು ಜನರಿಗೆ, ಸದೇಹನಾಕಾನಿಚ್ಛುತ್ವಾತ್ ಹಿ—ಆ ಮನುಷ್ಯ ದೇಹಸಹಿತರಾಗಿ ಸ್ವರ್ಗಕ್ಕೆ ಹೋಗುವ ಇಚ್ಛೆ ಇಲ್ಲದ್ದರಿಂದಲೇ, (ಇತರರಂತೆ ಪಾಪದಿಂದ ಅಲ್ಲ) ತೇಷಾಂ—ಆ ದ್ರೌಪದೀ ಸಹದೇವಾದಿಗಳ, ತತ್ ದೇಹಪ್ರಪತನಂ—ಆ ದೇಹಬೀಳುವ ಕಾರ್ಯವಾದದ್ದು, ಇತಿ—ಎಂಬ ಯಾಥಾರ್ಥ್ಯಂ—ಯಥಾರ್ಥ ಸಂಗತಿಯನ್ನು, ಜಾನನ್—ತಿಳಿದವರಾದರೂ ಕೂಡ, ಧರ್ಮಜಮ್—ಧರ್ಮರಾಜನನ್ನುಕುರಿತು, ನಃ—ನಮ್ಮ, ಕೇನಕೇನ ದೋಷೇಣ—ಯಾವ ಯಾವದೋಷದಿಂದ, ದೇಹಃ—ದೇಹಗಳು, ಕ್ರಮಾತ್ ಅಪತತ್—ಕ್ರಮವಾಗಿ ಬಿದ್ದವು? ಇತಿ—ಎಂದು, ಪಪ್ರಚ್ಛ—ಕೇಳಿದರು. ॥೬೧-೬೨॥

ಮೃತಿಕಾಲೇ ಹಿ ಯೋ ಯಸ್ಯ ದೋಷಂ ವಕ್ತ್ಯೃಣ ಮೋಚನಮ್ ।
ತಸ್ಮಾತ್ ಸ್ಯಾದುಕ್ತದೋಷಸ್ಯೇತ್ಯಾಹ ಯಚ್ಛ್ರುತಿರೇವ ತತ್ ।
ಋಣಮೋಕ್ಷಾಯ ಸರ್ವೇಷಾಂ ಭೀಮೋ ದೋಷಾನವಾದಯತ್ ॥೬೩॥

ಮೃತಿಕಾಲೇ—ಮರಣಕಾಲದಲ್ಲಿ. ಯಃ – ಯಾವನು, ಯಸ್ಯ ದೋಷಂ—ಯಾವನ ದೋಷವನ್ನು, ವಕ್ತಿ—ಹೇಳುವನೋ, ತಸ್ಮಾತ್ ಋಣಮೋಚನಂ – ಅವನ ಋಣಪರಿಹಾರವು, ಉಕ್ತದೋಷಸ್ಯ—ದೋಷವನ್ನು ಹೇಳಿದವರಿಗೆ, ಸ್ಯಾತ್—ಆಗುವದು, ಇತಿ—ಎಂದು, ಶ್ರುತಿಃ ಏವ—ವೇದವೇ. ಆಹ—ಹೇಳುತ್ತಲಿದೆಯೋ, ತತ್—ಆ ಕಾರಣದಿಂದ, ಭೀಮಃ—ಭೀಮಸೇನದೇವರು, ಋಣಮೋಕ್ಷಾಯ—ಧರ್ಮಜನಿಗೆ ಎಲ್ಲರ ಋಣ ಪರಿಹಾರವಾಗುವದಕ್ಕಾಗಿ, ಸರ್ವೇಷಾಂ–ಎಲ್ಲರ, ದೋಷಾನ್–ದೋಷಗಳನ್ನು, ಅವಾದಯತ್–ಹೇಳಿಸಿದರು. ॥೬೩॥

ಸೋಽಪೀಚ್ಛಾಪತಿತಾನ್ ದೇಹಾನಜಾನಂಛುದ್ಧ ಕರ್ಮಣಾಮ್ ।
ಅಪಶ್ಯನ್ ಕಾರಣಂ ಪ್ರಾಹ ದೋಷಾನ್ ಸ್ಯಾದೇವಮಿತ್ಯಪಿ ।
ರಾಜಾ ಸಂಭಾವನಾ ಮಾತ್ರಾ ನ್ನಹಿಕಾರ್ಯಮಕಾರಣಮ್ ॥೬೪॥

ಸಃ ರಾಜಾಽಪಿ ಆ ಧರ್ಮರಾಜನಾದರೂ ಕೂಡ, ಶುದ್ಧಕರ್ಮಣಾಂ—ಶುದ್ಧ ಕರ್ಮಗಳುಳ್ಳ ತನ್ನ ಪತ್ನೀ ಹಾಗು ಸಹೋದರರ, ದೇಹಾನ್–ದೇಹಗಳನ್ನು, ಇಚ್ಛಾಪತಿತಾನ್–ಅವರವರ ಇಚ್ಛೆಯಿಂದ ಬಿದ್ದವುಗಳನ್ನಾಗಿ, ಅಜಾನನ್ ಸನ್—ತಿಳಿಯದವನಾಗಿ, ಕಾರಣಂ ಅಪಶ್ಯನ್—ದೇಹಪಾತಕ್ಕೆ ಕಾರಣವನ್ನು ತಿಳಿಯದವನಾಗಿ, ಕಾರ್ಯಂ ಯಾವದೇ ಕಾರ್ಯವು, ಅಕಾರಣಂ—ಕಾರಣರಹಿತವು, ನ ಹಿ ಸ್ಯಾತ್—ಆಗಲಾರದು, (ಆದ್ದರಿಂದ) ಏವಂ— ಈ ರೀತಿ ಕಾರಣವಾದ ಯಾವದಾದರೂ ದೋಷವು, ಸ್ಯಾತ್—ಇರಬೇಕು ಇತಿ—ಎಂಬ, ಸಂಭಾವನಾಮಾತ್ರಾತ್—ಊಹಾ ಮಾತ್ರದಿಂದ, ದೋಷಾನ್ ದೋಷಗಳನ್ನು, ಪ್ರಾಹ—ಹೇಳಿದನು ॥೬೪॥

ಸ್ವಚ್ಛಂದಮೃತ್ಯವೋ ಯೋಗಾದ್ ದೇಹಾನುತ್ಸೃಜ್ಯ ಪಾಂಡವಾಃ ।
ಕೃಷ್ಣಾ ಚಾಽಪುಃ ಪರಂ ಸ್ಥಾನಂ ಯನ್ನ ಯಾಂತ್ಯಪಿ ದೇವತಾಃ ।
ಇತಿ ಶ್ರುತೇರ್ನ ತೇ ಪಾಪಾದ್ ದೇಹಾಂಸ್ತತ್ಯಜುರೂರ್ಜಿತಾಃ ॥೬೫॥

ಪಾಂಡವಾಃ—ಪಾಂಡವರು, ಕೃಷ್ಣಾ ಚ—ದ್ರೌಪದೀದೇವಿಯೂ ಕೂಡ, ಯೋಗಾತ್—ಯೋಗಶಕ್ತಿಯಿಂದ, ದೇಹಾನ್—ದೇಹಗಳನ್ನು, ಉತ್ಸೃಜ್ಯ—ತ್ಯಜಿಸಿ, ಯತ್—ಯಾವ ಸ್ಥಾನವನ್ನು, ದೇವತಾಃಅಪಿ—ದೇವತೆಗಳೂಕೂಡ, ನ ಯಾಂತಿ—ಹೊಂದಲಾರರೋ, ತತ್—ಅಂತಹ, ಪರಂ ಸ್ಥಾನಂ—ಶ್ರೇಷ್ಠ ಸ್ಥಾನವೆನ್ನು ಆಪುಃ—ಹೊಂದಿದರು, ಇತಿ—ಎಂಬು, ಶ್ರುತೇಃ—ವೇದವಿದ್ದರಿಂದ, ಊರ್ಜಿತಾಃ—ಶ್ರೇಷ್ಠರಾದ ಅವರು, ದೇಹಾನ್—ದೇಹಗಳನ್ನು, ಪಾಪಾತ್—ಪಾಪದಿಂದಾಗಿ, ನ ತತ್ಯಜುಃ—ತ್ಯಜಿಸಲಿಲ್ಲ. ॥೬೫॥

ಋಣಾನ್ಯುನ್ಮುಚ್ಯ ದೋಷೋಕ್ತ್ಯಾ ಸ್ವಾನಾಂ ಭೀಮಃಸ್ವಕಾಂ ತನುಮ್ ।
ತತ್ಯಾಜ ಪರಮಂ ಧ್ಯಾಯಾನ್ನಾಪ ಚ ಸ್ಥಾನಮುತ್ತಮಮ್ ।
ಇತಿ ಸ್ಕಾಂದ ಪುರಾಣೋಕ್ತಂ ವ್ಯಾಸವಾಕ್ಯಮೃಷೀನ್ ಪ್ರತಿ ॥೬೬॥

ಭೀಮಃ—ಭೀಮಸೇನದೇವರು, ಸ್ವಾನಾಂ ದೋಷೋಕ್ತ್ಯಾ—ತನ್ನವರ ದೋಷಗಳನ್ನು ಹೇಳಿಸುವದರಿಂದ, ಸ್ವಾನಾಂ—ತನ್ನವರ. ಋಣಾನಿಉನ್ಮುಚ್ಯ—ಋಣಗಳನ್ನು ಬಿಡಿಸಿ, ಪರಮಂ ಧ್ಯಾಯನ್—ಸರ್ವೋತ್ತಮನಾದ ಶ್ರೀಹರಿಯ ಧ್ಯಾನಮಾಡುತ್ತಾ, ಸ್ವಕಾಂ ತನುಂ—ತನ್ನ ದೇಹವನ್ನು, ತತ್ಯಾಜ—ತ್ಯಜಿಸಿದರು. ಚ—ಮತ್ತು ಉತ್ತಮಂ ಸ್ಥಾನಂ—ಉತ್ತಮವಾದ ಮೂಲ ಸ್ಥಾನವನ್ನು. ಆಪ—ಹೊಂದಿದರು. ಇತಿ—ಎಂಬ ಸ್ಕಾಂದಪುರಾಣೋಕ್ತಂ—ಸ್ಕಾಂದ ಪುರಾಣದಲ್ಲಿ ಹೇಳಿದ, ಋಷೀನ್ ಪ್ರತಿ—ಋಷಿಗಳನ್ನು ಕುರಿತು, ವ್ಯಾಸವಾಕ್ಯಂ—ವ್ಯಾಸದೇವರ ಮಾತು, ಅಸ್ತಿ—ಇರುತ್ತದೆ. ॥೬೬॥

ಅವತಾರಿಕೆ — ಧರ್ಮರಾಜನು ದ್ರೌಪದೀದೇವಿ ಭೀಮರಲ್ಲಿ ಹೇಳಿದ ದೋಷಗಳು ದೋಷಗಳಲ್ಲ ಎಂಬುದನ್ನು ಹೇಳುತ್ತಿದ್ದಾರೆ :—

ಭೀಮಾದೃತೇ ಹಿ ಚತುರ್ಷು ಪಕ್ಷಪಾತಸ್ತು ವಾಸವೌ ।
ಯೋಗ್ಯ ಏವೇತಿ ಕೃಷ್ಣಾಯಾ ನ ದೋಷಃ ಸ್ಯಾತ್ಕಥಂಚನ ।
ನೀತಿರೂಪೇ ವೀರ್ಯಬಲೇ ಮಹಾನ್ತ್ಯೇಷಾಂ ಯತಃ ಕ್ರಮಾತ್ ॥೬೭॥

ಯತಃ—ಯಾವಕಾರಣದಿಂದ, ಏಷಾಂ,— ಈ ಪಾಂಡವರಿಗೆ, ನೀತಿರೂಪೇ ವೀರ್ಯಬಲೇ—ನೀತಿ ಸೌಂದರ್ಯ ವೀರ್ಯಬಲಗಳು ಕ್ರಮಾತ್ ಮಹಾಂತಿ—ಕ್ರಮವಾಗಿ ಹೆಚ್ಚು ಹೆಚ್ಚು ಇರುವವೋ. ಭೀಮಾತ್ ಋತೇ—ಭೀಮಸೇನರನ್ನು ಬಿಟ್ಟು, ಚತುರ್ಷು—ಉಳಿದನಾಲ್ವರಲ್ಲಿ, ವಾಸವೌ--ಅರ್ಜುನನಲ್ಲಿ, ಕೃಷ್ಣಾಯಾಃ—ದ್ರೌಪದೀದೇವಿಗೆ, ಪಕ್ಷಪಾತಃ ತು —ವಿಶೇಷವಾದ ಪ್ರೀತಿಯು. ಯೋಗ್ಯಃಏವ ಇತಿ—ಯೋಗ್ಯವಾದದ್ದೇ ಆದ ಕಾರಣದಿಂದ, ಕೃಷ್ಣಾಯಾಃ—ದ್ರೌಪದೀದೇವಿಗೆ, ಕಥಂಚನ ನ ದೋಷಃ ಸ್ಯಾತ್—ಯಾವರೀತಿಯಿಂದಲೂ ದೋಷವಾಗಲಾರದು. ॥ ೬೭ ॥

ಪ್ರಾಣಿತ್ವಾದ್ ಭೋಗಶಕ್ತ್ಯಶ್ಚ ನಹಿ ದೋಷಾಯ ಮಾರುತೇಃ ॥ ೬೮ ॥

ಯಥಾ ಸ್ವರೂಪವಿಜ್ಞಾನಮಾತ್ಮನ್ಯಪಿ ನ ದೋಷಕೃತ್ ।
ಇತಿ ವ್ಯಾಸಸ್ಮೃತೇರೇಷಾಮುಕ್ತದೋಷೋದ್ಭವಃ ಕಥಮ್ ॥ ೬೯ ॥

ಮಾರುತೇಃ—ಮುಖ್ಯಪ್ರಾಣದೇವರ ಅವತಾರರಾದ ಭೀಮಸೇನದೇವರಿಗೆ, ಪ್ರಾಣಿತ್ವಾತ್—ಸರ್ವಜೀವ ಜೇಷ್ಠಕರ್ತೃವಿದ್ದ್ದರಿಂದ, ಭೋಗಶಕ್ತೇಃ ಚ—ಅವರಿಗಿರುವ,ಭೋಗಶಕ್ತಿಯುಂಕೂಡ, ನಹಿ ದೋಷಾಯ-ದೋಷಕ್ಕೆ ಕಾರಣವಲ್ಲ.ಅವರಂತೆ, ಆತ್ಮನಿ—ತನ್ನಬಗ್ಗೆ, ಯಥಾಸ್ವರೂಪವಿಜ್ಞಾನಂ ಅಪಿ—ತಾನು ಹೇಗೆ ಇರುವನೋ ಹಾಗೆ ತಿಳಿಯುವದೂ ಕೂಡಾ, ದೋಷಕೃತ್ ನ—ದೋಷಕ್ಕೆಕಾರಣವಲ್ಲ, ಇತಿ—ಎಂದು (ಹೇಳತಕ್ಕ) ವ್ಯಾಸಸ್ಮೃತಿವಾಕ್ಯವಿದ್ದ್ದರಿಂದ, ಏಷಾಂ—ಈ ಪಾಂಡವರಿಗೆ, ಉಕ್ತದೋಷೋದ್ಭವಃ—ಧರ್ಮರಾಜನಿಂದ ಹೇಳಲ್ಪಟ್ಟ ದೋಷಗಳ ಅಸ್ತಿತ್ವವು (ದೋಷಗಳಿರುವದು) ಕಥಂ—ಹೇಗೆ ಶಕ್ಯ ? ಶಕ್ಯವಿಲ್ಲ ಎಂದು ಅರ್ಥವು. ॥ ೬೯ ॥

ಭಾವಾನುವಾದ ೫೮—೬೯

ವೀರಗಮ್ಯವಾದ ತಮ್ಮ ತಮ್ಮ ಲೋಕಗಳಿಗೆ ಹೊರಡಲುದ್ಯುಕ್ತರಾದ ಆ ಪಾಂಡವರು ಉತ್ತರ ದಿಕ್ಕಿಗೆ ಹೊರಟರು. ಆ ಸಂದರ್ಭದಲ್ಲಿ ಎಲ್ಲರೂ ಎಲ್ಲವನ್ನೂ ಬಿಟ್ಟು ಹೊರಟಿದ್ದರೂ ಕೂಡ ಅರ್ಜುನನು ಮಾತ್ರ ಗಾಂಡೀವಧನುಸ್ಸಿನಲೋಭದಿಂದ ಅದನ್ನು ಹಿಡಿದುಕೊಂಡೇ ಹೊರಟನು. ಸಮುದ್ರದ ಸಮೀಪಕ್ಕೆ ಬಂದಾಗಅಗ್ನಿದೇವನು ಬಂದು ಅರ್ಜುನನ ಹತ್ತಿರದ ಧನುಸ್ಸನ್ನು ಸಮುದ್ರದಲ್ಲಿ ಹಾಕಿಸಿ ಬಿಡಲು ಧರ್ಮರಾಜನಿಗೆ ಪ್ರಾರ್ಥಿಸಿದನು. ಏಕೆಂದರೆ ಖಾಂಡವದಹನ ಕಾಲದಲ್ಲಿ ಧನುಸ್ಸನ್ನು ಅಗ್ನಿದೇವನು ವರುಣನಿಂದ ಕೇಳದೇ ತೆಗೆದುಕೊಂಡು ಬಂದು ಕೊಟ್ಟಿದ್ದನು. ಹೀಗಾಗಿ ವರುಣನಿಗೆ ಅಗ್ನಿಯಮೇಲೆ ವೈಮನಸ್ಸಿತ್ತು.(ಕೇಳ ತಂದಿದ್ದರೂ ವಾಪಸ್ ಕೊಟ್ಟಿದ್ದಿಲ್ಲವಾದ್ದರಿಂದ ವೈಮನಸ್ಸು ಬಂದಿತ್ತು ಎಂದು ಜನಾರ್ದನಭಟ್ಟಿ ವ್ಯಾಖ್ಯಾದಲ್ಲಿ ಹೇಳಿದೆ.) ಈಗ ಅಗ್ನಿಯ ಮಾತಿನ ಪ್ರಕಾರ ಅರ್ಜುನನುಸಮುದ್ರದಲ್ಲಿ ಹಾಕಿದನು, ಅಗ್ನಿ ವರುಣದೇವನವೈಮನಸ್ಸನ್ನು ಪರಿಹರಿಸಿಕೊಂಡು ಅದೃಶ್ಯನಾದನು. ಪಾಂಡವರು ದಾರಿಸಾಗುತ್ತಾ

ಸಪ್ತಸಮುದ್ರಗಳನ್ನು ತಪಃ ಸಾಮರ್ಥ್ಯದಿಂದ ಒಂದು ವಾರದಲ್ಲಿ ದಾಟಿ, ಗಂಧಮಾದನಪರ್ವತವನ್ನು ಪ್ರದಕ್ಷಿಣ ಮಾಡಿಕೊಂಡು ಬಂದು ವಿಷಯಾನಾಸಕ್ತರಾಗಿ ಅದನ್ನು ಸೇರಿದರು. ಅಲ್ಲಿರುವ ನಾರಾಯಣದೇವರ ಸ್ಥಾನದಲ್ಲಿ ಹೊರಟಿರುವಾಗ ಅವರ ದೇಹಗಳು ಕನಿಷ್ಠತೆಯ ಕ್ರಮದಿಂದ ಬಿದ್ದವು. ಮೊದಲು ದ್ರೌಪದೀದೇವಿಯು, ನಂತರ ಸಹದೇವನ, ಅದರ ನಂತರ ನಕುಲನ, ಆಮೇಲೆ ಅರ್ಜುನನ ಈ ಕ್ರಮದಲ್ಲಿ ದೇಹಗಳು ಬಿದ್ದವು. ಆಗ ಶ್ರೀಭೀಮಸೇನದೇವರು ಇವರೆಲ್ಲರ ದೇಹಗಳು ಅವರವರ ಇಚ್ಛಾನುಸಾರವಾಗಿಯೇ (ಇದೇ ದೇಹದಿಂದ ಸ್ವರ್ಗಕ್ಕೆ ಹೋಗಲು ಇಚ್ಛೆ ಇಲ್ಲದೇ ಅವನ್ನು ಬಿಟ್ಟು ಹೋಗಬೇಕೆಂಬ ಇಚ್ಛೆಇದ್ದದ್ದರಿಂದಲೇ) ಬಿದ್ದವು ಎಂದು ತಿಳಿದವರಾಗಿದ್ದೂ ಕೂಡ ಧರ್ಮರಾಜನಿಂದ ಇತರರ ದೋಷಗಳನ್ನು ಹೇಳಿಸಿ ಅವರಿಂದ ಅವರಿಗೆ ಆ ದೋಷ ಹೋಗಿ (ವಾಸ್ತವಿಕವಾಗಿ ಪಾಂಡವರಲ್ಲಿ ದೋಷವಿಲ್ಲದಿದ್ದರೂ ಈ ತತ್ವವನ್ನು ಮುಂದಿನ ಜನರಿಗೆ ತಿಳಿಸುವದಕ್ಕಾಗಿ)ತತ್ಪಯುಕ್ತ ಇತರ ಪಾಂಡವರ ಋಣ ಪರಿಹಾರವು ಆ ಧರ್ಮರಾಜನಿಗೆಆಗಲಿ ಎಂಬ ಉದ್ದೇಶದಿಂದ ಅವನ ಬಾಯಿಯಿಂದ ಆ ದೋಷಗಳನ್ನು ಹೇಳಿಸುವದಕ್ಕಾಗಿ, ಯಾವ ಯಾವ ದೋಷದಿಂದ ದೇಹಗಳು ಬಿದ್ದವು ಎಂದು ಕೇಳಿದರು. ಆಗ ಧರ್ಮರಾಜನು ಅವರ ಇಚ್ಛಾನುಸಾರ ದೇಹಗಳು ಬಿದ್ದದ್ದನ್ನು ತಿಳಿಯದೆ ಕಾರ್ಯವಾಗಬೇಕಾದರೆ ಅದಕ್ಕೊಂದು ಕಾರಣವಿರಲೇಬೇಕು ಎಂದು ಸಂಭಾವನಾ ಮಾತ್ರದಿಂದ ಏನೋ ದೋಷದಿಂದ ಆಗಿರಬೇಕೆಂದು ಊಹಿಸಿ ತನಗೆ ತಿಳಿದ ದೋಷಗಳನ್ನು ಹೇಳಿದನು. ಅವರು ಸ್ವೇಚ್ಛಾಮರಣಿಗಳು, ಯೋಗದಿಂದದೇಹ ತ್ಯಾಗಮಾಡಿದೇವತೆಗಳಿಗೂ ದುರ್ಲಭವಾದ ಶ್ರೇಷ್ಠ ಸ್ಥಾನಕ್ಕೆಹೋದರು ಎಂದು ಹೇಳುವ ಶ್ರುತಿ ಇದೆ.ಅಲ್ಲದೇ ಭೀಮಸೇನದೇವರು (ಧರ್ಮರಾಜನಿಂದ) ತನ್ನವರ ದೋಷಗಳನ್ನು ಹೇಳಿಸಿ ಋಣಪರಿಹಾರ ಮಾಡಿಸಿ ತಾನೂ ದೇಹವನ್ನು ತ್ಯಜಿಸಿ ಭಗವದ್ಧ್ಯಾನಪೂರ್ವಕವಾಗಿ ತಮ್ಮ ಸ್ಥಾನವನ್ನು ಸೇರಿದರು ಎಂದು ಶ್ರೀವೇದವ್ಯಾಸದೇವರು ಋಷಿಗಳನ್ನು ಕುರಿತು ಹೇಳಿದ ಮಾತು ಸ್ಕಾಂದಪುರಾಣದಲ್ಲಿದೆ. ಆದ್ದರಿಂದ ಪಾಪದಿಂದ ದೇಹವನ್ನು ಬಿಟ್ಟದ್ದಲ್ಲವೇ ಅಲ್ಲ. ಧರ್ಮರಾಜನು ಇತರರಲ್ಲಿ ದೋಷ ಎಂದು ಯಾವದನ್ನು ತಿಳಿದನೋ ಅದ್ಯಾವದೂ ದೋಷವೇ ಆಗಿಲ್ಲಎಂದು ವ್ಯಾಸಸ್ಮೃತಿವಚನವು ಇದೆ. ದ್ರೌಪದೀದೇವಿಯು ಭೀಮರನ್ನು ಬಿಟ್ಟರೆ ಉಳಿದ ನಾಲ್ವರು ಪಾಂಡವರಲ್ಲಿ ಅರ್ಜುನನ ಮೇಲೆ ಹೆಚ್ಚು ಪಕ್ಷಪಾತ ಮಾಡುವಳೆಂಬುವದೂ ದೋಷವಾಗಲೇ ಇಲ್ಲ. ಏಕೆಂದರೆ ಅವನಲ್ಲಿ ಇತರಮೂವರಲ್ಲಿರುವ ನೀತಿರೂಪ ಧರ್ಮ

ಗುಣಗಳಿಗಿಂತ ಶ್ರೇಷ್ಠವಾದ, ಕ್ಷತ್ರಿಯರಲ್ಲಿ ಇರಲು ಅಪೇಕ್ಷಣೀಯವಾದ ವೀರ್ಯಗುಣವು ಇದ್ದದ್ದರಿಂದ (ವಿಶೇಷ ವಿಚಾರ—ವಾಸ್ತವಿಕವಾಗಿ ಅರ್ಜುನನಲ್ಲಿ ನೀತಿರೂಪಧರ್ಮಗಳೂ ಕೂಡ, ಇತರರಲ್ಲಿರುವದಕ್ಕಿಂತ ಹೆಚ್ಚೇ ಇರುವವು.) ಅವನಲ್ಲಿ ಹೆಚ್ಚು ಪ್ರೀತಿಮಾಡುವದು ಯುಕ್ತವೇ. ಭೀಮರಲ್ಲಿ ಬಹುಭೋಕ್ತೃತ್ವ, ದೋಷವೆಂದು ಅಜ್ಞರು ಶಂಕಿಸುವದುಂಟು. ಆದರೆ ಅದೂ ಅಲ್ಲಿ ದೋಷವಾಗಿಲ್ಲ. ಏಕೆಂದರೆ ಅವರು ಸರ್ವಪ್ರೇರಕರಾದ ಮುಖ್ಯಪ್ರಾಣದೇವರ ಅವತಾರರಾದ್ದರಿಂದ ಪ್ರತಿಯೊಬ್ಬರಲ್ಲಿ ಚೇಷ್ಟಕರಾಗಿದ್ದು ಆ ಚೇತನರು ಊಟಮಾಡುವಾಗ ಪ್ರಾರಂಭದಲ್ಲಿ ಕೊಡವ ಐದೈದು ಆಹುತಿಗಳನ್ನು ಒಟ್ಟುಮಾಡಿದರೆ, ಅದರ ಅಳತೆಯು ಮೇರುಪರ್ವತಕ್ಕಿಂತಲೂ ಅಧಿಕವಿದ್ದು ಹೀಗೆ ಪ್ರತಿದಿನ ಎರಡು ಮೂರು ಸಲ ಊಟಮಾಡುವರಾದ್ದರಿಂವ ಅಷ್ಟುಸಲದಅನ್ನದ ರಾಶಿಯನ್ನು ಊಟಮಾಡುವ ವಾಯುದೇವರ ಅವತಾರರಾದ ಶ್ರೀಭೀಮರಿಗೆ ಆ ಬಹುಭೋಕ್ತೃತ್ವವುದೋಷವಾಗಲೇ ಇಲ್ಲ. ನಾನೇ ಬಲಿಷ್ಠ, ನಾನೇ ಶ್ರೇಷ್ಠ ಎಂಬ ಅಹಂಕಾರವು ಭೀಮರಲ್ಲಿದೆ ಎಂಬ ಶಂಕೆ ಸಾಮಾನ್ಯಜನರಿಗೆ ಬರುವದು. ಆದರೆ ತಮ್ಮ ಸ್ವರೂಪ ಹೇಗೆ ಇದೆಯೋ ಹಾಗೆ ತಿಳಿದುಕೊಳ್ಳುವಿಕೆಯು ಯಥಾರ್ಥ ಜ್ಞಾನವಾದ್ದರಿಂದ ಅದೂಕೂಡ ಗುಣವೇ ಹೊರತು ದೋಷವಲ್ಲ. ಇಲ್ಲದಿದ್ದರೆ ಶ್ರೀಹರಿಯು ನಾನೇ ಸರ್ವೋತ್ತಮನು ಎಂದು ಹೇಳಿಕೊಳ್ಳುವದು ಅಹಂಕಾರದೋಷವೆಂದಾದೀತು. ಇದೇ ರೀತಿ ನಾನು ವೀರನು ಎಂದು ಅರ್ಜುನನ ತಿಳಿವಳಿಕೆಯು, ನಾನು ರೂಪವುಳ್ಳವನು ಎಂದು ನಕುಲನ ತಿಳಿವಳಿಕೆಯು, ನಾನು ನೀತಿವಂತನು ಎಂಬ ಸಹದೇವನ ತಿಳಿವಳಿಕೆಯು ಇವೂ ಕೂಡ ದೋಷಗಳಲ್ಲ ಅಂತಾ ಸಿದ್ಧವಾಗುವದು. ಈ ರೀತಿ ವ್ಯಾಸಸ್ಮೃತಿ ಇರುವದರಿಂದಧರ್ಮರಾಜನು ಹೇಳಿದ ದೋಷಗಳು ಪಾಂಡವರಲ್ಲಿ ಇಲ್ಲವೇ ಇಲ್ಲ.

ಕದಾಚಿದತಿಮಾನೋಽಪಿ ತ್ರಯಾಣಾಮೇಷು ಜಾಯತೇ ।
ತಥಾಽಪಿ ತತ್ಫಲಂ ನೈತತ್ ತಾರತಮ್ಯಂ ಹಿ ಮುಕ್ತಿಗಮ್ ।
ಗುಣದೋಷಾಧಿಕಾಲ್ಪತ್ವಾದತ್ರಸ್ಥಮಪಿ ಹಿ ಶ್ರುತಮ್ ॥ ೭೦ ॥

ಏಷಃ ತ್ರಯಾಣಾಂ—ಭೀಮಾದಿ ಪಾಂಡವರಲ್ಲಿ ಮೂವರಿಗೆ, (ಅರ್ಜುನ ನಕುಲಸಹದೇವರಿಗೆ,) ಕದಾಚಿತ್ ಒಮ್ಮೊಮ್ಮೆ, ಅತಿಮಾನಃ—ಅವರ ಯೋಗ್ಯತಾ ಗುಣಕ್ಕಿಂತಲೂ ಹೆಚ್ಚಿನ ಅಭಿಮಾನವು (ಅಹಂಕಾರವು), ಅಪಿ—ವಾಸ್ತವಿಕವಾಗಿ (ಯದ್ಯಪಿ)ಜಾಯತೇ—ಹುಟ್ಟುತ್ತದೆ. ತಥಾಽಪಿ—ಆದರೂಕೂಡಾ, ಏತತ್—ಈ ದೇಹಪಾತವು, ತತ್ಫಲಂ ನ—ಆ ಅಹಂಭಾವದ ಫಲವಲ್ಲ. ಅಪಿ—ಆದರೆ, ಮುಕ್ತಿಗಂ—ಮುಕ್ತಿಯಲ್ಲಿ ಆಗುವ, ತಾರತಮ್ಯಂ ಹಿ —ಆನಂದಹ್ರಾಸವೃದ್ಧಿ ರೂಪವಾದ ತಾರತಮ್ಯವು ಅದರ ಫಲವು, **ಅವತಾರಿಕೆ**—ಈ ಬಗ್ಗೆ ಕೈಮುತ್ಯವನ್ನು ಹೇಳುತ್ತಾರೆ. (ನೃಣಾಂ) ಅಪಿ—ಮನುಷ್ಯರಿಗೂಕೂಡಾ, (ಅಪರೋಕ್ಷ ಜ್ಞಾನಾನಂತರದಲ್ಲಿ) ಗುಣದೋಷಾಧಿಕಾಲ್ಪತ್ವಾತ್—ಗುಣಾಧಿಕ್ಯ. ದೋಷಾಧಿಕ್ಯಗಳಿಂದ ಪ್ರಯುಕ್ತವಾದ, ಅತ್ರಸ್ಥಂ ಫಲಂ ನ—ಈಸಂಸಾರದಲ್ಲಿ ಆಗುವ ಫಲವು ಇಲ್ಲ, ಕಿಂತು ಮುಕ್ತಿಗಂ ತಾರತಮ್ಯಂ ಹಿ—ಮೋಕ್ಷದಲ್ಲಿ ಸುಖವೃದ್ಧಿಹ್ರಾಸ ರೂಪವಾದ ತಾರತಮ್ಯವೇ ಅದರ ಫಲವು ಎಂದು, ಶ್ರುತಂ—ಪ್ರಸಿದ್ಧವಾಗಿದೆ. ಹಾಗಿರುವಾಗ ದೇವಾವತಾರಿಗಳಾದ ಈ ಪಾಂಡವರ ದೇಹಪಾತವು ಪಾಪದಿಂದಲಿಲ್ಲ ಎಂದು ಏನು ಹೇಳುವದು? ಹೇಳುವ ಅವಶ್ಯಕತೆ ಇಲ್ಲ. ಸುತರಾಂ ಸಿದ್ಧ ॥ ೭೦ ॥

ಆರಬ್ಧಕರ್ಮನಾಶೇ ಹಿ ಪತೇದ್ ದೇಹೋಽಪ್ಯಪಾಪಿನಃ ।
ಯುಧಿಷ್ಠಿರೋಽಪಿ ಹಿ ಸ್ವರ್ಗಂ ಬುಭುಜೇನೈವ ತತ್ತನುಃ ॥ ೭೧ ॥

ಆರಬ್ಧಕರ್ಮನಾಶೇ—ಪ್ರಾರಬ್ಧಕರ್ಮನಾಶವಾಗುವಾಗ, ಅಪಾಪಿನಃ ದೇಹಃ ಅಪಿ—ಪಾಪವಿಲ್ಲದವನ ದೇಹವೂಕೂಡ, ಪತೇತ್—ಬೀಳುವದು, ಯುಧಿಷ್ಠಿರಃ ಅಪಿ—ಧರ್ಮರಾಜನೂಕೂಡ, ತತ್ತನುಃ ಸನ್ ಏವ—ಆ ದೇಹವುಳ್ಳವನಾಗಿಯೇ, ಸ್ವರ್ಗಂ ನೈವ ಬುಭುಜೇ—ಸ್ವರ್ಗದಲ್ಲಿದ್ದರೂಸ್ವರ್ಗಭೋಗವನ್ನು ಹೊಂದಲಿಲ್ಲ (ಕಿಂತು ಆ ದೇಹವನ್ನು ಬಿಟ್ಟ ಮೇಲೆಯೇ ಹೊಂದಿದನು.) ॥ ೭೧ ॥

ಅವತಾರಿಕೆ :—ಭೀಮಸೇನದೇವರಿಗೆ ಅಹಂಭಾವಾದಿ ದೋಷಗಳು ಬರಲು ಶಕ್ಯವೇಇಲ್ಲ ಎಂಬುದನ್ನು ವಿವರಿಸುತ್ತಿದ್ದಾರೆ. —

ಅತಿಮಾನಾದಯೋ ದೋಷಾಃ ಕುತ ಏವ ಹಿ ಮಾರುತೇಃ ।
ಅನಾದಿಕಲತಃ ಸರ್ವದೋಷಹೀನಾಗುಣಾಧಿಕಾಃ ॥ ೭೨ ॥
ಸರ್ವಜೀವಗಣೇಭ್ಯೋ ಯೇ ತೇ ಹಿ ವಾಯುತ್ವಮಾಪ್ನುಯುಃ ।
ಋಜವೋ ನಾಮ ಯೇ ದೇವಾ ದೇವಾನಾಮಪಿ ದೇವತಾಃ ॥ ೭೩ ॥

ಯೇ ದೇವಾಃ—ಯಾವ ಚೇತನರು, ಅನಾದಿಕಾಲತಃ—ಅನಾದಿಕಾಲದಿಂದಲೂ, ಸರ್ವದೋಷಹೀನಾಃ—ಸಕಲದೋಷರಹಿತರೋ, ಸರ್ವಜೀವಗಣೇಭ್ಯಃ—ಎಲ್ಲ ಜೀವಸಮೂಹಗಳಿಗಿಂತಲೂ, ಗುಣಾಧಿಕಾಃ—ಎಲ್ಲ ಗುಣಗಳಲ್ಲಿಯೂ ಶ್ರೇಷ್ಠರಾಗಿದ್ದಾರೋ. ತೇ—ಅಂಥ, ದೇವಾನಾಂ ಅಪಿ ದೇವತಾಃ—ಎಲ್ಲ ದೇವತೆಗಳಿಗಿಂತಲೂ ಅಧಿಕ ದೇವತೆಗಳಾದಂಥ ಋಜವಃ ನಾಮ ದೇವಾಃ ಹಿ—ಋಜುದೇವತೆಗಳು ಎಂದು ಹೆಸರಾದ ದೇವತೆಗಳೇ, ಹಿ—ಯಾವ ಕಾರಣದಿಂದ, ವಾಯುತ್ವಂ ಆಪ್ನುಯುಃ – ವಾಯುಪದವಿಯನ್ನು ಹೊಂದುವರೋ, ತಸ್ಮಾತ್ – ಆ ಕಾರಣದಿಂದ, ಮಾರುತೇಃ – ವಾಯುದೇವರ ಅವತಾರರಾದ ಶ್ರೀಭೀಮಸೇನದೇವರಿಗೆ, ಅತಿಮಾನಾದಯಃ ದೋಷಾಃ—ಅಹಂಕಾರ ಮೊದಲಾದ ದೋಷಗಳು, ಕುತಃ – ಹೇಗೆ ಬರಲುಶಕ್ಯ ? ॥ ೭೨ – ೭೩ ॥

ಅವತಾರಿಕೆ – ದೇವರೇ ಭೀಮರಲ್ಲಿ ಅಹಂಕಾರಾದಿ ದೋಷಗಳಿಲ್ಲ ಎಂದು ಹೇಳಿರುವಾಗ ದೋಷಗಳ ಸಂಭಾವನೆಯೂ ಇಲ್ಲ ಎಂದು ತಿಳಿಸುತ್ತಿದ್ದಾರೆ—

ಅಭಾವಂ ಹ್ಯತಿಮಾನಾದೇರ್ಭೀಮಸ್ಯಾs ಹ ಚ ಕೇಶವಃ ।
ಯುತ್ಕಿಂಚಾsತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮುಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥ ೭೪ ॥

ಇತಿ ತಸ್ಮಾದ್ ಯಥಾ ಯುದ್ಧೇ ಧರ್ಮಹಾನಿಮಮನ್ಯತ ।
ಏವಮತ್ರಾಪ್ಯಧರ್ಮೇಣ ದೇಹಪಾತಂ ನೃಪೋsಬ್ರವೀತ್ ॥ ೭೫ ॥

ಕೇಶವ :–ಚ–ಶ್ರೀಕೃಷ್ಣಪರಮಾತ್ಮನೂ ಕೂಡಾ, ಭೀಮಸ್ಯ–ಭೀಮಸೇನರಿಗೆ, ಅತಿಮಾನಾದೇಃ ಅಭಾವಂ–ಅಹಂಕಾರಾದಿ ದೋಷಗಳ ಅಭಾವವನ್ನು, ಹಿ—ಯಾವಕಾರಣದಿಂದ, ಆಹ – ಹೇಳಿರುವನೋ, ಆ ಕಾರಣದಿಂದಲೂ ಅವರಲ್ಲಿ ದೋಷ ಬರಲು ಶಕ್ಯವಿಲ್ಲ. ಶ್ರೀಕೃಷ್ಣಪರಮಾತ್ಮನು ಶ್ರೀಭೀಮರನ್ನು ಕುರಿತು ಹಾಗೆ ಹೇಳಿದ್ದನ್ನು ಹೇಳಿದ ಶ್ರೀಮಹಾಭಾರತವಾಕ್ಯವನ್ನೇ ಉದಾಹರಿಸುತ್ತಾರೆ— 'ಯುತ್ಕಿಂಚಾತ್ಮನಿ ಅಹಂ' ಎಂದು. ಅದರ ಅರ್ಥ–ಪಾಂಡವ–ಪಾಂಡುಪುತ್ರ ಭೀಮನೇ, ಆತ್ಮನಿ–ನಿನ್ನಲ್ಲಿ, ಯುತ್ಕಿಂಚ ಕಲ್ಯಾಣಂ ಸಂಭಾವಯಸಿ—ಎಷ್ಟು ಸದ್ಗುಣಗಳನ್ನು ಉಂಟೆಂದು ಭಾವಿಸುವಿಯೋ, ಏತತ್ ಸಹಸ್ರಗುಣಂ ಅಪಿ—ಇದರ ಸಾವಿರಪಟ್ಟು ಹೆಚ್ಚು ಗುಣಗಳನ್ನು ತ್ವಯಿ–ನಿನ್ನಲ್ಲಿ, ಅಹಂ–ಸಂಭಾವಯಾಮಿ – ನಾನು ಭಾವಿಸುವೆನು, ಇತಿ – ಈ ರೀತಿಯಾಗಿ, ಆಹ – ಶ್ರೀಕೃಷ್ಣಪರಮಾತ್ಮನು ಹೇಳಿರುವನೋ, ತಸ್ಮಾತ್ – ಆದ್ದರಿಂದ, ಭೀಮಸೇನದೇವರಿಗೆ ದೋಷವಿಲ್ಲವೇ ಇಲ್ಲ. (ಧರ್ಮರಾಜನು ಈ ಹಿಂದೆ ತಪ್ಪು ತಿಳಿದಂತೆ ಈಗ ತಿಳಿದದ್ದೂ ಕೂಡಾ ತಪ್ಪು ಎಂದು ಹೇಳುವರು.) ನೃಪಃ – ಧರ್ಮರಾಜನು, ಯಥಾ – ಹೇಗೆ, ಯುದ್ಧೇ – ಮಹಾಭಾರತ ಯುದ್ಧದಬಗ್ಗೆ, ಧರ್ಮಹಾನಿಂ – ಧರ್ಮಲೋಪವನ್ನು, ಅಮನ್ಯತ – ತಪ್ಪಾಗಿ ತಿಳಿದನೋ, ಏವಂ – ಈ ರೀತಿಯಾಗಿ, ಅತ್ರ ಅಪಿ – ಈ ದೇಹಪಾತದ ವಿಷಯದ ಬಗ್ಗೆಯೂಕೂಡ, ಅಧರ್ಮೇಣ – ದೋಷದಿಂದ, ದೇಹಪಾತಂ – ದೇಹಪಾತವನ್ನು ಅಬ್ರವೀತ್ – ತಪ್ಪಾಗಿ ಹೇಳಿದನು. ॥ ೭೪–೭೫ ॥

ಪೂಜ್ಯೇಭ್ಯಃ ಪೂರ್ವಮೇವೈಷಾಂ ದೇಹಪಾತಮಭೀಪ್ಸತಾಮ್ ।
ತತ್ಕಾಮಾದ್ ದೇಹಪಾತೋsಭೂನ್ನ ಪಾಪಾನ್ಮುಚ್ಯತಾಂ ಯಥಾ ॥೭೬॥

ಮುಚ್ಯತಾಂ–ಮೋಕ್ಷವನ್ನು ಹೊಂದುವವರಿಗೆ, ಯಥಾ–ಹೇಗೆ ವ್ಯತ್ಕ್ರಮವಾಗಿ ಲಯವೋ, ತಥಾ–ಹಾಗೆ, ಪೂಜ್ಯೇಭ್ಯ : ಪೂರ್ವಂ ಏವ–ವಯಸ್ಸಿನಿಂದ ಅಧಿಕರಾಗಿ ಪೂಜ್ಯರಾದವರಿಗಿಂತ ಮೊದಲೇನೇ, ದೇಹಪಾತಂ ಅಭೀಪ್ಸತಾಂ—ದೇಹದ ಬೀಳುವಿಕೆಯನ್ನಅಪೇಕ್ಷಿಸಿದ, ಏಷಾಂ–ಈ ಸಹದೇವಾದಿ ಪಾಂಡವರಿಗೆ, ತತ್ಕಾಮಾತ್ ಏವ–ಅವರ ಇಚ್ಛೆಯಂತೆಯೇ, ದೇಹಪಾತಃ ಅಭೂತ್–ದೇಹಪಾತವಾಯಿತು, ನ ಪಾಪಾತ್–ಪಾಪದಿಂದಅಲ್ಲ. ॥೭೬॥

ನಹಿ ಪಾಪಫಲಾನ್ಮುಕ್ತೌ ದೇಹಪಾತಃ ಕಥಂಚನ।
ಕಿಂತು ಕರ್ಮಕ್ಷಯಾದೇವ ತಥಾ ಸರ್ವತ್ರ ನಿಶ್ಚಿತಃ ॥೭೭॥

ತಥಾ–ಹಾಗು, ಮುಕ್ತೌ—ಮೋಕ್ಷಕ್ಕೆ ಹೊರಡುವಾಗ, (ಆಗುವ) ದೇಹಪಾತಃ– ದೇಹ ಪತನವು ಕಥಂಚನ – ಯಾವರೀತಿಯಾಗಿಯೂ, ಪಾಪಫಲಾತ್ ನಹಿ–ಪಾಪಫಲವಲ್ಲವೇ ಅಲ್ಲ, ಕಿಂತು–ಆದರೆ, ಕರ್ಮಕ್ಷಯಾತ್ ಏವ–ಪ್ರಾರಬ್ಧಕರ್ಮನಾಶದಿಂದಲೇ ಎಂದು, ಸರ್ವತ್ರ–ವೇದಾದಿ ಸರ್ವಗ್ರಂಥಗಳಲ್ಲಿ, ನಿಶ್ಚಿತಃ–ನಿಶ್ಚಿತವಾದ ವಿಷಯವು. ಆದ್ದರಿಂದ ಇವರ ದೇಹಪಾತವು ಪಾಪದಿಂದ ಅಲ್ಲ, ॥೭೭॥

ಭಾವಾನುವಾದ ೭೦—೭೭

ಅರ್ಜುನ ನಕುಲ ಸಹದೇವರಿಗೆ ಒಮ್ಮೊಮ್ಮೆ ಕಲ್ಯಾವೇಶದಿಂದ ತಮ್ಮ ಯೋಗ್ಯತಾಧಿಕವಾದ ಅಭಿಮಾನವು ಬಂದದ್ದುಂಟು. ಅದು ದೋಷವೂ ಆಗಿರಬಹುದು ಉದಾ— ಆ ಅಭಿಮಾನವು ಎರಡು ವಿಧ. ತಮಗಿಂತ ಸಣ್ಣವರಕ್ಕಿಂತ ದೊಡ್ಡವ ಎಂಬ ತಿಳುವಳಿಕೆ; ತಮಗಿಂತ ದೊಡ್ಡವರಿಗಿಂತ ದೊಡ್ಡವ ಎಂಬ ತಿಳಿವಳಿಕೆ ಎಂದು. ಇವುಗಳಲ್ಲಿ ಮೊದಲನೆಯದು ದೋಷವೇ ಆಗುವದಿಲ್ಲ. ಎರಡನೆಯದು ದೋಷವಾಗುವದು ನಿಜ; ಆದರೆ ಇದರ ಫಲ ದೇಹಪಾತವಲ್ಲ; ಕಿಂತು ಮೋಕ್ಷದಲ್ಲಿ ಆನಂದ ಹ್ರಾಸವು ಅದರ ಫಲವು. ಮನುಷ್ಯರಿಗೂ ಕೂಡ ಹೀಗಿರುವಾಗ ದೇವಾವತಾರಿಗಳಾದ ಅರ್ಜುನಾದಿಗಳಿಗೆ ದೇಹಪಾತವು ಅದರ ಫಲವಲ್ಲ ಎಂದು ಏನು ಹೇಳುವದು. ? ಈ ಎಲ್ಲ ವಿಷಯವು ತದಧಿಗಮೇ ಉತ್ತರಪೂರ್ವಾಘಯೋರಶ್ಲೇಷವಿನಾಶೌ ಎಂಬ ಸೂತ್ರ ಪ್ರಸಿದ್ಧವ. ಪ್ರಾರಬ್ಧಕರ್ಮದಿಂದ ಬಂದಿರುವ ದೇಹವು ಆ ಕರ್ಮತೀರಿದ ಕೂಡಲೇ ಬಿಳುವದು. ಧರ್ಮರಾಜನೂ ಕೂಡ ಆ ದೇಹವನ್ನು ಬಿಟ್ಟ ನಂತರ ಸ್ವರ್ಗಕ್ಕೆ ಹೋದನು. ತನ್ನಲ್ಲಿ ದೋಷಗಳನ್ನು ಹೇಳದಿರುವ ಧರ್ಮರಾಜನ ದೇಹವು ಏಕೆ ಬಿತ್ತು? ಎಂಬ ಪ್ರಶ್ನೆಯು ಬರುವದು. ಅದಕ್ಕೆ ಕರ್ಮನಾಶವು ಕಾರಣವಾದರೆ ಅದರಂತೆ ಇವರ ದೇಹ ಪಾತಕ್ಕೂ ಅದೇ ಕಾರಣ ಎಂದು ತಿಳಿಯುವದು. ಸರ್ವದಾ ಕಾಮಾದಿ ಸರ್ವದೋಷದೂರರಾದ, ಎಲ್ಲ ಜೀವರಿಗಿಂತಲೂ ಉತ್ತಮರಾದ ಋಜುಗಣಸ್ಥ ಚೇತನರೇ ವಾಯುದೇವಪದವನ್ನು ಹೊಂದುವರು. ಅಂಥ ವಾಯ್ವಂಶರಾದ ಭೀಮರಿಗೆ ಅತಿಮಾನಾದಿ ದೋಷಗಳ ಸಂಪರ್ಕವೇ ಇಲ್ಲ. ಅಷ್ಟೇ ಅಲ್ಲ; ಶ್ರೀಕೃಷ್ಣಪರಮಾತ್ಮನು ಭೀಮರನ್ನು ಕುರಿತು 'ನಿನ್ನಲ್ಲಿ ಗುಣಗಳು ಎಷ್ಟು ಇದ್ದಾವೆ ಎಂದು ನೀನು ತಿಳಿದಿರುವಿಯೋ ಅದರ ಸಾವಿರ ಪಟ್ಟು ಹೆಚ್ಚು ನಿನ್ನಲ್ಲಿವೆ ಎಂದು ನಾನು ತಿಳಿದಿರುವೆನು' ಎಂದು ಹೇಳಿದ ಮಾತು ಮಹಾಭಾರತದಲ್ಲಿದೆ. ಇದರಿಂದ ತನ್ನಲ್ಲಿದ್ದ ಗುಣಗಳನ್ನೂ ಕೂಡ ಅಹಂಕಾರವಾದೀತು ಎಂದು ದೊಡ್ಡವರೆದುರು ಹೇಳದಿರುವ ಭೀಮರಿಗೆ ಯೋಗ್ಯತಾಕ್ಕಿಂತ ಹೆಚ್ಚು ಗುಣಗಳನ್ನು ತನ್ನಲ್ಲಿ ಹೇಳಿಕೊಳ್ಳೋಣ ಎಂಬ ಅತಿಮಾನವು ಇಲ್ಲವೇ ಇಲ್ಲ ಎಂದು ಸ್ಪಷ್ಟ. ಇಷ್ಟೆಲ್ಲಸ್ಪಷ್ಟವಾದ್ದರಿಂದ ಧರ್ಮರಾಜನು ಆ ನಾಲ್ವರಲ್ಲಿ ದೋಷವನ್ನು ಹೇಳಿದ್ದು ಅವನ ತಪ್ಪು ತಿಳಿವಳಿಕೆಯಿಂದ. ಧರ್ಮಯುದ್ಧವಾದ ಮಹಾಭಾರತಯುದ್ಧದಿಂದ ತನಗೆ ಅಧರ್ಮ ಪಾಪ ಬಂದಿತು ಎಂದು ತಪ್ಪಾಗಿ ತಿಳಿವಂತೆ ಇಲ್ಲಿಯೂ ತಪ್ಪಾಗಿ ತಿಳಿದಿರುವನು; ಆ ಪ್ರಕಾರ ಹೇಳಿರುವನು ಎಂದು ನಿರ್ಣಯ. ಇಷ್ಟೇ ಅಲ್ಲ ಮೋಕ್ಷ ಹೊಂದುವ ಕಾಲದಲ್ಲಿ ದೇವತೆಗಳ ದೇಹಗಳು ಅವರ ಇಚ್ಛಾಪ್ರಕಾರ ಕರ್ಮನಾಶದಿಂದ ದೊಡ್ಡವರ ಎದುರೇ ಸಣ್ಣವರ ದೇಹಗಳು ಬೀಳುವವೋ ಅದೇರೀತಿ ಇಲ್ಲಿಯೂ ಅವರ ಇಚ್ಛಾಪ್ರಕಾರವೇ ಬಿದ್ದದ್ದು ಎಂದು ತಿಳಿಯಬಹುದು. ದೋಷದಿಂದ ದೇಹಪಾತ ಎಂದಾಗಿದ್ದರೆ ಶ್ರೀಕೃಷ್ಣವಾಕ್ಯದಲ್ಲಿ ಅವಿಶ್ವಾಸ ವೆಂಬ ಮಹಾಪಾಪವನ್ನೆಸಗಿದ ಧರ್ಮರಾಜನ ದೇಹವೇ ಮೊದಲು ಬೀಳಬೇಕಿತ್ತು. ಅದಾಗಿಲ್ಲವೆಂದಮೇಲೆ ದೇಹಪಾತಗಳು ಪಾಪದ ಫಲವಲ್ಲ; ಕರ್ಮನಾಶದ ಫಲವೇ, ಅವರ ಇಚ್ಛೆಯಂತೆ ಆಗಿದ್ದು ಎಂದು ನಿಶ್ಚಯ.

ತೇಷು ಸ್ವಲೋಕಾನ್ ಪ್ರಾಪ್ತೇಷು ಧರ್ಮಜಶ್ಚಾ(ಶ್ವಾ), (ಸ್ವಾ)ऽತ್ಮನಾ ಸಹ ।
ಯಯೌವಪುರೋ ದೇವರಥಸ್ತದಾऽ ಸ್ಯಾವತತಾರ ಹ ॥ ೭೮ ॥

ತೇಷು—ಆ ಭೀಮಾದಿಪಾಂಡವರು, ಸ್ವಲೋಕಾನ್—ತಮ್ಮ ಲೋಕಗಳನ್ನು, ಪ್ರಾಪ್ತೇಷು ಸತ್ಸು—ಹೊಂದುತ್ತಿರಲು, ಧರ್ಮಜಃ—ಧರ್ಮರಾಜನು, ಆತ್ಮನಾ (ಶ್ವಾತ್ಮನಾ, ಸ್ವಾತ್ಮನಾ) ಸಹ—ತನ್ನ ರೂಪವಾದ ನಾಯಿಯಿಂದ ಸಹಿತನಾಗಿ, ಯಯೌ—ಸ್ವರ್ಗಕ್ಕಾಗಿ ಹೊರಟನು, ತದಾ—ಆ ಸಮಯದಲ್ಲಿ, ಅಸ್ಯ ಪುರಃ—ಇವನ ಎದುರಿಗೆ. ದೇವರಥಃ—ದೇವತಾ ಪ್ರೇರಿತವಾವ ರಥವು, ಅವತತಾರ ಹ—ಇಳಿದು ಬಂದಿತು. ॥ ೭೮ ॥

ರಥಮಾರುಹೇತಿ ಕಥಿತೋ ರಥಿನಾ ಪುರತಃ ಶುನಃ ।
ಆರೋಹಮಬ್ರವೀನ್ನೈತದ್ ಯುಕ್ತಮಿತ್ಯಾಹಸೋऽಪಿ ತು ॥ ೭೯ ॥

ರಥಂ ಆರುಹ ಇತಿ—ಈ ರಥವನ್ನು ಏರು ಎಂದು, ರಥಿನಾ—ರಥದಲ್ಲಿರುವ ಸಾರಥಿಯಿಂದ, ಕಥಿತಃ—ಹೇಳಲ್ಪಟ್ಟ ಧರ್ಮರಾಜನು, ಪುರತಃ—ಮೊದಲಿಗೆ, ಶುನಃ—ನಾಯಿಯು, ಆರೋಹಂ—ಆರೋಹಣವನ್ನು (ತನಗಿಂತ ಮೊದಲು ಆ ನಾಯಿಯು ರಥವನ್ನು ಏರಬೇಕು ಎಂದು,) ಅಬ್ರವೀತ್—ಹೇಳಿದನು. ತಂ—ಆದರೆ, ಸಃ ಅಪಿ—ಆ ಸಾರಥಿಯಾದರೂ, ಏತತ್—ನಾಯಿಯು ರಥವನ್ನೇರುವದು, ನ ಯುಕ್ತಂ ಇತಿ ಆಹ—ಯೋಗ್ಯವಲ್ಲವೆಂದು ಹೇಳಿದನು. ॥ ೭೯ ॥

ನಾಽರುಹೇಯಂ ವಿನಾ ಶ್ವಾನಮಿತಿ ತೇನ ಸ್ಥಿರೋದಿತೇ ।
ಸ್ವರೂಪಂ ದರ್ಶಯಾಮಾಸ ಧರ್ಮೋಽಪ್ಯಾಪ್ತಃ ಶ್ವರೂಪತಾಮ್ ॥ ೮೦ ॥

ಶ್ವಾನಂ ವಿನಾ – ನಾಯಿಯನ್ನು ಬಿಟ್ಟು, ನ ಆರುಹೇಯಂ— ನಾನು ರಥವನ್ನು ಏರಲಾರೆನು, ಇತಿ—ಎಂದು, ತೇನ—ಧರ್ಮರಾಜನಿಂದ, ಸ್ಥಿರೋದಿತೇ ಸತಿ—ದೃಢವಾಗಿ ಹೇಳಲ್ಪಡುತ್ತಿರಲು, ಶ್ವರೂಪತಾಂ ಆಪ್ತಃ—ನಾಯಿಯರೂಪವನ್ನು ಹೊಂದಿದ, ಧರ್ಮಃ—ಯಮಧರ್ಮನು, ಸ್ವರೂಪಂ ದರ್ಶಯಾಮಾಸ—ತನ್ನ ನಿಜರೂಪವನ್ನು ತೋರಿಸಿದನು, ॥ ೮೦ ॥

ಆನೃಶಂಸ್ಯಪರತ್ವೇನ ಕೀರ್ತಿಮೇವಾಽತ್ಮನೋ ವೃಷಃ ।
ಖ್ಯಾಪಯಾಮಾಸ ಕೌಂತೇಯರೂಪಿಣೋ ಧರ್ಮಸೂಕ್ತಿಭಿಃ ॥೮೧॥

ವೃಷಃ—ಯಮದೇವರು, ಆನೃಶಂಸ್ಯಪರತ್ವೇನ— (ಧರ್ಮರಾಜನು) ಕೃಪಾಪರನಾಗುವದರಿಂದ ಕೌಂತೇಯರೂಪಿಣಃ ಆತ್ಮನಃ ಏವ—ಕುಂತೀಪುತ್ರರೂಪದಲ್ಲಿರುವ ತನ್ನದೇ, ಕೀರ್ತಿಂ—ಕೀರ್ತಿಯನ್ನು, ಧರ್ಮ ಸೂಕ್ತಿಭಿಃ—ಧರ್ಮಯುಕ್ತವಾದ ಮಾತುಗಳಿಂದ, ಖ್ಯಾಪಯಾಮಾಸ—ಪ್ರಕಟಪಡಿಸಿದನು. ॥ ೮೧ ॥

ತತಃ ಸ ರಥಮಾರುಹ್ಯ ಲೋಕಾನಾಮುತ್ತರೋತ್ತರಮ್ ।
ಅತಿಕ್ರಮ್ಯಾಖಿಲಾನ್ ರಾಜ್ಞೋ ಜಗಾಮ ಶ್ರೀಪತಿಪ್ರಿಯಃ ॥ ೮೨ ॥

ತತಃ—ಯಮದೇವನು ತನ್ನ ಸ್ವರೂಪವನ್ನು ತೋರಿಸಿದನಂತರ, ಶ್ರೀಪತಿಪ್ರಿಯಃ ಸಃ—ಶ್ರೀಕೃಷ್ಣಪ್ರಿಯನಾದ ಆ ಧರ್ಮರಾಜನು, ರಥಂ ಆರುಹ್ಯ—ರಥವನ್ನೇರಿ, ಅಖಿಲಾನ್ ರಾಜ್ಞಃ ಅತಿಕ್ರಮ್ಯ—ಮಧ್ಯಮಧ್ಯ ಇರುವ ಎಲ್ಲ ರಾಜರನ್ನುದಾಟಿ, ಲೋಕಾನಾಂ ಉತ್ತರೋತ್ತರಂ—ಭೂಲೋಕಾದಿಲೋಕಗಳ ಉತ್ತರದಲ್ಲಿರುವ ಲೋಕವನ್ನು ಕುರಿತು, ಜಗಾಮ—ಹೋದನು. ॥ ೮೨ ॥

ಸರ್ವೇಷಾಮುತ್ತರಂ ಲೋಕಮೈಂದ್ರಂ ಪ್ರಾಪ್ಯೇದಮೇವ ತೇ ।
ಸ್ಥಾನಮಿತ್ಯುದಿತೋ ದೇವೈರ್ದುರ್ಯೋಧನಮುವೈಕ್ಷತ ।
ಸಭ್ರಾತೃಕಂ ಜ್ವಲಂತಂ ಚ ಸರ್ವೇಷಾಮುಪರಿಸ್ಥಿತಮ್ ॥೮೩॥

ಸರ್ವೇಷಾಂ ಉತ್ತರಂ—ಎಲ್ಲ ಲೋಕಗಳಿಗೂ ಉತ್ತರದಲ್ಲಿರುವ, ಐಂದ್ರಂ ಲೋಕಂ—ಇಂದ್ರದೇವರು ಲೀಲೆಗಾಗಿ ನಿರ್ಮಿಸಿದ ಕೃತಕವಾದ ಲೋಕವನ್ನು, ಪ್ರಾಪ್ಯ—ಹೊಂದಿ, ದೇವೈಃ—ಅಲ್ಲಿರುವ ದೇವತೆಗಳಿಂದ, ಇದಂ ಏವ—ಈ ಲೋಕವೇ, ತೇ—ಸ್ಥಾನಂ—ನಿನ್ನ ಸ್ಥಾನವು, ಇತಿ ಉದಿತಃ—ಎಂದು ಹೇಳಿಸಿಕೊಳ್ಳಲ್ಪಟ್ಟ

ಆ ಧರ್ಮರಾಜನು, ಸರ್ವೇಷಾಂ ಉಪರಿ—ಎಲ್ಲರಿಗಿಂತ ಮೇಲಿನ ಸ್ಥಾನದಲ್ಲಿ. ಜ್ವಲಂತಂ—ಶೋಭಿಸತಕ್ಕ, ಚ–ಮತ್ತು ಸಭ್ರಾತೃಕಂ—ಸಹೋದರರಿಂದ ಸಹಿತನಾದ, ದುರ್ಯೋಧನಂ–ದುರ್ಯೋಧನನನ್ನು, ಅವೈಕ್ಷತ–ನೋಡಿದನು. ॥೮೩॥

ತಂ ದೃಷ್ಟ್ವಾ ಪರಮಕ್ರುದ್ಧೋ ನಿಮೀಲ್ಯ ನಯನೇ ಶುಭೇ ।
ಭ್ರಾತರೋ ಮೇ ಕ್ವ ಕೃಷ್ಣಾ ಚ ಸಕರ್ಣಾಃ ಕ್ವಚ ಬಾಂಧವಾಃ ।
ಧೃಷ್ಟದ್ಯುಮ್ನಾದಯಃ ಪುತ್ರಾ ಹೈಂಡಿಬಾದ್ಯಾಶ್ಚ ಸರ್ವಶಃ ॥೮೪॥

ಯಾದವಾಶ್ಚೇತಿ ಪಪ್ರಚ್ಛ ದೇವಾಂಸ್ತೇ ಚ ತಮಬ್ರುವನ್ ।
ಕಿಂ ತೇ ತೈಃ ಸ್ವಕೃತಂ ಕರ್ಮ ಭುಜ್ಯತೇಽತ್ರ ನ ಚಾಪರೈಃ ॥೮೫॥

ತಂ—ಆ ದುರ್ಯೋಧನನನ್ನು, ದೃಷ್ಟ್ವಾ—ನೋಡಿ, ಪರಮಕ್ರುದ್ಧಃ—ಬಹುಸಿಟ್ಟಿಗೆದ್ದ ಧರ್ಮರಾಜನು ಶುಭೇ ನಯನೇ—ಯಾವಾಗಲೂ ಶುಭ ವಿಷಯಗಳನ್ನೇ, ಪುಣ್ಯ ದೃಶ್ಯಗಳನ್ನೇ ನೋಡಿ ಪವಿತ್ರವಾದ ಕಣ್ಣುಗಳನ್ನು, ನಿಮೀಲ್ಯ—ಮುಚ್ಚಿ (ಆ ಅಯೋಗ್ಯ ದೃಶ್ಯವನ್ನು ನೋಡಲಾಗದೇ ಮುಚ್ಚಿ) ಸಕರ್ಣಾಃ—ಕರ್ಣನಿಂದ ಸಹಿತರಾದ, ಮೇ ಭ್ರಾತರಃ—ನನ್ನ ಸಹೋದರರಾದ ಭೀಮಾದಿಗಳು, ಚ—ಮತ್ತು, ಕೃಷ್ಣಾ—ದ್ರೌಪದೀದೇವಿಯು, ಕ್ವ–ಎಲ್ಲಿ, ಚ—ಹಾಗು, ಧೃಷ್ಟದ್ಯುಮ್ನಾದಯಃ—ಧೃಷ್ಟದ್ಯುಮ್ನ ಮೊದಲಾದ, ಬಾಂಧವಾಃ—ಬಾಂಧವರು, ಚ—ಮತ್ತು ಹೈಡಿಂಬಾದ್ಯಾಃ ಪುತ್ರಾಃ—ಘಟೋತ್ಕಚನೇ ಮೊದಲಾದ ಮಕ್ಕಳು, ಚ—ಮತ್ತು, ಸರ್ವಶಃ ಯಾದವಾಃ–ಎಲ್ಲ ಯಾದವರೂ ಕೂಡ, ಕ್ವ—ಎಲ್ಲಿ, ಇತಿ—ಎಂದು, ಪಪ್ರಚ್ಛ—ಕೇಳಿದನು, ತೇ ದೇವಾಃ ಚ—ಆ ದೇವತೆಗಳಾದರೂ, ತೇ—ನಿನಗೆ, ತೈಃ—ಆ ನಿನ್ನ ಸಹೋದರಾದಿಗಳಿಂದ, ಕಿಂ–ಏನಾಗಬೇಕು? ಅತ್ರ—ಈ ಸ್ವರ್ಗದಲ್ಲಿ, ಸ್ವಕೃತಂ ಕರ್ಮ—ತಮ್ಮ ತಮ್ಮಿಂದವನಾಡಲ್ಪಟ್ಟ ಕರ್ಮವು, ಸ್ವೇನ ಏವ–ತನ್ನಿಂದಲೇ, ಭುಜ್ಯತೇ–ಅನುಭೋಗಿಸಲ್ಪಡುವದು, ಅಪರೈಃ ನ ಚ—ಬೇರೆಯವರಿಂದ ಅಲ್ಲ. ॥೮೪–೮೫॥

ಇತ್ಯುಕ್ತ ಆಹ ಪಾಪೋಽಯಂ ಪೃಥಿವೀಕ್ಷಯಕಾರಕಃ ।
ಸರ್ವಾತಿಶಂಕೀ ಮಿತ್ರಧ್ರುಂಙ್ ನಾರಾಯಣಪರಾಙ್‌ಮುಖಃ ॥೮೬॥

ನಾಸ್ತಿಕೋಽತಿಶಠಃ ಕ್ರೂರೋ ದ್ವೇಷ್ಟಾ ವಿಷ್ಣ್ವೀಶ ತದ್ಭವಾವಮ್ ।
ಕಥಂ ದುರ್ಯೋಧನಃ ಸ್ಥಾನಂ ಸರ್ವೋತ್ತಮಮವಾಪ್ತವಾನ್ ॥೮೭॥

ಇತಿ ಉಕ್ತಃ—ಈ ರೀತಿ ಹೇಳಿಸಿಕೊಳ್ಳಲ್ಪಟ್ಟ ಧರ್ಮರಾಜನು, ಪೃಥಿವೀಕ್ಷಯಕಾರಕಃ—ಭೂಮಿಯನ್ನೇ ಹಾಳುಮಾಡಿದ, ಸರ್ವಾತಿಶಂಕೀ—ಎಲ್ಲರ ಮೇಲೂ ಸಂಶಯಮಾಡಿದ, ಮಿತ್ರಧ್ರುಕ್—ಮಿತ್ರದ್ರೋಹ ಮಾಡಿದ, ನಾರಾಯಣಪರಾಙ್‌ಮುಖಃ—ನಾರಾಯಣಸೇವಾವಿಮುಖನಾದ, ನಾಸ್ತಿಕಃ—ನಾಸ್ತಿಕನಾದ, ಅತಿಶಠಃ—ಅತಿ ಕಪಟಿಯಾದ, ವಿಷ್ಣ್ವೀಶಃ—ಶ್ರೀಹರಿಯು, ಚ–ಮತ್ತು, ತದ್ಭವಾಂ–ಅವನನ್ನು (ಆ ಶ್ರೀಹರಿಯನ್ನು) ಆಶ್ರಯಿಸಿದ ಭಕ್ತರ, ದ್ವೇಷ್ಟಾ–ದ್ವೇಷಿಯಾದ, ಪಾಪಃ–ಪಾಪಿಯಾದ, ಅಯಂ ದುರ್ಯೋಧನಃ—ಈ ದುರ್ಯೋಧನನು, ಸರ್ವೋತ್ತಮಂ ಸ್ಥಾನಂ—ಎಲ್ಲರಿಗಿಂತ ಶ್ರೇಷ್ಠ ಸ್ಥಾನವನ್ನು, ಕಥಂ ಅವಾಪ್ತವಾನ್–ಹೇಗೆ ಹೊಂದಿದನು? ಇತಿ–ಎಂದು, ಆಹ–ಹೇಳಿದನು. ॥೮೬-೮೭॥

ಕಥಂ ಚ ಸರ್ವಧರ್ಮಜ್ಞಾ ನಾರಾಯಣಪರಾಯಣಾಃ ।
ಸಂಸ್ಥಿತಾಃ ಪರಮೇ ಧರ್ಮೇ ದೃಶ್ಯಂತೇಽತ್ರ ನ ಮತ್ಸ್ಯಿಯಾಃ ॥೮೮॥

ಚ—ಮತ್ತು, ಸರ್ವಧರ್ಮಜ್ಞಾಃ—ಸರ್ವಧರ್ಮಜ್ಞಾನವುಳ್ಳ, ನಾರಾಯಣಪರಾಯಣಾಃ—ಶ್ರೀನಾರಾಯಣನನ್ನು ಆಶ್ರಯಿಸಿರುವಂಥ, ಪರಮೇ ಧರ್ಮೇ ಸಂಸ್ಥಿತಾಃ – ಶ್ರೇಷ್ಠಧರ್ಮಾಚರಣೆಯಲ್ಲಿ ನಿರತಕ್ಕಂಥ, ಮತ್ಪ್ರಿಯಾಃ – ನನ್ನ ಪ್ರಿಯರಾದ ಆ ಬಾಂಧವರೆಲ್ಲ, ಅತ್ರ – ಇಲ್ಲಿ, ಕಥಂ–ಹೇಗೆ (ಯಾವ ಕಾರಣ), ನ ದೃಶ್ಯಂತೇ–ತೋರುತ್ತಿಲ್ಲ, ॥೮೮॥

ಯತ್ರ ಸಂತಸ್ತು ತೇ ಸಂತಿ ತತ್ರ ಸ್ಥಾತವ್ಯಮೇವ ಮೇ ।
ನಿರಯೇಽಪಿ ನ ಚಾತ್ರಾಪಿ ನಾನೇನ ಸಹ ಪಾಪಿನಾ ।
ಅಸ್ಯ ವೀರತಮಸ್ಯೇದಂ ಧಾರ್ತರಾಷ್ಟ್ರಸ್ಯ ಯುಜ್ಯತೇ ॥ ೮೯ ॥

ತು—ಆದರೆ, ತೇ ಸಂತಃ – ಆ ಸಜ್ಜನರು, ಯತ್ರ – ಎಲ್ಲಿ, ಸಂತಿ – ಇರುವರೋ, ತತ್ರ –ಏವ – ಅಲ್ಲಿಯೇ, ನರಕೇ (ಅಪಿ) – ಇಲ್ಲಿ ಮಾತ್ರವಲ್ಲ ಅವರು ನರಕದಲ್ಲಿದ್ದರೆ ಅಲ್ಲಿಯೇ, ಮೇ ಸ್ಥಾತವ್ಯಂ – ನನ್ನಿಂದ ಇರಲ್ಪಡಬೇಕು, ಚ– ಆದರೆ ಅತ್ರ ಅಪಿ – ಇಂಥ ಸುಖದಿಂದ ಕೂಡಿದ ಈ ಸ್ವರ್ಗಲೋಕದಲ್ಲಿಯೂ ಕೂಡ, ಪಾಪಿನಾ ಅನೇನ ಸಹ—ಪಾಪಿಯಾದ ಇವನ ಸಂಗಡ, ನ ಸ್ಥಾತವ್ಯಂ — ಇರಬಾರದು. ವೀರತಮಸ್ಯ—ಬಹುಪರಾಕ್ರಮಿಯಾವ. ಅಸ್ಯ ಧಾರ್ತರಾಷ್ಟ್ರಸ್ಯ – ಈ ದುರ್ಯೋಧನನಿಗೆ, ಇದಂ ಯುಜ್ಯತೇ – ಈ ಲೋಕವು ಯೋಗ್ಯವಾಗಿದೆ. ॥೮೯॥

ಇತ್ಯುಕ್ತಾ ದೇವತಾ ದೂತಂ ಸ್ವಾನಾಂ ಸಂದರ್ಶನಾರ್ಥಿನಃ ।
ರಾಜ್ಞಃ ಸಂಪ್ರೇಷಯಾಮಾಸುಸ್ತತ್ಸಂದರ್ಶಿತವರ್ತ್ಮನಾ ॥೯೦॥
ದುರ್ಗಂಧೇನ ಸುಕೃಚ್ಛ್ರೇಣ ತಮಸಾ ಪ್ರಾವೃತೇನ ಚ ।
ಗತ್ವೈವ ಕಿಯತೀಂ ಭೂಮಿಂ ತದ್ದುರ್ಗಂಧಾಸಹೋ ನೃಪಃ ।
ಇಚ್ಛನ್ ನಿವರ್ತನಂ ತತ್ರ ಸ್ವಾನಾಂ ವಾಚ ಇವಾಶೃಣೋತ್ ॥ ೯೧ ॥

ಇತಿ ಉಕ್ತಾಃ;—ಈ ರೀತಿ ಧರ್ಮರಾಜನಿಂದ ಹೇಳಲ್ಪಟ್ಟ, ದೇವತಾಃ—ದೇವತೆಗಳು, ಸ್ವಾನಾಂ ಸಂದರ್ಶನಾರ್ಥಿನಃ—ತನ್ನವರನ್ನು ನೋಡುವ ಇಚ್ಛೆಯುಳ್ಳಂಥ, ರಾಜ್ಞಃ—ಧರ್ಮರಾಜನಿಗೆ, ದೂತಂ—(ಮಾರ್ಗತೋರಿಸುವದಕ್ಕಾಗಿ) ಒಬ್ಬ ದೂತನನ್ನು, ಸಂಪ್ರೇಷಯಾಮಾಸುಃ—ಕಳಿಸಿದರು. ದುರ್ಗಂಧೇನ—ದುರ್ಗಂಧದಿಂದ ಕೂಡಿದ, ಸುಕೃಚ್ಛ್ರೇಣ—ಬಹು ಕಷ್ಟಕರವಾದ, ಚ—ಮತ್ತು, ತಮಸಾ ಪ್ರಾವೃತೇನ—ಕತ್ತಲೆಯಿಂದಕೂಡಿದ, ತತ್ಸಂದರ್ಶಿತವರ್ತ್ಮನಾ—ಆ ದೂತನು ತೋರಿಸಿದ ಮಾರ್ಗದಿಂದ, ಕಿಯತೀಂಭೂಮಿಂ ಸ್ವಲ್ಪದೂರ ಆ–ಮಾರ್ಗದಲ್ಲಿ, ಗತ್ವಾಏವ—ಹೋಗಿಯೇ (ಅಲ್ಲಿದ್ದದ್ದು ಅಲ್ಲ ಹೋಗುವಾಗಲೇ),ತದ್ದುರ್ಗಂಧಾಸಹಃ ನೃಪಃ–ಅಲ್ಲಿಯ ದುರ್ಗಂಧವನ್ನು ಸಹಿಸಲಾರದ ಧರ್ಮರಾಜನು, ನಿವರ್ತನಂ—ಅಲ್ಲಿಂದ ವಾಪಸ್ ಹೊರಡಬೇಕೆಂಬುದನ್ನು, ಇಚ್ಛನ್ ಇಚ್ಛಿಸುವವನಾಗಿ, ತತ್ರ— ಅಲ್ಲಿ, ಅದೇ ಸಮಯದಲ್ಲಿ. ಸ್ವಾನಾಂ ವಾಚಃ ಇವ—ತನ್ನ ಪ್ರಿಯಬಾಂಧವರ ಮಾತುಗಳಂತಿರುವ ಮಾತುಗಳನ್ನು, ಅಶೃಣೋತ್—ಕೇಳಿದನು. ॥ ೯೦–೯೧ ॥

ಅವತಾರಿಕೆ— ಕೇಳಿದ ಮಾತುಗಳನ್ನೇ ಹೇಳುತ್ತಾರೆ—

ಕ್ಷಣಂ ತಿಷ್ಠ ಮಹಾರಾಜ ಸನ್ನಿಧಾನಬಲಾತ್ ತವ ।
ವೇದನಾ ನೋ ನ ಮಹತೀತ್ಯೇತಚ್ಛ್ರುತ್ವಾ ಯುಧಿಷ್ಠಿರಃ ॥ ೯೨ ॥

ಕೇ ಯೂಯಮಿತಿ ಪಪ್ರಚ್ಛ ದೀನಧ್ವನಿವಿಶಂಕಿತಃ ।
ಭೀಮೋಽಹಮರ್ಜುನಃ ಕರ್ಣ ಇತ್ಯಾದ್ಯುಕ್ತಮಿವಾಶೃಣೋತ್ ॥ ೯೩ ॥

ಮಹಾರಾಜ—ಧರ್ಮರಾಜನೇ, ಕ್ಷಣಂ—ಒಂದು ಕ್ಷಣ ಸಮಯವಾದರೂ, ತಿಷ್ಠ—ನಿಲ್ಲು, ತವ ಸನ್ನಿಧಾನ ಬಲಾತ್—ನಿನ್ನ ಇರುವಿಕೆಯ ಶಕ್ತಿಯಿಂದ, ನಃ—ನಮಗೆ, ನ ಮಹತೀವೇದನಾ—ಅಷ್ಟೊಂದು ಬಹಳ ನೋವಿಲ್ಲವಾಗಿದೆ, ಇತಿ ಏತತ್—ಎಂಬ ಈ ಮಾತನ್ನು, ಶ್ರುತ್ವಾ—ಕೇಳಿ, ಯುಧಿಷ್ಠಿರಃ – ಧರ್ಮರಾಜನು, ದೀನಧ್ವನಿವಿಶಂಕಿತಃ ಸನ್—ಈ ರೀತಿಯಾದ ದುಃಖದ ಧ್ವನಿಯಿಂದ (ಮಾತಿನಿಂದ) ಸಂಶಯವನ್ನು ಹೊಂದಿದವನಾಗಿ, ಯೂಯಂ ಕೇ ಇತಿ—ನೀವು ಯಾರು ಎಂದು, ಪಪ್ರಚ್ಛ—ಕೇಳಿದನು. (ತಥಾ—ಆಗ) ಅಹಂ ಭೀಮಃ—ನಾನು ಭೀಮನು, ಅಹಂ ಅರ್ಜುನಃ – ನಾನು ಅರ್ಜುನನು, ಅಹಂ ಕರ್ಣಃ—ನಾನು ಕರ್ಣನು, – ಇತ್ಯಾದಿ ಉಕ್ತಂ ಇವ—ಇದೇ ಮೊದಲಾದ ಮಾತನ್ನು ಹೇಳಿದಂತೆ, ಅಶೃಣೋತ್ – ಕೇಳಿದನು. ॥ ೯೨-೯೩ ॥

ಶ್ರುತ್ವಾ ತಜ್ ಕೃಪಯಾऽऽವಿಷ್ಟಃ ಶೋಕಾಮರ್ಷಸಮನ್ವಿತಃ ।
ಅಹ ದೂತ ಯಥೇಷ್ಟಂ ತ್ವಂ ಗಚ್ಛ ನಾಹಮಿತೋ ವ್ರಜೇ ॥ ೯೪ ॥

ನಚ ಸ್ವರ್ಗೇಣ ಮೇ ಕಾರ್ಯಂ ತ್ಯಕ್ತ್ವಾಸ್ವಜನಮೀದೃಶಮ್ ।
ಇತ್ಯುಕ್ತಃ ಪ್ರಯಯೌ ದೂತಸ್ತಸ್ಥಾವೇವ ಯುಧಿಷ್ಠಿರಃ ॥ ೯೫ ॥

ತತ್—ಆ ಮಾತನ್ನು, ಶ್ರುತ್ವಾ—ಕೇಳಿ, ಕೃಪಯಾ ಆವಿಷ್ಟಃ ಸನ್—ಆ ಬಂಧುಗಳ ಬಗ್ಗೆದಯೆಯಿಂದ ಕೂಡಿದವನಾಗಿ, ಶೋಕಾಮರ್ಷಸಮನ್ವಿತಃ ಸನ್ – ದುಃಖಕೋಪಗಳಿಂದ ಕೂಡಿದವನಾಗಿ, [ಆ ದೂತನನ್ನು ಕುರಿತು,] ದೂತ—ಏಲೋ ದೂತನೇ, ತ್ವಂ—ನೀನು, ಯಥೇಷ್ಟಂ ಗಚ್ಛ – ನಿನ್ನ ಇಚ್ಛಾನುಸಾರ ಹೋಗು, ಅಹಂ—ನಾನು, ಇತಃ – ಇಲ್ಲಿಂದ, ನ ವ್ರಜೇ – ಹೊರಡುವದಿಲ್ಲ; ಈದೃಶಂ ಸ್ವಜನಂ— ಈ ರೀತಿ ದುಃಖಪಡುತ್ತಿರುವ, ನಮ್ಮ ಬಂಧುಗಳನ್ನು, ತ್ಯಕ್ತ್ವಾ—[ಇಲ್ಲಿ] ಬಿಟ್ಟು, ಮೇ – ನನಗೆ, ಸ್ವರ್ಗೇಣ – ಸುಖದಿಂದ ಕೂಡಿದ ಸ್ವರ್ಗದಿಂದಲೂ, ಕಾರ್ಯಂ ನಚ – ಯಾವ ಪ್ರಯೋಜನವೂ ಇಲ್ಲ, ಇತಿ—ಎಂದು, ಆಹ—ಹೇಳಿದನು, ಇತಿ ಉಕ್ತಃ—ಈ ರೀತಿ ಹೇಳಲ್ಪಟ್ಟ, ದೂತಃ—ದೇವದೂತನು, ಪ್ರಯಯೌ – ಹೋದನು. ಯುಧಿಷ್ಠಿರಃ – ಧರ್ಮರಾಜನ್ನು ತಸೌ ಏವ – ನಿಂತೇಇದ್ದನು. ॥ ೯೪-೯೫ ॥

ತತೋऽತ್ರ ದೇವಾಃ ಪುರುಹೂತಪೂರ್ವಕಾಃ ಸಮಾಯಯುಃ ಸ್ನೇಹವಶಾತ್ ಯುಧಿಷ್ಠಿರೇ ।
ತೇಷ್ವಾಗತೇಷ್ವೇವ ನ ತತ್ರ ವಾಚೋ ದೀನಾ ನ ದುರ್ಗಂಧತಮೋऽಪ್ಯಪಶ್ಯತ್ ।
ಸ್ವರ್ಗೋತ್ತಮಂ ದೇಶಮುಪಶ್ಯದೇತಮುಭ್ರಾಂತಚೇತಾಃ ಸ ಯುಧಿಷ್ಠಿರಸ್ತದಾ ॥ ೯೬ ॥

ತತಃ – ದೂತನು ಹೋದನಂತರವೂ, ಧರ್ಮರಾಜನು ಅಲ್ಲಿಯೇ ನಿಂತನಂತರ, ಪುರುಹೂತಪೂರ್ವಕಾಃ ದೇವಾಃ – ಇಂದ್ರದೇವರೇ ಮೊದಲಾದ ದೇವತೆಗಳು, ಯುಧಿಷ್ಠಿರೇ – ಧರ್ಮರಾಜನಬಗ್ಗೆ, ಸ್ನೇಹವಶಾತ್ – ಪ್ರೀತಿಯಿಂದಾಗಿ, ಅತ್ರ – ಇಲ್ಲಿಗೆ, ಸಮಾಯಯುಃ—ಬಂದರು, ತೇಷು ಆಗತೇಷು ಏವ—ಅವರು ಬರುತ್ತಿರುವಂತೆಯೇ, ತತ್ರ – ಅಲ್ಲಿ, ದೀನಾಃ ವಾಚಃ ನ—ದುಃಖದ [ನೆರಳುವ] ಧ್ವನಿ ಮಾತುಗಳು ಇರಲಿಲ್ಲ, ದುರ್ಗಂಧತಮಃ

ನಚ—ದುರ್ಗಂಧದಿಂದಕೂಡಿದ ಕತ್ತಲೆಯೂ [ದುರ್ಗಂಧವಾಗಲೀ ಕತ್ತಲೆಯಾಗಲೀ] ಇರಲಿಲ್ಲ, ತದಾ—ಆಗ, ಅಭ್ರಾಂತಚೇತಾಃ ಯುಧಿಷ್ಠಿರ:—ಮೋಹರಹಿತನಾದ ಧರ್ಮರಾಜನು, ಸ್ವರ್ಗೋತ್ತಮಂ ಸ್ಥಾನಂ– ಸ್ವರ್ಗಕ್ಕಿಂತಲೂ ಶ್ರೇಷ್ಠವಾದ ಸ್ಥಾನವನ್ನು, ಅಪಶ್ಯತ್—ನೋಡಿದನು. ॥ ೯೬ ॥

ಅಹಾತ್ರ ಧರ್ಮಃಪುನರಾತ್ಮಸದೃಶಃ ಪ್ರಕಾಶಯನ್ ಪಾಂಡುಸುತಾಭಿಧಂ ಸ್ವಮ್ ।
ಧರ್ಮಾದ್ವಿಶಿಷ್ಟಾ ಹಿ ಸದಾಽನೃಶಂಸತಾ ದೃಷ್ಟಾ ಚ ಸಾ ತ್ವಯ್ಯಧಿಕಾಶ್ರಿಶೋ ಮಯಾ ॥೯೭॥

ಅತ್ರ—ಈ ಸಂದರ್ಭದಲ್ಲಿ, ಧರ್ಮಃ—ಯಮದೇವರು, ಆತ್ಮಸದೃಶಃ – ತನ್ನ (ಅವತಾರದ) ಶುದ್ಧ ಕೀರ್ತಿಯನ್ನು, ಪ್ರಕಾಶಯನ್ ಸನ್—ಪ್ರಕಟಪಡಿಸುವವನಾಗಿ, ಪಾಂಡುಸುತಾಭಿಧಂ ಸ್ವಂ—ಪಾಂಡುರಾಜನ ಮಗ ಎಂದು ಹೆಸರುಳ್ಳ ತನ್ನದೇ ರೂಪನಾದ ಯುಧಿಷ್ಠಿರನನ್ನು ಕುರಿತು, ಅನೃಶಂಸತಾ—ದಯಾಲುತ್ವವು, ಧರ್ಮಾತ್—ಧರ್ಮಸಮೂಹಕ್ಕಿಂತ, ಸದಾ ವಿಶಿಷ್ಟಾ ಹಿ—ಯಾವಾಗಲೂ ಶ್ರೇಷ್ಠವಾದದ್ದೇ, ಸಾ–ಅಂಥ ದಯಾಲುತ್ವವು, ತ್ವಯಿ – ನಿನ್ನಲ್ಲಿ ಮಯಾ—ನನ್ನಿಂದ, ಅಧಿಕಾ—ಹೆಚ್ಚಾಗಿ, ತ್ರಿಶಃ—ಮೂರುಸಲ, ದೃಷ್ಟಾ—ನೋಡಲ್ಪಟ್ಟಿದೆ. ॥೯೭॥

ಶಕ್ರೋಽಪ್ಯವಾಜೈಸಮಿದಂ ಮೃಷಾ ತೇ ಪ್ರದರ್ಶಿತಂ ದ್ರೋಣಕೃತೇ ಮೃಷಾಗಿರ : ।
ಕೃಚ್ಛ್ರಾದಿದಂ ತೇ ಕಥಿತಂ ನ ಚಾತಿವಿಸ್ರಂಭ ಆಸೀತ್ ತವ ಕೃಷ್ಣವಾಕ್ಯೇ ॥೯೮॥

ದ್ರೋಣಕೃತೇ—ದ್ರೋಣಾಚಾರ್ಯರ ವಧಕ್ಕಾಗಿ, ಮೃಷಾಗಿರಃ—ಸುಳ್ಳು ಮಾತಾಡಿದ, ತೇ—ನಿನಗೆ, ಇದಂ—ಈ ದುಃಖದ ದೃಶ್ಯವು, ಮೃಷಾ—ಅಸತ್ಯವಾಗಿ,ಪ್ರದರ್ಶಿತಂ—ತೋರಿಸಲ್ಪಟ್ಟಿತು, ಇತಿ-ಎಂದು, ಏನಂ— ಈ ಧರ್ಮರಾಜನನ್ನು ಕುರಿತು, ಶಕ್ರಃ ಅಪಿ–ದೇವೇಂದ್ರನೂಕೂಡ, ಉವಾಚ–ಹೇಳಿದನು. **ಅವತಾರಿಕೆ** :—ಶ್ರೀಕೃಷ್ಣನು ಹೇಳಿದಂತೆ ನಾನು ಹೇಳಿರುವೆ; ಅಂದಮೇಲೆ ನಾನು ಸುಳ್ಳು ಮಾತಾಡಿದಂತೆ ಆಗಿಲ್ಲವಲ್ಲ ಎಂದರೆ ಮುಂದಿನ ವಾಕ್ಯದಿಂದ ಹೇಳುತ್ತಿದ್ದಾರೆ — ಇದಂ– ಶ್ರೀಕೃಷ್ಣನುಹೇಳಿದ ಮಾತು, ತೇ– ನಿನ್ನಿಂದ, ಕೃಚ್ಛ್ರಾತ್—ಕಷ್ಟದಿಂದ,ಕಥಿತಂ – ಹೇಳಲ್ಪಟ್ಟಿತು. ಶ್ರೀಕೃಷ್ಣಪರಮಾತ್ಮನು ಹೇಳು ಎಂದ ಕೂಡಲೇ ಹೇಳಲಿಲ್ಲ; ಸಂಶಯದಿಂದ ಹೇಳಿದಿ) ಕೃಷ್ಣವಾಕ್ಯೇ – ಶ್ರೀಕೃಷ್ಣನ ಮಾತಿನಲ್ಲಿ, ತವ–ನಿನಗೆ ಅತಿವಿಸ್ರಂಭ:—ಅಷ್ಟೊಂದು ದೃಢವಿಶ್ವಾಸವು, ನಚ ಆಸೀತ್—ಇರಲಿಲ್ಲ. ॥೯೮॥

ನಹ್ಯಾಜ್ಞಯಾ ವಾಸುದೇವಸ್ಯ ಕಿಂಚಿತ್ಪಾಪಂ ಭವೇತ್ ಸರ್ವವಿಧರ್ಮಿಣೋಽಪಿ ।
ಬ್ರಹ್ಮಾಪರೋಕ್ಷೇಽಪಿ ವಿಕರ್ಮ ಸೂಚಕಂ ಪ್ರಾರಬ್ಧಪಾಪಸ್ಯ ವಿಷಾಶನಂ ಯಥಾ ॥೯೯॥

ವಾಸುದೇವಸ್ಯ ಆಜ್ಞಯಾ—ಶ್ರೀಕೃಷ್ಣನ ಅಪ್ಪಣೆಯ ಪ್ರಕಾರ, ಸರ್ವ ವಿಧರ್ಮಿಣಃ ಅಪಿ—ಎಲ್ಲ ತರಹದ ಅಧರ್ಮಗಳನ್ನು ಮಾಡಿದವನಿಗೂ ಕೂಡ, ಕಿಂಚಿತ್ ಪಾಪಂ—ಸ್ವಲ್ಪ ಪಾಪವೂಕೂಡ, ನಹಿ ಭವೇತ್—ಬರಲಾರದು. **ಅವತಾರಿಕೆ** :— ಅಪರೋಕ್ಷ ಜ್ಞಾನಿಗಳಿಗೆ ಪಾಪಲೇಪವಿಲ್ಲ; ಆದ್ದರಿಂದ ಅಪರೋಕ್ಷ ಜ್ಞಾನಿಯಾದ ದೇವಾಂಶನಾದ ಧರ್ಮರಾಜನಿಗೆ ಪಾಪವು ಹೇಗೆ ಹತ್ತಿತು, ಅಂದರೆ ಆದಕ್ಕೆ ಉತ್ತರವನ್ನು ಬ್ರಹ್ಮಾಪರೋಕ್ಷೇಽಪಿ ಎಂಬ ಪಂಕ್ತಿಯಿಂದ ಹೇಳಿದ್ದಾರೆ. ಬ್ರಹ್ಮಾಪರೋಕ್ಷೇಽಪಿ—ಬ್ರಹ್ಮಾಪರೋಕ್ಷಜ್ಞಾನವಾಗಿದ್ದರೂಕೂಡ, ವಿಕರ್ಮ—ಅವರಿಂದ ನಡೆದ ಪಾಪಕಾರ್ಯವು. ಪ್ರಾರಬ್ಧಪಾಪಸ್ಯ ಸೂಚಕಂ—ಪ್ರಾರಬ್ಧ ಪಾಪವಿದೆ ಎಂಬುದರ ಸೂಚಕವು, ಯಥಾ—ಹೇಗೆ, ವಿಷಾಶನಂ—ವಿಷಭಕ್ಷಣವು, ಮರಣಕ್ಕೆ ಕಾರಣವಾದ ಪ್ರಾರಬ್ಧ ಪಾಪಕರ್ಮವಿದೆ ಎಂಬುದಕ್ಕೆ ಸೂಚಕವೋ (ವಿಷಭಕ್ಷಣವೇ ಮರಣಕ್ಕೆ ಕಾರಣವಲ್ಲ. ಏಕೆಂದರೆ ವಿಷಭಕ್ಷಣವಾದರೂ ಒಬ್ಬೊಮ್ಮೆ ಬದುಕಿದವರ ನಿದರ್ಶನಗಳಿವೆ) ಅದೇ ರೀತಿ ಧರ್ಮರಾಜನಿಗೆ ಈ ರೀತಿ ದು:ಖವಾಗುವ ಪ್ರಾರಬ್ಧಕರ್ಮವಿತ್ತು. ಅದರ ಸೂಚಕವು ಈಗ ಧರ್ಮರಾಜನು ಮಾಡಿದ ಶ್ರೀಕೃಷ್ಣವಾಕ್ಯದಲ್ಲಿ ಅವಿಶ್ವಾಸ ಕಾರ್ಯವು ಎಂದು ತಿಳಿಯಬೇಕು. ॥೯೯॥

ಭಾವಾನುವಾದ—೭೮ ೯೯

ಇತರ ಪಾಂಡವರು ಹೀಗೆ ತಮ್ಮ ದೇಹವನ್ನು ಬಿಟ್ಟು ತಮ್ಮ ಲೋಕಗಳಿಗೆ ಹೋದ ಮೇಲೆ ಧರ್ಮರಾಜನು ದೇಹಸಹಿತವಾಗಿಯೇ ಮುಂದೆ ಹೋಗುತ್ತಿದ್ದನು. ಆಗ ಅವನೆದುರಿಗೆ ದೇವತಾರಥವು ಇಳಿದು ಬಂತು. ರಥದಲ್ಲಿರುವವನು ಧರ್ಮರಾಜನಿಗೆ ಈ ರಥವನ್ನು ಏರಿ ಸ್ವರ್ಗಕ್ಕೆ ನಡೆ ಎಂದು ಅಂದನು. ಆದರೆ ಧರ್ಮರಾಜನು ಈ ನಾಯಿಯನ್ನು ಬಿಟ್ಟು ನಾನು ಏರಲಾರೆ; ಮೊದಲು ಅದು ಏರಲಿ; ನಂತರ ನಾನು ಎಂದನು. ರಥಿಕನು ಇದು ಸರಿಯಲ್ಲ; ನೀನು ಏರು ಅಂದನು.ಅದಕ್ಕೆ ಧರ್ಮರಾಜನು ಅದು ಶಕ್ಯವೇ ಇಲ್ಲ; ಆ ಶ್ವಾನವು ಹತ್ತದ ಹೊರತು ನಾನು ಏರುವದೇ ಇಲ್ಲ ಎಂದು ದೃಢವಾಗಿ ಹೇಳಿದಾಗ ಧರ್ಮರಾಜನ ದಯಾಗುಣವನ್ನು ಪ್ರಕಟಪಡಿಸುವದಕ್ಕಾಗಿಯೇ ಆ ರೀತಿ ಶ್ವಾನರೂಪವನ್ನು ತೆಗೆದುಕೊಂಡು ಬಂದ ಯಮಧರ್ಮನು ತನ್ನ ರೂಪವನ್ನು ತೋರಿಸಿದನು. ನಂತರ ರಥವನ್ನು ಏರಿದನು. ಅದರಿಂದ ಉತ್ತರದಿಕ್ಕಿನಲ್ಲಿ ಒಂದು ಲೋಕದಿಂದ ಇನ್ನೊಂದು ಲೋಕ- ಹೀಗೆ ದಾಟುತ್ತಾ ಇಂದ್ರದೇವರಿಂದ ಲೀಲೆಗಾಗಿ ನಿರ್ಮಿತವಾದ ಲೋಕಕ್ಕೆ ಬಂದನು, ಅಲ್ಲಿಗೆ ಬಂದ ಮೇಲೆ ಆ ರಥಿಕನು ಮತ್ತು ಅಲ್ಲಿರುವ ದೇವತೆಗಳು ಇದೇ ನಿನ್ನ ಲೋಕವು; ಇಲ್ಲಿ ನೀನು ಇಳಿ ಎಂದರು. ಅಲ್ಲಿ ದುರ್ಯೋಧನನು ಎಲ್ಲರಿಗಿಂತ ಉತ್ತಮಸ್ಥಾನದಲ್ಲಿದ್ದದ್ದನ್ನು ಅವನ ಎಲ್ಲ ನೀಚ ಅನುಜರನ್ನೂ ಧರ್ಮರಾಜನು ನೋಡಿ ಬಹುಕ್ರುದ್ಧನಾಗಿ ಆ ದೃಶ್ಯವನ್ನು ನೋಡಲೂ ಕಷ್ಟವಾಗಿ ಒಮ್ಮೆಲೆ ಕಣ್ಣು ಮುಚ್ಚಿ ಕರ್ಣನೇ ಮೊದಲಾದ ನನ್ನ ಸಹೋದರರೆಲ್ಲಿ? ದ್ರೌಪದೀದೇವಿ ಎಲ್ಲಿ? ಧೃಷ್ಟದ್ಯುಮ್ನಭೀಷ್ಮಾದಿ ನನ್ನ ಬಾಂಧವರೆಲ್ಲಿ? ಘಟೋತ್ಕಚನೇ ಮೊದಲಾದ ನಮ್ಮ ಮಕ್ಕಳೆಲ್ಲಿ? ನಮ್ಮ ಯಾದವ ಬಾಂಧವರೆಲ್ಲಿ? ಎಂದು ಅಲ್ಲಿರುವ ದೇವತೆಗಳನ್ನು ಕೇಳಿದನು. ಅದಕ್ಕೆ ಅವರು 'ಅವರಿಂದ ನಿನಗೇನು ಆಗಬೇಕಾಗಿದೆ? ಅವರವರ ಕರ್ಮವನ್ನು ಅವರವರೇ ಅನುಭವಿಸುವರು. ಬೇರೆಯವರಲ್ಲ' ಎಂದು ಹೇಳಿದರು. ಆಗ ಧರ್ಮರಾಜನು 'ಇಡೀ ಭೂಮಿಯನ್ನೇ ನಾಶಮಾಡಿದ, ಎಲ್ಲರಲ್ಲೂ ಅವಿಶ್ವಾಸಮಾಡಿದ, ಮಿತ್ರದ್ರೋಹಿಯಾದ, ಭಗವದ್ದ್ವೇಷಿಯಾದ, ಭಗವದ್ಭಕ್ತರ ದ್ವೇಷಿಯಾದ, ಪರಮನೀಚನಾದ ಈ ದುರ್ಯೋಧನನು ಎಲ್ಲರಿಗಿಂತ ಉತ್ತಮವಾದ ಈ ಸ್ಥಾನವನ್ನು ಹೇಗೆ ಹೊಂದಿದನು? ಎಲ್ಲ ಧರ್ಮಗಳನ್ನು ತಿಳಿದು ಅದರಂತೆ ~~ಯಾವಾಗಲೂ ನಡಿದಿರುವ ನನ್ನ ಪ್ರಿಯ ಆ ಬಾಂಧವರು ಇಲ್ಲಿ ಯಾಕೆ ತೋರುವದಿಲ್ಲ? ಅವರೆಲ್ಲಿ ಇದ್ದಾರೋ~~ ಅಲ್ಲಿಯೇ ನಾನಿರಬೇಕು. ಅವರು ನರಕದಲ್ಲಿದ್ದರೂ ನಾನು ಅಲ್ಲೇ ಇರುವೆನು ಹೊರತು ಈ ಪಾಪಿಯ ಸಂಗಡ ಈ ಸ್ವರ್ಗವಲ್ಲಿರಲು ನನಗಿಷ್ಟವಿಲ್ಲ. ಬಹುಪರಾಕ್ರಮಿಯಾದ ಈ ದುರ್ಯೋಧನನಿಗೆ ಈ ಲೋಕವು ಯೋಗ್ಯವೆಂದಾದರೆ ಅವನಿರಲಿ. ನಾನು ಮಾತ್ರ ಅಲ್ಲಿಗೆ ಹೋಗಬೇಕು' ಎಂದು ಹೇಳಿದ, ತನ್ನವರನ್ನು ನೋಡುವ ಇಚ್ಛೆಯುಳ್ಳ ಧರ್ಮರಾಜನಿಗೆ ಅವರಿರುವ ಸ್ಥಳವನ್ನು ತೋರಿಸಲು ದೇವತೆಗಳು ಒಬ್ಬ ದೂತನನ್ನು ಕಳಿಸಿದರು. ಅವನು ಧರ್ಮರಾಜನನ್ನು ಕಲ್ಲು, ಮುಳ್ಳುಗಳಿಂದಕೂಡಿ ಬಹುಕಷ್ಟಕರವಾದ, ದುರ್ಗಂಧದಿಂದ ಅಸಹ್ಯವಾದ, ದಟ್ಟ ಅಂಧಕಾರದಿಂದ ತುಂಬಿರುವ ಮಾರ್ಗದಿಂದ ಕರಕೊಂಡು ಹೊರಟನು, ಸ್ವಲ್ಪ ದೂರಹೋಗುವಾಗ ಆ ದುರ್ಗಂಧವನ್ನು ಸಹಿಸದ ಧರ್ಮರಾಜನು ಅಲ್ಲಿಂದ ತಿರುಗಿ ಹೊರಡಲು ಇಚ್ಛಿಸಿದಾಗ ತನ್ನವರ ಧ್ವನಿಯಂತಿರುವ ಧ್ವನಿಯಲ್ಲಿ 'ರಾಜ, ಒಂದುಕ್ಷಣ ಇಲ್ಲೇ ನಿಲ್ಲು ಮಹಾರಾಯ; ಇಲ್ಲಿಯವರೆಗೆ ಅನುಭವಿಸಿದ ವೇದನೆ ಅಷ್ಟಿಷ್ಟಲ್ಲ; ಈಗ ನೀನು ಬಂದದ್ದರಿಂದ ಅಷ್ಟು ವೇದನೆಯಿಲ್ಲ; ಸ್ವಲ್ಪ ಕಡಿಮೆ ಇದೆ' ಎಂಬ ಮಾತುಗಳನ್ನು ಕೇಳಿ 'ನೀವು ಯಾರು'ಎಂದು ಕೇಳಿದನು. ಅದಕ್ಕೆ ಅವರು ಹೇಳಿದ'ನಾನು ಭೀಮನು, ನಾನು ಅರ್ಜುನನು, ನಾನು ಕರ್ಣನು ಇತ್ಯಾದಿ ಮಾತುಗಳನ್ನು ಕೇಳಿದನು. ಅದನ್ನು ಕೇಳಿದ ದಯಾಳುವಾದ ಧರ್ಮರಾಜನು ದೂತನಿಗೆ ನೀನು ಹೋಗು. ನಾನು ಇಲ್ಲಿಯೇ ಇರುವೆನು ಈ ದುಃಖದಲ್ಲಿರುವ ನನ್ನ ಜನರನ್ನು ಇಲ್ಲಿ ಬಿಟ್ಟ ಸ್ವರ್ಗ ನನಗೆ ಬೇಕಿಲ್ಲ ಎಂದು ಹೇಳಿದನು. ಆಗ ಇಂದ್ರಾದಿದೇವತೆಗಳು ಧರ್ಮರಾಜನ ಮೇಲಿನ ಸ್ನೇಹದಿಂದ ಬಂದರು. ಆಗ ಕತ್ತಲೆ, ದುರ್ಗಂಧಗಳಾವವೂ ಇಲ್ಲ, ಆ ದೀನ ಧ್ವನಿಗಳೂ ಇಲ್ಲ. ಸ್ವರ್ಗಪಂತಹ ಉತ್ತಮ ಸ್ಥಾನವನ್ನುಕಂಡನು. ಆಗ ಯಮಧರ್ಮನು ತನ್ನ ಅವತಾರಿ ಧರ್ಮರಾಜನನ್ನು ಕುರಿತು ನಿನ್ನಲ್ಲಿ ದಯಾಗುಣವನ್ನು 'ಮರುಸಲ ಕಂಡಿದ್ದೇನೆ. ಆ ಗುಣವು ಧರ್ಮ ಮಾರ್ಗಿಗಳಿಗೆ ಅವಶ್ಯವಾದ, ಶ್ರೇಷ್ಠವಾದ ಗುಣವು,' ಎಂದು ಹೇಳಿದನು. ಇಂದ್ರದೇವರೂಕೂಡ 'ದ್ರೋಣವಧದ ಸಂದರ್ಭದಲ್ಲಿ ಸುಳ್ಳು ಮಾತಾಡಿದ

ನಿನಗೆ ಈ ದು:ಖಪ್ರದರ್ಶನವು ಮಾಡಲ್ಪಟ್ಟಿತು. ಶ್ರೀಕೃಷ್ಣಪರಮಾತ್ಮನು ಅಶ್ವತ್ಥಾಮಾ ಹತಃ' ಎಂದು ಹೇಳು ಎಂದು ಹೇಳಿದರೆ ನೀನು ಹೇಳಲು ಹಿಂದು ಮುಂದು ಮಾಡಿದಿ; ಅವನ ಮಾತಿನಲ್ಲಿ ನಿನಗೆ ವಿಶ್ವಾಸವಿರಲಿಲ್ಲ. ಕಷ್ಟದಿಂದ ಹೇಳಿ ಮೆಲ್ಲನೆ ಕುಂಜರಃ ಎಂದು ಹೇಳಿದಿ. ಅದು ತಪ್ಪಾಯಿತು. ಶ್ರೀಕೃಷ್ಣಪರಮಾತ್ಮನ ಮಾತಿನಂತೆ ನಡೆದರೆ ಯಾವ ಪಾಪವೂ ಇಲ್ಲ. ಮೇಲೆ ನೋಡುವಾಗ ಅಧರ್ಮಪರವಾದ ಮಾತು ಎನಿಸಿದ್ದರೂ ಆ ಮಾತನ್ನು ನಡಿಸಿದರೂ ಕೂಡ ದೋಷವು ಇಲ್ಲ. ಹೀಗಾಗಿ ಶ್ರೀಕೃಷ್ಣನಮಾತಿನಲ್ಲಿ ಅವಿಶ್ವಾಸದ ಫಲವಾಗಿ ಈ ದುಖ:ವು ನಿನಗೆ ತೋರಿಸ್ಪಟ್ಟಿತು. ವಾಸ್ತವಿಕವಾಗಿ ಧರ್ಮರಾಜನು ದೇವಾವತಾರಿ; ದೇವತೆಗಳು ಬ್ರಹ್ಮಾಪರೋಕ್ಷಿಗಳು. ದೇವರ ಅಪರೋಕ್ಷಿಗಳಿಗೆ ಪಾಪಲೇಪವಿಲ್ಲ ಎಂದು ನಿರ್ಣೀತವಾದರೂ ಪ್ರಾರಬ್ಧ ಪಾಪಪುಣ್ಯಗಳು ಫಲ ಪ್ರದಗಳಾಗಿಯೇ ಆಗುವವು. ಆ ದು:ಖವಾಗುವ ಪ್ರಾರಬ್ಧ ಧರ್ಮರಾಜನಿಗಿತ್ತು ಎಂಬುದಕ್ಕೆ ಈ ಅವಿಶ್ವಾಸ ಕಾರ್ಯವು ಸೂಚಕವಾಯಿತು.

ಪಶ್ಯಾತ್ರ ಭೀಮಪ್ರಮುಖಾನ್ ಸುಖಸ್ಥಾನ್ ಸಂಪೂಜ್ಯಮಾನಾಂಸ್ತ್ರಿದಶೈಃ ಸುರೂಪಾನ್
ಕುತ: ಪರಬ್ರಹ್ಮದೃಶಾಂಸುಶುದ್ಧಸತ್ಕರ್ಮಣಾಂ ಕೃಷ್ಣಪರಾಯಣಾನಾಮ್
ಪರೇಣಯೋಗೇನ ವಿಸೃಷ್ಟತನ್ವಾಂ ದುಃಖಂ ಭವೇದ್ದೇವವರಾಧಿಪಾನಾಮ್ ॥೧೦೦।

ಎಲೋ ಧರ್ಮರಾಜನೇ, ಸುಖಸ್ಥಾನ್—ಸುಖದಲ್ಲಿರುವ, ತ್ರಿದಶೈಃ—ದೇವತೆಗಳಿಂದ, ಸಂಪೂಜ್ಯಮಾನಾನ್—ಪೂಜಿಸಲ್ಪಡತಕ್ಕ, ಸುರೂಪಾನ —ಬಹುಸುಂದರರಾದ, ಭೀಮಪ್ರಮುಖಾನ್ – ಭೀಮಸೇನದೇವರೇ ಮೊದಲಾಗಿವುಳ್ಳ ನಿನ್ನ ಬಂಧುಗಳನ್ನು, ಅತ್ರ—ಇಲ್ಲಿ, ಪಶ್ಯ—ನೋಡು, ಪರಬ್ರಹ್ಮದೃಶಾಂ – ಭಗವದ ಪರೋಕ್ಷಿಗಳಾದ, ಸುಶುದ್ಧಸತ್ಕರ್ಮಣಾಂ – ಶುದ್ಧ ಸತ್ಕರ್ಮಗಳುಳ್ಳ, ಕೃಷ್ಣಪರಾಯಣಾನಾಂ – ಶ್ರೀಕೃಷ್ಣಭಕ್ತರಾದ, ಪರೇಣ ಯೋಗೇನ–ಶ್ರೇಷ್ಠವಾದ ಯೋಗಮಾರ್ಗದಿಂದ, ವಿಸೃಷ್ಟತನ್ವಾಂ – ದೇಹವನ್ನು ಬಿಟ್ಟಂಥ, ದೇವವರಾಧಿಪಾನಾಂ – ಶ್ರೇಷ್ಠದೇವಾವತಾರಿಗಳಾದ ಅವರಿಗೆ, ಕುತಃ ದುಃಖಂ ಭವೇತ್–ಹೇಗೆ ದುಃಖವಾದೀತು? ॥೧೦೦॥

ಏತೇ ಹಿ ದೇವಪ್ರವರಾಃ ಪೃಥಿವ್ಯಾಂ ಜಾತಾ ಭುವೋ ಭಾರಜಿಹೀರ್ಷುಮೀಶಮ್।
ಪ್ರತೋಷ್ಯ ತದ್ಭಾವಿತಬುದ್ಧಿಕರ್ಮಭಿ:ಪುನಶ್ಚ ತೇನೈವ ಸಹಾऽಪಿರೇದಿವಮ್ ।೧೦೧।

ದೇವಪ್ರವರಾಃ ಏತೇ— ನಿನ್ನ ದೇವಶ್ರೇಷ್ಠರ ಅವತಾರರಾದ ಈ ಸದ್ಬಾಂಧವರು, ಪೃಥಿವ್ಯಾಂ ಜಾತಾ: ಸಂತಃ—ಭೂಲೋಕದಲ್ಲಿ ಜನಿಸಿದವರಾಗಿ, ಭುವಃಬಾರಂ—ಭೂಮಿಗೆ ಭಾರರಾದ ದೈತ್ಯರನ್ನು, ಜಿಹೀರ್ಷುಂ--ನಾಶವಾಡಲು ಇಚ್ಛಿಸಿದ ಭಗವಂತನನ್ನು, ತದ್ಭಾವಿತಬುದ್ಧಿಕರ್ಮಭಿ:—ಆ ಭಗವಂತನ ಅನುಸಂಧಾನ ಭಕ್ತಿಸಹಿತವಾದ, ಅವನಿಗೆ ಅರ್ಪಿತವಾದ ಜ್ಞಾನಕರ್ಮಗಳಿಂದ ಪ್ರತೋಷ್ಯ—ಸೇವಿಸಿ ಸಂತೋಷಪಡಿಸಿ, ಪುನಃ—ನಂತರ, ತೇನ ಸಹ ಏವ—ಅವನಿಂದ ಕೂಡಿಕೊಂಡೇ, ದಿವಂ ಅಪಿರೇ—ಉತ್ತಮ ಸ್ವರ್ಗ (ದೇವ) ಲೋಕವನ್ನೇ ಹೊಂದಿರುವರು. ಹಿ—ನಿಶ್ಚಯವು ॥೧೦೧॥.

ನ ತೇ ನೃಪಾದ್ಯಾಪಿ ಹಿ ಮಾನುಷೋ ಗತೋ ಭಾವಸ್ತತೋದ್ವೇಷ್ಟಿ ಸುಯೋಧನಾದೀನ್।
ನಿಮಜ್ಯತದ್ ವಿಷ್ಣುಪದೋದಕೇऽತ್ರ ವಿಸೃಜ್ಯದೇಹಂ ಭಜ ದೇವಭಾವಮ್ ॥೧೦೨॥

(ಹೇ) ನೃಪ—ಎಲೋ ಧರ್ಮರಾಜನೇ, ತೇ—ನಿನಗೆ, ಅದ್ಯ ಅಪಿ – ಇಂದಿಗೂ ಕೂಡ, ಮಾನುಷಃ ಭಾವ:—ಮನುಷ್ಯಸ್ವಭಾವವು, ನ ಗತಃ—ಹೋಗಿರುವದಿಲ್ಲ, ತತಃ ಹಿ—ಆದ್ದರಿಂದಲೇ, ಸುಯೋಧನಾದೀನ್ ದ್ವೇಷ್ಟಿ—ದುರ್ಯೋಧನಾದಿಗಳನ್ನು ದ್ವೇಷಿಸುತ್ತಿರುವಿ, ತತ್ – ಆದ್ದರಿಂದ, ಅತ್ರ ವಿಷ್ಣುಪದೋದಕೇ – ಇಲ್ಲಿರುವ ಗಂಗೆಯಲ್ಲಿ, ನಿಮಜ್ಯ—ಮುಳುಗಿಸ್ನಾನಮಾಡಿ, ದೇಹಂ ವಿಸೃಜ್ಯ—ದೇಹವನ್ನು ಬಿಟ್ಟು, ದೇವಭಾವಂ ಭಜ—ದೇವಸ್ವಭಾವವನ್ನು ಹೊಂದು ॥೧೦೨॥

ಸುಯೋಧನಾದ್ಯಾ ಯದಿಮೇ ಸುಪಾಪಾ ಆರಬ್ಧಕರ್ಮಕ್ಷಯಮಾಪ್ಯ ನಿತ್ಯೇ ।
ನಿಃಶೇಷ ಸೌಖ್ಯೋಜ್ಝಿತನಿತ್ಯದುಃಖೇಽವಶಾಃ ಪತಿಷ್ಯಂತ್ಯಪುನರ್ನಿವೃತ್ತಾಃ ॥೧೦೩॥

ಯತ್–ಯಾವಕಾರಣದಿಂದ, ಇಮೇ ಸುಯೋಧನಾದ್ಯಾಃ— ಈ ದುರ್ಯೋಧನಾದಿಗಳು, ಸುಪಾಪಾಃ– ಅತಿಪಾಪಿಗಳೋ, ತತ್–ಆ ಕಾರಣದಿಂದ, ಆರಬ್ಧಕರ್ಮಕ್ಷಯಂ ಆಪ್ಯ ಪ್ರಾರಬ್ಧಕರ್ಮನಾಶವನ್ನು ಹೊಂದಿ, ನಿತ್ಯೇ– ನಿತ್ಯವಾದ, ನಿಶ್ಶೇಷಸೌಖ್ಯೋಜ್ಝಿತ ನಿತ್ಯದುಃಖೇ–ಪೂರ್ಣಸುಖರಹಿತವಾದ, ನಿತ್ಯ ದುಃಖವುಳ್ಳ ತಮಸ್ಸಿನಲ್ಲಿ, ಅಪುನರ್ನಿವೃತ್ತಾಃ ಸಂತಃ–ತಿರುಗಿಬಾರದವರಾಗಿ, ಅವಶಾಃ ಸಂತಃ—ಭಗವದಧೀನರಾಗಿ, ಪತಿಷ್ಯಂತಿ–ಬೀಳುವರು. ॥೧೦೩॥

ದೇವಾಂಶಜಾ ಯೇ ತು ಸಮಸ್ತಶಸ್ತೇ ಸ್ವಮೂಲರೂಪಂ ಸಮವಾಪ್ಯ ಕಾಲೇ ।
ಸ್ವತಾರತಮ್ಯಾನುಸೃತಾಂ ವಿಮುಕ್ತಿಂ ಪ್ರಾಪ್ಸ್ಯಂತಿ ನಾತ್ರಾಪಿ ವಿಚಾರ್ಯಮಸ್ತಿ ॥೧೦೪॥

ಯೇ–ಯಾರು, ದೇವಾಂಶಜಾಃ— ದೇವಾವತಾರಿಗಳೋ, ತೇ ಸಮಸ್ತಶಃ—ಅವರೆಲ್ಲರೂ, ಕಾಲೇ–ತಮ್ಮ ಕರ್ಮತೀರಿದ ಸಮಯದಲ್ಲಿ, ಸ್ವಮೂಲರೂಪಂ—ತಮ್ಮ ಮೂಲರೂಪದ ಸಾಮೀಪ್ಯವನ್ನು, ಸಮವಾಪ್ಯ—ಹೊಂದಿ, ಕಾಲೇ– ಈ ಬ್ರಹ್ಮಕಲ್ಪದ ಅವಸಾನದ ಮೇಲೆ, ಸ್ವತಾರತಮ್ಯಾನುಸೃತಾಂ– ತಮ್ಮ ಯೋಗ್ಯತಾ ತಾರತಮ್ಯಕ್ಕೆ ಅನುಸಾರವಾದ, ವಿಮುಕ್ತಿಂ—ಮೋಕ್ಷವನ್ನು, ಪ್ರಾಪ್ಸ್ಯಂತಿ—ಹೊಂದುವರು, ಅತ್ರಾಪಿ–ಈವಿಷಯದ ಬಗ್ಗೆ ಕೂಡ, ವಿಚಾರ್ಯಂ ನ ಅಸ್ತಿ— ವಿಚಾರಣೀಯವಾದ (ಸಂದೇಹಾಸ್ಪವಾದ) ವಿಷಯವಿಲ್ಲ. ಅಂದರೆ ಇದು ನಿಶ್ಚಿತವಾದದ್ದು ಎಂದು ಅಭಿಪ್ರಾಯ. ॥೧೦೪॥

ಇತ್ಯುಕ್ತ ಆಶ್ವೇವ ನಿಮಜ್ಯ ಗಂಗಾಂ ಧರ್ಮಾತ್ಮಜಸ್ತಂ ಪ್ರವಿಸೃಜ್ಯ ದೇಹಮ್ ।
ಸದ್ಯೋ ಬಭೌ ದೈವಮವಾಪ್ಯ ಕಾಯಂ ವಿಸೃಷ್ಟದೋಷಾದಿಸಮಸ್ತದೋಷಃ ॥ ೧೦೫ ॥

ಇತಿ—ಈ ರೀತಿ, ಉಕ್ತಃ–ಇಂದ್ರದೇವರಿಂದ ಹೇಳಿಸಿಕೊಳ್ಳಲ್ಪಟ್ಟ, ಧರ್ಮಾತ್ಮಜಃ—ಧರ್ಮರಾಜನು, ಗಂಗಾಂ ನಿಮಜ್ಯ-ಗಂಗಾ ನದಿಯಲ್ಲಿ ಸ್ನಾನಮಾಡಿ, ದೇಹಂ ವಿಸೃಜ್ಯ–ಮಾನುಷ್ಯ ದೇಹವನ್ನು ಬಿಟ್ಟು, ಸದ್ಯಃ–ಕೂಡಲೇ, ದೈವಂ ಕಾಯಂ ಅವಾಪ್ಯ— ದೇವತಾ ದೇಹವನ್ನು ಹೊಂದಿ, ವಿಸೃಷ್ಟರೋಷಾದಿಸಮಸ್ತದೋಷಃ ಸನ್—ಕ್ರೋಧಾದಿ ದೋಷಗಳನ್ನೆಲ್ಲ ಬಿಟ್ಟವನಾಗಿ, ಬಭೌ—ಶೋಭಿಸಿದನು. ॥೧೦೫

ಸತು ಪ್ರಪಶ್ಯನ್ ಸ್ವಜನಂ ಸಮಸ್ತಂ ಸ್ವಮೂಲರೂಪಾತಿಸಮೀಪಸಂಸ್ಥಮ್ ।
ದದರ್ಶ ಭೀಮಂ ಚ ಮರುತ್ಸಮೀಪೇ ಮಧ್ಯೇಜ್ವಲಂತಂ ಮರುತಾಂ ಗಣಸ್ಯ ॥೧೦೬॥

ಸಃ ತು—ಆ ಧರ್ಮರಾಜನಾದರೂ, ಸಮಸ್ತಂ ಸ್ವಜನಂ— ತನ್ನ ಎಲ್ಲ ಬಂಧುಜನರನ್ನು, ಸ್ವಮೂಲರೂಪಾತಿಸಮೀಪಸಂಸ್ಥಂ–ತಮ್ಮ ತಮ್ಮ ಮೂಲರೂಪದ ಅತಿಹತ್ತಿರದಲ್ಲಿ ಇದ್ದವರನ್ನಾಗಿ, ಪ್ರಪಶ್ಯನ್ ಸನ್–ನೋಡಿದವನಾಗಿ, ಮರುಂತಾಂ ಗಣಸ್ಯ ಮಧ್ಯೇ—ಮರುದ್ಗಣದಮಧ್ಯದಲ್ಲಿ, ಮರುತ್ಸಮೀಪೇ— ಮುಖ್ಯಪ್ರಾಣದೇವರ ಹತ್ತಿರ, ಜ್ವಲಂತಂ ಭೀಮಂ ಚ—ಶೋಭಿಸುತ್ತಿದ್ದ ಶ್ರೀಭೀಮಸೇನದೇವರನ್ನೂ ಕೂಡ, ದದರ್ಶ— ನೋಡಿದನು. ॥೧೦೬॥

ದದರ್ಶ ಕೃಷ್ಣಾಮಪಿ ತತ್ಸಮೀಪೇ ಶ್ರಿಯಾಜ್ವಲಂತೀಂ ಸಮತೀತ್ಯ ಚಾನ್ಯಾಃ ।
ಸ್ಪೃಷ್ಟ್ವಂ ಚ ಸಂಸ್ಕಾರವಶಾದಿಯೇಷ ನಿಷಿದ್ಧ್ಯ ತಂ ಪ್ರಾಹ ಸುರಾಧಿರಾಜಃ ॥೧೦೭॥

ತತ್ಸಮೀಪೇ—ಆ ಭೀಮಸೇನದೇವರ ಸಮೀಪದಲ್ಲಿ, ಅನ್ಯಾಃ—ಉಳಿದ ಶ್ಯಾಮಲಾ, ಶಚೀ, ಉಷಸ್, ಪಾರ್ವತೀ ಇವರನ್ನು, ಸಮತೀತ್ಯ—ಪೂರ್ಣದಾಟಿ, ಅಂದರೆ ಅವರ ಅಂಶಗಳಿಂದ ರಹಿತರಾಗಿ, ಶ್ರಿಯಾ ಜ್ವಲಂತೀಂ—ಕಾಂತಿಯಿಂದ ಶೋಭಿಸುತ್ತಿರುವ, ಕೃಷ್ಣಾಂಅಪಿ—ದ್ರೌಪದೀದೇವಿಯನ್ನೂಕೂಡ, ದದರ್ಶ–ನೋಡಿದನು. ಚ – ಹಾಗೂ, ಸಂಸ್ಕಾರವಶಾತ್ – ಹಿಂದಿನ [ದ್ರೌಪದೀಪತಿಯಾಗಿರುವಾಗಿನ] ಅಭ್ಯಾಸದಿಂದಾಗಿ, ಸ್ಪ್ರಷ್ಟುಂಚ–ಅವಳನ್ನು ಮುಟ್ಟಲೂಕೂಡ, ಇಯೇಷ–ಇಚ್ಛಿಸಿದನು. [ಆಗ], ಸುರಾಧಿರಾಜಃ–ದೇವೇಂದ್ರನು, ತಂ–ಆ ಧರ್ಮರಾಜನನ್ನು, ನಿಷಿದ್ಯ – ತಡೆದು, ಪ್ರಾಹ – ಹೇಳಿದನು. ॥ ೧೦೭ ॥

ಏಷಾ ಹಿ ಸಾಕ್ಷಾಜ್ಜಗತಾಂ ಪ್ರಿಯಸ್ಯ ಪ್ರಾಣಾತ್ಮನೋ ಜೀವವರೇಶ್ವರಸ್ಯ ।
ಪ್ರಾಣಪ್ರಿಯಾ ಶ್ರೀರಿತಿ ನಾಮ ಯಸ್ಯಾಃ ಶಮಾತ್ಮಕೇಽಸ್ಮಿನ್ ರಮತೇ ಸದೈಷಾ ॥೧೦೮॥

ಏಷಾ–ಇವಳು, ಜೀವವರೇಶ್ವರಸ್ಯ—ಜೀವೋತ್ತಮರಾದ, ಜಗತಾಂ ಪ್ರಿಯಸ್ಯ—ಸಕಲ ಜಗತ್ತಿಗೂ ಪ್ರಿಯರಾದ [ಬದುಕಲು ಅವಶ್ಯಕರಾದ.] ಪ್ರಾಣಾತ್ಮನಃ—ಮುಖ್ಯಪ್ರಾಣದೇವರ, ಸಾಕ್ಷಾತ್ ಪ್ರಾಣಪ್ರಿಯಾ—ಮುಖ್ಯವಾಗಿ ಪ್ರಾಣಪ್ರಿಯಪತ್ನಿಯಾದ ಶ್ರೀಭಾರತೀದೇವಿಯು. ಯಸ್ಯಾಃ–ಯಾವಳಿಗೆ, ಶ್ರೀಃ ಇತಿ ನಾಮ–ಶ್ರೀಎಂಬ ಹೆಸರು ಇದೆಯೋ ಸಾ—ಅವಳು, ಶಮಾತ್ಮಕೇ--ಶಂರೂಪರಾದ ಸುಖರೂಪರಾದ, ಅಸ್ಮಿನ್ - ಈ ಮುಖ್ಯ ಪ್ರಾಣದೇವರಲ್ಲಿ, ಸದಾ ರಮತೇ—ಯಾವಾಗಲೂ ವಿಹರಿಸುತ್ತಾಳೆ (ಆದ್ದರಿಂದಲೇ ಶ್ರೀ ಎಂಬ ಹೆಸರು ಬಂದಿದೆ.) ॥೧೦೮॥

ಯುಷ್ಮಚ್ಚತುರ್ದೇಹಗತಸ್ಯ ವಾಯೋರ್ವಾಯುಪ್ರಿಯಾ ಭೀಮತನೋಸ್ತಥೈವ ।
ಭೋಗಾಯ ಸೃಷ್ಟಾ ಪುರುಹೋತ್ತಮೇನ ಯುಷ್ಮತ್ಪ್ರಿಯಾರ್ಥೇ ಭವತಾಂ ಚ ದಾರೈಃ ॥೧೦೯॥

ಯುಷ್ಮಚ್ಚತುರ್ದೇಹಗತಸ್ಯ—ನೀವು ನಾಲ್ಕುಮಂದಿ ಪಾಂಡವರಲ್ಲಿರುವ, ವಾಯೋಃ—ವಾಯುದೇವರ, ತಥಾ—ಹಾಗೂ, ಭೀಮತನೋಃ – ಭೀಮರೂಪರಾದ ವಾಯುದೇವರ; ಭೋಗಾಯ ಏವ – ಭೋಗಕ್ಕಾಗಿಯೇ, ಚ – ಮತ್ತು, ಯುಷ್ಮತ್ಪ್ರಿಯಾರ್ಥೇ – ನಿಮ್ಮ ಸಂತೋಷಕ್ಕಾಗಿ, ಭವತಾಂ ದಾರೈಃ ಯುಕ್ತಾ – ನಿಮ್ಮಹೆಂಡಂದಿರಿಂದ ಕೂಡಿದ, ವಾಯುಪ್ರಿಯಾ – ವಾಯುದೇವರ ಪತ್ನಿಯಾದ ಶ್ರೀಭಾರತೀದೇವಿಯು, ಪುರುಹೋತ್ತಮೇನ – ಶ್ರೀಹರಿಯಿಂದ, ಸೃಷ್ಟಾ–ಸೃಷ್ಟಿಸಲ್ಪಟ್ಟಿದ್ದಳು. ॥ ೧೦೯ ॥

ಪ್ರೀತಿಸ್ತತೋ ಹ್ಯಭ್ಯಧಿಕಾ ಬಭೂವ ಭೀಮಸ್ಯ ಚಾಸ್ಯಾಸ್ತದನು ಸ್ಮ ಪಾರ್ಥೇ ।
ತತೋ ಭವತ್ಸ್ವೇವ ಯಥಾಕ್ರಮೇಣ ಗುಣಾನುಸಾರೇಣ ಸಮೀರಣಸ್ಯ ॥ ೧೧೦ ॥

ತತಃ – ಆ ಕಾರಣದಿಂದ ಅಸ್ಯಾಃ – ಇವಳಿಗೆ, ಭೀಮಸ್ಯ – ಭೀಮರ ಬಗ್ಗೆ, ಅಭ್ಯಧಿಕಾ ಪ್ರೀತಿಃ ಬಭೂವ – ಎಲ್ಲರಿಗಿಂತ ಹೆಚ್ಚು ಪ್ರೀತಿ ಇತ್ತು, ತದನು —ಅದರ ನಂತರ, ಪಾರ್ಥೇ—ಅರ್ಜುನನಲ್ಲಿತ್ತು, ತತಃ—ಅದರನಂತರ, ಭವತ್ಸು ಯಥಾಕ್ರಮೇಣ ಏವ—ನಿಮ್ಮಮೂವರಲ್ಲಿ ತಾರತಮ್ಯಾನುಸಾರವಾಗಿಯೇ, ಸಮೀರಣಸ್ಯ ಗುಣಾನುಸಾರೇಣ—ವಾಯುದೇವರ ಸನ್ನಿಧಾನದತಾರತಮ್ಯಾನುಸಾರವಾಗಿಯೇ ಇತ್ತು. ॥ ೧೧೦ ॥

ಇದಾ ಹಿ ಸಾ ಶುದ್ಧತನುಃ ಪ್ರಜಾತಾ ಶಚ್ಯಾದಿಯೋಗಾಪಗತಾಗ್ರ್ಯದೇಹಾ ।
ಯೂಯಂ ಚ ಸರ್ವೇ ಮರುತೋ ವಿಶೇಷಸಂಯೋಗಹೀನಾಃ ಸ್ವಶರೀರಸಂಸ್ಥಾಃ ॥೧೧೧॥

ಇದಾ—ಈಗ, ಸಾ—ಆ ದ್ರೌಪದೀದೇವಿಯು, ಶಚ್ಯಾದಿಯೋಗಾಪಗತಾಗ್ರ್ಯದೇಹಾ ಸತೀ—ಶಚ್ಯಾದಿ ದೇವಸ್ತ್ರೀಯರ ಸಂಬಂಧದಿಂದ ರಹಿತವಾದ ಶ್ರೇಷ್ಠದೇಹವುಳ್ಳವಳಾಗಿ, ಶುದ್ಧತನುಃ—ಕೇವಲ ಭಾರತೀ ರೂಪಳು. ಪ್ರಜಾತಾ—ಆಗಿರುವಳು, ಚ—ಹಾಗು ಯೂಯಂ—ನೀವೂಕೂಡ, ಮರುತಃ ವಿಶೇಷಸಂಯೋಗಹೀನಾಃ ಸಂತಃ ಮುಖ್ಯಪ್ರಾಣದೇವರ ವಿಶೇಷಸನ್ನಿಧಾನದಿಂದ ರಹಿತರಾಗಿ, ಸ್ವಶರೀರಸಂಸ್ಥಾಃ—ನಿಮ್ಮ ಮೂಲರೂಪದಲ್ಲಿರುವವರು ಆಗಿರುವಿರಿ. ॥ ೧೧೧ ॥

ಸ್ಪರ್ಶೇऽಪಿ ಪಿ ನಾಸ್ಯಾಃ ಪವಮಾನ ಪತ್ನ್ಯಾಃ ಸುಪೂತತಾऽಲಂ ಭವತಾಮಿದಾನೀಮ್ ।
ನ ಚೋತ್ತರತ್ರಾಪಿ ಭವೇತ್ ಕಥಂಚಿದ್ ದಿವೌಕಸಾಂ ಮಾನುಷದೇಹಿನೋ ಯಥಾ ॥೧೧೨॥

ಇದಾನೀಂ—ಈಗ. ಭವತಾಂ—ನಿಮಗೆ, ಅಸ್ಯಾಃ ಪವಮಾನ ಪತ್ನ್ಯಾಃ— ವಾಯುಪತ್ನಿಯಾದ ಈ ಭಾರತೀದೇವಿಯ, ಸ್ಪರ್ಶೇ ಅಪಿ—ಸ್ಪರ್ಶ ಮಾಡುವದರಲ್ಲಿ ಕೂಡ, ಸುಪೂತತಾ—ಪಾವಿತ್ರ್ಯವು ಅರ್ಹತೆಯು, ನ ಅಲಂ —ಪೂರ್ಣವಾಗಿ ಇಲ್ಲ, ಯಥಾ—ಹೇಗೆ, ಮಾನುಷದೇಹಿನಃ—ಮನುಷ್ಯ ದೇಹದಲ್ಲಿರುವ ದೇವತೆಗೆ, ದಿವೌಕಸಾಂ ಸ್ಪರ್ಶೇ —ಮೂಲರೂಪೀ ದೇವತೆಗಳ ಸ್ಪರ್ಶ ಮಾಡುವ ಅರ್ಹತೆ ಇರುವದಿಲ್ಲವೋ ಹಾಗೆ ಇವಳ ಸ್ಪರ್ಶದ ಅರ್ಹತೆಯು ನಿಮಗೆ ಇಲ್ಲ. ಉತ್ತರತ್ರ ಅಪಿ—ಮುಂದೆಯೂ ಕೂಡ, ಕಥಂಚಿತ್ ನ ಭವೇತ್—ಯಾವ ರೀತಿಯಿಂದಲೂ ಅರ್ಹತೆಯು ಬರಲಾರದು ॥೧೧೨॥

ಇತೀರಿತಂ ತಂ ಪ್ರತಿಸನ್ನಿವೃತ್ತಂ ವಿನಾಶಯನ್ ಮಾನುಷವಾಸನಾಂ ಸ್ವಯಮ್ ।
ಸಮಾಶ್ಲಿಷಚ್ಛುದ್ಧತನುಃ ಸ್ತನೋತ್ಥೋ ಧರ್ಮೋ ಹರೇಃ ಸೋऽಭವದಾಶು ತತ್ಸಮಃ॥೧೧೩॥

ಇತಿ ಈರಿತಂ—ಈ ರೀತಿ ದೇವೇಂದ್ರನಿಂದ ಹೇಳಿಸಿಕೊಳ್ಳಲ್ಪಟ್ಟ, ಪ್ರತಿಸನ್ನಿವೃತ್ತಂ—ಭಾರತೀ ಸ್ಪರ್ಶ ಕಾರ್ಯದಿಂದ ಹಿಂದೆ ಸರಿದ, ತಂ–ಆ ಧರ್ಮರಾಜನನ್ನು, ಮಾನುಷವಾಸನಾಂ–ಅವನಲ್ಲಿರುವ ಮನುಷ್ಯ ಸಂಸ್ಕಾರವನ್ನು, ವಿನಾಶಯನ್ ಸನ್—ನಾಶಮಾಡುವ (ಇಚ್ಛೆಯುಳ್ಳವನಾಗಿ), ಹರೇಃಸ್ತನೋತ್ಥ;—ಆದಿಸೃಷ್ಟಿಯಲ್ಲಿ ಶ್ರೀ ಹರಿಯು ದಕ್ಷಿಣ ಸ್ತನದ ಚರ್ಮದಿಂದ ಹುಟ್ಟಿದ, ಸ್ವಯಂಧರ್ಮ:–ಧರ್ಮಪ್ರಜಾಪತಿಯ ಸಾಕ್ಷಾತ್‌ರೂಪನಾದ ಯಮನು, ಆಶು –ಕೂಡಲೇ ಸಮಾಶ್ಲಿಷತ್—ಆಲಿಂಗಿಸಿದನು. ಸಃ–ಆ ಧರ್ಮರಾಜನಾದರೂ, ಶುದ್ಧತನುಃ ಸನ್—ಮನುಷ್ಯಸಂಸ್ಕಾರ ರಹಿತವಾದ ಸ್ವರೂಪವುಳ್ಳವನಾಗಿ, ತತ್ಸಮಃ ಅಭವತ್—ಯಮ ಸದೃಶನೇ ಆದನು ॥೧೧೩॥

ತತಸ್ತು ಪಾರ್ಥಾ ಅಖಿಲಾಃ ಸ್ವಮೂಲರೂಪೈಃ ಸಹೈವಾವಿವಿಶುರ್ಮುದಾऽನ್ವಿತಾಃ ।
ಸ್ವೀಯಾನಿ ಧಾಮಾನಿ ತತೋऽಪ್ಯನೂನಭೋಗಾಃ ಸದಾ ಸನ್ನ್ಯವಸಂಶ್ಚ ತತ್ರ ॥೧೧೪॥

ತತಃ ತು–ಆ ನಂತರವೇ, ಅಖಿಲಾಃ ಪಾರ್ಥಾಃ— ಎಲ್ಲ ಪಾಂಡವರು, ಮುದಾ—ಸಂತೋಷದಿಂದ, ಸ್ವಮೂಲರೂಪೈಃ ಸಹ ಏವ–ತಮ್ಮ ತಮ್ಮ ಮೂಲ ರೂಪಗಳಿಂದ ಕೂಡಿಕೊಂಡೇ, ಸ್ವೀಯಾನಿ ಧಾಮಾನಿ,—ತಮ್ಮ ಮೂಲ ರೂಪದ ಸ್ಥಾನಗಳನ್ನು,ಅವಿವಿಶುಃ–ಪ್ರವೇಶಿಸಿದರು.ಚ-ಮತ್ತು, ತತಃ ಅನೂನಭೋಗಾಃಸಂತಃ— ಆ ಮೂಲ ರೂಪಕ್ಕಿಂತ ಕಡಿಮೆಯಿಲ್ಲದಷ್ಟು(ಸಮಾನ) ಭೋಗಗಳುಳ್ಳವರಾಗಿ, ತತ್ರ–ಆ ಸ್ಥಾನದಲ್ಲಿ, ಸದಾ,ಸನ್ಯವಸನ್–ಯಾವಾಗಲೂ ವಾಸಿಸಿದರು॥೧೧೪॥

ಭಾವಾನುವಾದ ೧೦೦—೧೧೪

ಇಂದ್ರದೇವರು ಧರ್ಮರಾಜನನ್ನು ಕುರಿತು ಮುಂದುವರಿದು ಇಲ್ಲಿ ನೋಡು; ನಿನ್ನ ಭೀಮಾದಿ ತಮ್ಮಂದಿರನ್ನು ಹಾಗು ಬಾಂಧವರನ್ನು ನೋಡು, ದೇವತೆಗಳಿಂದಲೂ ಪೂಜಿತರಾಗಿ ಸುಖವಾಗಿದ್ದಾರೆ ನೋಡು. ಸದಾ ಶ್ರೀಕೃಷ್ಣಭಕ್ತರಾದ, ಶುದ್ಧಸತ್ಕರ್ಮತತ್ಪರರಾದ, ಭಗವದಪರೋಕ್ಷಿಗಳಾದ, ಧ್ಯಾನಯೋಗದಿಂದ ದೇಹವನ್ನು ತ್ಯಜಿಸಿದ ಇವರಿಗೆ ದುಃಖ ಹೇಗೆ ಆದಿತು? ಇವರು ದೇವತೆಗಳು: ಭೂ ಭಾರರಾದ ದೈತ್ಯರ ಸಂಹಾರ ಕಾರ್ಯಮಾಡಲು ಇಚ್ಛೆಯುಳ್ಳ ಭಗವಂತನ ಸೇವಾಕಾಂಕ್ಷಿಗಳಾಗಿ ಭೂಮಿಯಲ್ಲಿ ಹುಟ್ಟಿಬಂದು ಆ ರೀತಿ ಕಾರ್ಯಮಾಡಿ ದೇವರನ್ನು ಸಂತೋಷಪಡಿಸಿ ದೇವರು ಭೂಮಿಯನ್ನು ತ್ಯಜಿಸಿದ ನಂತರ ಇವರೂ ತ್ಯಜಿಸಿ ತಮ್ಮ ಲೋಕಗಳಿಗೆ ಬಂದರು. ಧರ್ಮರಾಜ, ನಿನಗೆ ಮಾತ್ರ ಇನ್ನೂ ಮಾನುಷ್ಯಸ್ವಭಾವವು ಹೋಗಲಿಲ್ಲ, ಆದ್ದರಿಂದ ದುರ್ಯೋಧನಾದಿಗಳನ್ನು ದ್ವೇಷಿಸುವಿ.

[ವಿಶೇಷಾಂಶ :— ದುರ್ಯೋಧನಾದಿ ದುರ್ಜನರನ್ನು ದ್ವೇಷಿಸುವದು ಮನುಷ್ಯಸಭಾವ ಎಂಬುದರ ಅರ್ಥವೇನೆಂದರೆ–ವಾಸ್ತವಿಕವಾಗಿ ಅವರನ್ನು ದ್ವೇಷಿಸುವದು ಗುಣವೇ. ಆದರೆ ಇವರು ಭಗವದ್ದ್ವೇಷಿಗಳು ಎಂಬ ದೃಷ್ಟಿಯಿಂದ ದ್ವೇಷಿಸುವದು ಗುಣವು; ಆದರೆ ಇವನು ನಮ್ಮ ರಾಜ್ಯವನ್ನು ಕಸಿದವನು; ನನಗೆ ಅಪಕಾರ ಮಾಡಿದವನು ಎಂಬ ದೃಷ್ಟಿಯಿಂದ ದ್ವೇಷಿಸುವದು ಮಾನುಷಸ್ವಭಾವವಾಗುವದು.]

ಆದ್ದರಿಂದ ಈ ಗಂಗೆಯಲ್ಲಿ ಮುಣುಗಿಸ್ನಾನಮಾಡಿ ದೇಹವನ್ನು ಬಿಡು, ದೇವಸ್ವಭಾವವನ್ನು ಹೊಂದು, ದುರ್ಯೋಧನಾದಿಗಳು ಸುಖವಾಗಿದ್ದದ್ದು ಅವರ ಪ್ರಾರಬ್ಧಕರ್ಮಫಲವಾಗಿ ಹೊರತು ಕಾಯಂ ಹೀಗಿರುವದಿಲ್ಲ. ಇವರು ಪರಮ ತಾಮಸಿಗಳು; ಪಾಪಿಗಳು. ಆದ್ದರಿಂದ ಪ್ರಾರಬ್ಧಕರ್ಮ ತೀರಿದಕೂಡಲೇ ಎಂದೆಂದೂ ತಿರುಗಿ ಬಾರದ ಸದಾ ದುಃಖದಿಂದ ಕೂಡಿದ, ಸುಖಲೇಶವೂ ಇಲ್ಲದ ನಿತ್ಯನರಕದಲ್ಲಿ ಬೀಳುವರು ಎಲ್ಲ ದೇವಾವತಾರಿಗಳು ಪ್ರಾರಬ್ಧಕರ್ಮತೀರಿದ ಮೇಲೆ ತಮ್ಮ ತಮ್ಮ ಲೋಕಗಳಿಗೆ ಹೋಗಿ ಮೋಕ್ಷಕಾಲವು ಬಂದಾಗ ತಮ್ಮ ಮೂಲರೂಪದ ಐಕ್ಯವನ್ನು ಹೊಂದಿ, ತಾರತಮ್ಯಾನುಸಾರವಾದ ಮೋಕ್ಷ ಸುಖವನ್ನು ಹೊಂದುವರು. ಈ ಎಲ್ಲ ವಿಷಯಗಳು ಪ್ರಮಾಣಗಳಿಂದ ನಿಶ್ಚಿತವಾದವು; ಅದಕ್ಕಾಗಿ ಸಂಶಯಕ್ಕೆ ಅವಕಾಶವೇ ಇಲ್ಲ. ಎಂದು ಧರ್ಮರಾಜನಿಗೆ ಇಂದ್ರದೇವರು.

ಹೇಳಿದಾಗ ಧರ್ಮರಾಜನು ಗಂಗೆಯಲ್ಲಿ ಸ್ನಾನಮಾಡಿ ಮನುಷ್ಯದೇಹವನ್ನು ಬಿಟ್ಟು ಕ್ರೋಧಾದಿದೋಷರಹಿತನಾಗಿ ದೇವತಾದೇಹವನ್ನು ಹೊಂದಿದನು. ತನ್ನ ಅನುಜಾದಿ ಎಲ್ಲ ಬಾಂಧವರನ್ನು ತಮ್ಮ ತಮ್ಮ ಮೂಲರೂಪಗಳ ಸಮೀಪದಲ್ಲಿರುವದನ್ನು ನೋಡಿದನು. ವಿಶೇಷವಾಗಿ ಎಲ್ಲ ಮರುದ್ಗಣದಮಧ್ಯದಲ್ಲಿ ಮುಖ್ಯ ಪ್ರಾಣದೇವರ ಸಮೀಪದಲ್ಲಿ ಶೋಭಿಸುತ್ತಿರುವ ಶ್ರೀಭೀಮರನ್ನು; ಅವರ ಸಮೀಪದಲ್ಲಿ ಇತರ ಶಚ್ಯಾದಿ ದೇವತಾಸ್ತ್ರೀಯರಿಂದ ರಹಿತಳಾಗಿ ಕೇವಲ ಭಾರತೀರೂಪಳಾಗಿ ಶೋಭಿಸುವ ದ್ರೌಪದೀದೇವಿಯನ್ನೂ ನೋಡಿದನು. ಆಗ ಹಿಂದಿನ ಅಭ್ಯಾಸಬಲದಿಂದ ಅವಳನ್ನು ಮುಟ್ಟಲು ಹೊರಟಾಗ ಇಂದ್ರದೇವರು ಧರ್ಮರಾಜನನ್ನು ತಡೆದು ಇವಳು ನಿಮ್ಮ ಯಾರ ಪತ್ನಿ ದೇವತಾಸ್ತ್ರೀಯರಿಂದಲೂ ರಹಿತಳಾಗಿ ಕೇವಲ ಭಾರತೀ ರೂಪಳಿರುವಳು. ನೀವು ಭೂಮಿಯಲ್ಲಿರುವಾಗ ನಿಮ್ಮಲ್ಲಿರುವ ವಾಯುದೇವರ ಹಾಗು ಭೀಮರೂಪೀ ವಾಯುದೇವರ ಭೋಗಕ್ಕಾಗಿ ಹಾಗು ನಿಮ್ಮ ಭೋಗಕ್ಕಾಗಿ ನಿಮ್ಮ ಸ್ತ್ರೀಯರಿಂದ ಕೂಡಿದ ಭಾರತೀಯನ್ನು ದ್ರೌಪದೀಯನ್ನಾಗಿ ದೇವರೇ ಸೃಷ್ಟಿಸಿದ್ದನು. ಇವಳು ಈಗ ಕೇವಲ ಭಾರತಿಯು, ಕೇವಲ ವಾಯುದೇವರಿಗೇ ಸೀಮಿತಳು. ನಿಮಗೆ ಇವಳನ್ನು ಮುಟ್ಟುವ ಅರ್ಹತೆಯೂ ಇಲ್ಲ; ಎಂದೂ ಬರುವದಿಲ್ಲ. ಇವಳು ನಿಮ್ಮ ಸ್ತ್ರೀಯರಿಂದ ಕೂಡಿದಾಗ ನಿಮ್ಮಲ್ಲಿ ವಾಯುದೇವರ ಸನ್ನಿಧಾನವನ್ನು ನೋಡಿಕೊಂಡು ಆ ಪ್ರಕಾರ ತಾರತಮ್ಯದಿಂದ ನಿಮ್ಮನ್ನು ಪ್ರೀತಿಸಿದಳು ಎಂದು ಹೇಳಿದರು. ಆಗ ಧರ್ಮರಾಜನು ಆಕಾರ್ಯದಿಂದ ಹಿಂದೆ ಸರಿದನು. ಆವನ ಮೂಲರೂಪಿ ಧರ್ಮಪ್ರಜಾಪತಿಯು (ಯಮಧರ್ಮನು) ಅವನನ್ನು ಆಲಿಂಗಿಸಿದನು, ಆಗ ಶುದ್ಧ ದೇವಸ್ವಭಾವದವನಾಗಿ ಮೂಲರೂಪದಂತಾದನು. ಇತರ ಪಾಂಡವರು ತಮ್ಮ ತಮ್ಮ ಮೂಲರೂಪಗಳ ಜೊತೆಗೆ ವಿಕಾಸನದಲ್ಲಿದ್ದು ಅವರ ಸಮಾನ ಭೋಗವುಳ್ಳವರಾಗಿ ಸಂತೋಷದಿಂದ ಇದ್ದರು.

ತತ್ರಾಪಿ ಕೃಷ್ಣೇನ ಸಮಾಗಮೋಽಭೂತ್ ಪುರೇವ ತೇಷಾಮತಿತತ್ಪರಾಣಾಮ್ ।
ಚಿಕ್ರೀಡ ವಿಭಿಃಸಹಿತಸ್ತಥೈವ ಕೃಷ್ಣೋಪಿ ತದ್ವತ್ ಸರಥೋಽರ್ಜುನೇನ ॥೧೧೫॥

ತತ್ರ ಅಪಿ—ಆ ಲೋಕದಲ್ಲಿಯೂಕೂಡ, ಅತಿತತ್ಪರಾಣಾಂ—ಶ್ರೀಕೃಷ್ಣನಲ್ಲಿ ಅತ್ಯಾಸಕ್ತರಾದ, ತೇಷಾಂ—ಆ ಪಾಂಡವರಿಗೆ, ಪುರಾ ಇವ—ಮೊದಲಿ (ಭೂಮಿಯಲ್ಲಿರುವಾಗಿ)ನಂತೆ, ಕೃಷ್ಣೇನ—ಶ್ರೀಪರಮಾತ್ಮನ ಜೊತೆಗೆ, ಸಮಾಗಮಃ—ಮಿಲನವು, ಅಭೂತ್—ಆಗುತ್ತಿತ್ತು. ಕೃಷ್ಣಃಅಪಿ—ಶ್ರೀಕೃಷ್ಣಪರಮಾತ್ಮನೂ ಕೂಡ, ತಥಾ ಏವ—ಈ ಮೊದಲಿನಂತೆಯೇ, ವಿಭಿಃ—ಈ ಪಾಂಡವರಿಂದ ಕೂಡಿಕೊಂಡು, ಚಿಕ್ರೀಡ—ಕ್ರೀಡಿಸಿದನು. ತದ್ವತ್—ಮೊದಲಿನಂತೆ, ಸರಥಃಸನ್—ರಥದಿಂದ ಸಹಿತನಾಗಿ, ಅರ್ಜುನೇನ ಸಹ, ಚಿಕ್ರೀಡ—ಅರ್ಜುನನ ಜೊತೆಗೆ ವಿಹರಿಸಿದನು. ॥೧೧೫॥

ಅನ್ಯೇ ಚ ದೇವಾಂಶಭವಾಃಸಮಸ್ತಾಃಸ್ವಮೂಲರೂಪೈಕ್ಯಮವಾಪುರಾಶು ।
ಕರ್ಮಕ್ಷಯಾದೇವ ಸುರೇತರಾಸ್ತು ಪುಣ್ಯಕ್ಷಯಂ ಪ್ರಾಪ್ಯಭುವಿ ಪ್ರಜಾತಾಃ ॥೧೧೬॥

ಅನ್ಯೇ—ಪಾಂಡವರಿಂದ ಬೇರೆಯಾದ, ಸಮಸ್ತಾಃ ದೇವಾಂಶಭವಾಃ— ಎಲ್ಲ ದೇವಾಂಶಸಂಭೂತರಾದವರು, ಕರ್ಮಕ್ಷಯಾತ್ ಏವ—ತಮ್ಮ ತಮ್ಮ ಪ್ರಾರಂಬ್ಧಕರ್ಮನಾಶವಾದ ಕೂಡಲೇ, ಆಶು—ಬೇಗನೇ, ಸ್ವಮೂಲರೂಪೈಕ್ಯಂ—ತಮ್ಮ ತಮ್ಮ ಮೂಲರೂಪದ ಐಕ್ಯವನ್ನು, ಅವಾಪುಃ—ಹೊಂದಿದರು. ಸುರೇತರಾಃತು—ದೈತ್ಯಾಂಶರಾದವರು, ಪುಣ್ಯಕ್ಷಯಂ ಪ್ರಾಪ್ಯ—ಪುಣ್ಯದ ನಾಶವನ್ನು ಹೊಂದಿ, ಭುವಿ ಪ್ರಜಾತಾಃ—ಭೂಮಿಯಲ್ಲಿ ಮತ್ತೆ ಹುಟ್ಟಿದರು. ॥೧೧೬॥

ಅವತಾರಿಕೆ— ಆ ದೈತ್ಯರು ಯಾವಾಗ ಹುಟ್ಟಿದರು; ಹುಟ್ಟಿ ಏನು ಮಾಡಿದರು ಎಂಬುದನ್ನು ತಿಳಿಸುತ್ತಾರೆ—

ಚತುಃಸಹಸ್ರಂ ತ್ರಿಶತೋತ್ತರಂ ತೇ ಸಂವತ್ಸರಾಣಾಮನುಭೂಯ ದಿವ್ಯಾನ್ ।
ಭೋಗಾನ್ ನರತ್ವೇಽಪಿ ಸದೇಶ್ವರೋಽಹಮಿತಿ ಸದಾ ಧಿಯಾಽಪ್ನುವಂಸ್ತಮಃ ॥೧೧೭॥

ತೇ—ಆ ದೈತ್ಯರು, ಸಂವತ್ಸರಾಣಾಂ ಚತುಃಸಹಸ್ರಂ—ನಾಲ್ಕು ಸಹಸ್ರವರ್ಷಗಳ ಪರ್ಯಂತರಾವಾಗಿ, ದಿವ್ಯಾನ್‌ಭೋಗಾನ್—ಶ್ರೇಷ್ಠ ಸ್ವರ್ಗ ಭೋಗಗಳನ್ನು, [ವೀರ ಸ್ವರ್ಗದಲ್ಲಿ]; ಅನುಭೂಯ—ಅನುಭವಿಸಿ, ಪುಣ್ಯವನ್ನು ಮುಗಿಸಿ, ಭೂಮಿಯಲ್ಲಿ ಹುಟ್ಟಿದರು. ಎಂದು ಹಿಂದಕ್ಕೆ ಅನ್ವಯ.) ನರತ್ವೇಽಪಿ—ಇಲ್ಲಿ ಮನುಷ್ಯರಾಗಿ ಹುಟ್ಟಿದಾಗ ಕೂಡ, ಅಹಂ ಈಶ್ವರಃ—ನಾನು ದೇವರು, ಜಗತ್ ಅಸತ್—ಜಗತ್ತು ಮಿಥ್ಯಾ ಇತಿ—ಎಂಬ, ಸದಾ ಧಿಯಾ—ಯಾವಾಗಲೂ ಇರುವ ಬುದ್ಧಿ [ಅನುಸಂಧಾನದಿಂದ] ಸ್ವರೂಪ ಮಿಥ್ಯಾಜ್ಞಾನದಿಂದ, ತಮಃ, ಅಪ್ನುವನ್—ಅಂಧಂತಮಸ್ಸನ್ನು ಹೊಂದಲುಸಿದ್ಧರಾದರು. ॥೧೧೭॥

ದುಃಖೇಽಪಿ ತೇಷಾಮಿಹ ತಾರತಮ್ಯಂ ಕಲೇಃಪರಂ ದುಃಖಮಿಹಾಖಿಲಾಚ್ಚ ।
ಯಥಾ ವಿರಿಂಚಸ್ಯ ಸುಖಂ ಪರಂ ಸ್ಯಾನ್ಮುಕ್ತೌ ಹರಿದ್ವೇಷ ಕೃತೋ ವಿಶೇಷ: ॥೧೧೮॥

ಇಹ—ಈ ತಮಸ್ಸಿನಲ್ಲಿಯು, ದುಃಖೇ ಅಪಿ—ದುಃಖದಲ್ಲಿ ಕೂಡ ತಾರತಮ್ಯಂ [ಅಸ್ತಿ]—ತಾರತಮ್ಯವಿದೆ, ಯಥಾ—ಹೇಗೆ, ಮುಕ್ತೌ—ಮೋಕ್ಷದಲ್ಲಿ, ವಿರಿಂಚಸ್ಯ—ಬ್ರಹ್ಮದೇವರಿಗೆ, ಅಖಿಲಾತ್‌ಪರಂ ಸುಖಂ ಸ್ಯಾತ್—ಎಲ್ಲ ಮುಕ್ತರಿಗಿಂತ ಹೆಚ್ಚು ಸುಖವು ಇರುವದೋ, ತಥಾ—ಹಾಗೆ ಇಹ—ತಮೋದುಃಖಿವನ್ನು ಹೊಂದಿರುವ ಚೇತನರ

ಗುಂಪಿನಲ್ಲಿ, ಕಲೇಃ—ಕಲಿಗೆ, ಅಖಿಲಾತ್—ಉಳಿದೆಲ್ಲರಿಗಿಂತಲೂ, ಪರಂ ದುಃಖಂ—ಹೆಚ್ಚು ದುಃಖವು ಇರುವದು. ವಿಶೇಷಃ—ದುಃಖ ತಾರತಮ್ಯವು, ಹರಿದ್ವೇಷಕೃತಃ—ಶ್ರೀಹರಿಯದ್ವೇಷದತಾರತಮ್ಯಾನುಸಾರವಿರುವದು. ॥೧೧೮॥

ಕೇಚಿತ್ ಪಿಶಾಚಾಸುರರಾಕ್ಷಸತ್ವಮವಾಪ್ಯ ವಿಷ್ಣೋರಪಿ ತತ್ಪರಾಣಾಮ್।
ದ್ವೇಷಾತ್ ತಮೋಽಂಧಂ ತ್ವರಯಾ ಸಮಾಪ್ನುಯುರ್ದೇವಾಃ ಸ್ವಕಾಲೇ ನಿಜಯೋಗ್ಯಮುಕ್ತಿಮ್॥೧೧೯॥

ಕೇಚಿತ್—ಕೆಲವರು, ಪಿಶಾಚಾಸುರರಾಕ್ಷಸ ತ್ವಂ—ಪಿಶಾಚಿ, ಅಸುರ, ರಾಕ್ಷಸ ಜನ್ಮವನ್ನು, ಅವಾಪ್ಯ—ಹೊಂದಿ, ವಿಷ್ಣೋಃ—ಶ್ರೀಹರಿಯ, ಅಪಿ—ಹಾಗು, ತತ್ಪರಾಣಾಂ—ಅವನ (ಶ್ರೀಹರಿಯ) ಭಕ್ತರ, ದ್ವೇಷಾತ್—ದ್ವೇಷಪಸ್ನ ಮಾಡುವದರಿಂದ, ಅಂಧಂ ತಮಃ—ಅಂಧಂತಮಸ್ಸನ್ನು, ತ್ವರಯಾ ಸಮಾಪ್ನುಯುಃ—ಬೇಗನೇ ಹೊಂದುವರು. [ಹೊಂದಲು ಬೇಗ ಸಿದ್ಧರಾಗುವರು]. ದೇವಾಃ—ದೇವತೆಗಳು, ಸ್ವಕಾಲೇ—ತಮ್ಮ ಮುಕ್ತಿ ಕಾಲದಲ್ಲಿ, ನಿಜಯೋಗ್ಯಮುಕ್ತಿಂ-ತಮಗೆ ಯೋಗ್ಯವಾದ ಮುಕ್ತಿಯನ್ನು, ಸಮಾಪ್ನುಯುಃ—ಹೊಂದುವರು. ॥೧೧೯॥

ಚತುಃಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂತು ಕಲೌಪೃಥಿವ್ಯಾಮ್।
ಜಾತಃ ಪುನರ್ವಿಪ್ರತನುಃಸ ಭೀಮೋ ದೈತ್ಯೈರ್ನಿಗೂಢಂ ಹರಿತತ್ವಮಾಹ ॥೧೨೦॥

ಕಲೌ—ಕಲಿಯುಗದಲ್ಲಿ, ಸಂವತ್ಸರಾಣಾಂ ತ್ರಿಶತೋತ್ತರೇ ಚತುಃಸಹಸ್ರೇ—ಮೂರುನೂರರಿಂದ ಹೆಚ್ಚಾದ ನಾಲ್ಕು ಸಾವಿರ ವರ್ಷವು [ನಾಲ್ಕು ಸಾವಿರದಾ ಮೂರು ನೂರು ವರ್ಷಗಳು], ಗತೇ ಸತಿ—ಕಳೆಯುತ್ತಿರಲು, ಸಃ ಭೀಮಃ—ಭೀಮರಾಗಿ ಅವತರಿಸಿದ ವಾಯ್ವಂಶವೇ, ಪೃಥಿವ್ಯಾಂ—ಭೂಮಿಯಲ್ಲಿ, ವಿಪ್ರತನುಃ ಜಾತಃಸನ್—ಬ್ರಾಹ್ಮಣನಾಗಿ ಹುಟ್ಟಿದವನಾಗಿ, ದೈತ್ಯೈಃ ನಿಗೂಢಂ—ದೈತ್ಯರಿಂದ ಮುಚ್ಚಲ್ಪಟ್ಟ, ಹರಿತತ್ವಂ—ಶ್ರೀಹರಿಸ್ವರೂಪದ ಬಗ್ಗೆ, ಆಹ—ಸರಿಯಾಗಿ [ಸಜ್ಜನರಿಗೆ] ಹೇಳಿದರು. ॥೧೨೦॥

ತದೈವ ಕೃಷ್ಣಾಽಪಿ ಭುವಿ ಪ್ರಜಾತಾ ಪ್ರೀತ್ಯೈ ಹರೇರಂಧತಮಸ್ಯಪಾತಯತ್।
ಮಹಾಸುರಾನ್ ವಿಷ್ಣುಪರಾರ್ಜುನಾದ್ಯಾಃ ಕೃತೇ ಪ್ರಜಾತಾ ಹರಿತೋಷಣಾಯ ।
ಪುನಶ್ಚ ತೇ ಸ್ಥಾನಮವಾಪ್ಯ ಸರ್ವೇ ಸ್ವೀಯಂ ಪರಾಂತೇ ತು ವಿಮುಕ್ತಿಮಾಪ್ನುಯುಃ ॥೧೨೧॥

ತದಾ ಏವ—ಭೀಮರು ಭೂಮಿಯಲ್ಲಿ ಬ್ರಾಹ್ಮಣರಾಗಿ ಅವತರಿಸಿದ ಕಾಲದಲ್ಲಿಯೇ, ಕೃಷ್ಣಾ ಅಪಿ—ದ್ರೌಪದೀದೇವಿಯೂ ಕೂಡ, ಹರೇಃಪ್ರೀತ್ಯೈ—ಶ್ರೀಹರಿಯ ಪ್ರೀತಿಗಾಗಿ, ಭುವಿ ಪ್ರಜಾತಾ ಸತೀ—ಭೂಮಿಯಲ್ಲಿ ಅವತರಿಸಿದವಳಾಗಿ, ಮಹಾಸುರಾನ್—ದೊಡ್ಡ ದೊಡ್ಡ ರಾಕ್ಷಸರನ್ನು, ಅಂಧತಮಸಿ—ಅಂಧಂತಮಸ್ಸಿನಲ್ಲಿ, ಅಪಾತಯತ್—ಕೆಡವಿದಳು, [ಬೀಳುವಂತೆ ಮಾಡಿದಳ.) ಸರ್ವೇ ತೇ ವಿಷ್ಣುಪರಾರ್ಜುನಾದ್ಯಾಃ—ವಿಷ್ಣುಭಕ್ತರಾದ ಅರ್ಜುನಾದಿಗಳೆಲ್ಲರು, ಕೃತೇ—[ಈ ೨೮ನೆಯ ಕಲಿಯುಗ ಮುಗಿದ ಮೇಲೆ ಬರುವ] ೨೯ನೆಯ ಕೃತಯುಗದಲ್ಲಿ, ಹರಿತೋಷಣಾಯ—ಶ್ರೀಹರಿಯ ಸೇವಾಮಾಡಿ ಸಂತೋಷಪಡಿಸುವದಕ್ಕಾಗಿ, ಪುನಃ ಚ—ಮತ್ತೆ ಕೂಡ, ಪ್ರಜಾತಾಃ ಸಂತಃ—ಭೂಮಿಯಲ್ಲಿ ಹುಟ್ಟಿದವರಾಗಿ, (ಸೇವಾಮಾಡಿ). ಪುನಃ—ಸ್ಥಾನಂ ಅವಾಪ್ಯ—ಮತ್ತೆ ತಮ್ಮ ಸ್ಥಾನವನ್ನು ಹೊಂದಿ, ಪರಾಂತೇತು—ಬ್ರಹ್ಮದೇವರ ಆಯುಷ್ಯದ ಕೊನೆಯಲ್ಲಿಯೇ—ವಿಮುಕ್ತಿಂ, ಅಪ್ನುಯುಃ—ಮೋಕ್ಷವನ್ನು ಹೊಂದುವರು. ॥೧೨೧॥

ವಾಯುತ್ವಮಾಪ್ತಃಸ ಹನೂಮದಂಶೋ ಬ್ರಾಹ್ಮಂ ಪದಂ ಪ್ರಾಪ್ಯ ವೃಕೋದರಶ್ಚ ।
ವಾಗೀಶ್ವರೀತ್ವಂ ಗತಯೈವ ಕೃಷ್ಣಯಾ ಸಹೈವ ಮುಕ್ತಿಂ ಗಮಿತಾಽಖಿಲೋತ್ತಮಾವಮ್ ॥೧೨೨॥

ಸ: ಹನೂಮದಂಶ;—ಆ ಹನುಮಂತದೇವರು, ಚ—ಮತ್ತು, ವೃಕೋದರಃ—ಆ ಭೀಮಸೇನದೇವರು, ವಾಯುತ್ವಂ ಆಪ್ತ: ಸನ್—ವಾಯುದೇವರ ಸ್ವರೂಪವನ್ನು ಹೊಂದಿದವರಾಗಿ, (ಮುಂದಿನ ಕಲ್ಪದಲ್ಲಿ) ಬ್ರಾಹ್ಮಂ ಪದಂ ಪ್ರಾಪ್ಯ—ಬ್ರಹ್ಮಪದವಿಯನ್ನು ಹೊಂದಿ,(ಆ ಕಲ್ಪದ ಕೊನೆಯಲ್ಲಿ), ವಾಗಿಶ್ವರೀತ್ವಂ ಗತಯಾ-(ಆ ಕಲ್ಪದಲ್ಲಿ) ಸರಸ್ವತೀರೂಪವನ್ನು ಹೊಂದಿದ, ಕೃಷ್ಣಯಾ ಸಹ ಏವ-ಈಗ ದ್ರೌಪದಿಯಾಗಿಅವತರಿಸಿದ ಭಾರತೀದೇವಿಯಿಂದ ಕೂಡಿ ಕೊಂಡೇ, ಅಖಿಲೋತ್ತಮಾಂ—ಎಲ್ಲರಿಗಿಂತ ಹೆಚ್ಚಾದ ಆನಂದದಿಂದ ಕೂಡಿದ(ಆದ್ದರಿಂದ ಶ್ರೇಷ್ಠವಾದ), ಮುಕ್ತಿಂ—ಸಾಯುಜ್ಯ ಮೋಕ್ಷವನ್ನು, ಗಮಿತಾ – ಹೊಂದುವರು. ॥೧೨೨॥

ಭುವಿ ದ್ಯುಲೋಕೇ ಚ ವಿರಿಂಚತಾಯಾಂ ಮುಕ್ತೌ ಚ ತಾಭ್ಯಾಮುಧಿಕಂ ಸಮುಸ್ತಾತ್ ।
ಸಂತೋಷ್ಯತೇ ಪೂರ್ಣಗುಣೋ ರಮೇಶಃ ಸದೈವ ನಿತ್ಯೋರ್ಜಿತತದ್ಭಕ್ತಿಭಾಗ್ಯೈಃ ॥೧೨೩॥

ಸದಾ ಏವ—ಯಾವಾಗಲೂ, ನಿತ್ಯೋರ್ಜಿತತದ್ಭಕ್ತಿಭಾಗ್ಯೈಃ—ಅವಿಚ್ಛಿನ್ನವಾದ, ಉತ್ಕೃಷ್ಟವಾದ ಶ್ರೀಹರಿ ಭಕ್ತಿಯುಳ್ಳ; ತಾಭ್ಯಾಂ—ಆ ಭಾರತೀ ಹಾಗೂ ವಾಯುದೇವರಿಬ್ಬರಿಂದ, ಭುವಿ—ಭೂಮಿಯಲ್ಲಿ ಹನುಮಂತ ಮೊದಲಾದ ಅವತಾರಗಳ ಸಮಯದಲ್ಲಾಗಲಿ, ದ್ಯುಲೋಕೇ—ತಮ್ಮಲೋಕದಲ್ಲಿ ಮೂಲರೂಪದಲ್ಲಿರುವಾಗಲಿ, ವಿರಿಂಚತಾಯಾಂ—ಬ್ರಹ್ಮಸರಸ್ವತೀಪದವನ್ನು ಹೊಂದಿದಾಗ ಆಗಲಿ, ಚ—ಮತ್ತು—ಮುಕ್ತೌ—ಮೋಕ್ಷವನ್ನು ಹೊಂದಿರುವಾಗಲಿ, ಪೂರ್ಣಗುಣಃ ರಮೇಶಃ—ಗುಣಪರಿಪೂರ್ಣನಾದ ಶ್ರೀಹರಿಯು, ಸದಾ—ಯಾವಾಗಲೂ ಸಮುಸ್ತಾತ್ ಅಧಿಕಂ ಏವ—ಎಲ್ಲರಿಗಿಂತಲೂ ಹೆಚ್ಚಾಗಿಯೇ, ಸಂತೋಷ್ಯತೇ—ಸಂತೋಷಪಡಿಸಲ್ಪಡುತ್ತಾನೆ ॥೧೨೩॥

ಭೂಷನ್ ನ ಯೋಽಧಿ ಬಭ್ರೂಷು ನಮ್ರತೇ ಬಳಿತ್ಥಾ ತದ್ ವಪುಷೇಧಾಯಿ ದರ್ಶತಮ್ ।
ತಾಂ ಸು ತೇ ಕೀರ್ತಿಂ ಮಘವನ್ ಮಹಿತ್ವಾ ಇತ್ಯಾದಿ ಸೂಕ್ತಾನಿ ಚ ತತ್ಪ್ರಮಾಣಮ್ ॥೧೨೪॥

"ಭೂಷನ್ ನಯೋಽಧಿ ಬಭ್ರೂಷು ನಮ್ರತೇ"—"ಬಳಿತ್ಥಾ ತದ್ವಪುಷೇಧಾಯಿದರ್ಶತಂ"—"ತಾಂಸುತೇ ಕೀರ್ತಿಂ ಮಘವನ್ ಮಹಿತ್ವಾ," ಇತ್ಯಾದಿಸೂಕ್ತಾನಿ—ಭೂಷನ್ ..... ಬಳಿತ್ಥಾ ..., ತಾಂಸುತೇ—... ಎಂಬ ವಾಕ್ಯಗಳೇ ಮೊದಲವಾಕ್ಯಗಳಾಗಿವುಳ್ಳ ಸೂಕ್ತಗಳು, ತತ್ಪ್ರಮಾಣಂ—ಮೇಲೆ ಹೇಳಿದ ಆ ವಿಷಯದಲ್ಲಿ ಪ್ರಮಾಣಗಳಾಗಿವೆ. ॥೧೨೪॥

ಅನ್ಯಾನಿ ವಾಕ್ಯಾನಿ ಚ ವೈದಿಕಾನಿ ಸಪಂಚರಾತ್ರೋಕ್ತಿಪುರಾಣಕಾನಿ ।
ಪೃಷ್ಟಶ್ಚ ಭೀಷ್ಮೋಽತ್ರ ಯುಧಿಷ್ಠಿರೇಣೈತನ್ಮೋಕ್ಷಧರ್ಮೇಷ್ವಪಿ ಕಿಂಚಿದಾಹ ॥೧೨೫॥

ಅನ್ಯಾನಿ—ಮೇಲೆ ಹೇಳಿದ ಭೂಷನ್ ಇತ್ಯಾದಿ ಸೂಕ್ತಗಳಿಗಿಂತ ಬೇರೆಯಾದ, ವೈದಿಕಾನಿ ವಾಕ್ಯಾನಿ—ವೇದವಾಕ್ಯಗಳು, ಸಪಂಚರಾತ್ರೋಕ್ತಿಪುರಾಣಕಾನಿ ಚ—ಪಂಚರಾತ್ರ ಸಹಿತವಾದ ಪುರಾಣವಾಕ್ಯಗಳೂ ಕೂಡ, ತತ್ಪ್ರಮಾಣಂ—ಹಿಂದೆ ಹೇಳಿದ ವಿಷಯಗಳ ಬಗ್ಗೆ ಪ್ರಮಾಣಗಳಾಗಿವೆ. ಚ—ಮತ್ತು, ಯುಧಿಷ್ಠಿರೇಣ ಪೃಷ್ಟಃ—ಧರ್ಮರಾಜನಿಂದ ಪ್ರಶ್ನಿಸಲ್ಪಟ್ಟ ಕೇಳಲ್ಪಟ್ಟ, ಭೀಷ್ಮಃ ಚ—ಭೀಷ್ಮಾಚಾರ್ಯರೂ ಕೂಡ, ಅತ್ರ—ಈ ವಿಷಯದಬಗ್ಗೆ ಕಿಂಚಿತ್—ಸ್ವಲ್ಪ ಸ್ವಲ್ಪ, ಮೋಕ್ಷಧರ್ಮೇಷು ಅಪಿ—ಮೋಕ್ಷ ಧರ್ಮ ಪರ್ವದಲ್ಲಿಯೂ ಕೂಡ, ಆಹ—ಹೇಳಿರುವರು. ॥೧೨೫॥

ಭಾವಾನುವಾದ ೧೧೫—೧೨೫

ಪಾಂಡವರು ತಮ್ಮ ತಮ್ಮ ಮೂಲರೂಪದ ಲೋಕಗಳಿಗೆ ಹೋದಮೇಲೆ ಅಲ್ಲಿಯೂ ಕೂಡ ಶ್ರೀ ಕೃಷ್ಣ ಪರಮಾತ್ಮನು ಅವರ ಜೊತೆಗೆ ಭೂಮಿಯಲ್ಲಿರುವಾಗ ವಿಹರಿಸಿದಂತೆ ವಿಹರಿಸಿದನು, ಅರ್ಜುನನ ಜೊತೆಗೆ ರಥಸಹಿತವಾಗಿ

ಭೂಮಿಯಲ್ಲಿ ಅಡ್ಡಾಡಿದಂತೆ ಅಲ್ಲಿಯೂ ಅಡ್ಡಾಡಿದನು.ಪಾಂಡವರಿಂದ ಬೇರೆಯಾದ ದೇವಾಂಶಸಂಭೂತರೆಲ್ಲರೂ ತಮ್ಮ ತಮ್ಮ ಪ್ರಾರಬ್ಧ ಕರ್ಮ ಮುಗಿದ ಕೂಡಲೇ ತಮ್ಮ ಮೂಲ ರೂಪಗಳೊಂದಿಗೆ ಐಕ್ಯವನ್ನು ಹೊಂದಿದರು. ದೈತ್ಯರು ಮಾತ್ರ ತಮ್ಮತಮ್ಮ ಪ್ರಾರಬ್ಧಪುಣ್ಯವೋ, ಯುದ್ಧದಲ್ಲಿ ಮಡಿದಪ್ರಯುಕ್ತ ಪುಣ್ಯವೋ ಅದರಿಂದಾಗಿ ವೀರಸ್ವರ್ಗವನ್ನು ಹೊಂದಿ, ದಿವ್ಯ ಭೋಗಗಳನ್ನು ಕಲಿಯುಗದಲ್ಲಿ ನಾಲ್ಕುಸಾವಿರದಾ ಮೂರುನೂರು ವರ್ಷಗಳ ವರೆಗೆ ಅನುಭವಿಸಿ, ಪುಣ್ಯವನ್ನು ತೀರಿಸಿಕೊಂಡು ಪುನಃ ಭೂಮಿಯಲ್ಲಿ ಮನುಷ್ಯರಾಗಿ ಹುಟ್ಟಿ ನಾನೇ ದೇವರು (ಜೀವ ಬ್ರಹ್ಮರಿಗೆ ಐಕ್ಯವಿದೆ) ಜಗತ್ತು ಅಸತ್ಯ (ಜಗತ್ತು ಅನಿರ್ವಚನೀಯ, ಸದಸದ್ವಿಲಕ್ಷಣ) ಎಂದು ತಿಳಿದು, ಪ್ರಚಾರ ಮಾಡಿ ಅಂಧ ತಮಸ್ಸನ್ನು ಹೊಂದಲು ಬೇಕಾದ ಸಾಧನೆಯನ್ನು ಮಾಡಿಕೊಂಡರು. ಅವರು ಮುಂದೆ (ಈ ಬ್ರಹ್ಮಕಲ್ಪ ಮುಗಿದ ಮೇಲೆ) ಖಂಡಿತ ಅಂಧ ತಮಸ್ಸಿಗೆ ಹೋಗಿ ನಿತ್ಯ ದುಃಖಿಪನ್ನು ಅನುಭವಿಸುವರು. ಅಸುರರ ದುಃಖವಾದು ಭೋಗದಲ್ಲಿಯೂ ಕೂಡ ತಾರ ತಮ್ಯವಿದೆ. ಶ್ರೀಹರಿದ್ವೇಷಾದಿಗಳನ್ನು ಹೆಚ್ಚು ಹೆಚ್ಚು ಮಾಡಿದವರಿಗೆ ಹೆಚ್ಚು ಹೆಚ್ಚು ದುಃಖವು. ಎಲ್ಲ ಮುಕ್ತಜೀವರಿಗಿಂತ ಹೆಚ್ಚು ಮುಕ್ತಿ ಸುಖವನ್ನು ಜೀವೋತ್ತಮರಾದ ಬ್ರಹ್ಮದೇವರು ಅನುಭವಿಸುವಂತೆ ಜೀವಾಧಮನಾದ ಕಲಿಯು ಎಲ್ಲರಿಗಿಂತ ಅಧಿಕ ದುಃಖವನ್ನು ಅನುಭವಿಸುವನು.ಕೆಲವು ದುಷ್ಟಚೇತನರು ಪಿಶಾಚ ಅಸುರ ರಾಕ್ಷಸ ಜನ್ಮವನ್ನು ಪಡೆದು ಅಗಕೂಡ ಶ್ರೀ ಹರಿದ್ವೇಷ, ಅವನಭಕ್ತರ ದ್ವೇಷಗಳನ್ನು ಮಾಡಿ ಬೇಗನೆ ತಮಸ್ಸಿನ ಪ್ರಾಪ್ತಿಗೆ ಬೇಕಾದ ಸಾಧನೆ ಮಾಡಿಕೊಂಡರು.ದೇವತೆಗಳು ಬ್ರಹ್ಮದೇವರ ಆಯುಷ್ಯ ಈ ಅಂದರೆ ಬ್ರಹ್ಮಕಲ್ಪ ಮುಗಿದ ಮೇಲೆ ತಮಗೆ ಯೋಗ್ಯವಾದಮೋಕ್ಷವನ್ನು ಹೊಂದುವರು ಕಲಿಯುಗದಲ್ಲಿ ನಾಲ್ಕು ಸಾವಿರದ ಮೂರು ನೂರುವರ್ಷಗಳ ಸಮಯಕ್ಕೆ,ಭೂಮಿಯಲ್ಲಿ ಬಂದ ಅಸುರರ ಜೀವಬ್ರಹ್ಮೈಕ್ಯ ವಾದವನ್ನು ಪ್ರಚಾರಿಸಿ ನಿಜವಾದ ಶ್ರೀಹರಿಸರ್ವೋತ್ತಮತ್ವ ತತ್ವವನ್ನು ಪ್ರಚಾರದಲ್ಲಿರದಂತೆ ಮಾಡುತ್ತಿರಲು, ಹಿಂದೆ ಭೀಮನಾಗಿ ಅವತರಿಸಿದ ವಾಯ್ವಂಶವು ಆ ವಾದವನ್ನು ಖಂಡಿಸಿ ನಿಜವಾದ ತತ್ವವನ್ನು ಸ್ಥಾಪಿಸುವದಕ್ಕಾಗಿ ದೇವರ ಅಪ್ಪಣೆಯಪ್ರಾಕಾರ ಭೂಮಿಯಲ್ಲಿ ಪುನಃ ಬ್ರಾಹ್ಮಣರಾಗಿ ಅವತರಿಸಿ ಆ ಕಾರ್ಯವನ್ನು ಮಾಡಿದರು. ಆಗ ಭಗವತ್ಪ್ರೀತಿಯಾಗಬೇಕೆಂಬ ಉದ್ದೇಶದಿಂದ ಹಿಂದೆ ದ್ರೌಪದಿಯಾಗಿ ಅವತರಿಸಿದ ಭಾರತೀದೇವಿಯ ಅಂಶವೂ ಕೂಡ ಭೂಮಿಯಲ್ಲಿ ಅವತರಿಸಿ ದೈತ್ಯರನ್ನು ಅಂಧ ತಮಸ್ಸಿಗೆ ಕಳಿಸುವ ಕಾರ್ಯವನ್ನು ಮಾಡಿದಳು. ವಿಷ್ಣುಭಕ್ತರಾದ ಅರ್ಜುನಾದಿಗಳಾಗಿ ಅವತರಿಸಿದ ದೇವಾಂಶರೂ ಕೂಡ ಈ ಲೀಲೆಯ ಕಲಿಯುಗ ಮುಗಿದ ಮೇಲೆ ಬರುವ್ಯ

ನೆಯ ಮಹಾಯುಗದ ಪೈಕಿ ಪ್ರಥಮ ಕೃತ ಯುಗದಲ್ಲಿ ಅವತರಿಸಿ ಭಗವತ್ಸೇವಾ ಮಾಡಿ ಭಗವಂತನನ್ನು ಸಂತೋಷಪಡಿಸಿ, ತಮ್ಮ ಮೂಲ ರೂಪಕ್ಕೆ ಹೋಗಿಸೇರಿ ಈಬ್ರಹ್ಮದೇವರ ಕಾಲ ಮುಗಿದ ಮೇಲೆ ಮುಕ್ತಿಯನ್ನು ಹೊಂದುವರು. ರಾಮಾಯಣ ಕಾಲದಲ್ಲಿ ಹನುಮಂತನಾಗಿ ಅವತರಿಸಿದ ವಾಯ್ವಂಶವು, ನಂತರ ದ್ವಾಪರಯುಗದಲ್ಲಿ ಭೀಮನಾಗಿ ಅವತರಿಸಿದ ವಾಯ್ವಂಶವು ಎರಡೂ ಕೂಡ ವಾಯುದೇವರ ಸ್ವರೂಪದಲ್ಲಿ ಐಕ್ಯವನ್ನು ಹೊಂದಿ ಮುಂದಿನ ಬ್ರಹ್ಮ ಕಲ್ಪದಲ್ಲಿ ಬ್ರಹ್ಮಪದವಿಯನ್ನು ಆಳಿ, ಭಾರತೀ ಆಗ ಸರಸ್ವತಿಯಾಗಿದ್ದವಳೆಂದು ಕೂಡಿಕೊಂಡು ಆ ಕಲ್ಪದ ಕೊನೆಗೆ ಎಲ್ಲರಿಗಿಂತ ಉತ್ತಮವಾದ ಮುಕ್ತಿಯನ್ನು ಹೊಂದುವರು. ನಿತ್ಯದಲ್ಲಿ ಉತ್ಕೃಷ್ಟವಾದ ಶ್ರೀಹರಿಭಕ್ತಿಯಿಂದ ಕೂಡಿದ ಈ ದಂಪತ್ಯ (ವಾಯುದೇವರು ಭಾರತೀದೇವಿಯರು) ಮೂಲರೂಪದಲ್ಲಿರುವಾಗಾಗಲಿ, ಭೂಮಿಯಲ್ಲಿ ಅವತರಿಸಿದಾಗಾಗಲಿ, ಬ್ರಹ್ಮಪದವನ್ನು ಹೊಂದಿರುವಾಗಾಗಲಿ, ಮುಕ್ತಿಯನ್ನು ಹೊಂದಿದ ಮೇಲಾಗಲಿ ಶ್ರೀಹರಿಯನ್ನು ಎಲ್ಲರಿಗಿಂತಲೂ ಅಧಿಕವಾಗಿ ಸಂತೋಷಪಡಿಸುತ್ತಾರೆ. ಈ ಎಲ್ಲ ವಿಷಯದ ಬಗ್ಗೆ ಬಳಿತ್ಥಾ ಸೂಕ್ತ, ಭೂಷನ್ ಎಂದು ಸುರುವಾಗುವ ಸೂಕ್ತ, ತಾಂ ಸುತೇ ಎಂದು ಸುರುವಾಗುವ ಸೂಕ್ತಗಳು, ಅಲ್ಲದೇ ಬೇರೆ ವೈದಿಕ ವಾಕ್ಯಗಳು, ಸಾತ್ವಿಕ ಪುರಾಣಗಳು, ಪ್ರಮಾಣವಾಗಿವೆ. ಈ ವಿಷಯದ ಬಗ್ಗೆ ಧರ್ಮರಾಜನಿಗೆ ಭೀಷ್ಮಾಚಾರ್ಯರೂ ಕೂಡ ಹೇಳಿದ ವಾಕ್ಯಗಳು ಮೋಕ್ಷಧರ್ಮ ಪರ್ವದಲ್ಲಿರುವವು.

ಏವಂ ಪ್ರಯಾತೇಷು ಸಕೇಶವೇಷು ಸ್ವಾನೇವ ಲೋಕಾನ್ ಯದುಪಾಂಡುವೇಷು।
ಪರೀಕ್ಷಿದಾದ್ಯಾಸ್ತು ತದನ್ವಯೋತ್ಥಾ: ವ್ಯಾಸಾನುಶಿಷ್ಟಾ ಪೃಥಿವೀಮರಕ್ಷನ್ ॥೧೨೬॥

ಏವಂ—ಈ ರೀತಿ, ಸಕೇಶವೇಷು—ಶ್ರೀಕೃಷ್ಣಪರಮಾತ್ಮನಿಂದ ಸಹಿತರಾದ, ಯದುಪಾಂಡವೇಷು—ಯಾದವರು ಪಾಂಡವರು, ಸ್ವಾನ್ ಲೋಕಾನ್ ಏಷ—ತಮ್ಮ ತಮ್ಮ ಲೋಕಗಳನ್ನು ಕುರಿತೇ, ಪ್ರಯಾತೇಷು ಸತ್ಸು—ಹೋಗುತ್ತಿರಲು, ತದನ್ವಯೇಜಾತ್ಯಾಃ—ಅವರ ಕುಲಗಳಲ್ಲಿ ಹುಟ್ಟಿದ, ಪರೀಕ್ಷಿದಾದ್ಯಾಃ—ಪರೀಕ್ಷಿತ್ ರಾಜನೆ ಮೊದಲಾದವರು, ವ್ಯಾಸಾನುಶಿಷ್ಟಾಃಸಂತಃ—ಶ್ರೀವ್ಯಾಸದೇವರಿಂದ ಶಿಕ್ಷಿಸ [ಬೋಧಿಸ]ಲ್ಪಟ್ಟವರಾಗಿ, ಪೃಥಿವೀಂ ಅರಕ್ಷನ್—ಭೂಮಿಯನ್ನು ಆಳಿದರು. ॥೧೨೬॥

ತೈಃ ಕ್ಷೇಮಕಾಂತೈರಿಹ ಭಾರತಾದಿಶಾಸ್ತ್ರಾಣಿ ಶೃಣ್ವದ್ಭಿರಶೇಷವಿದ್ಭಿಃ ।
ವ್ಯಾಸಪ್ರಸಾದಾಚ್ಚ ಕಲೌಚ ಧರ್ಮೋ ಜ್ಞಾನಂ ಚ ಸುತ್ರಾತಮಗಾನ್ನ ನಾಶಮ್ ॥೧೨೭॥

ಭಾರತಾದಿಶಾಸ್ತ್ರಾಣಿ—ಮಹಾಭಾರತಾದಿ ಶಾಸ್ತ್ರಗಳನ್ನು, ಶೃಣ್ವದ್ಭಿಃ ವ್ಯಾಸಪ್ರಸಾದಾತ್—ಶ್ರೀವೇದವ್ಯಾಸದೇವರ ಅನುಗ್ರಹದಿಂದ ಶ್ರವಣ ಮಾಡುತ್ತಿದ್ದ (ಆದ್ದರಿಂದಲೇ) ಅಶೇಷವಿದ್ಭಿಃ — ಸರ್ವವನ್ನು (ಯೋಗ್ಯತಾ ಪ್ರಕಾರ) ತಿಳಿದಿರುವ, ಕ್ಷೇಮಕಾಂತೈಃ — ಕ್ಷೇಮಕರಾಜನಪರ್ಯಂತರಾದ ತೈಃ — ಪರೀಕ್ಷಿತ್ ರಾಜಾದಿಗಳಿಂದ, ಸುತ್ರಾತಂ – ಚೆನ್ನಾಗಿ ರಕ್ಷಿಸಲ್ಪಟ್ಟ, ಜ್ಞಾನಂ – ತತ್ವಜ್ಞಾನವು, ಕತೌ ಚ-ಕಲಿಯುಗದಲ್ಲಿಯೂ ಕೂಡ, ಒಂದು ಸಾವಿರ ವರ್ಷಪರ್ಯಂತ, ನಾಶಂ – ನಾಶವನ್ನು, ನ ಅಗಾತ್—ಹೊಂದಲಿಲ್ಲ (ಸುತ್ರಾತಃ) ಧರ್ಮಃ ಚ – ಚೆನ್ನಾಗಿರಕ್ಷಿಸಲ್ಪಟ್ಟ ಧರ್ಮವೂ ಕೂಡ, ನಾಶಂ ನ ಅಗಾತ್ —ನಾಶವನ್ನು ಹೊಂದಲಿಲ್ಲ, ॥೧೨೭॥

ಸಂವತ್ಸರಾಣಾಂ ತು ಸಹಸ್ರಕೇ ಗತೇ ಪ್ರಾಪ್ತೇಷು ಚ ದ್ಯಾಮಖಿಲೇಷು ಸತ್ಸು ।
ದಗ್ಧಾಃ ಪುರಾ ಯೇ ತ್ರಿಪುರಂ ಘ್ನತೈವ ರುದ್ರೇಣ ಜಾತಾಃ ಪೃಥಿವೀತಲೇ ತೇ ॥೧೨೮॥

(ಹೀಗೆ), ಅಖಿಲೇಷು ಸತ್ಸು—ಎಲ್ಲ ಸಜ್ಜನರು, ದ್ಯಾಂ–(ಸದ್ಗತಿಯನ್ನು)ಅದಕ್ಕೆ ಕಾರಣವಾದ ಜ್ಞಾನವನ್ನು, ಪ್ರಾಪ್ತೇಷು—ಹೊಂದಿರುತ್ತಿರಲು, ಸಂವತ್ಸರಾಣಾಂ ಸಹಸ್ರಕೇ ಗತೇ ಸತಿ–ಒಂದುಸಾವಿರವರ್ಷಗಳು (ಪರೀಕ್ಷಿತ್ ರಾಜಿಪ ಕಾಲದಿಂದ) ಕಳೆಯುತ್ತಿರಲು, ಪುರಾ–ಹಿಂದೆ, ಯೇ–ಯಾವ ದೈತ್ಯರು, ತ್ರಿಪುರಂಘ್ನತಾ ರುದ್ರೇಣ—ತ್ರಿಪುರಾಸುರನನ್ನು ಸಂಹರಿಸಿದ ರುದ್ರದೇವರಿಂದ, ದಗ್ಧಾ; –ಸಂಹರಿಸಲ್ಪಟ್ಟಿದ್ದರೋ, ತೇ ಏವ—ಅವರೇ, ಪೃಥಿವೀತಲೇ—ಭೂಮಿಯಲ್ಲಿ, ಜಾತಾಃ – ಹುಟ್ಟಿದರು. ॥೧೨೮॥

ಆದರ್ಶನಂ ಸರ್ವಮುನೀಂದ್ರವೃಂದೈಃ ಸಹೈವಸಜ್ಞಾನಮಹಾನಿದಾನೇ ।
ವ್ಯಾಸೇ ಪ್ರಯಾತೇಽಪಿ ಸುತತ್ವವಿದ್ಯಾ– ತತ್ಸಂಪ್ರದಾಯಾದಪಿ ತೈರವಾಪ್ತಾ ॥೧೨೯॥

ಸಜ್ಞಾನಮಹಾನಿದಾನೇ — ನಿರ್ದುಷ್ಟತತ್ವಜ್ಞಾನಕ್ಕೆ ಶ್ರೇಷ್ಠ ಆಶ್ರಯರಾದ, ವ್ಯಾಸೇ—ಶ್ರೀವೇದವ್ಯಾಸದೇವರು, ಸರ್ವಮುನೀಂದ್ರವೃಂದೈಃ ಸಹ ಏವ–ಎಲ್ಲ ಋಷಿಶ್ರೇಷ್ಠರ ಸಮೂಹಗಳಿಂದ ಕೂಡಿಕೊಂಡೇ, ಆದರ್ಶನಂ ಪ್ರಯಾತೇ ಸತಿ – ಕಾಣದಿರುವಿಕೆಯನ್ನು ಹೊಂದುತ್ತಿರಲು, ತೈಃ ಅಪಿ-ಭೂಮಿಯಲ್ಲಿ ಹುಟ್ಟಿದ ಆ ಅಸುರರಿಂದಲೂಕೂಡ, ತತ್ಸಂಪ್ರದಾಯಾತ್ – ಶ್ರೀವೇದವ್ಯಾಸದೇವರ ಸಂಪ್ರದಾಯದ ಪ್ರಕಾರ, ಸುತತ್ವವಿದ್ಯಾ – ಶ್ರೇಷ್ಠ ತತ್ವಜ್ಞಾನವು, ಅವಾಪ್ತಾ – ಹೊಂದಲ್ಪಟ್ಟಿತು. ॥೧೨೯॥

ಅವತಾರಿಕೆ – ಅಸುರರಿಗೂ ತತ್ವಜ್ಞಾನವು ಸಿಗುವಂತಾಗಲು ಆಗಿರುವ ಕಾರಣಗಳನ್ನು ತಿಳಿಸುತ್ತಾರೆ—

ಉತ್ಪಾದಿತತ್ವಾತ್ತು ದುರಾಗಮಾನಾಂ ತತ್ಸಂಪ್ರದಾಯಸ್ಯ ಚ ನಾಶಿತತ್ವಾತ್ ।
ಪ್ರಸಾರಿತತ್ವಾತ್ಸ ಸದಾಗಮಾನಾಂ ಪಾಪಾ ಅಪಿ ಜ್ಞಾನಮವಾಪುರೇತತ್ ॥೧೩೦॥

ದುರಾಗಮಾನಾಂ ಉತ್ಸಾದಿತತ್ವತ್ – ದುಷ್ಟಶಾಸ್ತ್ರಗಳಿಗೆ ನಾಶವು ಬಂದದ್ದರಿಂದ (ಆ ಶಾಸ್ತ್ರಗಳು ಇಲ್ಲ ವಾದದ್ದರಿಂದ,)ಚ–ಮತ್ತು, ತತ್ಸಂಪ್ರದಾಯಸ್ಯ ನಾಶಿತತ್ವಾತ್–ಆ ದುಷ್ಟರ ಸಂಪ್ರದಾಯಕ್ಕೂ ನಾಶ ಒಂದದ್ದರಿಂದ ಸದಾಗಮಾನಾಂ ಪ್ರಸಾರಿತತ್ವಾತ್ ಚ – ಸಚ್ಛಾಸ್ತ್ರಗಳ ಪ್ರಸಾರವಾದದ್ದರಿಂದಲೂ ಕೂಡ, ಪಾಪಾಃ ಅಪಿ–ಪಾಪಿಗಳಾದ ಅಸುರರೂಕೂಡ, ಏತತ್ ಜ್ಞಾನಂ– ಈ ಸತ್ತತ್ವ ವಿದ್ಯೆಯನ್ನು, ಅವಾಪುಃ– ಹೊಂದಿದರು. ॥೧೫೦॥

ಶುನಾ ಪುರೋಡಾಶಮಿವಾವಲೀಢಂ ವೇದಶ್ರುತಿಂವಾಽತ್ಯಜನೈರವಾಪ್ತಮ್ ।
ಅನಂತದುಃಖಾಪ್ತಿಸುಯೋಗ್ಯದೈತ್ಯೈ ರ್ವಿದ್ಯಾಮವಾಪ್ತಾಂ ತುನ ಸೇಹಿರೇಽ ಸುರಾಃ ॥೧೫೧॥

ಶುನಾ–ನಾಯಿಯಿಂದ,ಅವಲೀಢ– ಆಸ್ವಾದಿಸಲ್ಪಟ್ಟ, ಪುರೋಡಾಶಂ ಇವ–ಯಜ್ಞದ್ರವ್ಯವನ್ನು ಹೇಗೆ ವಿವೇಕಿಗಳು ಸಹಿಸಲಾರರೋ ಹಾಗೆ, ಅಂತ್ಯಜನೈಃ– ಚಾಂಡಾಲರಿಂದ, ಅವಾಪ್ತಾಂ— ಹೊಂದಲ್ಪಟ್ಟ, ವೇದಶ್ರುತಿಂ ವಾ—ವೇದ ಶ್ರವಣವನ್ನು ಹೇಗೆ ಸಹಿಸಲುರರೋ, ಹಾಗೆ, ಅನಂತದುಃಖಾಪ್ತಿಸುಯೋಗ್ಯದೈತ್ಯೈಃ —ನಿತ್ಯದುಃಖವಳ್ಳ ತಮಸ್ಸನ್ನು ಹೊಂದಲು ಅತ್ಯಂತಯೋಗ್ಯರಾದ ದೈತ್ಯರಿಂದ, ಅವಾಪ್ತಾಂ–ಹೊಂದಲ್ಪಟ್ಟ, ವಿದ್ಯಾಂ ತು– ತತ್ವಜ್ಞಾನವನ್ನೂಕೂಡ. ಸುರಾಃ–ದೇವತೆಗಳು, ನ ಸೇಹಿರೇ—ಸಹಿಸಲಿಲ್ಲ, ॥೧೫೧॥

ನಾವಾಗ್ಗತಿಃ ಕ್ವಾಪಿ ಸುವೇದಿನಾಂ ಭವೇತ್ ಪ್ರಾಪ್ಯಂ ಸುಖಂ ನಿತ್ಯಮವಶ್ಯಮೇಭಿಃ ।
ಪ್ರಾಪ್ಯಂ ತಮೋಽಂಧಂ ತ್ವಸುರೈರ್ನ ಮುಕ್ತಿಃ ಕದಾಚಿದಾಪ್ಯಾ ತದಚಿಂತಯನ್ ಸುರಾಃ॥೧೫೨॥

ಸುವೇದಿನಾಂ–ತತ್ವಜ್ಞಾನಿಗಳಿಗೆ, ಅವಾಗ್ಗತಿಃ–ಅಧೋಗತಿಯು, ಕ್ವಾಪಿ,–ಎಂದೂ ಕೂಡ. ನ ಭವೇತ್–ಆಗಲಾರದು. ಏಭಿಃ—ಇವರಿಂದ (ತತ್ವಜ್ಞಾನಿಗಳಿಂದ) ನಿತ್ಯಂ ಸುಖಂ–ನಾಶವಿಲ್ಲದ ಮೋಕ್ಷಸುಖವು, ಅವಶ್ಯಂ ಪ್ರಾಪ್ಯಂ—ಅವಶ್ಯವಾಗಿ (ನಿಯಮಿತವಾಗಿ) ಹೊಂದಲ್ಪಡಬೇಕು. ತು–ಆದರೆ, ಅಸುರೈಃ– ಅಸುರ ಚೇತನರಿಂದ. ಆಂಧಂ ತಮಃ–ಅಂಧಂತಮಸ್ಸೇ, ಪ್ರಾಪ್ಯಂ– ಹೊಂದಲ್ಪಡಬೇಕು. ಮುಕ್ತಿಃ—ಮೋಕ್ಷವು. ಕದಾಚಿತ್—ಎಂದೂ, ನ ಆಪ್ಯಾ— ಹೊಂದಲ್ಪಡಬಾರದೆಂಬ ಇದು ನಿಯಮವು, ತತ್—ಆದ್ದರಿಂದ, ಹೀಗೆ ಅಸುರರು ತತ್ವಜ್ಞಾನವನ್ನು ಹೊಂದಿ ಮೋಕ್ಷವನ್ನು ಹೊಂದುವ ಪ್ರಸಂಗ ಬಂತಲ್ಲ ಎಂಬ ಕಾರಣದಿಂದ, ಸುರಾಃ–ದೇವತೆಗಳು, ಅಚಿಂತಯನ್–ವಿಚಾರಿಸಿದರು. ॥೧೫೨॥

ಜ್ಞಾನಪ್ರದಾನಾಯ ಸತಾಂ ತದನ್ಯಜ್ಞಾನಪ್ರಣಾಶಾಯ ಚ ವಿಷ್ಣುನೈತೇ ।
ಕ್ಲೃಪ್ತಾಸ್ತತಸ್ತೇ ಸವಿರಿಂಚಶರ್ವಾ ವಿಜ್ಞಾಪಯಾಮಾಸುರುಪೇತ್ಯ ವಿಷ್ಣುಮ್ ॥೧೫೩॥

ಸತಾಂ ಸಜ್ಜನರಿಗೆ, ಜ್ಞಾನಪ್ರದಾನಾಯ—ತತ್ವಜ್ಞಾನವಾಗುವಂತೆ ಮಾಡಲು, ತದನ್ಯಜ್ಞಾನ ಪ್ರಣಾಶಾಯ ಚ— ಸಜ್ಜನರಿಂದ ಬೇರೆಯವರಾದ ಜನರಿಗೆ (ದುರ್ಜನರಿಗೆ) ತತ್ವಜ್ಞಾನಬಾರದಂತೆ ಮಾಡಲು, ಅಕಸ್ಮಾತ್ ಸತ್ಸಹವಾಸಾದಿ ಕಾರಣಗಳಿಂದ ಬಂದರೆ ಅದನ್ನು ನಾಶಮಾಡಲು, ಏತೇ–ಈ ದೇವತೆಗಳು, ವಿಷ್ಣುನಾ–ಶ್ರೀಹರಿಯಿಂದ, ಕ್ಲೃಪ್ತಾಃ— ನಿಯಮಿಸಲ್ಪಟ್ಟಿದ್ದಾರೆ, ತತಃ– ಆದ್ದರಿಂದ, ಸವಿರಿಂಚಶರ್ವಾಃ– ಬ್ರಹ್ಮರುದ್ರ ದೇವರಿಂದ ಸಹಿತರಾದ, ತೇ—ಆ ದೇವತೆಗಳು, ವಿಷ್ಣುಂ–ಶ್ರೀಹರಿಯನ್ನು ಕುರಿತು, ಉಪೇತ್ಯ–ಬಂದು,ವಿಜ್ಞಾಪಯಾಮಾಸುಃ–ವಿಜ್ಞಾಪಿಸಿದರು. ॥೧೫೩॥

ಭಾವಾನುವಾದ ೧೫೬—೧೫೩

ಭೂಭಾರ ಹರಣವನ್ನು ಮಾಡಿದ ಶ್ರೀಕೃಷ್ಣ ಪರಮಾತ್ಮ. ಪಾಂಡವರು ಯಾದವರು ತಮ್ಮ ಲೋಕಗಳಿಗೆ ಹೋದಮೇಲೆ ಭೂಮಿಯನ್ನು ಆ ವಂಶದಲ್ಲಿ ಬಂದ ಪರೀಕ್ಷಿತ್ ರಾಜನೇ ಮೊದಲಾದ ರಾಜರು ಶ್ರೀವೇದವ್ಯಾಸದೇವರ

ಬೋಧನ ಮಾರ್ಗದರ್ಶನದಲ್ಲಿ ಆಳಿದರು. ಪರೀಕ್ಷಿತ್ ರಾಜನಿಂದ ಆರಂಭಿಸಿ ಆ ಪಾಂಡವ ವಂಶದಲ್ಲಿ ಕ್ಷೇಮಕ ರಾಜನ ಪರ್ಯಂತ ರಾಜರು ಒಂದು ಸಾವಿರ ವರ್ಷ ಪರ್ಯಂತ ರಾಜ್ಯವನ್ನು ಆಳಿದರು. ಆ ಎಲ್ಲ ರಾಜರು ಶ್ರೀವ್ಯಾಸಾನುಗ್ರಹದಿಂದ ಮಹಾಭಾರತಾದಿ ಶಾಸ್ತ್ರಗಳನ್ನು ಶ್ರವಣ ಮಾಡಿದ್ದರು. ಹೀಗಾಗಿ ಅವರು ಧರ್ಮಜ್ಞಾನಗಳನ್ನು ಚೆನ್ನಾಗಿ ರಕ್ಷಿಸಿದರು ಹೀಗಾಗಿ ಅವರ ಆಡಳಿತ ಕಾಲದಲ್ಲಿ ಜಿವುಗಳಿಗೆ ಲೋಪ ಬರಲಿಲ್ಲ. ಹೀಗೆ ಎಲ್ಲ ಸಜ್ಜನರು ಧರ್ಮಿಗಳು ಜ್ಞಾನಿಗಳು ಆಗಿರುವಾಗ ಹೀಗೆ ಒಂದುಸಾವಿರ ವರ್ಷ ಕಳಿದಿರುವಾಗ ಹಿಂದೆ ತ್ರಿಪುರಾಸುರಸಂಹಾರ ಕಾಲದಲ್ಲಿ ರುದ್ರದೇವರಿಂದ ಹತರಾದ ದೈತರು ಈಗ ಹುಟ್ಟಿದರು. ಈ ಸಮಯಕ್ಕೆ ಶ್ರೀವೇದವ್ಯಾಸದೇವರು ಹಾಗು ಇತರ ಋಷಿಗಳು ಆಗಾಗ ಕಾಣಿಸಿಕೊಳ್ಳುವದನ್ನು ಬಿಟ್ಟುಬಿಟ್ಟಿದ್ದರು. (ಕಾಣದಂತೆಯೇ ಆಗಿದ್ದರು) ದುಷ್ಟಶಾಸ್ತ್ರಗಳು ಪ್ರಚಾರದಲ್ಲಿರಲಿಲ್ಲ ಸಚ್ಛಾಸ್ತ್ರಗಳು ಪ್ರಚಾರದಲ್ಲಿದ್ದದ್ದರಿಂದ ಆಗ ಹುಟ್ಟಿದ ಆ ದೈತರು ಆಗಿರುವ ಜ್ಞಾನಿಜನರಿಂದ ಶ್ರೀವೇದವ್ಯಾಸದೇವರ ಸಂಪ್ರದಾಯ ಪ್ರಕಾರವಾದ ತತ್ವಜ್ಞಾನವನ್ನು ಹೊಂದಿದರು.ಅಯೋಗ್ಯರಿಗೆ ಈ ತತ್ವವಿದ್ಯಾವು ಬಂದದ್ದನ್ನು ದೇವತೆಗಳು ಸಹಿಸಲಿಲ್ಲ. ಯಜ್ಞಕ್ಕಾಗಿ ಇರುವ ಹೋಮದ್ರವ್ಯವನ್ನು ನಾಯಿಯು ತೆಗೆದುಕೊಂಡರೆ ಯಾವ ವಿವೇಕಿಯು ಸಹಿಸುವನು ?ವೇದಶಾಸ್ತ್ರವನ್ನು ದುರುಪಯೋಗ ಪಡಿಸುವ ಅಂತ್ಯಜರು ಒದುವೇಳೆ ಆ ವಿದ್ಯೆಯನ್ನು ಪಡೆದರೆ ಹೇಗೆ ಸಹಿಸಿಯಾರು ವಿವೇಕಿಗಳು ? ಹಾಗೆ ಈಗೂ ಕೂಡ ದೇವತೆಗಳು ಸಹಿಸಲಿಲ್ಲ. ಅವರ ವಿಚಾರ ಹೀಗಿತ್ತು— ತತ್ವಜ್ಞಾನವನ್ನು ಹೊಂದಿದವನಿಗೆ ಎಂದೂ ಅಧೋಗತಿಯಿಲ್ಲ, ಅವರು ಅವಶ್ಯ ನಿತ್ಯಸುಖವುಳ್ಳ ಮೋಕ್ಷವನ್ನು ಹೊಂದುವರು. ಅಸುರರು ತಮಸ್ಸನ್ನೇ ಹೊಂದಬೇಕು. ಮುಕ್ತಿಯನ್ನಲ್ಲ. ಮೋಕ್ಷವನ್ನು ಕೊಡತಕ್ಕ ಇಂಥ ತತ್ವವಿದ್ಯೆಯನ್ನು ಮುಕ್ತಿಗೆ ಅಯೋಗ್ಯರಾದ ಈ ದೈತ್ಯರು ಹೊಂದಿದರಲ್ಲ ಎಂದು ಚಿಂತಿಸಿದರು. ಸಜ್ಜನರಿಗೆ ಜ್ಞಾನ ಸಿಗುವಂತೆ ದುರ್ಜನರಿಗೆ ಅದು ಸಿಗದಂತೆ,ಸಿಕ್ಕಿದ್ದರೆ ಅದು ನಾಶವಾಗುವಂತೆ ಕಾರ್ಯಮಾಡಲು ಶ್ರೀಹರಿಯಿಂದಲೇ ದೇವತೆಗಳು ನಿಯಮಿಸಲ್ಪಟ್ಟಿದ್ದಾರೆ. ಆದ್ದರಿಂದ ಈಗ ಅವರು ದೇವರನ್ನು ಪ್ರಾರ್ಥಿಸಿದರು.

ಕ್ಷೀರೋದಧೇರುತ್ತರತೀರವಿಷ್ಠಿತೈರಭಿಷ್ಟುತಃ ಸುಷ್ಟುತಿಭಿಃ ಪುರುಷ್ಟುತಃ ।
ಪ್ರದಾಯ ತೇಷಾಮಭಯಂ ರಮಾಪತಿಃ ಕ್ಷಣಾದಭೂಚ್ಚಾರುತಮಾಕೃತಿಃ ಶಿಶುಃ ॥೧೩೪॥

ಕ್ಷೀರೋದಧೇಃ– ಕ್ಷೀರಸಮುದ್ರದ, ಉತ್ತರತೀರವಿಷ್ಠಿತೈಃ – ಉತ್ತರದಂಡೆಯಲ್ಲಿ ನಿಂತಿರುವ, ಆ ದೇವತೆಗಳಿಂದ, ಸುಷ್ಟುತಿಭಿಃ– ಸ್ತೋತ್ರವಾಕ್ಯಗಳಿಂದ, ಪುರುಷ್ಟುತಃ– ಚೆನ್ನಾಗಿ ಬಹುವಾಗಿಸ್ತುತಿಸಲ್ಪಟ್ಟವನಾದ, ರಮಾಪತಿಃ– ಶ್ರೀಲಕ್ಷ್ಮಿಪತಿಯಾದ ಶ್ರೀಹರಿಯು, ತೇಷಾಂ—ಆ ದೇವತೆಗಳಿಗೆ, ಅಭಯಂ ಪ್ರದಾಯ– ಅಭಯಪ್ರದಾನ ಮಾಡಿ ಕ್ಷಣಾತ್–ತತಕ್ಷಣದಲ್ಲಿಯೇ. ಚಾರುತಮಾಕೃತಿ: ಶಿಶುಃ— ಸುಂದರತಮವಾದರೂಪವುಳ್ಳ ಶಿಶುರೂಪನು, ಅಭೂತ್– ಆದನು, ॥೧೩೪॥

ಯುಸ್ತ್ರಪುರಾಣಾಂ ಪ್ರಥಮೋಽತ್ರ ಜಾತಃ ಶುದ್ಧೋದನೇತ್ಯೇವ ಜಿನೇತಿ ಚೋಕ್ತಃ ।
ಕ್ಷೇತ್ರೇ ಗಯಾಖ್ಯೇಽಸ್ಯ ಶಿಶುಂ ಪ್ರಜಾತಂ ಸಂಪ್ರಾಸ್ಯ ದೂರೇಽತ್ರ ಬಭೂವ ವಿಷ್ಣುಃ ।
ಅಜಾನವೋನಾಃ ಸ್ವಶಿಶುಂ ಗತಂ ತಂ ಶಿಶುಂ ಹರಿಂ ವೀಕ್ಷ್ಯ ನಿಜಂ ಸ್ಮ ಮೇನಿರೇ ॥೧೩೫॥

ಯಃ– ಯಾವನು, ತ್ರೈಪುರಾಣಾಂ ಪ್ರಥಮಃ– ತ್ರಿಪುರಾಸುರರ ಗುಂಪಿನಲ್ಲಿ ಪ್ರಧಾನನೋ, ಅತ್ರ–ಈ ಭೂಮಿಯಲ್ಲಿ. ಜಾತಃ ಸನ್—ಹುಟ್ಟಿದವನಾಗಿ. ಶುದ್ಧೋದನ ಇತಿಏವ–ಶುದ್ಧೋದನ ಎಂದೇ. ಚ–ಮತ್ತು, ಜಿನ ಇತಿ ಏವಜಿನ ಎಂದು, ಉಕ್ತಃ: –ಜನರಿಂದ ಕರೆಯಲ್ಪಟ್ಟನೋ, ಅಸ್ಯ—ಇವನಿಗೆ, (ಇವನ)–ಗಯಾಖ್ಯೇಕ್ಷೇತ್ರೇ–ಗಯಾ ಎಂಬ ಹೆಸರಿನ ಕ್ಷೇತ್ರದಲ್ಲಿ (ಗಯಾಎಂಬ ಹೆಂಡತಿಯಲ್ಲಿ). ಪ್ರಜಾತಂ ಶಿಶುಂ-ಹುಟ್ಟಿದ ಕೂಸನ್ನು, ದೂರೇ ಸಂಪ್ರಾಸ್ಯ–ದೂರದಲ್ಲಿ ಒಗೆದು, ಅತ್ರ— ಈ ಸ್ಥಳದಲ್ಲಿ (ಕೂಸಿನ ಬದಲಾಗಿ) ವಿಷ್ಣುಃ ಬಭೂವ— ಶ್ರೀಹರಿಯು

ಕೂಸಿನ ರೂಪನಾದನು. ಸ್ವಶಿಶುಂ–ತದ್ಮಾ ಮಗುವನು ಗತಂ– ಹೋದದ್ದನಾಗಿ. ಅಜಾನಮಾನಾಃ;–ತಿಳಿಯದ್ದಿದ್ದ, ಆ ಜಿನಾದಿಗಳು ತಂ ಶಿಶುಂ ಹರಿಂ – ಆ ಶಿಶುರೂಪನಾಗಿರುವ ಶ್ರೀಹರಿಯನ್ನು ವೀಕ್ಷ್ಯ–ನೋಡಿ, ನಿಜಂ–ತಮ್ಮ ಶಿಶುವನ್ನಾಗಿಯೇ, ಮೆನಿರೇ ಸ್ಮ–ತಿಳಿದರು ॥೧೩೫॥

ತೇಷಾಂ ತದಾ ವೈದಿಕಕರ್ಮ ವೀಕ್ಷ್ಯ ಸಂಪ್ರಾಹಸತ್ ತದ್ವಪುಷೈವ ಕೇಶವಃ ।
ತಂ ಜಾತಮಾತ್ರಂ ಪ್ರಹಸಂತಮೀಕ್ಷ್ಯ ಸುವಿಸ್ಮಿತೈಃ ಪೃಷ್ಟ ಉವಾಚ ವಿಷ್ಣುಃ ।
ಬುದ್ಧೋಽಹಮಿತ್ಯೇವ ಸುನಿತ್ಯಬೋಧಾಜ್ಜಗಾದ ಚೈಷಾಮಥ ಬುದ್ಧದರ್ಶನಮ್ ॥೧೩೬॥

ತದ –ತಾನು ಕೂಸಾಗಿರುವಾಗ. ತೇಷಾಂ– ಆ ಜಿನಾದಿಗಳ.ವೈದಿಕ ಕರ್ಮ–ಈ ಕೂಸಿಗೆ ಜಾತಕರ್ಮಾದಿ ವೈದಿಕ ಸಂಸ್ಕಾರಗಳನ್ನು ಮಾಡುವ ಪ್ರವೃತ್ತಿಯನ್ನು, ವೀಕ್ಷ್ಯ—ನೋಡಿ,ಕೇಶವಃ– ಶ್ರೀಹರಿಯು, ತದ್ವಪುಷಾ ಏವ —ಆ ಶಿಶ ರೂಪದಿಂದಲೇ, ಸಂಪ್ರಾಹಸತ್—ನಕ್ಕನು, ಜಾತಮಾತ್ರಂ ತಂ—ಆದೇ ಹುಟ್ಟಿದ ಆ ಮಗುವನ್ನು, ಪ್ರಹಸಂತಂ ಈಕ್ಷ್ಯ–ನಗುವದನ್ನು ನೋಡಿ, ಸುವಿಸ್ಮಿತೈಃ –ಅತ್ಯಂತ ಆಶ್ಚರ್ಯಚಕಿತರಾದ ಆ ಜಿನಾದಿಗಳಿಂದ, ಪೃಷ್ಟಃ–ಕೇಳಲ್ಪಟ್ಟ, ವಿಷ್ಣುಃ—ಶಿಶುರೂಪನಾದ ಆ ವಿಷ್ಣುವು, ಸುನಿತ್ಯಬೋಧಾತ್— (ತನಗೆ) ಅತ್ಯಂತ ನಿತ್ಯವಾದ ಜ್ಞಾನವಿದ್ದದ್ದರಿಂದ, ಅಹಂ ಬುದ್ಧ ಇತಿಏವ—ನಾನು ಬುದ್ಧನು ಎಂದೇ, ಜಗಾದ—ಹೇಳಿದನು. ಚ–ಮತ್ತು, ಅಥ —ಆಮೇಲೆ, ಏಷಾಂ — ಈ ಜಿನಾದಿಗಳಿಗೆ, ಬುದ್ಧದರ್ಶನಂ — ದುಷ್ಟವಾದ ಬೌದ್ಧಶಾಸ್ತ್ರವನ್ನು,ಜಗಾದ — ಹೇಳಿದನು. ॥೧೩೬॥

ತಥಾಽಪ್ಯವಿಶ್ವಾಸಮವೇಕ್ಷ್ಯ ತೇಷಾಂ ಸಸ್ಮಾರ ದೇವಾನಖಿಲಾನ್ ಜನಾರ್ದನಃ।
ವಿಜ್ಞಾಯ ತೇ ತಸ್ಯ ಮನೋಗತಂ ನಿಜಾನ್ ಪ್ರಚಿಕ್ಷಿಪುರ್ಹೇತಿಗಣಾನಮುಷ್ಮಿನ್ ॥೧೩೭॥

ತಥಾಅಪಿ—ತಾನು ಹೇಳಿದಾಗ್ಯೂ ಕೂಡ, ತೇಷಾಂ—ಆ ಜಿನಾದಿ ದೈತ್ಯರಿಗೆ, ಅವಿಶ್ವಾಸಂ—ಆ ಶಾಸ್ತ್ರದ ಬಗ್ಗೆ, ಅವಿಶ್ವಾಸವನ್ನು ವಿಶ್ವಾಸವಿಲ್ಲದ್ದನ್ನು. ಅವೇಕ್ಷ್ಯ—ನೋಡಿ, ಜನಾರ್ದನಃ—ಆ ಶಿಶುರೂಪನಾಗಿ ಇರುವ ಶ್ರೀಹರಿಯು, ಅಖಿಲಾನ್ ದೇವಾನ್—ಎಲ್ಲ ದೇವತೆಗಳನ್ನು, ಸಸ್ಮಾರ--ನೆನೆಸಿಕೊಂಡನು. ತೇ–ಆ ದೇವತೆಗಳು ತಸ್ಯಮನೋಗತಂ—ಆ ದೇವರ ಮನಸ್ಸಿನಲ್ಲಿದ್ದದ್ದನ್ನು, ವಿಜ್ಞಾಯ—ತಿಳಿದು. [ತಾವು ಅವನಮೇಲೆ ಆಯುಧಗಳನ್ನು ಒಗೆಯಬೇಕು ಎಂದು ಇವನ ಅಭಿಪ್ರಾಯವಿದೆ ಎಂದು ತಿಳಿದು] ನಿಜಾನ್ ಹೇತಿಗಣಾನ್—ತಮ್ಮ ತಮ್ಮ ಆಯುಧಗಳ ಸಮೂಹಗಳನ್ನು, ಅಮುಷ್ಮಿನ್—ಈ ಶಿಶುರೂಪೀ ಹರಿಯಲ್ಲಿ, ಪ್ರಚಿಕ್ಷಿಪುಃ—ಒಗೆದರು. ॥೧೩೭॥

ಸ ಜಾತಮಾತ್ರಃ ಶಿವಪೂರ್ವಕಾಣಾಂ ಶೂಲಾದಿಹೇತೀರಖಿಲಾ ನಿಗೀರ್ಯ ।
ದೈತ್ಯಾತಿಮೋಹಾಯ ನಿಜಂ ಚ ಚಕ್ರಂ ಸ್ವಮುಕ್ತಮಾಶ್ವೇವ ವಶೀ ಸಮಗ್ರಹೀತ್ ॥೧೩೮॥

ಜಾತಮಾತ್ರಃ ಸಃ—ಆದೇ ಹುಟ್ಟಿದ ಆ ಶಿಶುವು, ಶಿವಪೂರ್ವಕಾಣಾಂ—ರುದ್ರದೇವರೇ ಮೊದಲಾದ ದೇವತೆಗಳ, ಅಖಿಲಾಃ ಶೂಲಾದಿಹೇತೀಃ—ಎಲ್ಲ ಶೂಲವೇ ಮೊದಲಾದ ಆಯುಧಗಳನ್ನು, ನಿಗೀರ್ಯ— ನುಂಗಿ, ದೈತ್ಯಾತಿಮೋಹಾಯ—ದೈತ್ಯರಿಗೆ ಅತಿಯಾದ ಮೋಹವು ಹುಟ್ಟುವದಕ್ಕೋಸ್ಕರ, [ವಿಷ್ಣುವಿನಿಗಿಂತಲೂ ಶ್ರೇಷ್ಠನು ಈ ಬುದ್ಧನು ಎಂಬ ಭ್ರಾಂತಿ ಬರುವದಕ್ಕಾಗಿ] ಸ್ವಮುಕ್ತಂ—ತನ್ನಿಂದ [ವಿಷ್ಣುವಿನಿಂದ]ಲೇ ಬಿಡಲ್ಪಟ್ಟ, ನಿಜಂ ಚಕ್ರಂ ಚ—ತನ್ನ ಚಕ್ರವನ್ನೇ. ಚ ವಶೀ - ಯಾವಕಾರಣದಿಂದ ಎಲ್ಲವನ್ನು ತನ್ನಅಧೀನದಲ್ಲಿಟ್ಟುಕೊಂಡವನೋ ಆ ಕಾರಣದಿಂದ, ಆಶು ಏವ—ಕೂಡಲೇ, ಸಮಗ್ರಹೀತ್—ಹಿಡಿದು ಕೊಂಡನು. ॥೧೩೮॥

ತದಾಸನತ್ವೇನ ವಿಧಾಯ ತಸ್ಮಿನ್ ಸಮೂಷ್ಠಿತಂ ದೇವಗಣಾಃ ಪ್ರಣಮ್ಯ ।
ಜಗ್ಮುಃ ಸ್ವಧಾಮಾನಿ ವಂಚಾಂಸಿ ಚಾಸ್ಯ ಸ್ವೀಚಕ್ರುರಾಶ್ವೇವ ಜಿನಾದಿದೈತ್ಯಾಃ ॥೧೫೯॥

ತತ್—ಆ ಚಕ್ರವನ್ನು, ಆಸನತ್ವೇನ ವಿಧಾಯ—ಆಸನವನ್ನಾಗಿ ಮಾಡಿಕೊಂಡು, ತಸ್ಮಿನ್—ಅದರಲ್ಲಿ, ಸಮೂಷ್ಠಿತಂ—ಕುಳಿತಂಥ, ಆ ಶಿಶುರೂಪಿಯಾದ ಶ್ರೀಹರಿಯನ್ನು, ದೇವಗಣಾಃ—ದೇವತೆಗಳ ಸಮೂಹಗಳು, ಪ್ರಣಮ್ಯ—ನಮಸ್ಕರಿಸಿ, ಸ್ವಧಾಮಾನಿ ಜಗ್ಮುಃ—ತಮ್ಮ ಲೋಕಗಳಿಗೆ ಹೋದರು. ಚ—ಆಗ, ಜಿನಾದಿದೈತ್ಯಾಃ—ಜಿನಾದಿದೈತ್ಯರು, ಅಸ್ಯ — ಈ ಬುದ್ಧನ, ವಚಾಂಸಿ—ಮಾತುಗಳನ್ನು, ಆಶು ಏವ—ಕೂಡಲೇ, ಸ್ವೀಚಕ್ರುಃ — ಸ್ವೀಕರಿಸಿದರು. ನಂಬಿದರು. ॥೧೫೯॥

ತೇ ಜ್ಞಾನಧರ್ಮಾವಪಹಾಯ ಪಾಪಾ ವಿಮೋಹಿತಾ ದೇವವರೇಣ ಸರ್ವೇ ।
ಜಗ್ಮುಸ್ತವೋಽಂಧಂ ಕ್ಷಣಿಕಂ ಸಮಸ್ತಂ ಜ್ಞಾನಂ ನಸಚ್ಚೇತಿ ದೃಢಂ ಸ್ಮರಂತಃ ॥೧೪೦॥

ದೇವವರೇಣ—ದೇವೋತ್ತಮನಾದ, ಶ್ರೀಹರಿಯಿಂದ, ವಿಮೋಹಿತಾಃ—ಮೋಹಗೊಳಿಸಲ್ಪಟ್ಟ, ಪಾಪಾಃ ತೇ ಸರ್ವೇ—ಪಾಪಿಗಳಾದ ಆ ಎಲ್ಲ ದೈತ್ಯರು, ಜ್ಞಾನಧರ್ಮೌ—ತಾವು ಇಲ್ಲಿಯವರೆಗೆ ಹೊಂದಿದ ತತ್ವಜ್ಞಾನ ಧರ್ಮ ಮಾರ್ಗಗಳನ್ನು, ಅಪಹಾಯ—ಬಿಟ್ಟು (ತ್ಯಜಿಸಿ). ಸಮಸ್ತಂ ಕ್ಷಣಿಕಂ—ಎಲ್ಲ ಜಗತ್ತು ಕ್ಷಣಿಕವು, ಜ್ಞಾನಂ—ಜ್ಞಾನ ರೂಪವು, ನ ಸತ್ ಇತಿ ಚ—ಅಸತ್ ಎಂಬುದಾಗಿಯೇ, ದೃಢಂ ಸ್ಮರಂತಃ ಸಂತಃ—ದೃಢವಾಗಿ ಸ್ಮರಿಸುವವರಾಗಿ, ಅಂಧಂ ತಮಃ—ಅಂಧಂತಮಸ್ಸನ್ನು ಕುರಿತು, ಜಗ್ಮುಃ—ಹೋದರು. (ಹೊಂದಲು ಸಿದ್ಧರಾದರು) ॥೧೪೦॥

ನಾರಾಯಣೋಽಪ್ಯಾಪ್ಯ ಸುರೇಂದ್ರವೃಂದಂ ವೃತ್ತಂ ಚ ತೇಷಾಮಖಿಲಂ ನಿಗದ್ಯ ।
ಪೃಷ್ಟಶ್ಚ ತೈರಾಹ ನಿಜಂ ಹೃದಿಸ್ಥಂ ಬೌದ್ಧಾಗಮಾರ್ಥಂ ಸೃತಿಬಂಧಮೋಚನಮ್ ॥೧೪೧॥

ನಾರಾಯಣಃ ಅಪಿ—ಶಿಶುರೂಪಿಯಾದ ಆ ಶ್ರೀಹರಿಯಾವರೂ. ಸುರೇಂದ್ರವೃಂದಂ ಆಪ್ಯ—(ಈ ಭೂಮಿಯಲ್ಲಿಯ ಅಸುರ ಮೋಹನಕಾರ್ಯವನ್ನು ಮುಗಿಸಿ) ದೇವತೆಗಳ ಸಮೀಪಕ್ಕೆ ಬಂದು, ತೇಷಾಂ—ಅವರಿಗೆ, ಅಖಿಲಂ ವೃತ್ತಂ—ಎಲ್ಲ ವಾರ್ತೆಯನ್ನು, ನಿಗದ್ಯ—ಹೇಳಿ, ತೈಃ—ಅವರೆಲ್ಲರಿಂದ, ಪೃಷ್ಟಃ ಸನ್—(ಆ ಬೌದ್ಧಶಾಸ್ತ್ರದ ಅಭಿಪ್ರಾಯವನ್ನು) ಕೇಳಲ್ಪಟ್ಟವನಾಗಿ, ಹೃದಿಸ್ಥಂ—ತನ್ನ ಮನಸ್ಸಿನಲ್ಲಿರುವ, ನಿಜಂ—ವಾಸ್ತವಿಕವಾದ, ಸೃತಿಬಂಧ ಮೋಚನಂ—ಸಂಸಾರ ಬಂಧನವ ಬಿಡುಗಡೆಯನ್ನು ಮಾಡುವ,—ಬೌದ್ಧಾಗಮಾರ್ಥಂ—ಬೌದ್ಧಶಾಸ್ತ್ರದ ತನಗೆ ಅಭಿಪ್ರೇತವಾದ ಅರ್ಥವನ್ನು, ಆಹ—[ಆ ದೇವತೆಗಳಿಗೆ] ಹೇಳಿದನು. ॥೧೪೧॥

ಭಾವಾನುವಾದ ೧೫೪—೧೪೧

ದೇವತೆಗಳು ಕ್ಷೀರಸಮುದ್ರದ ಉತ್ತರ ತೀರದಲ್ಲಿ ನಿಂತು ಶ್ರೀಹರಿಯನ್ನು ಸ್ತುತಿಸಿ, ದೈತ್ಯರಿಗೆ ಆಗಿರುವ ತತ್ವಜ್ಞಾನವನ್ನು ಹೋಗಲಾಡಿಸಿ ವಿಘ್ನಾಜ್ಞಾನವನ್ನು ಅವರು ಹೊಂದುವಂತೆ ಮಾಡಲು ಪ್ರಾರ್ಥಿಸಿದಾಗ ಅಭಯ ಪ್ರದಾನ ಮಾಡಿದ ಭಗವಂತನು, ಸುಂದರ ಶಿಶುವಾಗಿ ಈಗ ಭೂಮಿಯಲ್ಲಿ ಹುಟ್ಟಿದ, ಹಿಂದಿನ ತ್ರಿಪುರಾಸುರರಲ್ಲಿ ಪ್ರಧಾನನಾದ ಈಜಿಜಿಸ ಎಂದು ಶುದ್ಧೋದನ ಎಂದು ಹೆಸರುಳ್ಳವನ ಹೆಂಡತಿ 'ಗಯಾಳಲ್ಲಿ' ಹುಟ್ಟಿದ ಕೂಸನ್ನು ದೂರಕ್ಕೆ ಎಸೆದು ಅದರ ಸ್ಥಾನದಲ್ಲಿ ತಾನು ಕುಳಿತನು. ಪರಿವಾರದ ಜನರೆಲ್ಲ ಇದೇ ತಮ್ಮ ಮಗುವೆಂದು ತಿಳಿದು ಅದಕ್ಕೆ ವೈದಿಕ ಸಂಸ್ಕಾರಗಳನ್ನು ಜಾತಕರ್ಮಾದಿಗಳನ್ನು ಮಾಡಲು ಪ್ರವೃತ್ತರಾದವರು. ಅವರ ಆ ಮಾರ್ಗವನ್ನು ಬಿಡಿಸುವದಕ್ಕಾಗಿ ಪ್ರವೃತ್ತನಾದ ಶಿಶುರೂಪಿ ಭಗವಂತನು ಜೋರಾಗಿ ನಗಲಾರಂಭಿಸಿದನು, ಅದನ್ನು ನೋಡಿ ಆಶ್ಚರ್ಯಗೊಂಡು ಅವರೆಲ್ಲ 'ನೀನು ಯಾರು' ಎಂದು ಕೇಳಿದಾಗ 'ನಾನು ಬುದ್ಧನು'(—ಸದಾ ಜ್ಞಾನಸ್ವರೂಪನು ಎಂಬಅಭಿಪ್ರಾಯದಲ್ಲಿ) ಹೇಳಿದನು. ಅವರಿಗೆಲ್ಲ ಬೌದ್ಧ ಮತದ ತತ್ವಗಳನ್ನು ಹೇಳಿದನು. ಅವರೆಲ್ಲ ಆ ತತ್ವಗಳನ್ನು

ನಂಬದಿರುವಾಗ ನಂಬುವಂತೆ ಮಾಡಲೆಂದು ಪವಾಡತೋರಿಸಬೇಕೆಂದು ದೇವತೆಗಳನ್ನು ಸ್ಮರಿಸಿದನು. ಭಗವಂತನ ಅಭಿಪ್ರಾಯವನ್ನು ತಿಳಿದ ರುದ್ರಾದಿದೇವತೆಗಳು ಪ್ರಕಟರಾಗಿ ತಮ್ಮ ಶೂಲಾದಿ ಆಯುಧಗಳನ್ನು ಆ ಕೂಸಿನ ಮೇಲೆ ಒಗೆದರು. ಅವೆಲ್ಲವನ್ನು ಆ ಕೂಸು ನುಂಗಿತು. ಆಗ ಶ್ರೀವಿಷ್ಣುವೇ ಬಂದು ಚಕ್ರವನ್ನು ಒಗೆದನು. ಅದನ್ನು ಹಿಡಿದು ತನ್ನ ಆಸನವನ್ನಾಗಿ ಮಾಡಿಕೊಂಡು ಅದರ ಮೇಲೆ ಕುಳಿತನು. ದೇವತೆಗಳೆಲ್ಲ ಅವನಿಗೆ ನಮಸ್ಕರಿಸಿ ತಮ್ಮ ಸ್ಥಾನಗಳಿಗೆ ಹೋದರು. ಇದನೆಲ್ಲ ನೋಡಿದ ದೈತ್ಯ ಸ್ವರೂಪದ ಜಿನ ಹಾಗು ಆ ಪರಿವಾರಜನರು ಈ ಕೂಸನ್ನು ವಿಷ್ಣುವಿಗಿಂತಲೂ ಶ್ರೇಷ್ಠನಾದವನು ಎಂದು ಭ್ರಮಿಸಿ ಅವನು ಹೇಳಿದ್ದನ್ನೆಲ್ಲವನ್ನು ನಂಬಿದರು. ಇಲ್ಲಿಯವರೆಗೆ ಸತ್ಸಹವಾಸವಶಾತ್ ಬಂದ ತತ್ವಜ್ಞಾನ, ಸದ್ಧರ್ಮಗಳನ್ನು ಬಿಟ್ಟರು. ಬುದ್ಧದೇವನು ಹೇಳಿದಂತೆ ಜಗತ್ತು ಕ್ಷಣಿಕ; ಜ್ಞಾನರೂಪವೇ ಆಗಿದೆ, ಅಸತ್ ಆಗಿದೆ ಎಂದು ಗಟ್ಟಿಯಾಗಿ ನಂಬಿ ಅದನ್ನೇ ಅನುಸಂಧಾನದಲ್ಲಿ ಸದಾತಂದು ಅಂಧಂತಮಸ್ಸಿಗೆ ಹೋಗಲು ಸಿದ್ಧರಾದರು. ಇಷ್ಟಮಾಡಿದ ಭಗವದವತಾರನಾದ ಆ ಬುದ್ಧದೇವನು ಅದೃಶ್ಯನಾಗಿ ದೇವತೆಗಳ ಹತ್ತಿರ ಬಂದು ಎಲ್ಲ ವೃತ್ತವನ್ನು ಹೇಳಿದನು. ಭಗವಂತನು ಹೇಳಿದ ಕ್ಷಣಿಕ, ಜ್ಞಾನ, ಶೂನ್ಯ, ಅಸತ್ ಇತ್ಯಾದಿಗಳ ಅರ್ಥದ ಬಗ್ಗೆ ಕೇಳಿದಾಗ ತನಗೆ ಅಭಿಪ್ರೇತವಾದ ನಿಜಾರ್ಥವನ್ನು ಹೇಳಿದನು.

ಅವತಾರಿಕೆ :— ಜಗತ್ತು ಕ್ಷಣಿಕ ಎಂಬುದರ ನಿಜಾಭಿಪ್ರಾಯವನ್ನು ಹೇಳುತ್ತಾನೆ—

ಕ್ಷಣಾದಯಃ ಕ್ಷಣಿಕಾಸ್ತದ್ವಿಶೇಷಾ ಯತಃ ಪ್ರಯಾಂತ್ಯೇವ ನಿಸರ್ಗತೋಽಖಿಲಾಃ ।
ತತಃ ಸ್ಥಿರತ್ವೇಽಪಿ ವಿಶೇಷ ಸಂಶ್ರಯಾದುಕ್ತಂ ಕ್ಷಣಸ್ಥಾಯಿ ಮಯಾ ಸಮಸ್ತಮ್ ॥೧೪೨॥

ಕ್ಷಣಾದಾಯಃ—ಕ್ಷಣ, ಲವಾದಿಕಾಲಗಳು, ಕ್ಷಣಿಕಾಃ – ಅಲ್ಪ ಸಮಯವಮಾತ್ರ ಇರುವವುಗಳು; ಹಾಗೆ ಯತಃ—ಯಾವಕಾರಣದಿಂದ, ಅಖಿಲಾಃ ತದ್ವಿಶೇಷಾಃ—ಜಗತ್ತಿನ ವಿಶೇಷಗಳಾದ ಎಲ್ಲ ಘಟಪಟಾದಿಗಳೂ ಕೂಡ, ನಿಸರ್ಗತಃ—ಸ್ವಾಭಾವಿಕವಾಗಿ, ಪ್ರಯಾಂತಿ ಏವ—ನಾಶವನ್ನು ಹೊಂದಿಯೇ ಹೊಂದುವವೋ ಆದ್ದರಿಂದ ಎಲ್ಲವು, ಕ್ಷಣಿಕಾಃ—ಕ್ಷಣಿಕಗಳು ಎಂದು ಹೇಳಲ್ಪಡುವವು; ತತಃ—ಆದ್ದರಿಂದ ಸ್ಥಿರತ್ವೇಽಪಿ—ಜಗತ್ತು ಸ್ಥಿರವಾಗಿದ್ದರೂ ಕೂಡ, (ಜಗತ್ತಿನಲ್ಲಿ ಆಶುತರವಿನಾಶಿತ್ವ ಎಂಬ ಧರ್ಮವು ಸ್ಥಿರವಾಗಿದೆಯಾದರೂ ಕೂಡ] ವಿಶೇಷಸಂಶ್ರಯಾತ್—ಜಗತ್ತಿಗೂ ಆ ಧರ್ಮಕ್ಕೂ ಅಭೇದವಿದ್ದದ್ದರಿಂದ ಕ್ಷಣಿಕವೇ ಆಯಿತು. ವಿಶೇಷವಿದ್ದದ್ದರಿಂದ ಜಗತ್ತಿನ ಧರ್ಮವೂ ಆಗುವದು. ಈ ಅಭಿಪ್ರಾಯದಿಂದ, ಮಯಾ—ನನ್ನಿಂದ, ಸಮಸ್ತಂ—ಎಲ್ಲವು, ಕ್ಷಣಸ್ಥಾಯಿ ಉಕ್ತಂ—ಕ್ಷಣಿಕವೆಂದು ಹೇಳಲ್ಪಟ್ಟಿತು. ॥೧೪೨॥

ತದ್ವಾನ್ ವಿಶೇಷಶ್ಚ ಯತೋ ನ ಭಿನ್ನೌ ಸದಾ ಸ್ವನಿರ್ವಾಹಕಶಕ್ತಿಯುಕ್ತೌ ।
ಅತಃ ಕ್ಷಣಸ್ಥಾಯಿ ಸಮಸ್ತಮೇತತ್ ಸ್ಥಿರಾತ್ಮಕಂ ಚೇತಿ ಹಿ ನಾಸ್ತಿ ಭೇದಃ ॥೧೪೩॥

ವಿಶೇಷಃ—ವಿಶೇಷವು, ತದ್ವಾನ್—ಅದುವುಳ್ಳವಸ್ತುವು, ಯತಃ—ಯಾವಕಾರಣದಿಂದ, ನ ಭಿನ್ನೌ—ಬೇರೆಯಲ್ಲವೋ ಸದಾ—ಯಾವಾಗಲೂ, ಸ್ವನಿರ್ವಾಹಕ ಶಕ್ತಿಯುಕ್ತೌ—ತನನ್ನು ಕೂಡಿಸುವ ಶಕ್ತಿಯುಳ್ಳದ್ದು ಆಗಿರುವದೋ, ಅತಃ—ಆದ್ದರಿಂದ, ಏತತ್ ಸಮಸ್ತಂ—ಇದೆಲ್ಲವೂ, ಕ್ಷಣಸ್ಥಾಯಿ—ಕ್ಷಣಿಕವು, ಸ್ಥಿರಾತ್ಮಕಂ ಚ—ಸ್ಥಿರವೂ ಆಹುದು, ಇತಿ—ಎಂಬ ವಚನಗಳಲ್ಲಿ, ಭೇದಃ ನಾಸ್ತಿ—ವಿರೋಧವಿಲ್ಲ. ॥೧೪೩॥

ಭಾವಾನುವಾದ ೧೪೨—೧೪೩

ಪ್ರತಿಯೊಂದು ಕ್ಷಣವು ತನ್ನ ಕ್ಷಣದಲ್ಲಿಯೇ ಇರುವದು; ಬೇರೆ ಕ್ಷಣದಲ್ಲಿ ಇರುವುದಿಲ್ಲ; ಘಟಪಟಾದಿ-ಪದಾರ್ಥಗಳು ಅನೇಕ ಕಾಲದಲ್ಲಿದ್ದರೂ ಕ್ಷಣದಲ್ಲಿ ಕೂಡ ಇರುತ್ತವೆ. ೧೦ ಕ್ಷಣದಲ್ಲಿರುವಂಥದ್ದು ಒಂದು ಕ್ಷಣದಲ್ಲಿದೆ ಎಂಬುದು 'ಶತೇ ಪಂಚಾಶತ್' ಎಂಬ ನ್ಯಾಯದಿಂದ ನೂರು ರೂ ಇರುವಾಗ ಐವತ್ತು ರೂ ಇದೆ ಎಂದು ಹೇಳುವದುರ

ಹೇಗೆ ಸತ್ಯವಾದದ್ದೋ ಹಾಗೆ ಸತ್ಯವೇ ಆಗಿದೆ. ಆ ಅರ್ಥದಲ್ಲಿ ಜಗತ್ತು ಬಹು ದಿನ ಇರುವಂಥದಾಗಿದ್ದರೂ ಒಂದಲ್ಲ ಒಂದುದಿನ ಖಂಡಿತ ನಾಶ ಹೊಂದುವಂಥದ್ದು 'ಆಶುತರವಿನಾಶಿ' ಯಾದ್ದರಿಂದ ಕ್ಷಣಿಕ ಎಂದು ಹೇಳಿದ್ದು. ಜಗತ್ತು ಆಶುತರವಿನಾಶಿ ಎಂದ ಮೇಲೆ ಅದರಲ್ಲಿ ಆಶುತರವಿನಾಶಿತ್ವ ಎಂಬ ಧರ್ಮವು ಯಾವಾಗಲೂ ಇರುವಂಥದು ಆಯಿತು. ಆ ಧರ್ಮಕ್ಕೆ ನಾಶವಿಲ್ಲ. ಅಂದ ಮೇಲೆ ಜಗತ್ತಿನ ಪೈಕಿ ಒಂದಾದ ಆ ಧರ್ಮವು ಕ್ಷಣಿಕ ಎಂದು ವಿನಾಶಿ ಏಂಬ ಅಭಿಪ್ರಾಯದಲ್ಲಿ ಕೂಡ ಹೇಳಲು ಬಾರದ್ದರಿಂದ ಜಗತ್ತು ಕ್ಷಣಿಕ ಎಂಬ ಮಾತು ಈ ಧರ್ಮದ ವಿಷಯದಲ್ಲಿ ಸುಳ್ಳಾಗುವದಲ್ಲ ಎಂದರೆ ಆ ಧರ್ಮವು ಜಗತ್ಸ್ವರೂಪವೇ ಆಗಿದೆ.ಅಭಿನ್ನವೇ ಆಗಿದೆ. ಜಗತ್ತು ಕ್ಷಣಿಕ;ಅಂದ ಮೇಲೆ ಅದರಿಂದ ಅಭಿನ್ನವಾದ ಆ ಧರ್ಮವೂ ಕೂಡ ಕ್ಷಣಿಕವೆಂದಾಯಿತುಃ ೧] ಅಭಿನ್ನವಾದರೆ ಅದರ ಧರ್ಮ ಇದು ಎಂಬುದನ್ನು ಹೇಗೆ ಕೂಡಿಸುವದು? ೨] ಅಭಿನ್ನವಾದ್ದರಿಂದ ಕ್ಷಣಿಕ ಎಂದು ಹೇಳಿದರೆ ಆ ಧರ್ಮವೂ 'ವಿನಾಶಿ' ಎಂದಾಯಿತು. ಧರ್ಮವು ಯಾವಾಗಲೂ ಜಗತ್ತಿನಲ್ಲಿ ಇರುವದು ಎಂದರೆ 'ಸ್ಥಿರ' ಎಂದಾಯಿತು. ಹೀಗಾಗಿ ಆ ಧರ್ಮವು 'ಕ್ಷಣಿಕ' 'ಸ್ಥಿರ' ಎಂದು ವಿರುದ್ಧವಾಗಿ ಹೇಳಿದಂತಾಗುವದಲ್ಲ ಎಂಬ ಎರಡು ಶಂಕೆಗಳು ಬಂದರೆ ಆ ಧರ್ಮ ಹಾಗೂ ಜಗತ್ತಿಗೆ ಅಭೇದವಿದ್ದರೂ ಭೇದಕಾರ್ಯನಿರ್ವಾಹಕವಾದ ವಿಶೇಷಪೆಂಬ ಒಂದಂ ಶಕ್ತಿ ಇದ್ದದ್ದರಿಂದ ಅದು ಕ್ಷಣಿಕ ಎಂಬುದನ್ನು, ಅದರ ಧರ್ಮ ಎಂಬುದನ್ನು, ಸ್ಥಿರ ಎಂಬುದನ್ನು ಕೂಡಿಸುವದು. ಆದ್ದರಿಂದ ಯಾವ ವಿರೋಧವಿಲ್ಲ ಎಂದು ಹೇಳಿದನು. ಆದ್ದರಿಂದ ಜಗತ್ತು ಕ್ಷಣಿಕ ಎಂದರೆ ಒಂದೇ ಕ್ಷಣ ಇರುವದು ಎಂಬ ಅರ್ಥವಲ್ಲಿ ಹೇಳಿದ್ದಲ್ಲ; ಅನಿತ್ಯ ಎಂಬ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದು ಎಂದು ತಿಳಿಸಿದನು. ಈ ಅಭಿಪ್ರಾಯವನ್ನು ತಿಳಿಯದೇ ಅಸುರರು ಮಾತ್ರ ಒಂದೇ ಕ್ಷಣದಲ್ಲಿರುವದು ಎಂಬ ಭ್ರಾಂತಿಯನ್ನು ಹೊಂದಿ ಅದನ್ನೇ ಪ್ರಚಾರಮಾಡಿದರು.

ಅವತಾರಿಕೆ ೫— ಜಗತ್ತು ವಿಜ್ಞಾನರೂಪ ಎಂದು ಹೇಳಿದ್ದರ ಅಭಿಪ್ರಾಯವನ್ನು ಹೇಳುತ್ತಾನೆ.

ಜ್ಞೋಽಹಂ ಸದೈಕಃಪರಮೋ ಮಯೈತತ್ ಸದಾಽನನೀಯಂ ಹಿ ಯತೋಽಸ್ವತಂತ್ರವಮ್ ।
ಜ್ಞಾನಾತ್ಮಕಂ ವಿಶ್ವಮತೋ ಮಯೋಕ್ತಂ ಜಡ ಸ್ವರೂಪಂ ಚ ಕಿಮು ಸ್ಮ ಚೇತನವಮ್॥೧೪೪॥

ಅಹಂ ಏಕಃ—ನಾನೊಬ್ಬನು, ಸದಾ ಪರಮಃಜ್ಞಃ—ಯಾವಾಗಲೂ ಚೆನ್ನಾಗಿ ತಿಳಿದವನು. ಆದ್ದರಿಂದ 'ಜ್ಞ' ಎಂದು ಹೆಸರುಳ್ಳವನು, ಏತತ್—ಈ ಜಗತ್ತು, ಯತಃ—ಯಾವಕಾರಣದಿಂದ, ಅಸ್ವತಂತ್ರಂ—ಅಸ್ವತಂತ್ರವಾಗಿದೆಯೋ, ತತ್—ಆ ಕಾರಣದಿಂದ ಮಯಾ—ನನ್ನಿಂದ ಅನನೀಯಂ—ಪ್ರೇರಿಸಲ್ಪಡುವದೋ, ಅತಃಹಿ—ಈ ಕಾರಣದಿಂದಲೇ, ವಿಶ್ವಂ—ಜಗತ್ತು ಜ್ಞಾನಾತ್ಮಕಂ (ಜ್ಞ ಪರಮಾತ್ಮನಿಂದಲೇ + ಅನ—ಪ್ರೇರಿತ) ಜ್ಞಾನರೂಪವು ಎಂದು, ಮಯಾ ಉಕ್ತಂ—ನನ್ನಿಂದ ಹೇಳಲ್ಪಟ್ಟಿತು. ಹೀಗೆ ಜಡಸ್ವರೂಪಂ ಚ—ಜ್ಞಾನರೂಪವಲ್ಲದ ಜಡವಸ್ತುವೂ ಕೂಡ ಈ ರೀತಿ ಜ್ಞಾನಾತ್ಮಕವಾಗಿರುವಾಗ, ಜ್ಞಾನಾತ್ಮಕಂ ಚೇತನವಮ್—ಜ್ಞಾನಸ್ವರೂಪವಾದ ಚೇತನ ಸಮೂಹವು, ಕಿಮು?—ಜ್ಞಾನಾತ್ಮಕವೆಂದು ಏನು ಹೇಳುವದು. ಸ್ವತಃಸಿದ್ಧಃ ॥೧೪೪॥

ಶಂಶೀಲಕೋಽಹಂ ಯತ ಏವ ಚೋಚ್ಚಃ ಶೂನಾಮಕಸ್ತದ್ಧಿ ಮಯಾ ನಿಧೇಯವಮ್ ।
ಶೂನ್ಯಾಭಿಧಂ ದೋಷವಿರುದ್ಧರೂಪೋ ದೋಷೋಜ್ಝಿತೋಽನ್ಯಸ್ತ್ವಖಿಲಾದನಾಮಾ ।
ಏನೈವ ಸಾದಂ ತ್ವಸದೇವ ನಾಮತಸ್ತ್ವಭಾವ ಏನೈವ ಭವೇದ್ ಯತಸ್ತತ್ ॥೧೪೫॥

ಅಹಂ—ನಾನು, ಯತಃ—ಯಾವಕಾರಣದಿಂದ,ಶಂಶೀಲಕಃ—ಸುಖಿಸ್ವಭಾವವುಳ್ಳವನೋ[ಶ—ಸುಖಿ + ಉ—ಸ್ವಭಾವ] (ಆದ್ದರಿಂದ ಶು ಎಂದು ಹೆಸರು) ಚ—ಮತ್ತು, ಉಚ್ಚಃ—ಉತ್ತಮನಾಗಿರುವನೋ [ಆದ್ದರಿಂದ ಉ ಎಂದು ಹೆಸರುಳ್ಳವನು]ತತಃ—ಆ ಕಾರಣದಿಂದ, ಅಹಂ ಶೂನಾಮಕಃ—ಶೂ ನಾನು ಎಂಬ ಹೆಸರುಳ್ಳವನು. ಮಯಾ—ಅಂಥ ನನ್ನಿಂದ, ತತ್—ಆ ಜಗತ್ತು, ನಿಧೇಯಂ— ಇಡಲ್ಪಡುವಂಥದ್ದು. ಆದ್ದರಿಂದ ಶೂನ್ಯಾಭಿಧಂ—ಶೂನ್ಯ ಎಂಬ ಹೆಸರುಳ್ಳದ್ದು [ಶೂ + ನಿ + ಯ] ಅಹಂ—ನಾನು, ಯತಃ—ಯಾವಕಾರಣದಿಂದ, ದೋಷವಿರುದ್ಧರೂಪಃ—ದೋಷಗಳಿಗೆ ವಿರುದ್ಧವಾದ ಗುಣಗಳ ಸ್ವರೂಪನೋ, ದೋಷೋಜ್ಝಿತಃ—ದೋಷರಹಿತನೋ, ಅಖಿಲಾತ್

ಅನ್ಯಃ—ಎಲ್ಲ ಪ್ರಪಂಚಕ್ಕಿಂತಲೂ ಭಿನ್ನನೇ, ಆಗಿಬುವನೋ ತತ್—ಆದ್ದರಿಂದ ಅನಾಮಾ—ಅ ಎಂಬ ಹೆಸರುಳ್ಳವನು. ಏನ ಏವ—ಅ ನಾಮಕನಾದ ನನ್ನಿಂದಲೇ, ಯತಃ ಯಾವಕಾರಣದಿಂದ, ಜಗತ್ - ಈ ಜಗತ್ತು, ಸಾದ್ಯಂ—ನಾಶ ಮಾಡಲ್ಪಡುವದೋ, ತತ್—ಆದ್ದರಿಂದ, ಅಸತ್ ಅಸತ್—ಎಂದು ಕರೆಯಲ್ಪಡುತ್ತದೆ. ಯತ್—ಯಾವಕಾರಣದಿಂದ, ಏನ ಏವ—ಅ ನಾಮಕ ಭಗವಂತನಿಂದಲೇ, ಭವೇತ್—ಹುಟ್ಟುವದೋ, ತತ್—ಆದ್ದರಿಂದ, ಅಭಾವಃ—ಅಭಾವ ಎಂದು ಕರೆಯಲ್ಪಡುವದು. ॥೧೪೫॥

ಇತ್ಯಾದಿ ಬೋದ್ಧವ್ಯಮಿದಂ ಸಮಸ್ತಂ ಮಯೋದಿತಂ ಕ್ವಾಪಿ ನ ಹೇಯಮಸ್ತಿ ।
ಇತ್ಯಾದಿ ದೇವಾನ್ ಪ್ರತಿಬೋಧಯಂಶ್ಚ ದೇವೈಃ ಸಹೋವಾಸ ಸ ಬುದ್ಧದೇವಃ ।
ಗತ್ವಾಸ್ಟಧಾಪೂಪ್ಯಪರೇಣ ರೂಪೇಣಾಽಸ್ತೇಪೃಥಕ್ ಚೈಕತನುರ್ಯಥೇಷ್ಟವ್ ॥೧೪೬॥

ಮಯಾ ಉದಿತಂ ಇದಂ ಸಮಸ್ತಂ— ನನ್ನಿಂದ ಆ ಜಿನಾದಿಗಳಿಗೆ ಹೇಳಲ್ಪಟ್ಟ ಈ ಎಲ್ಲ ವಿಷಯವು, ಎಲ್ಲ ವಾಕ್ಯವು, ಇತ್ಯಾದಿಬೋದ್ಧವ್ಯಂ—ಇಲ್ಲಿಯವರೆಗೆ ನಿರೂಪಿಸಿದ ರೀತಿಯಲ್ಲಿ ತಿಳಿಯಲ್ಪಡಬೇಕು. ಕ್ವ ಅಪಿ—ನಾನು ಹೇಳಿದ ಯಾವ ಮಾತಿನಲ್ಲಿಯೂ ಕೂಡ, ಹೇಯಂ—ತ್ಯಜಿಸಲ್ಪಡಬೇಕಾದ ವಿಷಯವು, ನ ಅಸ್ತಿ—ಇರುವದಿಲ್ಲ ಇತ್ಯಾದಿ ಇದೇ ಮೊದಲಾವ ವಿಷಯುಗಗಳನ್ನು, ದೇವಾನ್ ಪ್ರತಿ—ದೇವತೆಗಳನ್ನು ಕುರಿತು, ಬೋಧಯನ್ ತಿಳಿಸಿದಂಥ ಸಃಬುದ್ಧದೇವಃ—ಆ ಬುದ್ಧದೇವನು, ದೇವೈಃಸಹ ಉವಾಸ—ದೇವತೆಗಳಿಂದ ಕೂಡಿಕೊಂಡು ವಾಸಮಾಡಿದನು.ತೇಸಃ—ಆ ಬುದ್ಧದೇವರು, ಅಪರೇಣ ರೂಪೇಣ—ಇನ್ನೊಂದುರೂಪದಿಂದ, ಸ್ವಧಾಮು ಅಪಿ—ತನ್ನ ಸ್ಥಾನಕ್ಕೂ ಕೂಡ, ಗತ್ವಾ—ಹೋಗಿ, ಯಥೇಷ್ಟಂ—ತನ್ನ ಇಚ್ಛೆಯಂತೆ, ಏಕತನುಃಸನ್—ಐಕ್ಯವುಳ್ಳವನಾಗಿ, ಪೃಥಕ್ ಚ—ಬೇರೆಯಾಗಿಯೂ, ಆಸ್ತೇ—ಇರುವನು. ॥೧೪೬॥

ತತಸ್ತು ಬುದ್ಧೋದಿತಪಕ್ಷಸಂಸ್ಥೋ ಜಿನೋಽಪಿ ಚಕ್ರೇ ಮತಮನ್ಯದೇವ ।
ಬೌದ್ಧೇನ ಜೈನೇನ ಮತೇನ ಚೈವ ದೈತ್ಯಾಂಶಕಾಃಪ್ರೀತಿಮಗುಃಸಮಸ್ತಾಃ ॥೧೪೭॥

ತತಃ ತು—ಆನಂತರ, ಬುದ್ಧೋದಿತಪಕ್ಷಸಂಸ್ಥಃ—ಬುದ್ಧದೇವನು ಹೇಳಿದ ಪಕ್ಷವನ್ನು ಗ್ರಹಿಸಿದ. ಜಿನಃಅಪಿ—ಜಿನನೂ ಕೂಡ, ಅನ್ಯತ್ ಮತಂ ಏವ—ಇನ್ನೊಂದು ಮತವನ್ನೇ,—ಚಕ್ರೇ—ಪ್ರಚಾರಮಾಡಿದನು ಸಮಸ್ತಾಃ ದೈತ್ಯಾಂಶಕಾಃ—ಎಲ್ಲ ದೈತ್ಯಾಂಶರಾದ (ಭೂಮಿಯಲ್ಲಿ ಹುಟ್ಟಿದ) ಜೀತನರು, ಬೌದ್ಧೇನ ಮತೇನ ಏವ—ಬೌದ್ಧ ಮತದಿಂದಲೇ, ಜೈನೇನ ಮತೇನ ಏವ—ಜೈನ ಮತದಿಂದಲೇ, ಪ್ರೀತಿಂ ಅಗುಃ—ಸಂತೋಷವನ್ನು ಹೊಂದಿದರು. ॥೧೪೭॥

ಪ್ರಶಾಂತವಿದ್ಯೇತ್ಯಭಿಧಂ ತಥಾಽನ್ಯದ್ ಬುದ್ಧೋಕ್ತಶಾಸ್ತ್ರಂ ತ್ರಿದಶಾ ಅವಾಪ್ಯ ।
ತೋಷಂ ಯಯುರ್ವೇದಸಮಸ್ತಸಾರಂ ಯಾವನ್ಮಾಸ್ಥಿತಾನಾಮಚಿರೇಣ ಮುಕ್ತಿಃ ॥೧೪೮॥

ಯಾವ – ಯಾವ ವಿದ್ಯೆಯನ್ನು, ಆಸ್ಥಿತಾನಾಂ – ಹೊಂದಿದವರಿಗೆ, ಅಚಿರೇಣ ಬೇಗನೇ, ಮುಕ್ತಿಃ – ಮೋಕ್ಷವು ಆಗುವದೋ, ತಥಾ ವರ್ತಮಾನಂ – ಹಾಗೆ ಇರುವ, ವೇದಸಮಸ್ತಸಾರಂ – ವೇದಗಳ ಎಲ್ಲ ಸಾರಾಂಶಗಳಿಂದ ಕೂಡಿದ. ಪ್ರಶಾಂತವಿದ್ಯೇತ್ಯಭಿಧಂ - ಪ್ರಶಾಂತವಿದ್ಯೆ ಎಂದುಹೆಸರುಳ್ಳ, ಅನ್ಯತ್—ದೈತ್ಯರು ಸ್ವೀಕರಿಸಿದ ಬುದ್ಧ ಶಾಸ್ತ್ರಕ್ಕೆ ವಿರುದ್ಧವಾದ, ಬುದ್ಧೋಕ್ತಶಾಸ್ತ್ರಂ ಬುದ್ಧದೇವರಿಂದ ಹೇಳಲ್ಪಟ್ಟ ಶಾಸ್ತ್ರವನ್ನು, ತ್ರಿದಶಾಃ—ದೇವತೆಗಳು, ಅವಾಪ್ಯ – ಹೊಂದಿ, ತೋಷಂ ಯಯುಃ – ಸಂತೋಷವನ್ನು ಹೊಂದಿದರು. ॥೧೪೮॥

ಭಾವಾನುವಾದ ೧೪೪—೧೪೮

ಜಗತ್ತು ಜ್ಞಾನರೂಪವೆಂದರೆ– ಜ್ಞ ಎಂದರೆ ಸದಾ ಜ್ಞಾನಿಯಾದ ತಾನು. ತನ್ನಿಂದಲೇ ಅಸ್ವಂತ್ರವಾದ ಈ ಜಗತ್ತೆಲ್ಲ ಅನನೀಯ ಪ್ರೇರಿಸಲ್ಪಡುವಂಥದ್ದು ಎಂಬ ಅರ್ಥದಲ್ಲಿ (ಜ್ಞ + ಅನ) ಜ್ಞಾನರೂಪ ಎಂದು ಹೇಳಿದ್ದು. ಚೇತನರಂತೂ ಜ್ಞಾನ ಸ್ವರೂಪರೇ ಆಗಿದ್ದರಿಂದ ಎರಡು ಅರ್ಥಗಳಲ್ಲಿಯೂ ಜ್ಞಾನ ರೂಪರು, ಎಂದು ತಿಳಿಸಿದನು. ಶೂನ್ಯ—ಎಂದರೆ ಶೂ + ನಿಯ. ಇದರಲ್ಲಿ ಶೂ ಶು + ಉ. ಶು ಎಂದರೆ ಸುಖ ಸ್ವರೂಪ, ಉ—ಉಚ್ಚ ಉತ್ಕೃಷ್ಟ, ಅಂಥ. ತನ್ನಿಂದ ನಿಯಮಿಸಲ್ಪಟ್ಟದ್ದು. ಅದಕ್ಕಾಗಿ ಜಗತ್ತು ಶೂನ್ಯ ಎಂದು ನನ್ನ ಹಾರ್ದ. ಅಸತ್, ಅಭಾವ ಎಂಬುದರ ಅರ್ಥವೇನೆಂದರೆ ಇವೆರಡರಲ್ಲಿರುವ. ಅ ಶಬ್ದಕ್ಕೆ ಭಗವಂತನೆಂದು ಅರ್ಥ ಏಕೆಂದರೆ 'ಅ' ವಿರೋಧಿ ಎಂಬ ಅರ್ಥವನ್ನು ಕೊಡುವದರಿಂದ ದೋಷವಿರುದ್ಧ ಗುಣರೂಪನಾದ ಭಗಡಂತನು "ಅ" ಎಂಬುದು ನಿಷೇದಾರ್ಥಕವಾದ್ದರಿಂದ, ದೋಷರಹಿತ ಎಂಬ ಅರ್ಥದಲ್ಲಿ ಭಗವಂತನು "ಅ", 'ಅ' ಎಂಬುದು ಭಿನ್ನಾರ್ಥಕವಾದ್ದರಿಂದ ಎಲ್ಲ ಜಗತ್ತಿನಿಂದ ಭಿನ್ನನಾದ ಭಗವಂತನು "ಅ", ಹೀಗೆ "ಅ" ಎಂಬ ಹೆಸರುಳ್ಳ ಈ ಭಗವಂತನಿಂದಲೇ ನಾಶಪಡಿಸಲ್ಪಡುವಂಥದ್ದು (ಸಾದ್ಯ) ಆದ್ದರಿಂದ ಅಸತ್ ಎಂದೂ ಈ ಭಗವಂತನಿಂದಲೇ ಹುಟ್ಟಿಸಲ್ಪಡುವಂಥದು [ಭಾವ್ಯ] ಆದ್ದರಿಂದ "ಅಭಾವ" ಎಂದೂ ಕರೆಯಲ್ಪಡುವದು, ಇದೇ ಮೊದಲಾದ ಭಗವಂತನ ನಿಜ ಅಭಿಪ್ರಾಯಗಳಿಂದಕೂಡಿದ ಬುದ್ಧದೇವರಿಗೆ ಸಮ್ಮತವಾದ ವೇದಾರ್ಥರೂಪವಾದ, ತಿಳಿದವರ ಸಂಸಾರ ಪರಿಹಾರಕವಾದ ಪ್ರಶಾಂತ ವಿದ್ಯಾ ಎಂಬ ಹೆಸರುಳ್ಳ ಈ ರಹಸ್ಯ ಜ್ಞಾನವನ್ನು ಪಡೆದು ದೇವತೆಗಳೆಲ್ಲ ಬಹುಸಂತೋಷಪಟ್ಟರು. ಜಿನಾದಿ ದೈತ್ಯರು ಮಾತ್ರ ಇದನ್ನು ತಿಳಿಯದೇ ಮೇಲೆ ಮೇಲೆ ತೋರುವ ಅಸತ್ಯ ಅಭಾವ ನಿಷೇಧ ಇತ್ಯಾದಿ ಅರ್ಥವನ್ನು ತಿಳಿದು ತಮಸ್ಸನ್ನು ಹೊಂದುವಂತಾದರು. ಹೀಗೆ ಆ ದೈತ್ಯರನ್ನು ಮೋಹಿಸಿದ ಭಗವಂತನು. ತನ್ನ ಇಚ್ಛೆಯಂತೆ ದೇವತೆಗಳ ಹತ್ತಿರ ಒಂದು ರೂಪದಿಂದ ಇದ್ದು ಇನ್ನೊಂದು ರೂಪದಿಂದ ತನ್ನ ಮೂಲ ರೂಪಕ್ಕೆ ತನ್ನ ಇಚ್ಛಾಪ್ರಕಾರವೇ ಸೇರಿದನು.

ಅನ್ಯೇ ಮನುಷ್ಯಾ ಅಪಿ ಭಾರತಾದ್ಯಂ ಸತ್ಸಂಪ್ರದಾಯಂ ಪರಿಗೃಹ್ಯ ವಿಷ್ಣುಮ್ ।
ಯಜಂತ ಆಪ್ತಃ ಪರಮಾಂ ಗತಿಂ ತನ್ನ ಸೇಹಿರೇ ಕ್ರೋಧವಶಾದಿದೈತ್ಯಾಃ ॥೧೪೯॥

ಅನ್ಯೇ ಮನುಷ್ಯಾಃ ಅಪಿ–ದೇವತೆಗಳಿಗಿಂತ ಬೇರೆಯಾದ ಮುಕ್ತಿಯೋಗ್ಯ ಮನುಷ್ಯರೂ ಕೂಡ, ಭಾರತಾದ್ಯಂ · ಭಾರತಾದಿ ಶಾಸ್ತ್ರವನ್ನು, ಸತ್ಸಂಪ್ರದಾಯಂ–ಸತ್ಸಂಪ್ರದಾಯವನ್ನು, ಪರಿಗೃಹ್ಯ–ಸ್ವೀಕರಿಸಿ, ವಿಷ್ಣುಂ ಯಜಂತಃ ಸಂತಃ–ಶ್ರೀಹರಿಯನ್ನು ಪೂಜಿಸುತ್ತಾ, ಪರಮಾಂ ಗತಿಂ ಆಪ್ತಃ–ಉತ್ತಮಗತಿಯನ್ನು ಹೊಂದಿದರು. ತತ್–ಅದನ್ನು ಕ್ರೋಧವಶಾದಿ ದೈತ್ಯಾಃ -- ಕ್ರೋಧವಶ ದೈತ್ಯರೇ ಮೊದಲಾದ ದೈತ್ಯರು, ನ ಸೇಹಿರೇ ಸಹಿಸಲಿಲ್ಲ(ಭಾರತಾದಿ ಸಚ್ಛಾಸ್ತ್ರದ ಪ್ರಚಾರವನ್ನು ಈ ದೈತ್ಯರು ಸಹಿಸಲಿಲ್ಲ) ॥೧೪೯॥

ಶೈವಂ ತಪಸ್ತೇ ವಿಪುಲಂ ವಿಧಾಯ ಜಗದ್ವಿಮೋಹೋರ್ಜಿತ ಶಕ್ತಿಮಸ್ಮಾತ್ ।
ಪ್ರಾಪ್ಯ ಪ್ರಜಾತಾ ಭುವಿ ಮೋಹನಂ ಚ ಚಕ್ರುಃ ಕುತರ್ಕೈರಭಿದಾಂ ವದಂತಃ॥೧೫೦॥

ತೇ · ಆ ಕ್ರೋಧವಶಾದಿ ದೈತ್ಯರು, ವಿಪುಲಂ ಶೈವಂ ತಪಃ – ಬಹುವಾದ, ಶಿವನ ಉದ್ದೇಶ್ಯವಾದ ತಪಸ್ಸನ್ನು, ವಿಧಾಯ - ಮಾಡಿ, ಅಸ್ಮಾತ್ – ಈ ರುದ್ರದೇವರಿಂದ, ಜಗದ್ವಿಮೋಹೋರ್ಜಿತ ಶಕ್ತಿಂ – ಜಗತ್ತನ್ನೇ ಮೋಹಿಸುವ ಶಕ್ತಿಯನ್ನು, ಪ್ರಾಪ್ಯ - ಹೊಂದಿ, ಭುವಿ ಪ್ರಜಾತಾಃ ಸಂತಃ - ಭೂಮಿಯಲ್ಲಿ ಹುಟ್ಟಿದವರಾಗಿ, ಕುತರ್ಕೈಃ – ಕುಚ್ಛಿತ (ದುಷ್ಟ)ವಾದ ಯುಕ್ತಿಗಳಿಂದ, ಅಭಿದಾಂ – [ಜೀವಪರಮಾತ್ಮರಿಗೆ] ಐಕ್ಯವನ್ನು, ವದಂತಃ ಸಂತಃ – ಹೇಳುವವರಾಗಿ, ಮೋಹನಂಚ ಮೋಹಕವಾದ ಶಾಸ್ತ್ರವನ್ನೂ, ಚಕ್ರುಃ – ಮಾಡಿದರು. ॥೧೫೦॥

ತೇಷಾಂ ಪ್ರಪಾತಾಯ ಸತಾಂ ಚ ಮುಕ್ತ್ಯೈ ಜನ್ಮಾಽಸ ಭೀಮಸ್ಯ ಯದುಕ್ತಮತ್ರ ।
ದುರ್ಗಾ ಪುನರ್ವಿಪ್ರಕುಲೇಽವತೀರ್ಣಾ ಹನಿಷ್ಯತಿ ವ್ರಾತಮಥಾಸುರಾಣಾಮ್ ॥೧೫೧॥

ತೇಷಾಂ– ಆ ಕ್ರೋಧವಶಾದಿ ದೈತ್ಯರ, ಪ್ರಪಾತಾಯ– [ಅಂಧಂತಮಸ್ಸಿನಲ್ಲಿ] ಬೀಳುವಿಕೆಗಾಗಿ, ಚ—ಮತ್ತು, ಸತಾಂ ಮುಕ್ತ್ಯೈ–ಸಜ್ಜನರಿಗೆ ಮೋಕ್ಷವಾಗುವದಕ್ಕಾಗಿ ಯತ್ —ಯಾವದು ಅತ್ರ ಉಕ್ತಂ—ಈ ಗ್ರಂಥದ ಇದೇ ಅಧ್ಯಾಯದಲ್ಲಿ ಜಾತಃಪುನಃ ವಿಪ್ರತನುಃಸ ಭೀಮಃ ದೈತ್ಯೈಃನಿಗೂಢಂ ಹರಿತತ್ವಮಾಹ ಎಂಬಲ್ಲಿ ವರ್ಣಿಸಲ್ಪಟ್ಟಿದೆಯೋ [ದ್ವಿತೀಯಾಧ್ಯಾಯದಲ್ಲಿ ಬಳಿತ್ಥಾ ಸೂಕ್ತವನ್ನು ಉದಾಹರಿಸಿ ವರ್ಣಿಸಲ್ಪಟ್ಟಿದೆಯೋ] ತತ್–ಆ, ಭೀಮಸ್ಯ –ಭೀಮಸೇನರ ಭೀಮಸೇನರಾಗಿ ಭೂಮಿಯಲ್ಲಿ ಅವತರಿಸಿದ ವಾಯ್ವಂಶದ ಜನ್ಮ–ಅವತಾರವು [ಮಧ್ವರೂಪಾವತಾರವು] ಪುನಃ ಆಸ–ಮತ್ತೆಆಯಿತು. ಅಥಃ–ಇದರ ನಂತರ, ದುರ್ಗಾ–ದುರ್ಗಾದೇವಿಯು ವಿಪ್ರಕುಲೇ ಅವತೀರ್ಣಾ ಸತೀ–ಬ್ರಾಹ್ಮಣ ಕುಲದಲ್ಲಿ ಅವತರಿಸಿದವಳಾಗಿ. ಅಸುರಾಣಾಂ ವ್ರಾತಂ–ಅಸುರರ ಸಮೂಹವನ್ನು, ಹನಿಷ್ಯತಿ ಸಂಹರಿಸುವಳು. ॥೧೫೧॥

ತತಕಲೇರಂತಮವಾಪ್ಯ ಧರ್ಮಜ್ಞಾನಾದಿ ಕಲ್ಯಾಣಗುಣಪ್ರಹೀನೇ ।
ಲೋಕೇ ವಿರಿಂಚತ್ರಿಪುರಘ್ನಶಕ್ರಪೂರ್ವಾಃ ಪಯೋಬ್ಧಿಂ ತ್ರಿದಶಾಃ ಪ್ರಜಗ್ಮುಃ ॥೧೫೨॥

ತತಃ–ಆ ಘಟನೆಯ ನಂತರ, ಕಲೇಃ ಅಂತಂ ಅವಾಪ್ಯ–ಕಲಿಯುಗದ ಕೊನೆಯನ್ನು ಹೊಂದಿ, [ಆಗ] ಲೋಕೇ–ಎಲ್ಲ ಜನರು, ಧರ್ಮಜ್ಞಾನಾದಿಕಲ್ಯಾಣಗುಣಪ್ರಹೀನೇ ಸತಿ–ಧರ್ಮಜ್ಞಾನವೊದಲಾದ ಸದ್ಗುಣಗಳಿಂದ ರಹಿತವಾಗಿರುತ್ತಿರಲು, ವಿರಿಂಚತ್ರಿಪುರಘ್ನಶಕ್ರಪೂರ್ವಾಃ–ಬ್ರಹ್ಮದೇವರು ರುದ್ರದೇವರು ಇವರೇ ಮೊದಲಾದ, ತ್ರಿದಶಾಃ—ದೇವತೆಗಳು, ಪಯೋಬ್ಧಿಂ—ಕ್ಷೀರಸಮುದ್ರವನ್ನು ಕುರಿತು, ಪ್ರಜಗ್ಮುಃ–ಹೋದರು. ॥೧೫೨॥

ನಾರಾಯಣಸ್ತೈಃ ಸ್ತುತಿಪೂರ್ವಮರ್ಥಿತೋ ಭವಾಯ ಲೋಕಸ್ಯ ಸ ಶಂಭಳಾಖ್ಯೇ ।
ಗ್ರಾಮೇ ಮುನೇರ್ವಿಷ್ಣುಯಶೋಽಭಿಧಸ್ಯ ಗೃಹೇ ಬಭೂವಾಽವಿರಚಿಂತ್ಯಶಕ್ತಿಃ ॥೧೫೩॥

ತೈಃ—ಆ ದೇವತೆಗಳಿಂದ, ಸ್ತುತಿಪೂರ್ವಂ ಅರ್ಥಿತಃ—ಸ್ತೋತ್ರಪೂರ್ವಕವಾಗಿ ಅವತಾರಕ್ಕಾಗಿ ಪ್ರಾರ್ಥಿಸಲ್ಪಟ್ಟ, ಅಚಿಂತ್ಯಶಕ್ತಿಃ ನಾರಾಯಣಃ—ಅಂಚಿತ್ಯಶಕ್ತಿಯುಳ್ಳ ನಾರಾಯಣದೇವರು, ಲೋಕಸ್ಯ ಭವಾಯ—ಲೋಕದ ಕಲ್ಯಾಣಕ್ಕಾಗಿ, ಶಂಭಳಾಖ್ಯೇಗ್ರಾಮೇ–ಶಂಫಲ ಎಂಬ ಗ್ರಾಮದಲ್ಲಿ, ವಿಷ್ಣುಯಶೋಭಿಧಸ್ಯ ಮುನೇಃ–ವಿಷ್ಣುಯಶ ಎಂಬ ಹೆಸರುಳ್ಳ ಮುನಿಯ (ಬ್ರಾಹ್ಮಣನ), ಗೃಹೇ—ಧರ್ಮಪತ್ನಿಯಲ್ಲಿ, ಆವಿರ್ಬಭೂವ—ಪ್ರಕಟರಾದರು. ॥೧೫೩॥

ಅವತಾರಿಕೆ :— ಈ ಅವತಾರನಾಮವನ್ನು ಅದರ ಅರ್ಥವನ್ನು ಹೇಳುತ್ತಾರೆ—

ಕಲೇಸ್ತು ಕಾತ್ಕಾರತ ಏಷ ಕಲ್ಕೀ ಜ್ಞಾನಂ ಕಲಂ ಕಂ ಸುಖಮೇವ ತದ್ವಾನ್ ।
ಕಲ್ಕೀತಿ ವಾ ತೇನ ಸಮಸ್ತದಸ್ಯುವಿನಾಶನಂ ತೇನ ದಿನಾದ್ ವ್ಯಧಾಯಿ ॥೧೫೪॥

ತು—ವಿಶೇಷವಾಗಿ, ಕಲೇಃಕಾತ್ಕಾರತಃಏವ—ಕಲಿಯ ನಿಗ್ರಹವನ್ನು ಮಾಡಿದ್ದರಿಂದಲೇ, ಏಷಃ—ಈ ಭಗವದವತಾರವು, ಕಲ್ಕೀ–ಕಲ್ಕಿ ಎಂಬ ಹೆಸರುಳ್ಳದು, ವಾ—ಅಥವಾ, ಕಲಂ–'ಕಲ' ಎಂದರೆ, ಜ್ಞಾನಂ–ಜ್ಞಾನ ಎಂದು ಅರ್ಥವು ಕಂ—"ಕ" ಎಂದರೆ, ಸುಖಂ ಏವ–ಸುಖ ಎಂದೇ ಅರ್ಥ. ತದ್ವಾನ್—ಅವೆರಡುವುಳ್ಳವನು ತೇನ ಆದ್ದರಿಂದ, ಕಲ್ಕೀ ಇತಿ—ಕಲ್ಕಿ ಎಂದು ನಾಮವುಳ್ಳವನು. ತೇನ–ಆ ಕಲ್ಕಿ ಭಗವಂತನಿಂದ, ಸಮಸ್ತದಸ್ಯುವಿನಾ.–ಶನಂ–ಎಲ್ಲದಃಷ್ಟರಸಂಹಾರವು,ದಿನಾತ್–ಒಂದು ದಿನದಸಮಯದಲ್ಲಿಯೇ, ವಧಾಯಿ—ಮಾಡಲ್ಪಟ್ಟಿತು. ॥೧೫೪॥

ಅಧರ್ಮವೃತ್ತಂ ವಿಮುಖಂ ಹರೇಶ್ಚ ನಿಹತ್ಯ ನಿ:ಶೇಷಜನಂ ತುರಂಗೀ ।
ಸಂಸ್ಥಾಪಯಾಮಾಸ ಸ ಧರ್ಮಸೇತುಂ ಜ್ಞಾನಂ ಸ್ವಭಕ್ತಿಂ ಚ ನಿಜಪ್ರಜಾಸು ॥೧೫೫॥

ತುರಂಗೀ—ಅಶ್ವಾರೂಢನಾದ, ಸ:—ಆ ಕಲ್ಕಿಭಗವಂತನು, ಅಧರ್ಮವೃತ್ತಂ—ಅಧರ್ಮದಲ್ಲಿರುವ, ಹರೇಃ ವಿಮುಖಂ—ಶ್ರೀಹರಿಗೆ ವಿಮುಖರಾಗಿರುವ, ನಿ:ಶೇಷಜನಂ–ಎಲ್ಲ ದುಷ್ಟಜನರನ್ನು, ನಿಹತ್ಯ–ಕೊಂದು, ಧರ್ಮಸೇತುಂ–ಧರ್ಮಮಾರ್ಗವನ್ನು, ಜ್ಞಾನಂಸ್ವಭಕ್ತಿಂ ಚ–ತತ್ವಜ್ಞಾನ, ತನ್ನ ಭಕ್ತಿಗಳನ್ನೂ ಕೂಡ, ನಿಜಪ್ರಜಾಸು–ತನ್ನ (ಯೋಗ್ಯ) ಪ್ರಜೆಗಳಲ್ಲಿ, ಸಂಸ್ಥಾಪಯಾಮಾಸ ಸ್ಥಾಪಿಸಿದನು. ॥೧೫೫॥

ಅವತಾರಿಕೆ :—'ಭೈಮೀ ತನುರ್ಮರುತ ಆಹ ಕಥಾ:ಪರಸ್ಯ' [ಭೀಮರೂಪಿ ಅವತರಿಸಿದ ವಾಯ್ವಂಶದ ಅವತಾರರಾದ ಶ್ರೀಮಧ್ವಾಚಾರ್ಯರು ಭಗವಂತನ ಅವತಾರಗಳ ಕಥಾಗಳನ್ನು ಹೇಳುತ್ತಾರೆ. ಎಂಬ ಪ್ರತಿಜ್ಞಾಪ್ರಕಾರವಾಗಿ ಕಥಾಗಳನ್ನು ಹೇಳಿ ಉಪಸಂಹಾರಪೂಡುತ್ತಾ, ಭಗವಂತನ ಅವತಾರಗಳು ಮಾಹಾತ್ಮ್ಯಗಳು ಮುಗಿದವ್ವು ಆವ್ದರಿಂದ ಮುಗಿಸಿದರು ಎಂದು ಅಜ್ಞರಿಗೆ ಬರಬಹುದಾವ ತಪ್ಪುಕಲ್ಪನೆಯನ್ನು ಪರಿಪರಿಸುತ್ತಾ ಇದ್ದಾರೆ—

ಇತ್ಯಾದ್ಯನಂತಾನಿ ಹರೇರುದಾರಕರ್ಮಾಣಿ ರೂಪಾಣಿ ಚ ಸದ್ಗುಣಾಶ್ಚ ।
ನಿತ್ಯವ್ಯಪೇತಾಖಿಲದೋಷಕಸ್ಯ ಬ್ರಹ್ಮೇತ್ಯನಂತೇತಿ ಚ ನಾಮ ಯೇನ ॥೧೫೬॥

ಇತ್ಯಾದ್ಯನಂತಾನಿ–ಇಲ್ಲಿ ಹೇಳಿದ ಅವತಾರ, ಚರಿತೆ, ಸದ್ಗುಣಗಳೇ [ಮೊದಲಾಗಿವುಳ್ಳ ಅನಂತವಾದ, ಉದಾರಕರ್ಮಾಣಿ—ಉತ್ಕೃಷ್ಟಚರಿತ್ರೆಗಳು, ರೂಪಾಣಿ—ಅವತಾರಗಳು, ಚ—ಮತ್ತು, ಸದ್ಗುಣಾ:ಚ—ಸದ್ಗುಣಗಳೂ ಕೂಡ, ನಿತ್ಯವ್ಯಪೇತಾಖಿಲದೋಷಕಸ್ಯ–ಯಾವಾಗಲೂ ಸಕಲದೋಷದೂರನಾದ, ಹರೇಃ—ಶ್ರೀಹರಿಗೆ[ಇರುತ್ತವೆ.] ಯೇನ–ಹಾಗೆ ಅನಂತವಾಗಿ ಅವತಾರ ಚರಿತ್ರ ಗುಣಕರ್ಮಗಳಿರುವದರಿಂದ, ಬ್ರಹ್ಮೇತಿ ಅನಂತೇತಿ ಚ ಅಸ್ಯ ನಾಮ—ಬ್ರಹ್ಮ ಎಂದು ಅನಂತ ಎಂದು ಇವನಿಗೆ ಹೆಸರು ಇದೆ. ॥೧೫೬॥

ಭಾವಾನುವಾದ ಗಳ್ಳ–೧೫೬

ಮುಕ್ತಿಯೋಗ್ಯರಾದ ಮನುಷ್ಯೋತ್ತಮರು ಭಾರತಾದಿಗ್ರಂಥಗಳನ್ನು ಶ್ರವಣಮನನಗಳಿಂದ ತತ್ವಜ್ಞಾನವನ್ನು ಸಂಪಾದಿಸಿ ಸತ್ಸಂಪ್ರದಾಯಾನುಸಾರ ಆಚರಣೆಗಳನ್ನು ಮಾಡುತ್ತಾ ಶ್ರೀಹರಿಯನ್ನು ಪೂಜಿಸುತ್ತಾ ಅನುಗ್ರಹವನ್ನು ಸಂಪಾದಿಸಿ, ಉತ್ತಮ ಗತಿಯನ್ನು ಹೊಂದಿದರು. ಇದನ್ನು ಕಂಡು ಕ್ರೋಧವಶಗಣದ ದೈತ್ಯರು ಸಹಿಸಲಾರದೇ ರುದ್ರದೇವರನ್ನು ಕುರಿತು ತಪಸ್ಸುಮಾಡಿ ಅವರಿಂದ ಜಗತ್ತನ್ನು ಮೋಹಗೊಳಿಸುವ ಶಕ್ತಿಯನ್ನು ಪಡೆದು ಭೂಮಿಯಲ್ಲಿ ಹುಟ್ಟಿ ಅಪ್ರಾಮಾಣಿಕವಾದ ದುಷ್ಟತರ್ಕಗಳಿಂದ ಜೀವಬ್ರಹ್ಮರು ಒಂದು ಎಂದು ಸಾಧಿಸುತ್ತಾ ಅದನ್ನು ಪ್ರತಿಪಾದಿಸುವ ದುಷ್ಟಶಾಸ್ತ್ರವನ್ನು ರಚಿಸಿದರು. ಲೋಕದಲ್ಲಿ ಪ್ರಚಾರಮಾಡಿದರು. ಈ ದುಷ್ಟವಾದಿಗಳ ಖಂಡನೆಮಾಡಿ ಅವರು ಅಂಧತಮಸ್ಸಿಗೆ ಹೋಗುವಂತೆ ಮಾಡಲು ಮತ್ತು ಸಜ್ಜನರಿಗೆ ತತ್ವಜ್ಞಾನವನ್ನು ಮಾಡಿಕೊಟ್ಟು, ಮೋಕ್ಷವನ್ನು ಹೊಂದುವಂತಾಗಲು, ಭೀಮರೂಪಿ ಅವತರಿಸಿದ ವಾಯ್ವಂಶವೇ ಭೂಮಿಯಲ್ಲಿ ಅವತರಿಸಿ ಆ ಕಾರ್ಯವನ್ನು ಮಾಡಿದರು. ಮತ್ತೆ ಕಲಿಕಾಲದಲ್ಲಿ ದುಷ್ಟರಹಾವಳಿ ಬಹಳವಾದಾಗ ಶ್ರೀದುರ್ಗಾದೇವಿಯು ಬ್ರಾಹ್ಮಣ ಕುಲದಲ್ಲಿ ಅವತರಿಸಿ ದುಷ್ಟರಸಂಹಾರ ಮಾಡುವಳು. ಕಲಿಯುಗದ ಕೊನೆಯಭಾಗದಲ್ಲಿ ದುಷ್ಟರೇ ಬಹಳವಾಗಿ ಸಜ್ಜನರೂ ಕೂಡ ಧರ್ಮತತ್ವ ಜ್ಞಾನಾದಿ ಗುಣಗಳಿಂದ ರಹಿತರಾದಾಗ, ಬ್ರಹ್ಮರುದ್ರಾದಿದೇವತೆಗಳು ಶ್ರೀಹರಿಯಸಮೀಪಕ್ಕೆ ಬಂದು ಸ್ತುತಿಸಿ ಪ್ರಾರ್ಥಿಸುವಾಗ ಭಗವಂತನು ಶಂಬಲಗ್ರಾಮದಲ್ಲಿ ವಿಷ್ಣುಯಶ ಎಂಬ ಬ್ರಾಹ್ಮಣನ ಮನೆಯಲ್ಲಿ ಕಲ್ಕಿನಾಮಕನಾಗಿ ಅವತರಿಸಿ ಅಶ್ವಾರೂಢನಾಗಿ ಹೊರಟು, ಶ್ರೀಹರಿವಿಮುಖರಾದ ಎಲ್ಲರನ್ನು ಸಂಹರಿಸಿ, ಧರ್ಮ, ಜ್ಞಾನ, ಭಕ್ತಿಗಳನ್ನು ಸಜ್ಜನರಲ್ಲಿ ಉಪದೇಶಿಸಿ ಸ್ಥಾಪಿಸುವನು. (ಹಿಂದಿನ ಕಲಿಯುಗದ ಕೊನೆಗೆ ಹೀಗೆ ಮಾಡಿರುವನು) ಕಲಿಯನಿಗ್ರಹ (ಕಲ್ಕ–ಕರ್ತಾರ

–ಹಿಂಸಾ) ಮತ್ತು ಕಲ—ಎಂವರೆ ಜ್ಞಾನ, ಕ ಎಂದರೆ ಸುಖಿಗಳುಳ್ಳವನಾದ್ದರಿಂದ ಕಲ್ಕಿ ಎಂದು ಹೆಸರು ಈ ರೂಪಕ್ಕೆ ಅನ್ವರ್ಥಕವಾಗಿದೆ. ಈ ರೀತಿ ಭಗವಂತನ ರೂಪ, ಗುಣಕರ್ಮಗಳು ಅನಂತವಾಗಿವೆ. ಆದ್ದರಿಂದಲೇ ಆ ಭಗವಂತನಿಗೆ ಬ್ರಹ್ಮ ಅನಂತ ಎಂದು ನಾಮಗಳು ಇವೆ.

ಆನಂದತೀರ್ಥಾಖ್ಯಮುನಿಃ ಸುಪೂರ್ಣಪ್ರಜ್ಞಾಭಿಧೋ ಗ್ರಂಥಮಿಮಂ ಚಕಾರ ।
ನಾರಾಯಣೇನಾಭಿಹಿತೋ ಬದರ್ಯಾಂ ತಸ್ಯೈವ ಶಿಷ್ಯೋ ಜಗದೇಕಭರ್ತುಃ ॥೧೫೭॥
ಯಸ್ತತ್ಪ್ರಸಾದಾದಖಿಲಾಂಶ್ಚ ವೇದಾನ್ ಸಪಂಚರಾತ್ರಾನ್ ಸರಹಸ್ಯಸಂಗ್ರಹಾನ್ ।
ವೇದೇತಿಹಾಸಾಂಶ್ಚ ಪುರಾಣಯುಕ್ತಾನ್ ಯಥಾವದನ್ಯಾ ಅಪಿ ಸರ್ವವಿದ್ಯಾಃ ॥೧೫೮॥

[ಅವತಾರಿಕೆ ;— ತಮ್ಮಿಂದ ರಚಿತವಾದ ಈ ಗ್ರಂಥದಲ್ಲಿ ಸಜ್ಜನರಿಗೆ ವಿಶ್ವಾಸಭಕ್ತಿಗಳು ಬರುವದಕ್ಕಾಗಿ ತಮ್ಮ ಹೆಸರನ್ನು ನಿರ್ವಚನವಾಡಿ ಭಗವಂತನಿಂದ ಆಜ್ಞಾಪ್ತರಾಗಿ ಮಾಡಿದ ಗ್ರಂಥವಾದ್ದರಿಂದ ಆಪ್ತಮೂಲಕವಾಗಿದೆ ಎಂದು ತೋರಿಸುತ್ತಾರೆ.] ನಾರಾಯಣೇನ–ಶ್ರೀನಾರಾಯಣದೇವರಿಂದ, ಬದರ್ಯಾಂ—ಬದರೀ ಕ್ಷೇತ್ರವಲ್ಲಿ ಅಭಿಹಿತಃ—ಹೇಳಲ್ಪಟ್ಟ, [ಶ್ರೀಮಹಾಭಾರತತಾತ್ಪರ್ಯ ನಿರ್ಣಯಗ್ರಂಥವನ್ನು ಮಾಡು ಎಂದು ಹೇಳಲ್ಪಟ್ಟ] ಜಗದೇಕಭರ್ತುಃ—:ಜಗತ್ತಿಗೇ: ಮುಖ್ಯಸ್ವಾಮಿಯಾದ, ತಸ್ಯ ಏವ—ಆ ನಾರಾಯಣದೇವರಿಗೇನೇ ವ್ಯಾಸದೇವರಿಗೇನೇ ಶಿಷ್ಯಃ—ಶಿಷ್ಯರಾದ, ಸುಪೂರ್ಣಪ್ರಜ್ಞಾಭಿಧಃ—ಪರಿಪೂರ್ಣವಾದ ಪ್ರಜ್ಞಾವುಳ್ಳವನಾದ್ದರಿಂದ ಪೂರ್ಣಪ್ರಜ್ಞ ಎಂಬ ಹೆಸರುಳ್ಳ, ಯಃ–ಯಾವನು, ತತ್ಪ್ರಸಾದಾತ್—ಆ ವೇದವ್ಯಾಸದೇವರ ಅನುಗ್ರಹದಿಂದ, ಸಪಂಚರಾತ್ರಾನ್—ಪಂಚರಾತ್ರಾಗಮದಿಂದ ಸಹಿತವಾದ, ಸರಹಸ್ಯಸಂಗ್ರಹಾನ್—ಉಪನಿಷತ್ತುಗಳು ಅವುಗಳ ಅರ್ಥಸಂಗ್ರಹರೂಪಗಳಾದ ಬ್ರಹ್ಮಸೂತ್ರಗಳು ಇವುಗಳಿಂದ ಸಹಿತವಾದ, ಅಖಿಲಾನ್ವೇದಾನ್—ಎಲ್ಲ ವೇದಗಳನ್ನು, ಪುರಾಣಯುಕ್ತಾನ್ ಇತಿಹಾಸಾನ್ ಚ–ಪುರಾಣಗಳಿಂದ ಕೂಡಿದ ಇತಿಹಾಸ ಗ್ರಂಥಗಳನ್ನೂ ಕೂಡ, ಅಪಿ–ಹಾಗು, ಅನ್ಯಾಃ–ಬೇರೆಯಾದ, ಸರ್ವವಿದ್ಯಾಃ;–ಎಲ್ಲ ವಿದ್ಯೆಗಳನ್ನು, ವೇದ–ತಿಳಿದಿರುವರೋ, ಸಃ–ಅಂಥ ಆನಂದತೀರ್ಥಾಖ್ಯಮುನಿಃ—ಆನಂದತೀರ್ಥ ಎಂಬ ಹೆಸರುಳ್ಳ ಮುನಿಗಳು, ಇಮಂ ಗ್ರಂಥಂ–ಪ್ರಸಕ್ತವಾದ ಈ ಮಹಾಭಾರತತಾತ್ಪರ್ಯನಿರ್ಣಯ ಗ್ರಂಥವನ್ನು, ಚಕಾರ–ಮಾಡಿರುತ್ತಾರೆ. ॥೧೫೭॥೧೫೮॥

ಅವತಾರಿಕೆ :— ತಾವು ಎಲ್ಲ ವಿದ್ಯಾವಂತರಾದ್ದರಿಂದ ವಕ್ತ್ರಾನುಕೂಲ್ಯವುಂಟು ಎಂಬುದನ್ನು ತಿಳಿಸುತ್ತಾರೆ.

ಸಮಸ್ತಶಾಸ್ತ್ರಾರ್ಥವಿನಿರ್ಣಯೋऽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋऽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾऽಮುನೈವ ।
ವಿನಿರ್ಣಯೋ ನಾಸ್ತ್ಯಮುನಾ ವಿನಾ ಯದ್ ವಿಪ್ರಸ್ಥಿತಾನಾಮಿವ ಸರ್ವವಾಚಾಮ್ ॥೧೫೯॥

ಯತ್–ಯಾವಕಾರಣದಿಂದ, ವಿಪ್ರಸ್ಥಿತಾನಾಂ ಇವ—ಪರಸ್ಪರವಿರುದ್ಧವಾಗಿರುವಂತೆ ತೋರುವ, ಸರ್ವವಾಚಾಂ– ಎಲ್ಲ ವೇದಾದಿ ವಾಕ್ಯಗಳ, ವಿನಿರ್ಣಯಃ– ವಿರೋಧಪರಿಹಾರಪೂರ್ವಕವಾಗಿ ಅರ್ಥವು, ಅಮುನಾ ವಿನಾ–ಈ ಮಹಾಭಾರತತಾತ್ಪರ್ಯನಿರ್ಣಯಗ್ರಂಥವಿಲ್ಲದೇ, ನಾಸ್ತಿ–ಆಗುವದಿಲ್ಲವೋ, ತತಃ–ಆದ್ದರಿಂದ, ಸಮಸ್ತ ಶಾಸ್ತ್ರಾರ್ಥವಿನಿರ್ಣಯಃ:–ಸಕಲಶಾಸ್ತ್ರಾರ್ಥನಿರ್ಣಾಯಕವಾದ, ವಿಶೇಷತಃ:– ಅದರಲ್ಲೂ ವಿಶೇಷವಾಗಿ, ಭಾರತ–ವರ್ತ್ಮಚಾರೀ–ಭಾರತಾರ್ಥನಿರ್ಣಾಯಕವಾದ, ಅಯಂ ಗ್ರಂಥಃ– ಈ ಗ್ರಂಥವು, ಜಗತಾಂಜನಿತ್ರಂ–ಜಗಜ್ಜನಕನಾದ, ಗುರುಂ–ಗುರುವಾದ, ಹರಿಂ–ಶ್ರೀವೇದವ್ಯಾಸದೇವರನ್ನು, ಪ್ರೀಣಯತಾ–ಸಂತೋಷಪಡಿಸತಕ್ಕ [ಆರಾಧಿಸತಕ್ಕ] ಅಮುನಾ ಏವ– ಈ ಆನಂದತೀರ್ಥಮುನಿ [ಗಳಾದವನ್ನಿಂದಲೇ]ಯಿಂದಲೇ, ಕೃತಃ– ಮಾಡಲ್ಪಟ್ಟಿತು, ॥೧೫೯॥

ಅವತಾರಿಕೆ :—ಬ್ರಹ್ಮಸೂತ್ರಗಳೀಂದ ನಿರ್ಣಯವಾಗುವಂತಿರುವಾಗ ನಿರ್ಣಯವಾಗಲಾರದು ಎಂದು ಹೇಳಿದ್ದು ಹೇಗೆ ಎಂದರೆ ಅದಕ್ಕೆ ಉತ್ತರಿಸುತ್ತಾರೆ—

ತದ್ ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾsಥ ತೇಷಾಮಯಥಾ ಕೃತಾsನ್ಯೈಃ ।
ನಿಗೂಹಿತಂ ಯತ್ ಪುರುಷೋತ್ತಮತ್ವಂ ಸೂತ್ರೋಕ್ತಮುಪ್ಯತ್ರ ಮಹಾಸುರೇಂದ್ರೈಃ ।
ಜೀವೇಶ್ವರೈಕ್ಯಂ ಪ್ರವದದ್ಭಿರುಗ್ರೈರ್ವ್ಯಾಖ್ಯಾಯ ಸೂತ್ರಾಣಿ ಚಕಾರ ತಾsವಿಃ ॥೧೬೦॥

ಕೃಷ್ಣಃ—ಶ್ರೀವೇದವ್ಯಾಸದೇವರು, ತದ್ಬ್ರಹ್ಮಸೂತ್ರಾಣಿ—ಪ್ರಸಿದ್ಧವಾದ ಶ್ರೇಷ್ಠವಾದ ಬ್ರಹ್ಮಸೂತ್ರಗಳನ್ನು, ಚಕಾರ-ಮಾಡಿದರು, ಅಥ—ಕೆಲವು ಕಾಲದ ನಂತರ, ತೇಷಾಂ—ಆ ಬ್ರಹ್ಮಸೂತ್ರಗಳಿಗೆ. ಅಯಥಾವ್ಯಾಖ್ಯಾ—ಅಪವ್ಯಾಖ್ಯಾನವು, ಅನ್ಯೈಃ ಮಹಾಸುರೇಂದ್ರೈಃ - ಬೇರೆ ಅಸುರಾಂಶರಾದ ಜನರಿಂದ, ಕೃತಾ—ಮಾಡಲ್ಪಟ್ಟಿತು. ಯತ್ -ಯಾವಕಾರಣದಿಂದ, ಸೂತ್ರೋಕ್ತಂಅಪಿ ಪುರುಷೋತ್ತಮತ್ವಂ-ಬ್ರಹ್ಮಸೂತ್ರಗಳಲ್ಲಿ ಹೇಳಲ್ಪಟ್ಟ ಶ್ರೀಹರಿಯು ಸರ್ವೋತ್ತಮತ್ವಮತವು. ಜೀವೇಶ್ವರೈಕ್ಯಂ ಪ್ರವದದ್ಭಿ ಜೀವಪಂಪರಾತ್ಮರಿಗೆ ಐಕ್ಯವನ್ನು ಹೇಳಿದ. ಉಗ್ರೈಃ—ಕ್ರೂರರಾದ, ನೀಚರಾದ, ಮಹಾಸುರೇಂದ್ರೈಃ—ಪ್ರಬಲ ಅಸುರರಿಂದ, ನಿಗೂಹಿತಂ— ಬಚ್ಚಿಡಲ್ಪಟ್ಟಿತೋ, ಆಚ್ಛಾದಿಸಲ್ಪಟ್ಟಿತೋ, ತತ್—ಆ ಕಾರಣದಿಂದ, ಸೂತ್ರಾಣಿ ವಾಖ್ಯಾಯ—ಸೂತ್ರಗಳಿಗೆ ಸರಿಯಾದ ವ್ಯಾಖ್ಯಾನ ಮಾಡಿ ತತ್-ಆ ತತ್ವವನ್ನು, ಆವಿಶ್ಚಕಾರ—ಪ್ರಕಟಪಡಿಸಿದರು. ॥೧೬೦॥

ವ್ಯಾಸಜ್ಞಯಾ ಭಾಷ್ಯವರಂ ವಿಧಾಯ ಪೃಥಕ್ಪೃಥಕ್ ಚೋಪನಿಷತ್ಸುಭಾಷ್ಯವತ್ ।
ಕೃತ್ವಾsಖಿಲಾನ್ಯಂ ಪುರುಷೋತ್ತಮಂ ಚಹರಿಂ ವದಂತೀತಿ ಸಮರ್ಥಯಿತ್ವಾ ॥೧೬೧॥

ತನುಸ್ತೃತೀಯಾ ಪವನಸ್ಯ ಸೇಯಂ ಸದ್ಭಾರತಾರ್ಥಪ್ರತಿದೀಪನಾಯ ।
ಗ್ರಂಥಂ ಚಕಾರೇಮಮುದೀರ್ಣವಿದ್ಯಾ ಯಸ್ಮಿನ್ ರಮಂತೇ ಹರಿಪಾದಭಕ್ತಾಃ ॥೧೬೨॥

ಪವನಸ್ಯ— ಆ ವಾಯುದೇವರ ಸಾ ಇಯಂ ತೃತೀಯಾತನು ಃ— ಆ ಈ ಮೂರನೆಯರೂಪವು. ವ್ಯಾಸಾಜ್ಞಯಾ—ಶ್ರೀವೇದವ್ಯಾಸದೇವರ ಅಪ್ಪಣೆಯ ಪ್ರಕಾರ, ಭಾಷ್ಯವರಂ ವಿಧಾಯ—(ಬ್ರಹ್ಮಸೂತ್ರ) ಶ್ರೇಷ್ಠಭಾಷ್ಯವನ್ನು ಮಾಡಿ, ಚ—ಮತ್ತು, ಪೃಥಕ್ ಪೃಥಕ್—ಪ್ರತ್ಯೇಕ ಪ್ರತ್ಯೇಕವಾಗಿ, ಉಪನಿಷತ್ಸುಭಾಷ್ಯಂ—ಉಪನಿಷತ್ತುಗಳಿಗೆ ಶ್ರೇಷ್ಠಭಾಷ್ಯಗಳನ್ನು, ಕೃತ್ವಾ—ಮಾಡಿ, ಅಖಿಲಾನ್ಯಂ—ಎಲ್ಲರಿಂದ ಭಿನ್ನನಾದ, ಪುರಷೋತ್ತಮಂ—ಸರ್ವೋತ್ತಮನಾದ, ಹರಿಂ ಚ —ಶ್ರೀಹರಿಯನ್ನೇ, ವದಂತಿ—ವೇದ ಬ್ರಹ್ಮಸೂತ್ರಾದಿ ಎಲ್ಲ ಗ್ರಂಥಗಳೂ ಹೇಳುತ್ತವೆ, ಇತಿ—ಎಂದು, ಸಮರ್ಥಯಿತ್ವಾ—ಚೆನ್ನಾಗಿ ಸಾಧನ ಮಾಡಿ, ಯಸ್ಮಿನ್—ಯಾವ ಗ್ರಂಥದಲ್ಲಿ, ಉದೀರ್ಣವಿದ್ಯಾಃ—ಉತ್ಕೃಷ್ಟಜ್ಞಾನವುಳ್ಳ, ಹರಿಪಾದಭಕ್ತಾಃ— ಶ್ರೀಹರಿಭಕ್ತರಾದ ಜನರು, ರಮಂತೇ — ಸಂತೋಷಪಡುತ್ತಾರೋ [ದೇವತೆಗಳೂ ನಲಿದಾಡುತ್ತಾರೋ] ತಂ ಇಮಂ ಗ್ರಂಥಂ—ಅಂಥ ಈ ಗ್ರಂಥವನ್ನು, ಸದ್ಭಾರತಾರ್ಥಪ್ರತಿದೀಪನಾಯ ಮಹಾಭಾರತದ ಸರಿಯಾದ ಅರ್ಥವನ್ನು ಪ್ರಕಟಮಾಡಿ ತಿಳಿಹೇಳುವದಕ್ಕಾಗಿ, ಚಕಾರ—ಮಾಡಿತು. ॥೧೬೦—೧೬೨॥

ಭಾವಾನುವಾದ—೧೫೭—೧೬೨

ಇಂಥ ಈ ಗ್ರಂಥವನ್ನು ಜಗದೊಡೆಯನಾದ ಶ್ರೀನಾರಾಯಣನ ಅವತಾರರಾದ ಶ್ರೀವೇದವ್ಯಾಸದೇವರ ದೇ ಶಿಷ್ಯರಾದ, ಆನಂದತೀರ್ಥ ಪೂರ್ಣಪ್ರಜ್ಞ ಎಂಬ ಅನ್ವರ್ಥಕನಾಮವುಳ್ಳ ಮುನಿಗಳು ಆ ವ್ಯಾಸದೇವರ ಅಪ್ಪಣೆಯಂತೆ ಮಾಡಿದರು. (**ವಿಶೇಷ**—ಶ್ರೀಭಾರತತಾತ್ಪರ್ಯವನ್ನು ಹೇಳುವ ಗ್ರಂಥವನ್ನು ಮಾಡಲು ಸಮರ್ಥನಾದ ನೀನೇ

ಮಾಡು ಎಂದು ಶ್ರೀವ್ಯಾಸದೇವರು ಶ್ರೀಸರ್ವಜ್ಞಾಚಾರ್ಯರಿಗೆ ಬದರಿಯಲ್ಲಿ ಆಜ್ಞಾಪಿಸಿದ್ದರು ಎಂದು—ಪಾರಾಶರ್ಯಃ ಪರತತ್ವಪ್ರಸಿದ್ಧ್ಯರ್ಥಂ ತಾತ್ಪರ್ಯಾರ್ಥಂ ಪರಮಂ ಭಾರತಸ್ಯ। ವ್ಯಕ್ತಂವಕ್ತುಂ ನಿಯುನಕ್ತಿಸ್ಮ ಸಾಕ್ಷಾದೇನಂ ಧನ್ಯಂಭುವನೇ ಮನ್ಯಮಾನಃ ॥ ಸುಮಧ್ವವಿಜಯ (ಸರ್ಗ ೧೦–೨೫') ದಲ್ಲಿ ಪ್ರಸಿದ್ಧವಾಗಿದೆ). ಆನಂದತೀರ್ಥ ಎಂಬ ಪೆಸರುಳ್ಳ ನಾನು ಮಾಡಿದೆನು ಎಂದು ಭಾವ. ಆ ಭಗವಂತನ ಅನುಗ್ರಹದಿಂದ ಎಲ್ಲ ವೇದ, ಪಂಚರಾತ್ರಾಗಮ, ಉಪನಿಷತ್ತು ಇತಿಹಾಸ ಪುರಾಣಗಳನ್ನುಹಾಗು ಇತರ ಎಲ್ಲ ವಿದ್ಯೆಗಳನ್ನೂ ಕೂಡ ತಿಳಿದಿರುವರು. ಅವನ್ನೆಲ್ಲ ತಿಳಿದು ಸಮಸ್ತ ಶಾಸ್ತ್ರಾರ್ಥನಿರ್ಣಯಾತ್ಮಕವಾದ ಅದರಲ್ಲೂ ವಿಶೇಷವಾಗಿ ಶ್ರೀಮಹಾಭಾರತಕಥಾ ನಿರ್ಣಾಯಕವಾದ ಈ ಗ್ರಂಥವನ್ನು ಆ ಪೂರ್ಣಪ್ರಜ್ಞಮುನಿಗಳು ಶ್ರೀಹರಿಯ ಪೂಜಾರೂಪವಾಗಿ ಮಾಡಿದರು, (ನಾನು ಮಾಡಿದೆನು ಎಂದು ಭಾವ. ತನಗೆ ಈ ಗ್ರಂಥ ಮಾಡುವಲ್ಲಿ ಸ್ವಾತಂತ್ರ್ಯವಿಲ್ಲ ಎಂದು ಸೂಚಿಸಲು ಪ್ರಥಮಪುರುಷ ಪ್ರಯೋಗವನ್ನು ಪರೋಕ್ಷೋಕ್ತಿಯನ್ನು ಮಾಡಿರುವರು.) ಈ ಗ್ರಂಥವನ್ನು ಬಿಟ್ಟರೆ ಸಕಲಶಾಸ್ತ್ರನಿರ್ಣಯಕವಾದ, ವಿರುದ್ಧವೆಂದು ತೋರುವ ಸಕಲವೇದಪುರಾಣಾದಿವಾಕ್ಯಗಳ ವಿರೋಧ ಪರಿಹಾರ ಪೂರ್ವಕ ನಿರ್ಣಯವನ್ನು ಕೊಡುವ ಗ್ರಂಥವು ಮತ್ತೊಂದಿಲ್ಲ. ವೇದಾರ್ಥ ನಿರ್ಣಯಕ್ಕಾಗಿ ಶ್ರೀವೇದವ್ಯಾಸದೇವರು ಪ್ರಸಿದ್ಧವಾದ ಬ್ರಹ್ಮಸೂತ್ರಗಳನ್ನೇನೋ ಮಾಡಿದರು. ಆದರೆ ದುಷ್ಟ ಅಸುರ ಜನರು ಆ ಸೂತ್ರಗಳಿಗೆ ದುರ್ಭಾಷ್ಯಗಳನ್ನು ಬರೆದು ವೇದವ್ಯಾಸರಿಗೆ ಅಭಿಪ್ರೇತವಲ್ಲದ ಅಪಾರ್ಥಗಳನ್ನು ಸೂತ್ರಗಳಿಗೆ ಬರೆದು ನೈಜವಾದ ಸೂತ್ರಾರ್ಥವಾದ ಶ್ರೀಪುರುಷೋತ್ತಮತ್ವವು ಲೋಕದಲ್ಲಿ ಪ್ರಕಟವಾಗದಂತೆ ಮಾಡಿದರು, ಜೀವಬ್ರಹ್ಮರ ಅಭೇದ, ಸಾಮ್ಯ, ಜಗನ್ಮಿಥ್ಯಾತ್ವ ಇತ್ಯಾದಿ ದುಷ್ಟತತ್ವಗಳನ್ನು ಲೋಕದಲ್ಲಿ ಪ್ರಚಾರ ಪಡಿಸಿದರು, ಆಗ ಭಗವದಾಜ್ಞಾಪ್ರಕಾರ ಭೂಮಿಯಲ್ಲಿ ಅವತರಿಸಿದ, ವಾಯ್ವಂಶರಾದ ಶ್ರೀಮತ್ಪೂರ್ಣಪ್ರಜ್ಞಮುನಿಗಳು ಶ್ರೀವ್ಯಾಸದೇವರ ಅಪ್ಪಣೆ ಪ್ರಕಾರ ಬ್ರಹ್ಮಸೂತ್ರಗಳಿಗೆ, ಉಪನಿಷತ್ತುಗಳಿಗೆ, ಗೀತೆಗೆ ಸರಿಯಾದವ್ಯಾಖ್ಯಾನವನ್ನು ಬರೆದು ಶ್ರೀವೇದವ್ಯಾಸದೇವರಿಗೆ ಸಮ್ಮತವಾದ ಶ್ರೀಹರಿಯ ಪುರುಷೋತ್ತಮತ್ವವನ್ನು ಎಲ್ಲ ಗ್ರಂಥಗಳೂ ಪ್ರತಿಪಾದಿಸುತ್ತವೆ ಎಂದು ಸಮರ್ಥನ ಮಾಡಿ ಸಜ್ಜನರನ್ನು ಕುರಿತು ಉಪದೇಶಿಸಿ ತತ್ವಜ್ಞಾನಿಗಳನ್ನಾಗಿ ಮಾಡಿದರು. ಆ ವಾಯುದೇವರ ಮೂರನೆಯ ಅವತಾರರಾದ ಪೂರ್ಣಪ್ರಜ್ಞರೇ ಶ್ರೀ ಭಾರತಾರ್ಥಗಳನ್ನು ಸಜ್ಜನರಿಗೆ ತಿಳಿಸುವದಕ್ಕಾಗಿ ಈ ಗ್ರಂಥವನ್ನು ಮಾಡಿದರು, ಈ ಗ್ರಂಥವು ಉತ್ಕೃಷ್ಟಜ್ಞಾನವುಳ್ಳ ಶ್ರೀಹರಿಭಕ್ತಶ್ರೇಷ್ಠರಾದ ಗರುಡಶೇಷರುದ್ರಾದಿದೇವತೆಗಳಿಗೂ ಕೂಡ ಸಂತೋಷಕರವಾದ ಗ್ರಂಥವಾಗಿದೆ.

ಅವತಾರಿಕೆ—ವಾಯುದೇವರ ಅವತಾರರು ತಾವು, ಅವರಿಂದ ಜ್ಞಾನ ಸ್ಥಾಪನೆಯಾಯಿತು ಎಂಬುದಕ್ಕೆ ವೇದಪ್ರಮಾಣವನ್ನು ಉದಾಹರಿಸುತ್ತಿದ್ದಾರೆ—

ತೃತೀಯಮಸ್ಯ ವೃಷಭಸ್ಯ ದೋಹಸೇ ದಶಪ್ರಮತಿಂ ಜನಯಂತ ಯೋಷಣಃ।
ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸ ಈಶಾನಾಸಃ ಶವಸಾ ಕ್ರಂತ ಸೂರಯಃ।
ಯದೀಮನು ಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ ॥೧೬೩॥

ಇತ್ಯಾದಿವಾಕ್ಯೋಕ್ತಮಿದಂ ಸಮಸ್ತಂ ತಥಾಪುರಾಣೇಷು ಚ ಪಂಚರಾತ್ರೇ।
ಅಕ್ರೋದಿತಾ ಯಾಶ್ಚ ಕಥಾಃ ಸಮಸ್ತಾವೇದೇತಿಹಾಸಾದಿವಿನಿರ್ಣಯೋಕ್ತಾಃ ॥೧೬೪॥

ತೃತೀಯಮಸ್ಯ.....ಮಥಾಯತಿ' ಇತ್ಯಾದಿ ವಾಕ್ಯೋಕ್ತಂ—
ತೃತೀಯಮಸ್ಯ.....ಇತ್ಯಾದಿ ವಾಕ್ಯಗಳಲ್ಲಿ ಹೇಳಲ್ಪಟ್ಟ, ಇದಂ ಸಮಸ್ತಂ—
ಮೇಲಿನ ೆರಡ್ಲೋಕಗಳಲ್ಲಿ ಹೇಳಲ್ಪಟ್ಟ ಎಲ್ಲ ವಿಷಯವು.ಪುರಾಣೇಷು-ಪುರಾಣಗಳಲ್ಲಿ,ತಥಾ ಪಂಚರಾತ್ರೇ ಚ-ಹಾಗೂ ಪಂಚರಾತ್ರಾಗಮದಲ್ಲಿಯೂ ಕೂಡ, ಉಕ್ತಂ—ಹೇಳಲ್ಪಟ್ಟಿದೆ. ಅತ್ರ ಈ-ಗ್ರಂಥದಲ್ಲಿ, ಯಾಃ ಕಥಾಃ—ಯಾವ ಕಥೆಗಳು ಉದಿತಾಃ-ಹೇಳಲ್ಪಟ್ಟಿರುವವೋ, ತಾಃ ಸಮಸ್ತಾಃ ಚ-ಅವೆಲ್ಲವೂ ಕೂಡ, ವೇದೇತಿಹಾಸಾದಿವಿನಿರ್ಣಯೋಕ್ತಾಃ-ವೇದ. ಇತಿಹಾಸ ಮೊದಲಾದ ಎಲ್ಲ ಗ್ರಂಥಗಳ ನಿರ್ಣಯಕ್ಕಾಗಿ ಹೇಳಲ್ಪಟ್ಟಿವೆ. ॥೧೬೩–೧೬೪॥

ತಸ್ಮಾದಯಂ ಗ್ರಂಥವರೋಽಖಿಲೋರುಧರ್ಮಾದಿಮೋಕ್ಷಾಂತಪುರುಷಾರ್ಥಹೇತುಃ ।
ಕಿಂ ವೋದಿತೈರಸ್ಯ ಗುಣೈಸ್ತತೋಽನ್ಯೈರ್ನಾರಾಯಣಃ ಪ್ರೀತಿಮುಪೈತ್ಯತೋಽಲಮ್ ॥೧೬೫॥

ತಸ್ಮಾತ್—ಎಲ್ಲಶಾಸ್ತ್ರಗಳ ನಿರ್ಣಯವನ್ನು ಮಾಡಿಕೊಡುವಗ್ರಂಥವಾದ್ದರಿಂದ. ಅಯಂ ಗ್ರಂಥವರಃ— ಶ್ರೇಷ್ಠ ಗ್ರಂಥವಾದ ಈ ಮಹಾಭಾರತತಾತ್ಪರ್ಯನಿರ್ಣಯ ಗ್ರಂಥವು. ಧರ್ಮಾದಿಮೋಕ್ಷಾಂತಪುರುಷಾರ್ಥಹೇತುಃ— ಧರ್ಮವೊಪಲ್ಪಾದ,ಮೋಕ್ಷವೇ ಕೊನೆಯದಾಗಿಯುಳ್ಳ ಪುರುಷಾರ್ಥಗಳಿಗೆ ಕಾರಣವು. ಈ ರೀತಿಈ ಗ್ರಂಥದ ಮಹತ್ವವು ಬಹಳವಿದೆ. ಉದಿತೈಃ ಅಸ್ಯಅನ್ಯೈಃ ಗುಣೈಃ— ಹೇಳಲ್ಪಟ್ಟ ಇದರ ಇನ್ನು ಬೇರೆ ಗುಣಗಳಿಂದ. ಕಿಂವಾ— ಏನು ಪ್ರಯೋಜನವು? ಆ ಪ್ರಯೋಜನವು ಇದೆ. ಈ ಪ್ರಯೋಜನವು ಇದೆ ಎಂದು ಹೇಳುವದರಿಂದೇನು? ಅದೆಲ್ಲಕ್ಕಿಂತ ಶ್ರೇಷ್ಠ ಮಹತ್ವವು ಇದು—ಅತಃ—ಈ ಗ್ರಂಥ[ದಿಂದ]ದ ಅಧ್ಯಯನ ಶ್ರವಣಮನನಗಳಿಂದ, ನಾರಾಯಣಃ—ಶ್ರೀಹರಿಯು ಅಲಂ ಪ್ರೀತಿಂ ಉಪೈತಿ—ಪೂರ್ಣಪ್ರೀತಿಯನ್ನು ಹೊಂದುತ್ತಾನೆ. ॥೧೬೫॥

ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಸ್ಸುಹೃತ್ ॥೧೬೬॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀ ಮಹಾಭಾರತತಾತ್ಪರ್ಯ ನಿರ್ಣಯೇ
(ಪಾಂಡವಸ್ವರ್ಗಾರೋಹಣಂ ನಾಮ)
ದ್ವಾತ್ರಿಂಶೋಽಧ್ಯಾಯಃ

ಯಃ—ಯಾವನು, ಸರ್ವಗುಣಸಂಪೂರ್ಣಃ— ಸರ್ವಗುಣಪರಿಪೂರ್ಣನಾಗಿರುವನೋ, ಸರ್ವದೋಷವಿವರ್ಜಿತಃ— ಎಲ್ಲದೋಷಗಳಿಂದ ರಹಿತನಾಗಿರುವನೋ, ಸಃ— ಅಂಥ, ಅಲಂ ಪ್ರೀತಃ-ಯಾವಾಗಲೂ ಆನಂದಪೂರ್ಣನೇ ಆಗಿರುವ, ಪರಮಃ— ಉತ್ಕೃಷ್ಟನಾದ, ಸುಹೃತ್—ಮುಖ್ಯಪ್ರಿಯನಾದ, ವಿಷ್ಣುಃ—ಶ್ರೀಹರಿಯು, ಮೇ—ನನ್ನ ಒಗ್ಗೆ ಪ್ರೀಯತಾಂ — ಸಂತುಷ್ಟನಾಗಲಿ, ಅನುಗ್ರಹ ಮಾಡಲಿ ॥೧೬೬॥

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ಶ್ರೀಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪಾಂಡವರಸ್ವರ್ಗಾರೋಹಣ ಪರ್ಯಂತ ಕಥಾವನ್ನು ತಿಳಿಸುವ ಮೂವತ್ತೆರಡನೆಯ ಅಧ್ಯಾಯವು ಮುಗಿಯಿತು.

ಭಾವಾನುವಾದ ೧೬೫—೧೬೬

[ಶ್ರೀಮಧ್ವಾಚಾರ್ಯರು] ಶ್ರೀ ವಾಯುದೇವರ ಅವತಾರ, ದೇವರ ಆಜ್ಞಾಪ್ರಕಾರ ಅವತರಿಸಿ ಜ್ಞಾನಕಾರ್ಯ ಮಾಡಿ ದೇವತೆಗಳನ್ನೂಕೂಡ ಜ್ಞಾನಿಗಳನ್ನಾಗಿ ಮಾಡಿದ ವಿಷಯವು ಬಳಿತ್ಥಾ ಸೂಕ್ತದ ತೃತೀಯಮಸ್ಯ... 'ಮಹಾಯತಿ' ಇತ್ಯಾದಿ ವಾಕ್ಯಗಳಲ್ಲಿ, ಬೇರೆಶ್ರುತಿ ಪುರಾಣ ಪಂಚರಾತ್ರಗಳಲ್ಲಿಯೂ ಹೇಳಲ್ಪಟ್ಟಿದೆ. ಈ ಗ್ರಂಥದಲ್ಲಿ ಹೇಳಲ್ಪಟ್ಟ ಕಥೆಗಳು ಎಲ್ಲ ವೇದ ಇತಿಹಾಸಾದಿಗ್ರಂಥಗಳ ನಿರ್ಣಯಕ್ಕಾಗಿ ಹೇಳಲ್ಪಟ್ಟಿವೆ. ಆದ್ದರಿಂದ ಈ ಶ್ರೇಷ್ಠ ಗ್ರಂಥವು ಧರ್ಮ, ಅರ್ಥ, ಕಾಮ, ಮೋಕ್ಷ ಚತುರ್ವಿಧ ಪುರುಷಾರ್ಥಗಳನ್ನು ತಂದುಕೊಡುವಂಥದು. ಈ ಗ್ರಂಥದ ಬಗ್ಗೆ ಹೆಚ್ಚು ಪ್ರಶಂಸೆ ಮಾಡುವದೇನು ? ಒಂದೇ ಮಾತಿನಲ್ಲಿ ಹೇಳುವದಾದರೆ ಈ ಗ್ರಂಥಾಭ್ಯಾಸದಿಂದ ಶ್ರೀಹರಿಯು ಬಹಳ ಸಂತುಷ್ಟನಾಗುವನು. ಸರ್ವಗುಣಪೂರ್ಣನೂ. ಸಕಲದೋಷದೂರನೂ ಆದ, ನನಗೆ ಅತ್ಯಂತ ಪ್ರಿಯನಾದ, ಸದಾ ಆನಂದಪೂರ್ಣನೇ ಆದ ಶ್ರೀನಾರಾಯಣದೇವನು ನನ್ನಲ್ಲಿ ಅನುಗ್ರಹಮಾಡಲಿ.

ಇಲ್ಲಿಗೆ ಶ್ರೀಮಹಾಭಾರತತಾತ್ಪರ್ಯನಿರ್ಣಯಗ್ರಂಥದ [ಕೊನೆಯ] ಮೂವತ್ತೆರಡನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು.

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ ಅಧ್ಯಾಯ ೩೦—೩೧—೩೨

ತಿದ್ದುಪಡಿ

ಪುಟ	ಸಾಲು	ಇದ್ದದ್ದು	ತಿದ್ದುಪಡಿ
೨	"	ಬಭೂವಃ	ಬಭೂವ
೨	೨೨	ರಾಜನು	ರಾಜ
೩	೨೪	ವಿಹರಿಸುತಾ	ವಿಹರಿಸುತ್ತಾ
೪	೪	ಪಾಣ	ಪ್ರಾಣ
೪	೫	ಆಹಂ	ಅಹಂ
೪	೧೪	ಯತ	ಯುತಃ
೪	೧೬	ಆಭುಂ	ಅಭುಂ
೪	೧೯	ಚೋ	ಚೊ
೫	೪	ಭಾರೂಪಳಾಗಿತೀಸ್ವರ–	ಭಾರತೀಸ್ವರೂಪಳಾಗಿ
೫	೧೦	ಅಮ	ಅವ
೫	೧೬	ಬೋಗ	ಭೋಗ
೫	೩೦	ಅನ್ಯೈಃ	ಅನ್ಯೈಃ
೯	೧೫	ಳಿಂವ	ಳಿಂದ
೯	೨೨	ಹೇದರಿಸಿ	ಹೆದರಿಸಿ
೧೦	೨೬	ಪ್ರಸಾ	ಪ್ರಪಾ
೧೧	೨೩	ಹ್ರೀ	ಹ್ರಿ
೧೨	೧೯	ನಿನ್ನ	ನನ್ನ
೧೨	೨೬	ಮಿಧ್ಯಾ	ಮಿಥ್ಯಾ
೧೬	೫	ಆತ್ತಿ	ಅತ್ತಿ
೧೬	೧೩	ತವೋ	ತಮೋ
೧೬	೧೪	ಮಿಶಾ	ಮಿಶ್ರಾ
೧೬	೨೨	ರ್ಲಿಗಾ	ರ್ಲಿಂಗಾ
೧೬	೨೩	ತಪ್ಯುಂ	ತಮ್ಯುಂ
೧೭	೨೪	ಋೂ	ಯೂ
೧೯	೫	ಸ್ಮೈಲ	ಸ್ಮೈಲ
೨೦	೨	ರ್ಪೇ	ರ್ಷೇ
೨೦	೨	ಋಷಿ	ಋಷಿ
೨೦	೨	ಷೇಕ	ಕೃಷ್ಣ
೨೦	೨೮	ವ	ದ
೨೧	೭	ಸುದಃಖಿತಾಃ	ಸುದುಃಖಿತಾಃ
೨೨	೧೩	ವನೋಗತಂ—	ಮನೋಗತಂ
"	೧೪	ಮನಸ್ಸಿಲ್ಲಿ—	ಮನಸ್ಸಿನಲ್ಲಿ...
೨೩	೫	ಆಸ್ತಿ	ಅಸ್ತಿ
	೬	ಜಾಮದ್ಯಗ್ನಂ	ಜಾಮದಗ್ನ್ಯಂ

ಪುಟ	ಸಾಲು	ಇದ್ದದ್ದು	ತಿದ್ದುಪಡಿ
೨೩	೨೧	ವಿಷ್ಣಾ	ವಿಷ್ಣುನಾ
೨೪	೧೬	ಯುಧಿಷಿರಂ	ಯುಧಿಷ್ಠಿರಂ
೨೫	೪	ವಿಚಾರದಲ್ಲಿದನು	ವಿಚಾರದಲ್ಲಿದ್ದನು
೨೫	೧೬	ರುಂದ್ರಾ	ರುದ್ರಾ
೨೬	೭	ಸ್ತ್ರೀಯ;	ಸ್ತ್ರಿಯಃ
"	೧೪	ಸದನೋಚ್ಚಯಾ:	ಸಧನೋಚ್ಚಯಾಃ
"	೧೯	ರಕ್ಷಿತ್‌ಮ್	ರಕ್ಷಿತವ್
೨೭	೧೬	ಅಶ್ವಮೇಭಂ	ಅಶ್ವಮೇಧಂ
೨೮	೧	ಪ್ರಾರ್ಥಿಸಿದರು	ಪ್ರಾರ್ಥಿಸಿದನು.
"	೫	ಪುರ್ಣ	ಪೂರ್ಣ
"	೮	ಪಾಡವರು	ಪಾಂಡವರು
"	೯	ಸಹೀತರಾಗಿ	ಸಹಿತರಾಗಿ
"	೧೦	ಶೀ ವೇದವ್ಯಾಸ	ಶ್ರೀವೇದವ್ಯಾಸ
೨೯	೪	ನಪಾಃ	ನೃಪಾ:
೩೦	೧೫	ಮಾಹಾಶರಂ	ಮಹಾಶರಂ
೩೧	೩	ಅಜೀಫನಃ	ಅಜೀಘನಃ
"	೧೧	ತ್ರಿಲೋಕಾತಿರಂಥ	ತ್ರಿಲೋಕಾತಿರಥಂ
೩೨	೧೪	ದರ್ಮತಃ	ಧರ್ಮತಃ
೩೯	೧೯	ಪ್ರತಿಪಾದಿಸಲ್ಪಟ	ಪ್ರತಿಪಾದಿಸಲ್ಪಟ್ಟ
"	೨೬	ಸತ್ಕ್ರತೂನಾ	ಸತ್ಕ್ರತೂನಾಂ
೪೦	೨	ವಕುಲ	ಕಮಲ
"	೮	ಭಗವದ್ದರ್ಶೆ	ಭಗವದ್ದರ್ಶ
"	೧೫	ಭ್ಯಕ್ಷ	ಭಕ್ಷ್ಯ
೪೦	೨೧	ಪಾಯಸದ್ಯ	ಪಾಯಸದ
"	೨೬	ಹೃದಾಃ (೧)	—
೪೧	೩	ತ್ರತಾ	ತತ್ರಾ
೪೧	೧೧	ಮಾಡಿಸಲ್ಪಟ	ಮಾಡಿಸಲ್ಪಟ್ಟ
"	೨೭	ಮಂಗಲ	ಮಂಗಲ
೪೩	೧೩	ಮನಸ್ಸುಗಳನ್ಣ	ಮನಸ್ಸುಗಳನ್ನು
೪೬	೧೦	ಇಂದ್ರರತೆ	ಇಂದ್ರರಂತೆ
೪೯	೨೩	ಕರ್ಮಂ	ಕರ್ಮ
೫೦	೧೪	ಇತಿ	ಇತಿ ಪೈಂಗಿನಃ ಪಠಂತಿ
"	೧೮	ಸುತ್ವಸ್ಥಾನ್	ಸುಸತ್ವಸ್ಥಾನ್
೫೧	೨	ಪೂಜ್ಯ	ಪೂಜ
"	೧೭	ಬಂವೆ	ಬಂದೆ
೫೨	೨೧	ಧರ್ದು	ಧರ್ಮ
೫೫	೨೩	ರ್ವಧೂ	ಪಧೂ

ಪುಟ	ಸಾಲು	ಇದ್ದದ್ದು	ತಿದ್ದುಪಡಿ
೫೭	೧	ತತ್ಸ್ನೀಹಾಡ್	ತತ್ಸ್ನೀಹಾದ್
೫೮	೧೨	ಬಗೆ	ಬಗ್ಗೆ
"	೧೩	ಹೊಂದಿದವನಾಗ್ಗಿ	ಹೊಂದಿದವನಾಗಿ
೬೦	೮	ಅನುಜಾನಿಹಿ	ಅನುಜಾನೀಹಿ
"	"	ಅಪಣೆ	ಅಪ್ಪಣೆ
"	೨೬	ಗೋತ್ತಿದ್ದರೂ	ಗೊತ್ತಿದ್ದರೂ
"	"	ಹೇಳಿದನು	ಕೇಳಿದನು.
೬೧	೩೦	ಅದನ್ನು (೧)	ಅವನು
೬೨	೧೬	ಶಾದ್ಧೀಬ್ಭೋ	ಶ್ರಾದ್ಧೀಬ್ಭೋಃ
"	೨೭	ತಜ್ಞಾತ್ವಾ	ತಜ್ಞಾತ್ವಾ
೬೫	೧೧	ಯುಷ್ಮಾಭಿಃ	ಯುಷ್ಮಾಭಿಃ
೬೬	೬	ಸುಬಷೂನಿ	ಸುಬಹೂನಿ
"	೧೪	ಗತತಶ್ಚೈವ	ಗತಶ್ಚೈವ
"	೨೦	ಪಾಂಡವೇಷ	ಪಾಂಡವೇಷು
"	೨೮	ಮಹಾತ್ಯರಾದ್ಮ	ಮಹಾತ್ಮರಾದ
೬೯	೧	ಸಭಾರ್ಯೆ	ಸಭಾರ್ಯೈ
"	೨೩	ಮಾಡಿಸಿದನು	ಮಗಾಡಿದನು
"	೨೮	ಭ್ಯತ್ಯಾಃ	ಭೃತ್ಯಾಃ
೭೦	೧೯	ಯುದಿಷ್ಟಂ	ಯುದಿಷ್ಟಂ
೭೧	೯	ಅಮುಷ್ಯ	ಅಮುಷ್ಯ
೭೨	೩೩	ನೋಡ	ನೋಡಲು
೭೪	೪	ಪರಿಪೂರಿತ	ಪರಿಪೂತ
೭೮	೧೨	ಮುಂ	ಅಮುಂ
೮೦	೫	ಮೇ ವೈನಾನ್	ಮೇವೈನಾನ್
೮೧	೧೨	ಬಗವನ್ಮಾಯಾ	ಭಗವನ್ಮಾಯಾ
"	೨೮	ಭಕ್ತಃ	ಭಕ್ತಃ
೮೨	೧೧	ವಾಧ್ಯ	ವ್ಯಾಧ
೮೭	೧೮	ಕಶಪ್ಯ	ಕಶ್ಯಪ
೮೯	೨೨	ಗುತಂ	ಗತಂ
೯೦	೨೪	ಪ್ರಸ	ಪ್ರಸ್ಥ
೯೧	೧೫	ಪಾರ್ಥೈಕಿಏವ	ಪಾರ್ಥೈಕಿಏವ ನ ಕೃತಃ
೯೫	೨೪	ಧ್ಯಾಯಾ	ಧ್ಯಯ
೧೦೦	೨೮	ಯಯೌವ	ಯಯೌ
೧೦೪	೭	ತಧಾ	ತದಾ
"	೨೧	ತಸೌ	ತಸ್ಥೌ
೧೦೫	೧೩	ಕೃಚ್ಛ್ರಾ	ಕೃಚ್ಛ್ರಾ
೧೦೭	೧೭	ವಾದಿತು	ವಾದೀತು

ಪುಟ	ಸಾಲು	ಇದ್ದದ್ದು	ತಿದ್ದುಪಡಿ
೧೧೦	೧೮	ಇಚ್ಚೆ	ಇಚ್ಛೆ
೧೧೧	೯	ಪಭಾವ	ಸ್ವಭಾವ
೧೧೨	೧೯	ಪರ್ಯಂತರಾ	ಪರ್ಯಂತರ
೧೧೩	೧೭	ಪ್ರೀತ್ಯೆ	ಪ್ರೀತ್ಯೆಲ
"	೨೦	"	"
೧೧೫	೧೫	ಅಸುರರ	ಅಸುರರು
"	೩೪	ಶಿಷ್ಟಾ	ಶಿಷ್ಟಾಃ
೧೧೭	೭	ಅವಲೀಂಢ	ಅವಲೀಢಂ
೧೧೮	೨೨	ಲಕ್ಷ್ಮಿಪತಿ	ಲಕ್ಷ್ಮೀಪತಿ
೧೧೯	೭	ತದ	ತದಾ
"	೨೪	ಪ್ರಚಿಕ್ಷಿಪಃ	ಪ್ರಚಿಕ್ಷಿಪುಃ
೧೨೦	೨೭	ಈಓ	ಈಗ
೧೨೧	೧೫	ಕ್ಷಣಾದಾಯಃ	ಕ್ಷಣಾದಯಃ
೧೨೧	೨೬	ತನನ್ನು	ತನ್ನನ್ನು
೧೨೨	೨೮	ಸಾದಂ	ಸಾದ್ಯಂ
"	೩೧	ಶೂ ನಾನು	ನಾನು ಶೂ
೧೨೩	೮	ಸ್ವಧಾವಾ	ಸ್ವಧಾವಾ
೧೨೪	೬	ಅಧಾವ	ಅಭಾವ
"	೮	ಭಗಡಂತ	ಭಗವಂತ
೧೨೫	೧೧	ತತ	ತತಃ
"	"	ಜಾನಾದಿ	ಜ್ಞಾನಾದಿ
"	೨೦	ತಕ್ತಿಃ	ಶಕ್ತಿಃ
"	೨೭	ಕಾತ್ಕಾರತಃ	ಕಾತ್ಕಾರತಃ
"	೩೦	ವಿನಾ,–	ವಿನಾ
"	೩೧	ದಃಷ್ಪರ	ದುಷ್ಪರ
"	"	ವಧಾಯಿ	ವ್ಯಧಾಯಿ
೧೨೬	೧೯	ಗ್ರಂಥಗಳನ್ನು	ಗ್ರಂಥಗಳ
೧೨೭	೨೧	ಅವತಾರಿಕೆ	ಭಾವ

(೨೧ ನೆಯ ಸಾಲಿನ ನಂತರ ಮುಂದಿನ ವಾಕ್ಯವನ್ನು ಓದಿಕೊಂಡು ಶ್ಲೋಕ ಓದಿರಿ.) ದೇವಾದಿ ಸಜ್ಜನರು ಶ್ರೋತೃಗಳಾದ್ದರಿಂದ ಶ್ರೋತ್ರಾನುಕೂಲ್ಯವುಂಟು; ಅವರೆಲ್ಲರ ಮೋಕ್ಷೋದ್ದೇಶದಿಂದ ರಚಿತವಾದ್ದರಿಂದ ಪ್ರಸಂಗಾನುಕೂಲ್ಯವುಂಟು ಎಂದು ಅಭಿಪ್ರಾಯ.

೧೨೮	೧೦	ಪ್ರವದದ್ಭಿ	ಪ್ರವದದ್ಭಿಃ